ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು

(ವ್ಯಕ್ತಿಚಿತ್ರಗಳು)

ಪ್ರೊ. ಜಿ. ಅಶ್ವತ್ಥನಾರಾಯಣ



ನಾ ಕಂಡಂತೆ
ಹಿರಿಯ ಕನ್ನಡ ಸಾಹಿತಿಗಳು

(ವ್ಯಕ್ತಿಚಿತ್ರಗಳು)

ಪ್ರೊ. ಜಿ. ಅಶ್ವತ್ಥನಾರಾಯಣ

ನ್ಯೂ ವೇವ್ ಬುಕ್ಸ್
ನಂ. 90/3, ಒಂದನೇ ಮಹಡಿ, ಈ.ಎ.ಟಿ. ಸ್ಟ್ರೀಟ್
ಬಸವನಗುಡಿ, ಬೆಂಗಳೂರು – 560 004.

ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು

NAA KANDANTE HIRIYA KANNADA SAHITIGALU

(Pen portraites)

(ವ್ಯಕ್ತಿಚಿತ್ರಗಳು)

by

Prof. G. Aswathanarayana
(Retired Kannada Professor)
95, 34th 'B' Cross, 16th Main, 4th 'T' Block, Jayanagar,
Bengaluru-560 041. Phone : 080-26637783, Mobile : 9481800023

ಪ್ರೊ. ಜಿ.ಅಶ್ವತ್ಥನಾರಾಯಣ
ನಿವೃತ್ತ ಕನ್ನಡ ಪ್ರಾಧ್ಯಾಪಕ
ನಂ.೯೫, ೩೪ನೇ 'ಬಿ' ಕ್ರಾಸ್, ೧೬ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ,
ಬೆಂಗಳೂರು-೫೬೦ ೦೪೧. ದೂರವಾಣಿ: ೦೮೦-೨೬೬೩೭೭೮೩, ಮೊಬೈಲ್: ೯೪೮೧೮೦೦೦೨೩

Published by
B.S. Madhu, on behalf of **New Wave Books**,
90/3, 1st Floor, E.A.T. Street, Basavanagudi,
Bangalore - 560 004. M : 9448788222

First Edition : 2022 ಪ್ರಥಮ ಮುದ್ರಣ : ೨೦೨೨

Pages : 176 + iv ಪುಟಗಳು : ೧೭೬ + iv

Price : ₹ 190 **ಬೆಲೆ : ರೂ. ೧೯೦**


No. of Copies : 1000 ಪ್ರತಿಗಳ ಸಂಖ್ಯೆ : ೧೦೦೦

70 GSM N.S. Maplitho – 1/8 Demy
ಕಾಗದ: ೭೦ ಜಿಎಸ್‌ಎಂ ಎನ್‌ಎಸ್ ಮ್ಯಾಪ್‌ಲಿಥೊ ೧/೮ ಡೆಮಿ

Cover Design : **Chandrashekar**
ಮುಖಪುಟ : ಚಂದ್ರಶೇಖರ್

Typeset by : **Pa. Chandrashekhara Chadaga**
ಪುಟವಿನ್ಯಾಸ : ಪಾ. ಚಂದ್ರಶೇಖರ ಚಡಗ

Printed at : **Sathyananda Printers**
ಮುದ್ರಕರು : ಸತ್ಯಾನಂದ ಪ್ರಿಂಟರ್ಸ್
Pipeline Parallel Road, Cholura Palya,
Bangalore - 560 023.



ಐತಿಹಾಸಿಕ ಕಾದಂಬರಿಗಳ ಮತ್ತು ವ್ಯಕ್ತಿಚಿತ್ರಗಳ
ರಚನೆಯಲ್ಲಿ ಅಜೇಯರಾಗಿ
ಪತ್ರಿಕಾರಂಗದಲ್ಲಿ ಅದ್ವಿತೀಯ ಸಂಪಾದಕರಾಗಿ
ಸಾಹಿತಿಗಳೊಡನೆ ನಿಮ್ಮ ಒಡನಾಟ ಕುರಿತು
ಬರೆಯಲೇಬೇಕೆಂದು ಒತ್ತಾಯ ಮಾಡುತ್ತಾ
ಈ ಗ್ರಂಥ ರಚನೆಗೆ ಪ್ರೇರಕರಾಗಿರುವ
ಡಾ॥ ಬಾಬು ಕೃಷ್ಣಮೂರ್ತಿ ಅವರಿಗೆ
ಈ ಗ್ರಂಥವನ್ನು
ಸ್ನೇಹಾಭಿಮಾನಗಳಿಂದ ಅರ್ಪಿಸುತ್ತಿದ್ದೇನೆ

೧-೧೧-೨೦೨೨ **ಅನಾಜಿ**
ಬೆಂಗಳೂರು ಲೇಖಕ

ನನ್ನದೊಂದು ಮಾತು

ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು ಎಂಬ ಈ ವ್ಯಕ್ತಿಚಿತ್ರಗಳು ನನ್ನ ಎರಡನೆಯ ವ್ಯಕ್ತಿಚಿತ್ರಗಳ ಸಂಕಲನ. ಮೊದಲನೆಯ ವ್ಯಕ್ತಿಚಿತ್ರಗಳ ಸಂಕಲನವಾದ **ಕನ್ನಡ ಸಾಹಿತ್ಯ ದಿಗ್ಗಜರು** ಎಂಬ ೧೨ ಜನ ವಿದ್ವಾಂಸ-ಸಾಹಿತಿಗಳ ಲೇಖನಗಳ ಸಂಗ್ರಹವನ್ನು ೨೦೧೪ರಲ್ಲಿ ಡಾ. ಟಿ.ವಿ.ರಾಜು ಅವರು ಸಿಂಚನ ಕನ್ನಡ ವೇದಿಕೆಯ ಮೂಲಕ ಪ್ರಕಟಿಸಿದರು.

ಆ ಗ್ರಂಥದಲ್ಲಿ ೧೯ನೇ ಶತಮಾನದಲ್ಲಿ ಜನಿಸಿದ, ಈ ತಲೆಮಾರಿಗೆ ಅಷ್ಟಾಗಿ ಪರಿಚಯವಿಲ್ಲದ, ಆದರೆ ಕನ್ನಡಕ್ಕೆ ಅಪೂರ್ವ ಕೊಡುಗೆಗಳನ್ನು ಇತ್ತು ಕನ್ನಡ ಸಾಹಿತ್ಯಕ್ಕೆ ಭದ್ರ ಬುನಾದಿ ನಿರ್ಮಿಸಿದ ೧೨ ಮಂದಿಯನ್ನು ಪರಿಚಯಿಸಿದ್ದೇನೆ. ಇವರೆಲ್ಲ ೧೯ನೇ ಶತಮಾನದಲ್ಲಿ ಜನಿಸಿದವರು. ೨೦ನೇ ಶತಮಾನದಲ್ಲಿ ಬಾಳಿದವರು.

೧. **ಟಿ.ಎಸ್.ವೆಂಕಣ್ಣಯ್ಯ** [೧-೧೦-೧೮೮೫ / ೨೪-೨-೧೯೩೧]
೨. **ಎ.ಆರ್.ಕೃಷ್ಣಶಾಸ್ತ್ರೀ** [೧೨.೨.೧೮೯೦ / ೧.೨.೧೯೬೮]
೩. **ಎಂ.ಗೋವಿಂದ ಪೈ** [೨೩.೩.೧೮೮೩ / ೬.೯.೧೯೬೩]
೪. **ಡೆಪ್ಯುಟಿ ಚೆನ್ನಬಸಪ್ಪ** [೧-೧೧-೧೮೩೩ / ೪-೧-೧೮೮೧]
೫. **ಕ.ವೆಂ.ರಾಘವಾಚಾರ್** [೪-೬-೧೯೦೪ / ೨೭-೮-೧೯೭೭]
೬. **ಹೊಸಕೆರೆ ಚಿದಂಬರಯ್ಯ** [೨೮-೧೨-೧೮೭೦ / ೧೭-೪-೧೯೩೮]
೭. **ಹುಯಿಲಗೋಳ ನಾರಾಯಣರಾಯರು**[೪-೧೦-೧೮೮೪ / ೪-೭-೧೯೭೧]
೮. **ಶ್ರೀಕಂಠೇಶಗೌಡ** [೧೨--೮-೧೮೬೪ / ೨೬--೧೧-೧೯೨೬]
೯. **ದೇವುಡು ನರಸಿಂಹ ಶಾಸ್ತ್ರೀ** [೨೮-೧೨-೧೮೯೧ / ೨೭-೧೦-೧೯೬೨]
೧೦. **ಕೆರೂರು ವಾಸುದೇವಾಚಾರ್ಯ** [೧೫-೧೦-೧೮೬೬ / ೧೧-೧-೧೯೨೧]
೧೧. **ದ.ಕೃ.ಭಾರದ್ವಾಜ** [೨೯-೧೨-೧೮೯೧ / ೨೨-೪-೧೯೫೩]
೧೨. **ವಿದ್ವಾನ್ ಬಾಲಸರಸ್ವತಿ** [೧೮೮೦ / ೨೮-೫-೧೯೩೮]

ಈಗ ಎರಡನೇ ಕಂತಾಗಿ ಮತ್ತೆ ೧೨ ಜನ ಸಜ್ಜನ ಸಾಹಿತಿ ವಿದ್ವಾಂಸರ–ಕನ್ನಡ ನಿರ್ಮಾಪಕರ ವ್ಯಕ್ತಿಚಿತ್ರಗಳನ್ನು ಪ್ರಕಟಿಸುತ್ತಿರುವೆ. ಇವರೆಲ್ಲರೂ ೧೯–೨೦ನೇ ಶತಮಾನಕ್ಕೆ ಸೇರಿದವರು. ಇವರೆಲ್ಲ ಈಗ ದಿವಂಗತರು. ೨೧ನೇ ಶತಮಾನದ ಯುವ ಸಾಹಿತಿಗಳಿಗೆ, ವಿದ್ವಾಂಸರಿಗೆ ಬಹುತೇಕ ಪರಿಚಯವಿಲ್ಲ. ಇವರೆಲ್ಲರ ವ್ಯಕ್ತಿತ್ವ–ಕಷ್ಟ ಜೀವನ–ಆದರ್ಶಪಾಲನೆ, ಶ್ರೇಷ್ಠ ಸಾಹಿತ್ಯ ರಚನೆ ಕಂಡು ಬೆರಗಾಗಿದ್ದೇನೆ. ಈಗಿನ ತಲೆಮಾರಿನ ಜನರಿಗೆ ಇವರನ್ನು ಪರಿಚಯ ಮಾಡಿಸುವ ಉದ್ದೇಶ ನನ್ನದು. ಅಂದು ಅವರು ಮಾಡಿದ ಕನ್ನಡ ಸೇವೆ, ಕನ್ನಡ ಕೃತಿರಚನೆ ಇಂದಿನ ಸಾಹಿತ್ಯಕ್ಕೆ ಬುನಾದಿ ಎಂದರೆ ತಪ್ಪಲ್ಲ. ಈ ವಿದ್ವಾಂಸರನ್ನು ಕಂಡು ಮಾತಾಡಿಸಿದ ಭಾಗ್ಯ ನನ್ನದು. ಅವರ ಎಲ್ಲ ಕೃತಿಗಳನ್ನು ಓದಿ ಸ್ಫೂರ್ತಿಗೊಂಡವನು ನಾನು.

ನಾನು ಮೊದಲಿನಿಂದಲೂ ಕನ್ನಡಕ್ಕೆ ದುಡಿದ ಸಾಹಿತಿಗಳನ್ನೂ ವಿದ್ವಾಂಸರನ್ನೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಂಡು ಅವರ ಮಾತುಗಳನ್ನು ಕೇಳಿ ಪ್ರಭಾವಿತನಾಗಿದ್ದೇನೆ. ಸಾಹಿತ್ಯ ಪರಿಷತ್ತಿನ ಎದುರಿನಲ್ಲಿರುವ ಕೋಟೆ ಮಾಧ್ಯಮಿಕ ಶಾಲೆಯಲ್ಲಿ ಮತ್ತು ಕೋಟೆ ಹೈಸ್ಕೂಲಿನಲ್ಲಿ ಓದಿದ ನಾನು ನನ್ನ ವಿದ್ಯಾರ್ಥಿ ಜೀವನದ ಬಹು ಸಮಯವನ್ನು ಪರಿಷತ್ತಿನಲ್ಲಿ ಕಾರ್ಯಕ್ರಮಗಳನ್ನು ನೋಡುವುದರಲ್ಲಿ, ಭಾಷಣಗಳನ್ನು ಕೇಳುವುದರಲ್ಲಿ, ಪರಿಷತ್ತಿನ ಪುಸ್ತಕ ಭಂಡಾರ, ವಾಚನಾಲಯಗಳಲ್ಲಿ ಸದಾ ಓದುವುದರ ಮೂಲಕ ಕಾಲ ಕಳೆದಿದ್ದೇನೆ. ಶಾಲಾಕಾಲದಲ್ಲಿ ಕ್ರಿಕೆಟ್ ಆಡುತ್ತಿದ್ದೆ, ಫುಟ್‌ಬಾಲ್ ಆಡುತ್ತಿದ್ದೆ. ಸಿಲ್ವರ್ ಜ್ಯೂಬಿಲಿ ಟೂರ್ನಮೆಂಟ್ ಎಂಬ ಶಾಲೆಗಳ ಕ್ರಿಕೆಟ್ ಸ್ಪರ್ಧಾಪಂದ್ಯಗಳಿಗೆ ಸ್ಕೋರರ್ ಆಗಿದ್ದೆ. ಆ ಎಲ್ಲ ಚಟುವಟಿಕೆಗಳು ದೂರ ಸರಿದು ಪರಿಷತ್ತಿನಲ್ಲಿ ಕಾರ್ಯಕ್ರಮಗಳಲ್ಲಿ ಸಾಹಿತಿ, ವಿದ್ಯಾಂಸರ ಭೇಟಿಯಲ್ಲಿ ನಿರತನಾದೆ. ಈ ಹವ್ಯಾಸದ ಫಲವಾಗಿ ಸುಮಾರು ೬೦ ವರ್ಷಗಳಿಗೂ ಮಿಗಿಲಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕದಿಂದ ಕನ್ನಡ ನಾಡಿನ ಅನೇಕ ಸಾಹಿತಿ–ವಿದ್ವಾಂಸರನ್ನು ಭೇಟಿ ಮಾಡುವ, ಸಂಭಾಷಿಸುವ ಅವಕಾಶ ಸಿಕ್ಕಿತು. ಅದರ ಫಲವೇ ಈ ವ್ಯಕ್ತಿಚಿತ್ರಗಳ ಗ್ರಂಥ. ಈ ವ್ಯಕ್ತಿಚಿತ್ರಗಳು ಬಾನುಲಿಮಾಧ್ಯಮದಲ್ಲಿ ಪ್ರಸಾರವಾದಾಗ, ಉಪನ್ಯಾಸ ಮಾಡಿದಾಗ ನೂರಾರು ಜನ ಕೇಳಿ ಸಂತೋಷಪಟ್ಟು ಇನ್ನಷ್ಟು ವ್ಯಕ್ತಿಚಿತ್ರಗಳನ್ನು ಬರೆಯಲು ಸ್ಫೂರ್ತಿ ನೀಡಿದ್ದಾರೆ.

ಈ ಗ್ರಂಥವನ್ನು ಸಿದ್ಧಪಡಿಸುವಲ್ಲಿ ನನ್ನ ಜೀವನ ಸಂಗಾತಿ ಕನ್ನಡ ಪ್ರಾಧ್ಯಾಪಕಿ ಪ್ರೊ.ಎಂ.ಆರ್.ಲಕ್ಷ್ಮೀದೇವಿ ಹಲವು ವಿಧಗಳಲ್ಲಿ ನೆರವಾಗಿದ್ದಾಳೆ. ಅಮೆರಿಕೆಯಲ್ಲಿ ಸೂಕ್ಷ್ಮಾಣು ವಿಜ್ಞಾನಿಯಾಗಿರುವ ನನ್ನ ಮಗಳು ಕ್ಷಮಾ ಅಶ್ವತ್ಥ ಮತ್ತು ಗಣಕತಂತ್ರ

ತಜ್ಞರಾಗಿ ಕಾರ್ಯನಿರ್ವಹಿಸುತ್ತಿರುವ ಅಳಿಯ ಜಯರಾಂ ಕೃಷ್ಣಪ್ಪ ಅವರು ಸದಾ ನಾನು ಬರೆದುದನ್ನು ಓದಿ ಮೆಚ್ಚಿ ಮತ್ತಷ್ಟು ಬರೆಯಲು ಪ್ರೋತ್ಸಾಹಿಸುತ್ತಿದ್ದಾರೆ. ನನ್ನ ಮಗಳು ಕ್ಷಮಾ ಅಶ್ವತ್ಥ್ 'ಅಣ್ಣಾ, ಇಂತಹ ವ್ಯಕ್ತಿಚಿತ್ರಗಳ ಪುಸ್ತಕಗಳನ್ನು ಹೆಚ್ಚು ಹೆಚ್ಚಾಗಿ ಬರಿ' ಎಂದು ಸದಾ ಹುರಿದುಂಬಿಸಿದ್ದಾಳೆ. 'ನಿನ್ನಿಂದ ಕನ್ನಡ ಕಲಿತ ನಿನ್ನ ಮೊಮ್ಮಕ್ಕಳು ಆದಿತ್ಯ-ಅಮೋಘ ದೊಡ್ಡವರಾದ ಮೇಲೆ ನಿನ್ನ ಪುಸ್ತಕಗಳನ್ನು ಓದಿ ಆನಂದಿಸುತ್ತಾರೆ' ಎಂದು ಸದಾ ಹೇಳುತ್ತಿರುತ್ತಾಳೆ.

ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು ಗ್ರಂಥವನ್ನು ಸಿದ್ಧಪಡಿಸಲು ಪ್ರೇರಣೆ ನೀಡಿದವರು ಮತ್ತು ಡಿಟಿಪಿ ಮಾಡಿಸಿಕೊಡಲು ನೆರವಾದವರು ಶಿವರಾಮ ಕಾರಂತ ವೇದಿಕೆಯ ಸಂಘಟಕರೂ, ಸಾಹಿತಿಗಳೂ ಆದ ಪಾ. ಚಂದ್ರಶೇಖರ ಚಡಗ. ಅವರು ಸಹೃದಯ ಸನ್ಮಿತ್ರರು. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಓ ಗ್ರಂಥದ ಡಿಟಿಪಿ ಕರಡು ಪ್ರತಿ ಸಿದ್ಧವಾಗಿದೆ ಎಂದು ತಿಳಿಸಿದ ಕೂಡಲೇ ಪ್ರಕಾಶಕರೂ, ಲೇಖಕರೂ, ಹಾಸ್ಯಸಾಹಿತಿಗಳೂ, ನನ್ನ ಸನ್ಮಿತ್ರರೂ ಆದ ರಾಮನಾಥರು ಈ ಗ್ರಂಥವನ್ನು ಪ್ರಕಟಿಸುತ್ತೇನೆ ಎಂದು ಮುಂದೆ ಬಂದಿದ್ದಾರೆ. ಅವರ ಉದಾರತೆಗೆ ನಾನು ಋಣಿಯಾಗಿದ್ದೇನೆ. ಹಿರಿಯರ ಬಗ್ಗೆ, ಅವರ ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿ ಅಧ್ಯಯನಶೀಲರಾಗಿರುವ ರಾಮನಾಥರಂಥ ಪ್ರಕಾಶಕರು ನಮ್ಮಲ್ಲಿ ಹೆಚ್ಚಿಲ್ಲ. ಅವರ ಸಾಹಿತ್ಯಾಸಕ್ತಿಯ ಕಾರಣ ನನಗೆ ಅವರಲ್ಲಿ ಗೌರವಾದರಗಳು ಹೆಚ್ಚಾಗಿವೆ.

ಇಲ್ಲಿಯ ಲೇಖನಗಳಲ್ಲಿ ಬಂದಿರುವ ಸಾಹಿತಿಗಳ ಬಗೆಗೆ ಉಪನ್ಯಾಸ ನೀಡಿದಾಗ ಜನ ಕೇಳಿ ಆನಂದಿಸಿದ್ದಾರೆ. ಈ ವ್ಯಕ್ತಿಗಳ ಕಥನವನ್ನು ಪ್ರಕಟಿಸಿ ಎಂದು ಉತ್ತೇಜಿಸಿದ್ದಾರೆ.

ಈ ಗ್ರಂಥವನ್ನು ಓದಿದವರಿಗೆ ಹಿಂದಿನ ಕಾಲದ ಸಾಹಿತಿಗಳ ಕೃತಿಗಳಷ್ಟೇ ಅವರ ಬದುಕೂ, ಗುಣಸ್ವಭಾವಗಳೂ ಆದರ್ಶಪ್ರಾಯವಾದುದು, ಚೇತೋಹಾರಿಯಾದುದು, ಇಂದಿನ ಜನರಿಗೆ ಸ್ಫೂರ್ತಿದಾಯಕವಾದುದು ಎಂದು ಅನ್ನಿಸಿದರೆ ನನ್ನ ಪ್ರಯತ್ನ ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಈ ಗ್ರಂಥವನ್ನು ಅಂದವಾಗಿ ಮುದ್ರಿಸಿದ ಸತ್ಯಾನಂದ ಪ್ರಿಂಟರ್ಸ್‌ರವರಿಗೂ, ಮುಖಪುಟ ವಿನ್ಯಾಸಕರಾದ ಚಂದ್ರಶೇಖರ್ ಅವರಿಗೂ, ಪ್ರಕಾಶಕರಾದ ನ್ಯೂ ವೇವ್ ಬುಕ್ಸ್‌ನ ಬಿ.ಎಸ್. ಮಧು ಅವರಿಗೂ ನಾನು ಆಭಾರಿಯಾಗಿದ್ದೇನೆ.

ಕನ್ನಡನಾಡಿನ ಅನೇಕ ಹಿರಿಯರೊಡನೆ ಒಡನಾಟವಿರುವ. ಅವರ ಸಾಹಿತ್ಯಬದುಕನ್ನು ತಿಳಿದಿರುವ, ಅನುಭವಿಸಿರುವ ಹಿರಿಯರೂ ಕಿರಿಯರೂ

ಸಾಕಷ್ಟು ಮಂದಿ ಇದ್ದಾರೆ. ಅವರೆಲ್ಲ ಇಂಥ ಗ್ರಂಥಗಳನ್ನು ರಚಿಸಲಿ ಎಂದು ಹಾರೈಸುತ್ತೇನೆ.

ನನ್ನ ಹಿಂದಿನ ಪುಸ್ತಕಗಳನ್ನು ಓದಿ ಪ್ರೋತ್ಸಾಹಿಸಿದ ಓದುಗರು ಈ ಗ್ರಂಥವನ್ನೂ ಕೊಂಡೋದಿ ಕೊಂಡಾಡುತ್ತಾರೆ ಎಂದು ನಂಬಿದ್ದೇನೆ.

೧-೧೧-೨-೨೧ **–ಪ್ರೊ. ಜಿ.ಅಶ್ವತ್ಥನಾರಾಯಣ**

ಬೆಂಗಳೂರು ಲೇಖಕ

ಪ್ರಕಾಶಕರ ನುಡಿ

ಕನ್ನಡದ ಪದಲೋಕದಲ್ಲಿ ಪ್ರತಿ ಪದಕ್ಕೂ ತನ್ನದೇ ಆದ ತೂಕವಿದೆ. 'ಸಾರಿಗೆ ಸಚಿವರು ಬಂದರು' ಎಂದಾಗ ಮೂಡುವ ಅರ್ಥ 'ಸಚಿವರು ಸಾರಿಗೆ ಬಂದರು' ಎಂದಾಗ ಮೂಡದು; 'ಬಂದರು ಸಾರಿಗೆ ಸಚಿವರು' ಎಂದಾಗ ಬಂದರು ಸಾರಿಗೆ ಎಂದರೆ ನೌಕೆಗಳಿಗೆ ಸಂಬಂಧಿಸಿದ ಸಚಿವರು ಎಂದು ಅರ್ಥ ಮೂಡೀತು. ಅಂತೆಯೇ 'ನಾ ಕಂಡ ಹಿರಿಯ ಕನ್ನಡ ಸಾಹಿತಿಗಳು' ಎಂಬ ಶೀರ್ಷಿಕೆಯಲ್ಲಿ ಹಿರಿತನ ಎಲ್ಲಿ ಸಲ್ಲಬೇಕೆಂಬುದು ಯೋಚಿಸತಕ್ಕ ವಿಷಯ. 'ಹಿರಿಯ ಕನ್ನಡ' ಎಂದಾಗ ಭಾಷೆಯ ಹಿರಿಮೆ, 'ಹಿರಿಯ ಸಾಹಿತಿಗಳು' ಎಂದಾಗ ಸಾಹಿತ್ಯದ ಹಿರಿಮೆ ವ್ಯಕ್ತವಾಗುವಂತೆಯೇ 'ನಾ ಕಂಡ' ಎಂದಾಗ ಇವರ ದೃಷ್ಟಿಕೋನದ ಹಿರಿಮೆ ಗಮನಾರ್ಹವಾಗುತ್ತದೆ. ಅಸಲಿಗೆ ಹಿರಿಯ ಸಾಹಿತಿಗಳೇನು ಎನ್ನುವುದೇ ಇಂದಿನ ಗೊಂದಲ. ಇನ್ನೂರು ವರ್ಷಗಳ ಕಾಲ ಬದುಕುವ ಆಮೆಯನ್ನು ಹಿರಿಯನೆಂದು ಕರೆದು ಅದರ ಕಾಲಿಗೆ ನಮಸ್ಕರಿಸುವುದು ಪದ್ಧತಿಯಲ್ಲಿಲ್ಲ – ಆದ್ದರಿಂದ ವಯಸ್ಸೊಂದೇ ಗೌರವಕ್ಕೆ ಆಧಾರವಲ್ಲ ಎಂಬುದು ನಿರ್ಧರಿತವಾಯ್ತು. ಸಾಹಿತ್ಯದಲ್ಲಿ ಮಾತ್ರ ಹಿರಿಯರಾಗಿ ಮಿಕ್ಕಂತೆ ಮಶೀಲಿಬಾಜಿಯಲ್ಲಿ, ಸಮಾಜಮಥನದಿಂದ ಹಾಲಾಹಲ ಸೃಷ್ಟಿಸುವಲ್ಲಿ ನಿರತರಾದ ಸ-ಅಹಿತಿಯಾಗಿ ಸಾಹಿತಿಗಳಾದವರಾರಿಗೂ ಇಲ್ಲಿ ಮಣೆ ಇಲ್ಲ. ಸಾಹಿತ್ಯದಲ್ಲಿ ಶಿಖರಪ್ರಾಯರಾಗಿದ್ದು, ನಡೆನುಡಿಗಳಲ್ಲಿ ಆದರ್ಶಪ್ರಾಯರಾದವರಿಗೆ ಮಾತ್ರ 'ಹಿರಿಯ ಕನ್ನಡ ಸಾಹಿತಿ' ಪಟ್ಟವು ಇಲ್ಲಿ ದೊರಕಿರುವುದು ನಿರ್ವಿವಾದ.


'ನುಡಿದಂತೆ ನಡೆದವರು; ನಡೆದಂತೆ ನುಡಿದವರು ಕಲಶಪ್ರಾಯರು' ಎಂಬ ನಾಣ್ಣುಡಿಯಿದೆ. ಹಲವಾರು ರಾಜಕೀಯ ನಾಯಕರೂ ನುಡಿದಂತೆ ನಡೆಯುತ್ತಾರೆ, ನಡೆದಂತೆ ನುಡಿಯುತ್ತಾರೆ. ಸಮಾಜಕ್ಕೆ ಅವಶ್ಯವಾದುದು ಸರಿನುಡಿಯ, ಸರಿನಡೆಯ ವ್ಯಕ್ತಿತ್ವಗಳು. ಜೇನಿನಂತೆ ಮೈಯನ್ನು ಹಿಂಡಿ ನೋಯಿಸಿದರೂ ಸಿಹಿಯನ್ನು ಕೊಡುವ ಜಾತಿಯವರು; ಕೊಳಕನ್ನು ಕೊಳಕೆಂದು ನಿರ್ಭೀತಿಯಿಂದ ಗುರುತಿಸುವ ವ್ಯಕ್ತಿತ್ವನಿರ್ಮಾತೃಗಳು. ಅಂತಹವರ ಜೀವನಶೈಲಿ, ಸಾಹಿತ್ಯಾರಾಧನೆ, ಭಾಷಾಸೇವೆಗಳ ರಾಜಮಾರ್ಗದ ಉನ್ನತ ಸೌಧಗಳು ಇಲ್ಲಿನ ಪ್ರತಿ ಲೇಖನದಲ್ಲೂ

ಕಂಡುಬರುತ್ತವೆ. ಮಾನವೀಯತೆಯೆಂಬ ಅಶ್ಮದ ಭದ್ರಬುನಾದಿಯ ಮೇಲೆ ಸಾಮಾಜಿಕ ತುಡಿತದ ಇಟ್ಟಿಗೆಗಳಿಂದ ನಿರ್ಮಿಸಿ, ಭಾಷಾಕೌಶಲ, ಪಾಂಡಿತ್ಯ, ವಿವೇಕದ ಉತ್ತುಂಗಗಳ ಗಿಲಾವು, ವರ್ಣಗಳಿಂದ ಮೆರಗನ್ನು ಪಡೆದಿರುವ ಈ ಉನ್ನತ ಸೌಧಗಳು ನಮ್ಮ ಸಂಸ್ಕೃತಿಯ ಗೇಹಗಳಾಗಿವೆ. ನವರತ್ನರಾಮರಾಯರ ಆಡಳಿತಕಾಲದ ಮೆರಗು, ಎ.ಆರ್. ಕೃಷ್ಣಶಾಸ್ತ್ರಿಗಳ ವ್ಯಕ್ತಿತ್ವದ ಬೆರಗು, ಮಾಸ್ತಿಯವರ ಸಂಪದ್ಭರಿತ ಸಾಹಿತ್ಯಿಕ ಸಾಮಾಜಿಕ ಹರಿವು, ದೇವುಡು ಕೊಡುಗೆಯ ಅಪ್ರತಿಮ ಚೆಲುವು, ಎಂ.ಆರ್.ಶ್ರೀ ಅವರ ವಾಗ್ವಿಲಾಸದ ಸೊಬಗು, ವಿ.ಸೀ. ಎಂಬ 'ಇಡೀ ಶರೀರವೇ ಹೃದಯವಾಗಿದ್ದ' ಆರ್ದ್ರತೆ. ಅಂಬುಧಿಯಲ್ಲದೆ ಕಾವ್ಯಾಂಬುಧಿಯೇ ಆದ ಕುವೆಂಪು, ವಿಶಿಷ್ಟತೆಯೇ ಮೂರ್ತಿವೆತ್ತಂತಹ ತೀನಂಶ್ರೀ, ಬಹುಭಾಷಾ ಕಾವ್ಯಾಸ್ವಾದಿ ಗೋಕಾಕರು, ನಿಸ್ಪೃಹತೆಯ ಸಾಕಾರವಾದ ಕೈವಾರ ರಾಜಾರಾಯರು, ಸುವರ್ಣಕಂಠದ ಸರಸವಾಕ್ಕಿನ ಹೆಚ್ಚೆ ರಂಗನಾಥ್ ಮತ್ತು ಜಿನಧರ್ಮದ ಅಚ್ಚ ಔಪಾಸಕರೆನ್ನಬಹುದಾದ ಪದ್ಮನಾಭಶರ್ಮ ಇವರುಗಳ ಜೀವನದಲ್ಲಿ ಸಂಭವಿಸಿದ ಉಲ್ಲೇಖಾರ್ಹ, ಅನುಕರಣೀಯ ವಿಷಯಗಳ ಮೆರವಣಿಗೆಯನ್ನು ಪ್ರೊಫೆಸರ್ ಜಿ. ಅಶ್ವತ್ಥನಾರಾಯಣರು ಇಲ್ಲಿ ಸಕ್ಷಮವಾಗಿ ಕಂಡರಿಸಿದ್ದಾರೆ. ಅನಾಜಿ ಎಂದೇ ಪ್ರಖ್ಯಾತರಾಗಿ, ಪದ ವ್ಯುತ್ಪತ್ತಿಗೆ 'ರೆಡಿ ರೆಕನರ್' ಆಗಿ ದೊರೆಯುವ, ಮನೆಯನ್ನಷ್ಟೇ ಅಲ್ಲದೆ ಮನವನ್ನೂ ಕನ್ನಡ ಗ್ರಂಥಾಲಯುವನ್ನಾಗಿಸಿಕೊಂಡಿರುವ ಜಿ. ಅಶ್ವತ್ಥನಾರಾಯಣರ ಈ ಕೃತಿ ಕನ್ನಡ ಶ್ರೇಷ್ಠರ ಆಕೃತಿ, ಆ ಕೃತಿಗಳ ವೈಭವೋಪೇತ ಕೊಡುಗೆ. ಈ ಪುಸ್ತಕವು ನಮ್ಮ ಪ್ರಕಾಶನ ಸಂಸ್ಥೆಯ ಮುಕುಟದಲ್ಲಿ ರಾರಾಜಿಸುವ ಚಿನ್ನದ ಗರಿ.

ಎನ್. ರಾಮನಾಥ್

ಪ್ರಕಾಶಕರ ಪರವಾಗಿ

ಅನುಕ್ರಮಣಿಕೆ



೧. ಆಡಳಿತ ಪ್ರವೀಣ–ಕಥಾಸಾಹಿತಿ

ನವರತ್ನ ರಾಮರಾಯರು

(೨೯-೭-೧೮೭೭ - ೨೭-೧೧-೧೯೬೦)

ಕನ್ನಡ ಸಾಹಿತ್ಯಕ್ಕೆ ಅನುಪಮ ಸೇವೆ ಸಲ್ಲಿಸಿದವರಲ್ಲಿ ಅನೇಕರು ನಾನಾ ಕ್ಷೇತ್ರಗಳಲ್ಲಿ ನುರಿತವರೂ ಆಗಿದ್ದಾರೆ. ಡಿ.ವಿ.ಜಿ. ಅವರು ಪ್ರಸಿದ್ಧ ಪತ್ರಕರ್ತರಾಗಿದ್ದರು; ಬಿ.ಜಿ.ಎಲ್. ಸ್ವಾಮಿಯವರು ವಿಜ್ಞಾನಿಯಾಗಿದ್ದರು; ಆರ್.ನರಸಿಂಹಾಚಾರ್ಯರು ಪ್ರಾಕ್ತನಶಾಸ್ತ್ರ ವಿಚಕ್ಷಣರಾಗಿದ್ದರು; ಆಲೂರು ವೆಂಕಟರಾಯರು ನ್ಯಾಯವಾದಿಗಳಾಗಿದ್ದರು; ರಾ.ಶಿ. ಅವರು ವೈದ್ಯರಾಗಿದ್ದರು; ರಾವ್ ಬಹದ್ದೂರ್ ಅವರು ಕೃಷಿಕರಾಗಿದ್ದರು. ಇನ್ನು ಶಿಕ್ಷಕರಾಗಿ ಕನ್ನಡ ಸಾಹಿತ್ಯ ಸೇವೆ ಸಲ್ಲಿಸಿದವರು ಅನೇಕರು ಇದ್ದಾರೆ. ಹಾಗೆಯೇ ಆಡಳಿತ ಕ್ಷೇತ್ರದಲ್ಲಿ ಪ್ರವೀಣರಾಗಿದ್ದು ಹೆಸರು ಗಳಿಸಿದವರು ಎಂ.ಎಸ್.ಪುಟ್ಟಣ್ಣನವರಂತೆ ಹತ್ತಾರು ಮಂದಿ ಇದ್ದಾರೆ. ಅವರ ಪೈಕಿ ಗಣ್ಯರಾದವರು ರಾಜಸೇವಾಸಕ್ತ ನವರತ್ನ ರಾಮರಾಯರು ಒಬ್ಬರು.

ನವರತ್ನ ರಾಮರಾಯರು ಎಂದೊಡನೆ ನಮ್ಮ ಜನಕ್ಕೆ ನೆನಪಾಗುವುದು ಆಡಳಿತ ನಿರ್ವಹಣೆಯ ಕಾಲದಲ್ಲಿ ಅವರು ನಡೆಸಿದ ಜನೋಪಕಾರಿ ಕೆಲಸಗಳು ಮತ್ತು ಅವರ– **"ಕೆಲವು ನೆನಪುಗಳು"** ಆತ್ಮಕಥನದ ಗ್ರಂಥ. ಇಂದಿಗೂ ಜನಮನ ಸೆಳೆಯುತ್ತಿರುವ ಆತ್ಮಕಥನ ಗ್ರಂಥಗಳಲ್ಲಿ "ಕೆಲವು ನೆನಪುಗಳು" ಗ್ರಂಥವೂ ಒಂದಾಗಿದೆ. ಅವರು ಸಣ್ಣ ಕಥೆಗಳನ್ನು, ಪ್ರಬಂಧಗಳನ್ನು ಬರೆದಿದ್ದರೂ, ಅನೇಕ ಉಪನ್ಯಾಸಗಳನ್ನು ಮಾಡಿದ್ದರೂ, ಅವರ ಹೆಸರನ್ನು ಉಳಿಸಿರುವುದು, "ಕೆಲವು ನೆನಪುಗಳು" ಆತ್ಮಕಥನಗ್ರಂಥ ಎಂದರೆ ತಪ್ಪಾಗಲಾರದು.

ನಮ್ಮಲ್ಲಿ ಸಾಹಿತಿಗಳು, ವಿದ್ವಾಂಸರು ಅನೇಕ ಕೃತಿಗಳನ್ನು ರಚಿಸಿದ್ದರೂ, ಜನಮಾನಸದಲ್ಲಿ ಪ್ರಜ್ವಲಿಸುತ್ತಿರುವುದು ಒಂದೆರಡು ಕೃತಿಗಳು ಮಾತ್ರ. ಜನಗಳು

ಅವರನ್ನು ಗುರುತಿಸುವುದು ಆ ಕೃತಿಗಳ ಮೂಲಕವೇ ಎನ್ನಬಹುದು. ಕು.ವೆಂ.ಪು. ಎಂದೊಡನೆ, ರಾಮಾಯಣ ದರ್ಶನಂ, ಎ.ಆರ್.ಕೃ. ಎಂದರೆ ವಚನ ಭಾರತ, ಬೇಂದ್ರೆ ಎಂದರೆ, ಗಂಗಾವತರಣ, ಮಾಸ್ತಿ ಎಂದರೆ, ಸಣ್ಣ ಕಥೆಗಳು ಎಂಬಂತೆ ನವರತ್ನ ರಾಮರಾಯರು ಎಂದ ಕೂಡಲೆ ನೆನಪಾಗುವುದು, "ಕೆಲವು ನೆನಪುಗಳು" ಗ್ರಂಥ. ಹೀಗೆ ಗ್ರಂಥವೊಂದರಿಂದ ಪ್ರಸಿದ್ಧರಾದ ಆಡಳಿತನಿಪುಣ ಸಾಹಿತಿ ನವರತ್ನ ರಾಮರಾಯರ ಜೀವನ ಮತ್ತು ಸಾಹಿತ್ಯ ರೋಚಕವಾದುದು.

ನವರತ್ನ ರಾಮರಾಯರು ಎಂಬ ಹೆಸರಿನಲ್ಲಿ ಇರುವ "ನವರತ್ನ" ಎಂಬ ಮಾತಿನಲ್ಲಿ ಇತಿಹಾಸವೇ ಅಡಗಿದೆ. ಮಾಸ್ತಿ ಹೇಳಿದಂತೆ, "ರಾಮರಾಯರ ಪೂರ್ವಿಕರದು ವೈದಿಕರ ಮನೆತನವಾಗಿತ್ತು." ಅವರು ಉತ್ತರಾದಿಮಠಕ್ಕೆ ಸೇರಿದವರು. ಇವರ ಪೂರ್ವಜರಲ್ಲಿ ಸೋದರರು ಮತ್ತು ಅವರ ಮಕ್ಕಳು ೯ ಮಂದಿ ಇದ್ದರು. ಎಲ್ಲರೂ ಉದ್ದಾಮ ಪಂಡಿತರಾಗಿದ್ದರು. ಈ ಕುಟುಂಬದ ಹಿರಿಯರನ್ನು ಕುರಿತು ಒಮ್ಮೆ ಉತ್ತರಾದಿಮಠದ ಆಗಿನ ಸ್ವಾಮಿಗಳು ಒಂದು ಸಂದರ್ಭದಲ್ಲಿ ಹೇಳಿದರಂತೆ: "ನಿಮ್ಮ ಮನೆತನದ ೯ ಜನರು ಪಂಡಿತರಾಗಿದ್ದೀರಿ, ನಮ್ಮ ಮಠದ ಆಸ್ತಿ, ಹೆಮ್ಮೆ ನೀವೆಲ್ಲ. ನಮ್ಮ "ನವರತ್ನ" ನೀವುಗಳು." ಅಂದಿನಿಂದ ಇವರ ಮನೆತನ "ನವರತ್ನ" ಮನೆತನವಾಯಿತು. ರಾಮರಾಯರು, ನವರತ್ನ ರಾಮರಾಯಿರಾದರು.

ಇವರ ಪೂರ್ವಜರು ಉತ್ತರ ಕರ್ನಾಟಕದಿಂದ ಹಳೇ ಮೈಸೂರಿನ ಶಿವಮೊಗ್ಗ, ಮೈಸೂರು, ಬೆಂಗಳೂರು, ತುಮಕೂರು ಮೊದಲಾದ ಕಡೆ ಬಂದು ನೆಲಸಿದ ಮಹಾರಾಷ್ಟ್ರ ದೇಶಸ್ಥ ಮನೆತನಕ್ಕೆ ಸೇರಿದವರಾಗಿದ್ದಾರೆ. ೨೯.೭.೧೮೭೭ರಲ್ಲಿ ಬೆಂಗಳೂರು ಸಮೀಪದ ದೇವನಹಳ್ಳಿಯಲ್ಲಿ ಜನಿಸಿದ ರಾಮರಾಯರು ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡು ಸೋದರಮಾವನ ಮನೆಯಲ್ಲಿ ಅತ್ತೆಯಿಂದ ಕೈತುತ್ತಿನ ತಂಗಳನ್ನು ತಿನ್ನುತ್ತಾ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದರು.

ಶಾಲಾ ವಿದ್ಯಾಭ್ಯಾಸಕಾಲದಲ್ಲಿ ರಾಮರಾಯರು ದೃಢಾಂಗರೂ ಸ್ಫುರದ್ರೂಪಿಗಳೂ ಆಗಿದ್ದರು. ಅವರು ದೇಹದಾರ್ಢ್ಯವನ್ನು ಚೆನ್ನಾಗಿ ವ್ಯಾಯಾಮ ಮಾಡಿ ಗಳಿಸಿದ್ದರು. ಎಷ್ಟರಮಟ್ಟಿಗೆ ಎಂದರೆ ಅವರು ಲೋಯರ್ ಸೆಕೆಂಡರಿ ಪರೀಕ್ಷೆಗೆ ೫ ರೂಪಾಯಿ ಕಟ್ಟಬೇಕಿತ್ತು. ಅವರ ಬಳಿ ಹಣವಿರಲಿಲ್ಲ. ಹಣ ಕೂಡಿಸಲು ಪ್ರಯತ್ನಿಸುತ್ತಿದ್ದರು. ಆ ಕಾಲದಲ್ಲಿ, ಈಗ ಎಸ್.ಎಲ್.ಎನ್. ಕಾಲೇಜು ಇರುವಲ್ಲಿ ಸಿಟಿ ಮಾರ್ಕೆಟ್ ಬಳಿ ಇರುವ ಜಾಗದಲ್ಲಿ ಕುಸ್ತಿ ಪಂದ್ಯಗಳು ಪ್ರತಿವಾರವೂ ತಪ್ಪದೆ ನಡೆಯುತ್ತಿದ್ದವು. ಎಷ್ಟೋ ಸಾರಿ ಜಗತ್ಪ್ರಸಿದ್ಧ ಕುಸ್ತಿ ಪಟುಗಳು ಕಿಂಗ್ ಕಾಂಗ್, ರಂಧಾವ್ ಅಲ್ಲಿ ಬಂದು ಕುಸ್ತಿ ಪಂದ್ಯ ನಡೆಸಿದ್ದುಂಟು. ಆಗ ಪಂದ್ಯದಲ್ಲಿ ಗೆದ್ದವರಿಗೆ ಹಣ

ಕೊಡುತ್ತಿದ್ದರು. ಸಾಮಾನ್ಯ ಜಟ್ಟಿಗಳಿಂದ ಹಿಡಿದು ಹಿರಿಯ ಜಟ್ಟಿಗಳವರೆಗೆ ಕುಸ್ತಿ ಪಂದ್ಯ ನಡೆಯುತ್ತಿದ್ದ ಕಾಲ. ರಾಮರಾಯರು ಯುವಕರ ಕುಸ್ತಿ ಪಂದ್ಯದಲ್ಲಿ ಭಾಗವಹಿಸಿ ಗೆದ್ದು ಹಣ ಗಳಿಸಿ ಪರೀಕ್ಷೆಗೆ ಕಟ್ಟಿ ಪಾಸಾದರು.

ರಾಮರಾಯರು ಶಾಲಾ ವಿದ್ಯಾಭ್ಯಾಸಕಾಲದಲ್ಲಿ ಘಟಿಂಗ, ತುಂಟ, ತರಲೆ ಆಗಿದ್ದರೂ ಪ್ರಾಮಾಣಿಕರೂ, ಸತ್ಯಪ್ರಿಯರೂ ಆಗಿದ್ದರು. ಅನ್ಯಾಯವನ್ನು ಸಹಿಸುತ್ತಿರಲಿಲ್ಲ. ಅದು ಅವರ ಹುಟ್ಟುಸ್ವಭಾವವಾಗಿತ್ತು. ಇದಕ್ಕೊಂದು ನಿದರ್ಶನವೆಂದರೆ ಅವರು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಮೃತ್ಯುಂಜಯ ಐಯ್ಯರ್ ಎಂಬ ಅಧ್ಯಾಪಕರು, ರಾಮರಾಯರು ತಪ್ಪು ಮಾಡಿದರು ಎಂದು ಇನ್ನೊಬ್ಬ ಹುಡುಗನ ಬದಲಾಗಿ ಭಾವಿಸಿ, "ಬೆಂಚ್ ಮೇಲೆ ನಿಲ್ಲು" ಎಂದರು. ಆ ಕಾಲದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ತರಗತಿ ಶಿಕ್ಷೆಗಳಲ್ಲಿ ಅದೊಂದಾಗಿತ್ತು. ಹಿಂದಿನ ಪಾಠ ಒಪ್ಪಿಸದ ವಿದ್ಯಾರ್ಥಿಗಳಿಗೆ, ಪಾಠ ಒಪ್ಪಿಸಿದ ವಿದ್ಯಾರ್ಥಿಗಳಿಂದ ಮೂಗು ಹಿಡಿಸಿ ಕೆನ್ನೆಗೆ ಹೊಡೆಸುವುದು ಇನ್ನೊಂದು ಶಿಕ್ಷೆಯಾಗಿತ್ತು. ಆಗಿನಕಾಲದ ಶಿಕ್ಷಣಪದ್ಧತಿ ಈಗಿಲ್ಲ. ಆದ್ದರಿಂದ ಈಗಿನವರಿಗೆ ಅವೆಲ್ಲ ಅರ್ಥವಾಗುವುದು ಕಷ್ಟ. "ಬೆಂಚ್ ಮೇಲೆ ನಿಲ್ಲು" ಎಂದಾಗ, "ನಾನು ತಪ್ಪು ಮಾಡಿಲ್ಲ, ನಿಲ್ಲೊಲ್ಲ" ಎಂದರು. ತಮ್ಮ ಮಾತನ್ನು ಕೇಳದಿದ್ದದ್ದಕ್ಕೆ ಕೋಪ ಬಂದು ಉಪಾಧ್ಯಾಯರು ರಾಮರಾಯರಿಗೆ ಹೊಡೆಯಲು ಕೈ ಎತ್ತಿದಾಗ, ರಾಮರಾಯರು ಮೇಷ್ಟ್ರಿಗೇ ತಿರುಗಿಸಿ ಎರಡು ಬಿಟ್ಟರು. ನಾನು ತಪ್ಪು ಮಾಡದಿದ್ದರೂ ನನ್ನನ್ನು ಶಿಕ್ಷಿಸುತ್ತಾರಲ್ಲ! ಎಂದು, ಉಗ್ರ ಕೋಪ ಬಂದಿತ್ತು. ಎಷ್ಟಾದರೂ ಹರೆಯ ಬೇರೆ. ಹೆಡ್ಮಾಸ್ಟರ್‌ಬಳಿ ಕರೆದೊಯ್ದಾಗ, ರಾಮರಾಯರನ್ನು "ನಾಳೆಯಿಂದ ಶಾಲೆಗೆ ಬರಬೇಡ" ಎಂದರು. ಆಗ ಹತ್ತಿರದಲ್ಲಿದ್ದ ಲಂಡನ್ ಮಿಷನ್ ಹೈಸ್ಕೂಲಿಗೆ ಹೋಗಿ ಸೇರಿದರು. ಅಲ್ಲಿನ ವಾಲ್ಕನ್ ಸಾಹೇಬರು, ಇವರ ಪ್ರಾಮಾಣಿಕತನ, ದಿಟ್ಟತನ, ಸತ್ಯಪ್ರಿಯತೆ, ನೇರ ನುಡಿಗಳನ್ನು ಕೇಳಿ ಸೀಟು ಕೊಟ್ಟರು. ಅನಂತರ ಎಫ್.ಎ. ಪರೀಕ್ಷೆ ಮುಗಿಸಿ ಸೆಂಟ್ರಲ್ ಕಾಲೇಜಿಗೆ ಸೇರಿದರು. ಸೆಂಟ್ರಲ್ ಕಾಲೇಜಿನಲ್ಲಿ ಓದುವಾಗ ಇವರೊಂದಿಗೆ ಭಾರತದ ಗವರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರ್ಯರು ಸಹಪಾಠಿ ವಿದ್ಯಾರ್ಥಿಯಾಗಿದ್ದರು, ಇವರಿಗೆ ಪರಮ ಮಿತ್ರರಾಗಿದ್ದರು. ಇಬ್ಬರೂ ಬಡತನದಲ್ಲಿ ಸಮಾನಸ್ಕಂಧರಾಗಿದ್ದರು. ಕಾಲೇಜಿನ ಕ್ಯಾಂಟೀನ್‌ರೂಮಿನಲ್ಲಿ ಒಟ್ಟಿಗೆ ವಾಸವಾಗಿದ್ದರು. ಅವರ ಕಾಲದ ವಿದ್ಯಾರ್ಥಿಯೊಬ್ಬರು ಒಮ್ಮೆ ಹೇಳಿದಂತೆ ಅವರಿಬ್ಬರ ಸ್ನೇಹ ರಾಮ ಲಕ್ಷ್ಮಣರಂತೆ, ಹಗಲು, ರಾತ್ರಿ ಒಟ್ಟಿಗಿರುತ್ತಿದ್ದರು. ಉಗ್ರಾಣದ ಕೊಠಡಿಯಲ್ಲಿ ದವಸದ ಮೂಟೆಗಳ ಮೇಲೆ ಒಟ್ಟಿಗೆ ಆನಂದವಾಗಿ ಮಲಗಿರುತ್ತಿದ್ದರು. ಓದಿನಲ್ಲಿ ಅವರು ಎಲ್ಲರಿಗಿಂತ ಮುಂದಿದ್ದರು. ಅವರಹಾಗೆ ಆ ಕಾಲದಲ್ಲಿ ಚೂಟಿಯಾಗಿದ್ದವರು ಇನ್ನೊಬ್ಬರಿರಲಿಲ್ಲ. ಅವರು

ವಿದ್ಯಾರ್ಥಿಗಳಾಗಿದ್ದಾಗ, ಡಾ.ಕುಕ್ ಎಂಬುವರು, ಸೆಂಟ್ರಲ್‌ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ವಿದ್ಯಾರ್ಥಿಗಳ ಹಿತೈಷಿಗಳಾಗಿ ವಿದ್ಯಾರ್ಥಿಮಿತ್ರರಾಗಿದ್ದರು. ಅದಕ್ಕೆ ನಿದರ್ಶನವೆಂಬಂತೆ ಮಾಸ್ತಿಯವರು ಒಂದು ಪ್ರಸಂಗವನ್ನು ಹೇಳಿದ್ದಾರೆ. ಸೆಂಟ್ರಲ್ ಕಾಲೇಜಿನಲ್ಲಿ, ಮತ್ತು ಮಿಥಿಕ್ ಸೊಸೈಟಿ ಆವರಣದಲ್ಲಿ ಆ ಕಾಲದಲ್ಲಿ ಮಾವಿನ ಮರಗಳು ಸಾಕಷ್ಟು ಇದ್ದವು. ಆ ಸುತ್ತಮುತ್ತಲ ಪ್ರದೇಶಗಳು, ಈಗ ವಿಧಾನಸೌಧ ಇರುವ ಪ್ರದೇಶವೆಲ್ಲ ಸಂಪಿಗೆಹಳ್ಳಿ ಎಂಬ ಹಳ್ಳಿಯಾಗಿದ್ದು, ಮಾವಿನ ತೋಪುಗಳಿಂದ ತುಂಬಿತ್ತು. ಸೆಂಟ್ರಲ್ ಕಾಲೇಜಿನ ಆವರಣದಲ್ಲಿದ್ದ ಮರಗಳನ್ನು ಹರಾಜು ಹಾಕುತ್ತಿದ್ದರು. ಹರಾಜಿನಲ್ಲಿ ಕೊಂಡವರು ವಿದ್ಯಾರ್ಥಿಗಳಿಂದ ಹಣ್ಣುಗಳ ರಕ್ಷಣೆಗೆ ಕಾವಲುಗಾರರನ್ನು ಇಡುತ್ತಿದ್ದರು. ಆದರೂ ಚಾಣಾಕ್ಷತನದಿಂದ ಹಣ್ಣುಗಳನ್ನು ವಿದ್ಯಾರ್ಥಿಗಳು ಕಾವಲುಗಾರನ ಕಣ್ಣುತಪ್ಪಿಸಿ ಕದ್ದು ತಿನ್ನುತ್ತಿದ್ದರು. ಒಮ್ಮೊಮ್ಮೆ ಕಾವಲುಗಾರನ ಕೈಗೆ ಸಿಕ್ಕ ವಿದ್ಯಾರ್ಥಿಗಳಿಗೂ, ಕಾವಲುಗಾರನಿಗೂ ಜಗಳವಾಗುತ್ತಿತ್ತು. ಹಾಗೆ ಜಗಳವಾಡುತ್ತಿದ್ದಾಗ ಪ್ರಿನ್ಸಿಪಾಲರು ಬಂದು, 'ವಿಷಯವೇನು?' ಎಂದು ಕೇಳಿದಾಗ, ರಾಮರಾಯರು 'ನಮ್ಮ ಕಾಲೇಜಿನ ಮರದ ಹಣ್ಣುಗಳನ್ನು ನಾವು ತಿನ್ನಬಾರದೇ?' ಎಂದು ಕೇಳಿದರಂತೆ. ಆಗ ಪ್ರಿನ್ಸಿಪಾಲರು ನಕ್ಕು, ಮರಗಳ ಹರಾಜನ್ನು ನಿಲ್ಲಿಸಿದರು. ವಿದ್ಯಾರ್ಥಿಗಳಿಗೆ ಹಣ್ಣುಗಳ ಸುಗ್ಗಿಯಾಯಿತು. ನಿರ್ಭೀತರಾಗಿ ನೇರವಾಗಿ ನುಡಿಯುವುದು ರಾಮರಾಯರ ಜಾಯಮಾನವಾಗಿತ್ತು.

ಕಾಲೇಜಿನಲ್ಲಿ ಇದ್ದಾಗಲೇ ರಾಮರಾಯರಿಗೆ ಕಾಶೀಬಾಯಿಯ ಜೊತೆ ಮದುವೆಯಾಯಿತು, ಕಾಶೀಬಾಯಿ, ಸೋದರಮಾವ ಆನಂದತೀರ್ಥರಾಯರ ಮಗಳು. ಮದುವೆಯಾದ ಪ್ರಸಂಗ ಸ್ವಾರಸ್ಯಕರವಾದುದು. ಪ್ರಹ್ಲಾದರಾಯರು ಮತ್ತು ಆನಂದತೀರ್ಥ ರಾಯರು ಅಣ್ಣತಮ್ಮಂದಿರು. ಇಬ್ಬರಿಗೂ ಹೆಣ್ಣುಮಕ್ಕಳಿದ್ದರು. ಇಬ್ಬರು ಸೋದರಮಾವಂದಿರೂ ರಾಮರಾಯರಿಗೆ ತಮ್ಮ ತಮ್ಮ ಮಗಳನ್ನು ಕೊಡಲು ನಿರ್ಧರಿಸಿದರು. ರಾಮರಾಯರ ತಂದೆಗೆ ಇಬ್ಬರೂ ಬೇಕಾದವರೇ. ಏನು ಮಾಡಬೇಕು?

ಆಗ ದೇವರೆದುರು ಚೀಟಿ ಹಾಕಿ, ಅದರಲ್ಲಿ ಚೀಟಿ ಎತ್ತಿದಾಗ ಯಾರ ಹುಡುಗಿಯ ಹೆಸರು ಬರುತ್ತದೆಯೋ, ಅವಳೊಡನೆ ರಾಮರಾಯರ ಮದುವೆ ಆಗಬೇಕು ಎಂದರು. ಇಬ್ಬರು ಸೋದರಮಾವಂದಿರೂ ಒಪ್ಪಿದಾಗ ಆನಂದತೀರ್ಥರಾಯರ ಮಗಳೊಡನೆ ರಾಮರಾಯರ ವಿವಾಹವಾಯಿತು.

ರಾಮರಾಯರು ಮದುವೆಯಾದಮೇಲೂ, ವಿದ್ಯಾರ್ಥಿಯಾಗಿ, ವಿದ್ಯಾಭ್ಯಾಸ ಮುಂದುವರೆಸುತ್ತಿದ್ದರು. ರಾಮರಾಯರು ಸ್ವಾವಲಂಬಿಗಳಾಗಿರಲು, ಇನ್ನೊಬ್ಬರಿಗೆ

ಕೈ ಚಾಚದಿರಲು ಬಯಸುತ್ತಿದ್ದರು. ಕಷ್ಟಪಡಲು ಸಿದ್ಧರಿದ್ದರು. ಇನ್ನೊಬ್ಬರ ಕೃಪಾಕಟಾಕ್ಷದಲ್ಲಿ ಬದುಕಲು ಇಷ್ಟಪಡುತ್ತಿರಲಿಲ್ಲ. ಟೇಟ್ ಸಾಹೇಬರು ಅವರಿಗೆ ಅಧ್ಯಾಪಕರಷ್ಟೇ ಆಗಿರಲಿಲ್ಲ. ವಿದ್ಯಾರ್ಥಿಗಳಿಗೆ ಆಪ್ತಮಿತ್ರರೂ, ಆಪ್ತರಕ್ಷಕರೂ ಆಗಿದ್ದರು. ರಾಮರಾಯರ ಮೇಲೆ ಅಪಾರ ಪ್ರೀತಿ ಅವರಿಗೆ. ಆಗಿನ ಕಾಲದಲ್ಲಿ ಸಾಮಾನ್ಯವಾಗಿ ನಿಜವಾದ ಅಧ್ಯಾಪಕರು ಕೇವಲ ಜ್ಞಾನದಾತರಷ್ಟೇ ಆಗಿರದೆ, ಅನ್ನದಾತರೂ ಆಗಿರುತ್ತಿದ್ದರು, ಆ ಕಾಲದಲ್ಲಿ. ಟೇಟ್ ಸಾಹೇಬರು ಸಂಸಾರದ ವೆಚ್ಚಕ್ಕಾಗಿ ಹಣ ಕೊಡಲು ಬಂದಾಗ ರಾಮರಾಯರು ನಿರಾಕರಿಸಿದರು. ಆಗ ಟೇಟ್ ಸಾಹೇಬರು, ಅವರ ಸ್ವಾಭಿಮಾನವನ್ನು ಮೆಚ್ಚಿ, "ನೀನು ನನಗೆ ಕನ್ನಡಪಾಠ ಹೇಳಿಕೊಡು, ಪ್ರತಿಫಲವಾಗಿ ನಾನು ಕೊಟ್ಟ ಹಣ ತೆಗೆದುಕೋ" ಎಂದರು.

ಸರಳ ಕನ್ನಡದಲ್ಲಿ, ಜನರ ಮಾತಿನ ಭಾಷೆಯಲ್ಲಿ ಪರಿಣಾಮಕಾರಿಯಾಗಿ ಬರೆಯಬಲ್ಲ ರಾಮರಾಯರಿಗೆ ವಿದ್ಯಾಭ್ಯಾಸ ಕಾಲದಲ್ಲಿ ಕನ್ನಡದ ಬಗ್ಗೆ ವಿಶೇಷಾಸಕ್ತಿಯೇನೂ ಇರಲಿಲ್ಲ. ಆದರೆ ಮಾಸ್ತಿಯವರ ಪ್ರೋತ್ಸಾಹದಿಂದ ತಮ್ಮದೇ ಆದ ಭಾಷಾಶೈಲಿಯನ್ನು ರೂಢಿಸಿಕೊಂಡರು. ಅವರಿಗೆ ಕಾಲೇಜಿನಲ್ಲಿ ಗರಣಿ ಕೃಷ್ಣಾಚಾರ್ಯರೆಂಬ ಪ್ರಸಿದ್ಧ ವೈಯಾಕರಣಿ ವಿದ್ವಾಂಸರು ಗುರುಗಳಾಗಿದ್ದರು. ಗರಣಿಯವರ ಮೆಚ್ಚುಗೆ ಗಳಿಸಿದ ವಿದ್ಯಾರ್ಥಿ ರಾಮರಾಯರು ಆಗಿದ್ದರು. ಪರೀಕ್ಷೆಯಲ್ಲಿ ಅವರು ರಾಮರಾಯರಿಗೆ ಉದಾರವಾಗಿ ಅಂಕಗಳನ್ನು ನೀಡಿದ್ದರು. ಪರೀಕ್ಷೆ ಫಲಿತಾಂಶ ಬಂದಮೇಲೆ ಗುರುಗಳು ರಾಮರಾಯರಿಗೆ, "ಪರೀಕ್ಷೆಯಲ್ಲಿ ಪಾಸ್ ಆದೆಯಲ್ಲ" ಎಂದಾಗ ರಾಮರಾಯರು, "ಗುರುಗಳೇ, ನಿಮ್ಮ ಆಶೀರ್ವಾದದಿಂದ" ಎಂದರು. ಗುರುಗಳು ನಕ್ಕು, "ಹೌದು, ನನ್ನ ಆಶೀರ್ವಾದದಿಂದಲೇ, ನಿನ್ನ ವ್ಯಾಸಂಗದಿಂದಲ್ಲ," ಎಂದರಂತೆ. ಹೀಗಿದ್ದವರು ಆಡಳಿತಾನುಭವದಲ್ಲಿ ಜನಸಂಪರ್ಕದಿಂದ ಜನತಾ ಕನ್ನಡಭಾಷೆಯನ್ನು ರೂಢಿಸಿಕೊಂಡರು. ಈ ಪ್ರಸಂಗ ಕಂಡಾಗ ನನಗೆ ತರಾಸು ಅವರ ಬಾಲ್ಯದ ಪ್ರಸಂಗ ನೆನಪಾಗುತ್ತದೆ.

ನಾನು ಫೋರ್ಟ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಚಿತ್ರದುರ್ಗದಲ್ಲಿ ತರಾಸು ಅವರಿಗೆ ಗಣಿತದ ಅಧ್ಯಾಪಕರಾಗಿದ್ದ ಡಿ.ವಿ.ಶೇಷಗಿರಿ ರಾವ್ ನಮ್ಮ ಶಾಲೆಗೆ ವರ್ಗವಾಗಿ ಬಂದು ನಮಗೆ ಗಣಿತ ಹೇಳಿಕೊಡುತ್ತಿದ್ದರು. ಅವರು ಒಮ್ಮೆ ಹೇಳಿದ ಮಾತು "ತರಾಸು ಬುದ್ಧಿವಂತ ಹುಡುಗ. ಅಪಾರ ಸಾಹಿತ್ಯಾಸಕ್ತಿ. ಶಾಲೆಯ ಲೈಬ್ರರಿಯಲ್ಲಿದ್ದ ಕನ್ನಡ ಪುಸ್ತಕಗಳಲ್ಲಿ ಮುಕ್ಕಾಲು ಭಾಗ ಆಗಲೇ ಓದಿಬಿಟ್ಟಿದ್ದ. ಆದರೆ ಗಣಿತದಲ್ಲಿ ಹಿಂದುಳಿದಿದ್ದ. ಪರೀಕ್ಷೆಯಲ್ಲಿ ಇಂಥ ಪ್ರಸಿದ್ಧವಾದವರು, ಬಾಲ ಸಾಹಿತಿ, ಫೇಲಾಗಬಾರದೆಂದು ಗಣಿತದಲ್ಲಿ ಉದಾರ ಅಂಕಗಳನ್ನು ನೀಡಿ ಪಾಸು ಮಾಡಿಸಿದ್ದೆ. ಅವರು ಹೇಳಿದ ಇನ್ನೊಂದು ಸಂಗತಿ:

ತ.ರಾ.ಸು ಶಾಲೆಯಲ್ಲಿ ಸಾಕಷ್ಟು ತುಂಟನೂ ಆಗಿದ್ದ. ಬಿ.ವೆಂಕಟಾಚಾರ್ ಕಾದಂಬರಿಗಳನ್ನು ಆಗಲೇ ಓದಿ ಅವನು ರಸವತ್ತಾದ ಸಾಲುಗಳನ್ನು ಚೀಟಿಯಲ್ಲಿ ಬರೆದು ಗುಲಾಬಿ ಹೂವಿನೊಂದಿಗೆ ಹುಡುಗಿಯರ ಡೆಸ್ಕ್‌ನಲ್ಲಿ ಇಡುತ್ತಿದ್ದ. ಅದನ್ನು ಓದಿ ಹುಡುಗಿಯರು ಖುಷಿಪಡುತ್ತಿದ್ದರು."

ಜೀವನದುದ್ದಕ್ಕೂ ತಾವೇ ದುಡಿದು ತಿನ್ನಬೇಕು, ಇತರರಿಗೆ ಪರಾವಲಂಬಿಯಾಗಿ ಕೈ ಒಡ್ಡಬಾರದು ಎಂಬುದು ಅವರ ಜೀವನ ಧ್ಯೇಯವಾಗಿತ್ತು. ಸೆಂಟ್ರಲ್ ಕಾಲೇಜಿನಲ್ಲಿ ಡಿಗ್ರಿ ಪಡೆದಮೇಲೆ ಅವರು ಮದ್ರಾಸಿನಲ್ಲಿ ಲಾ ಪರೀಕ್ಷೆಗೆ ಓದಿದರು. ಆ ಕಾಲದಲ್ಲೂ ಅವರಿಗೆ ತಾಪತ್ರಯವಿತ್ತು. ಓದಿನ ನಡುವೆ ಉದ್ಯೋಗ ಮಾಡಿ ಸಂಪಾದನೆ ಮಾಡಲು ಸಾಧ್ಯವಿರಲಿಲ್ಲ. ಹಾಗಾಗಿ ಮದ್ರಾಸಿನ ಟೈಂಸ್ ಪತ್ರಿಕೆಗೆ ಲೇಖನಗಳನ್ನು ಬರೆದು ಸ್ವಲ್ಪ ಹಣವನ್ನು ವೆಚ್ಚಕ್ಕೆ ಗಳಿಸಿದರು. ಅಷ್ಟೇ ಅಲ್ಲ, ಒಮ್ಮೆ ಯಾರು ಹೆಚ್ಚು ವಡೆಗಳನ್ನು ಒಂದೇ ಸಲ ತಿನ್ನುತ್ತಾರೆ ಎಂಬ ಸ್ಪರ್ಧೆಯಲ್ಲಿ ಭಾಗವಹಿಸಿ ೪೦ ವಡೆಗಳನ್ನು ತಿಂದು ಹಣ ಗಳಿಸಿದ್ದುಂಟು.

ಲಾಯರ್ ಪರೀಕ್ಷೆ ಪಾಸಾದನಂತರ ಪ್ರೊಬೇಷನರ್ ಆಗಿ ಕೆಲಸಕ್ಕೆ ಸೇರಿ ಅಮಲ್ದಾರರಾದರು. ಸೆಕ್ರೆಟೇರಿಯೆಟ್‌ನಲ್ಲಿ ರಿಜಿಸ್ಟ್ರಾರ್ ಆದರು. ಅನಂತರ ಅಸಿಸ್ಟೆಂಟ್ ಕಮೀಷನರ್ ಆದರು. ರೇಷ್ಮೆ ಇಲಾಖೆಯಲ್ಲಿ ಅಧಿಕಾರಿಗಳಾಗಿ ರೇಷ್ಮೆ ಉದ್ಯಮದಲ್ಲಿ ಮೈಸೂರಿನ ಕೀರ್ತಿಯನ್ನು ಬೆಳಗಿದರು. ೧೯೩೨ರಲ್ಲಿ ಲಂಡನ್‌ನಲ್ಲಿ ನಡೆದ ರೌಂಡ್ ಟೇಬಲ್ ಕಾನ್ಫರೆನ್ಸ್‌ನಲ್ಲಿ (ದುಂಡುಮೇಜಿನ ಪರಿಷತ್) ಸರ್ ಮಿರ್ಜಾ ಇಸ್ಮಾಯಿಲ್ಲರೊಡನೆ ತಜ್ಞರಾಗಿ ಭಾಗವಹಿಸಿದರು. ಅವರು ಸಲ್ಲಿಸಿದ ಸಾರ್ವಜನಿಕ ಸೇವೆಗಾಗಿ "ರಾಜಸೇವಾಸಕ್ತ" ಬಿರುದನ್ನು ಮಹಾರಾಜರು ನೀಡಿದರು. ಇಳಿವಯಸ್ಸಿನಲ್ಲೂ ಅವರು ಕಾರ್ಯಪ್ರವೃತ್ತರಾಗಿದ್ದರು. ಆಚಾರ್ಯ ಪಾಠಶಾಲೆಯ ಆಡಳಿತ ಸಮಿತಿಯ ಅಧ್ಯಕ್ಷರಾಗಿ ತಮ್ಮ ಅಂತಿಮದಿನಗಳವರೆಗೂ ಕಾರ್ಯನಿರ್ವಹಿಸಿದರು. ಅವರು ದೀರ್ಘಕಾಲ ಸೇವೆಸಲ್ಲಿಸಿದ ಇನ್ನೊಂದು ಸಂಸ್ಥೆ ಎಂದರೆ, ಬೆಂಗಳೂರು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್. ಇಲ್ಲೆಲ್ಲಾ ಯಾವ ಗೌರವಸಂಭಾವನೆಯನ್ನೂ ಪಡೆಯದೆ ನಿಃಸ್ವಾರ್ಥದಿಂದ ದುಡಿದರು. ಹೀಗೆ ಸಾರ್ವಜನಿಕ ಸೇವಾಧುರಂಧರರಾಗಿ ಸಾತ್ವಿಕ ವ್ಯಕ್ತಿಗಳಾಗಿ ಆಡಳಿತವಿಚಕ್ಷಣರಾಗಿ ದುಡಿದವರು ರಾಮರಾಯರು. ಇವರ ಜನಸೇವೆಗೆ ನಿದರ್ಶನವಾಗಿ ಅವರೇ ಒಂದು ಅನುಭವವನ್ನು ಹೀಗೆ ಪ್ರಸಂಗಿಸಿದ್ದಾರೆ.

ಯಡತೊರೆಯಲ್ಲಿ ಅಮಲ್ದಾರಿಕೆಯನ್ನು ಮಾಡಿದ ಮೇಲೆ ಸುಮಾರು ೨೦ ವರ್ಷಗಳ ನಂತರ ಹೊಳೆನರಸೀಪುರದ ಮಾರ್ಗವಾಗಿ ಮೈಸೂರಿಗೆ ಹೋಗುವಾಗ ಗೇರುದಡ ಎಂಬ ಗ್ರಾಮದ ಬಳಿ ಕಾರಿನ ರೇಡಿಯೇಟರಿಗೆ ನೀರು ತುಂಬಿಸಿಕೊಳ್ಳಲು

ಹೆಣ್ಣುಮಕ್ಕಳು ನೀರು ಸೇದುತ್ತಿದ್ದ ಬಾವಿಯ ಬಳಿ ನಿಂತು ರಾಮರಾಯರು ನೀರು ಕೇಳಿದರು. ನೀರು ಸೇದುತ್ತಿದ್ದಾಕೆ ಒಬ್ಬಳು "ಕೊನ್ನಿ ಬುದ್ಧಿ" ಅಂತ ನೀರು ಕೊಟ್ಟಳು. ಅದಕ್ಕೆ ಕೃತಜ್ಞತೆ ಸೂಚಿಸಲು ಜೇಬಿನಿಂದ ರೂಪಾಯಿ ತೆಗೆದು ಕೊಡಲು ಹೋದರು. ಆಗ ಆ ಹೆಣ್ಣುಮಗಳು, "ನಾವೇನು ಪೇಟೆ ಸ್ಥಳದೋರೆ ಬುದ್ದಿ? ನೀರು ಮಾರಿಕೊಳ್ಳೋಕ್ಕೆ?" ಎಂದವಳು ಪಕ್ಕದವಳ ಕಡೆಗೆ ತಿರುಗಿ, "ನೋಡಕ್ಕಾ, ಇವರು ಕಾಸು ಕೊಡೋರು. ನಾವು ಬಡವರು" ಎಂದಳು. ನನಗೆ ನಾಚಿಕೆಯಾಯ್ತು. "ಕೋಪ ಮಾಡಿಕೋಬೇಡ, ಅಮ್ಮ, ಆಳವಾದ ಬಾವಿ, ಕಷ್ಟದಿಂದ ಸೇದಿ ನೀರು ಕೊಟ್ಟೆ ಅಂತ ನನ್ನ ಹತ್ತಿರ ಇನ್ನೇನೂ ಇಲ್ಲದೆ ದುಡ್ಡು ಕೊಡೋಕ್ಕೆ ಬಂದೆ" ಎಂದರು. ಆಗ ಅಲ್ಲಿದ್ದ ರಾಮರಾಯರ ವಯಸ್ಸಿನ ತಾಯಿಯೊಬ್ಬಳು ಹೇಳಿದಳು, "ಇದೇನು ಕಷ್ಟ ಅಂತ ಕಾಣ್ತೀರಿ, ೧೫-೨೦ ವರ್ಷಗಳ ಹಿಂದೆ ೭-೮ ಮೈಲಿಗಳಾಚೆ ಗುಳುವಿನ ಅತ್ತಿಗುಪ್ಪೆಯಿಂದ ನೀರು ತರಬೇಕಾಗಿತ್ತು. ಆಗ ಮಕ್ಕಳು ಅತ್ತರೆ, ಅಳಬೇಡ ಕಂದ, ಕುಡಿಯಲು ನೀರು ಕೊಡ್ತೀನಿ ಅಂದ್ರೆ ಸುಮ್ಮನಾಗುತ್ತಿದ್ದವು." ಅಲ್ಲಿದ್ದ ಒಬ್ಬ ಹುಡುಗ "ಈ ಬಾವಿಯನ್ನು ಸುಬೇದಾರ್ರು ನವರತ್ನ ರಾಮರಾಯರು ಅನ್ನೋ ಮಹಾರಾಯರು ತೋಡಿಸಿಕೊಟ್ಟರು. ಅವರ ಹೊಟ್ಟೆ ತಣ್ಣಗಿರಲಿ" ಎಂದಾಗ ನೀರುಕೊಟ್ಟ ಹುಡುಗಿ ನಗುತ್ತಾ, "ಅವರೆಲ್ಲಿದ್ದಾರೋ ಈಗ! ನೀವು ತೆಗೆದರಲ್ಲ ಜೋಬಿನಿಂದ ದುಡ್ಡು ಅದನ್ನು ಅವರಿಗೇ ಕೊಡಿ" ಎಂದಳು. ಈ ಪ್ರಸಂಗ ಹೇಳುತ್ತಾ ರಾಮರಾಯರು ಹೇಳುತ್ತಾರೆ, "ನನ್ನ ಸೇವೆಗೆ ಮೀರಿದ ಪ್ರತಿಫಲ ಬಂತು, ಈ ಮಾತನ್ನು ಕೇಳಿ, ಸರ್ಕಾರದವರು ಕೊಡುತ್ತಿದ್ದ ೧೭೫ ರೂಪಾಯಿ ವೇತನ ಕೇವಲ ಭಕ್ಷೀಸು ಎನ್ನಿಸಿತು."

ಆತ್ಮಕತೆ, ಸಣ್ಣಕತೆಗಳನ್ನು ಬರೆದು, ಸೊಗಸಾದ ಭಾಷಣಗಳನ್ನು ಮಾಡುತ್ತಿದ್ದ, ಸಂಗೀತವನ್ನು ಬಲ್ಲವರೂ, ಪಿಟೀಲು ವಾದನದಲ್ಲಿ ಸಾಕಷ್ಟು ಪರಿಶ್ರಮ ಇದ್ದವರೂ ಆದ ರಾಮರಾಯರು ಕವಿಗಳಲ್ಲವಾದರೂ ಕವಿ ಹೃದಯ ಉಳ್ಳವರೂ, ಕವಿತಾ ರಚನಾಶಕ್ತಿಯುಳ್ಳವರೂ ಆಗಿದ್ದರು. ಅವರು ಸ್ವತಂತ್ರವಾಗಿ ಕವಿತೆಗಳನ್ನು ಅಷ್ಟಾಗಿ ಬರೆಯದಿದ್ದರೂ ಅವರು ಬರೆದ ಒಂದೆರಡು ಕವಿತೆಗಳೇ ಅವರ ಕವಿತಾಶಕ್ತಿಗೆ ನಿದರ್ಶನಗಳಾಗಿವೆ. ಅವರಿಗೆ ಫ್ರೆಂಚ್‌ಭಾಷೆಯಲ್ಲಿ ಪರಿಣಿತಿ ಇತ್ತು. ಫ್ರೆಂಚ್ ಕವಿತೆಯೊಂದನ್ನು ಅನುವಾದಿಸಿದ್ದಾರೆ. ಆ ಬಗ್ಗೆ ಹೇಳುತ್ತಾ ಹೀಗೆಂದಿದ್ದಾರೆ: "ನಾನು ಫ್ರೆಂಚ್ ಪಂಡಿತನೂ ಅಲ್ಲ, ಕನ್ನಡ ಕವಿಯೂ ಅಲ್ಲ. ಆದರೆ ನಗು-ಅಳು, ಸಿಹಿ-ಕಹಿ, ಕಷ್ಟ-ತುಷ್ಟಿ, ಆಟ-ನೋಟ, ಗೆಯ್ಮೆ-ಕನಸು ಇವುಗಳನ್ನೆಲ್ಲಾ ಬಲ್ಲ ವೃದ್ಧ.". ಅವರು ಅನುವಾದಿಸಿದ ಪುಟ್ಟ ಫ್ರೆಂಚ್ ಕವಿತೆ ಹೀಗಿದೆ:

ತುಸು ನಗು ತುಸು ಅಳು ॥ ನನ್ನ ಕಂದ ಸುಪ್ರಭಾತ ॥
ತುಸು ಕಹಿ ನಸು ಸಿಹಿ ॥ ನನ್ನ ಮಗನೆ ಇದೇ ಹಗಲು ॥
ಸ್ವಲ್ಪ ಕಷ್ಟ ಅಲ್ಪ ತುಷ್ಟಿ ॥ ಇದೇ ಬಾಳು ಇದೇ ಬದುಕು ॥
ಮಾಡುತ ಆಡುತ ಕನಸನೇ ಕಾಣುತ ॥
ರಾತ್ರಿಯು ಬಂದಿತು ಮಲಗೋ ಮಗುವೆ॥
ತಂದೆಯ ಮೇಲೆ ನಂಬಿಕೆ ಇಟ್ಟು ॥

ಈ ಲಾಲಿ ಪದ್ಯದಲ್ಲಿ ಬಾಲ್ಯ, ಯೌವನ ವಾರ್ಧಕ್ಯಗಳನ್ನು ಸೂಚ್ಯವಾಗಿ ಹೇಳಿದೆ.

ಇನ್ನು ಅವರು ತಮ್ಮ ೮೪ನೇ ವರ್ಷದಲ್ಲಿ ಬರೆದ ಒಂದೇ ಕವಿತೆ ನಿಜಕ್ಕೂ ಕನ್ನಡದ ಉತ್ತಮ ಕವಿತೆಗಳಲ್ಲಿ ಒಂದಾಗಿದೆ. 'ಯಾತ್ರಿಕನ ದಾರಿಯ ಮೇಲೆ' ಎಂಬ ಶೀರ್ಷಿಕೆಯ ಈ ಪದ್ಯವನ್ನು ಕುರಿತು, "ನನ್ನ ಮೊದಲ ಬಹುಶಃ ಕೊನೆಯ ಪ್ರಯತ್ನ" ಎಂದಿದ್ದಾರೆ. ಆ ಮಾತು ನಿಜ. ಈ ಕವಿತೆ ಬಿ.ಎಂ.ಶ್ರೀ.ಯವರ ಕರುಣಾಳು ಬಾ ಬೆಳಕೆ ಕವಿತೆಯನ್ನು ಜ್ಞಾಪಿಸುತ್ತದೆ. ಕವಿತೆ ಹೀಗಿದೆ:

ಬಲು ದೂರ ನಡೆದಿಹೆನು, ಬೆಂಡಾಗಿ ಬಳಲಿಹೆನು
ಹಸಿವು ದಾಹಕು ಕೂಡ ಉಸಿರಿಲ್ಲವೆನಗೆ
ಕೈಕಾಲುಗಳು ಸವೆದು ಕಡ್ಡಿಯಾಗಿ ಉಳಿದಿಹವು
ತುಸುಹೊತ್ತು ತಾಳಪ್ಪ, ಬರುವೆ ನನ್ನೊಡೆಯ.

ಮಳೆಯು ಸುರಿಯುತಲಿಹುದು, ಜಗಕೆ ಮಳೆ ಬೇಕು
ಚಳಿಗಾಳಿ ಮಳೆಗಳ ತಡೆವ ಶಕ್ತಿ ಎನಗೆಲ್ಲಿ?
ಶಾಲು ಕಂಬಳಿ ಹೊದೆಯ ಬಲ್ಲವರಿಗೆ ಅವುಗಳನು ಕೊಡು
ನಿನ್ನಡಿಯ ಭಕ್ತಿಯನೆ ಹೊದಿಸು ನನಗೆ.

ಬಡ ಮುದುಕ ನಾನಿನ್ನ ಆಲಯಕೆ ಬರಲಾರೆ
ಇರುವಲ್ಲೆ ಕರುಣಾಳು ಊಳಿಗವ ಸ್ವೀಕರಿಸು
ನಿನ್ನ ದೇಗುಲ ಪೂಜೆ, ಘೋಷವನು ಕಳಿಸೆನಗೆ
ಎದ್ದು ಒಡನೆಯೆ ಎಲ್ಲ ಚಿಂತೆಯನು ಬದಿಗಿಟ್ಟು

ನವರತ್ನ ರಾಮರಾಯರ ಇಂಗ್ಲಿಷ್ ಪಾಂಡಿತ್ಯ ಅಮೋಘವಾದುದು. ಡಿ.ವಿ.ಜಿ.ಯವರಿಗೆ ಇಂಗ್ಲಿಷ್ ಹೇಳಿಕೊಟ್ಟ ಗುರುಗಳಾದ ದಾಸಪ್ಪನವರು ನವರತ್ನ ರಾಮರಾಯರ ಗಾಢಸ್ನೇಹಿತರು. ಒಮ್ಮೆ ಕಾರ್ಲೈಲ್ ಬಗ್ಗೆ ವಾಗ್ವಾದ ನಡೆದು ರಾಮರಾಯರು ಕಾರ್ಲೈಲ್‌ನ "ಸಾರ್ಟರ್ ರಿಸಾರ್ಟಸ್" ಗ್ರಂಥದಿಂದ ೧೦ ಪುಟಗಳಷ್ಟನ್ನು, ಮತ್ತು "ಪಾಸ್ಟ್ ಅಂಡ್ ಪ್ರೆಸೆಂಟ್" ಗ್ರಂಥದಿಂದ ೨ ಪುಟಗಳನ್ನು

ಬಾಯಲ್ಲೇ ನೆನಪಿನಿಂದ ತಕ್ಷಣವೇ ಹೇಳಿದರಂತೆ. ಮಾಸ್ತಿಯವರ "ಚೆನ್ನಬಸವ ನಾಯಕ"ನನ್ನು ಸೊಗಸಾಗಿ ಇಂಗ್ಲೀಷ್‌ಗೆ ಅನುವಾದಿಸಿದ್ದಾರೆ. ಅಲ್ಲದೆ ಮಾಸ್ತಿಯವರು ಹ್ಯಾಂಲೆಟ್ ಅನ್ನು ಅನುವಾದ ಮಾಡಿ ರಾಮರಾಯರ ಬಳಿ ಓದಿದಾಗ, ಇಂಗ್ಲಿಷ್ ಮೂಲವನ್ನು ಕೈಯಲ್ಲಿ ಹಿಡಿದು ಮಾಸ್ತಿಯವರು ಓದುತ್ತಿದ್ದ ಅನುವಾದಿತ ಮಾತುಗಳನ್ನು ಹೋಲಿಸುತ್ತಾ ತಿದ್ದುತ್ತಿದ್ದರು. ಅಲ್ಲದೆ ಆ ನಾಟಕಕ್ಕೆ ವಿದ್ವತ್ಪೂರ್ಣವಾದ ಪೀಠಿಕೆಯನ್ನು ಬರೆದು ಕೊಟ್ಟಿದ್ದಾರೆ.

ಮಾಸ್ತಿಯವರಿಗೆ, ರಾಮರಾಯರು ಪೂಜ್ಯರೂ, ಹಿರಿಯರೂ, ಗೆಳೆಯರೂ ಆಗಿದ್ದರು. ಅವರ ಗುಣಗಳನ್ನು ಕಂಡು ಅವರ ತಮ್ಮನಂತೆ ಇರಲು ಒಪ್ಪಿ, "ನಾನು ನನ್ನ ಜೀವನದಲ್ಲಿ ಅವರನ್ನು ಒಬ್ಬ ಗುರುವಾಗಿ ಮಾಡಿಕೊಂಡೆ" ಎಂದಿದ್ದಾರೆ. ಮಾಸ್ತಿಯವರಿಗೆ "ಸುಬ್ಬಣ್ಣ" ಕಥೆಯನ್ನು ಹೇಳಿ ನೀವೇ ಬರೆಯಿರಿ ಎಂದವರು ರಾಮರಾಯರು. ರಾಮರಾಯರು ಮಲೆನಾಡಿನ ದೆವ್ವದ ಕಥೆ ಹೇಳಿದಾಗ, ಮಾಸ್ತಿಯವರು ನೀವೇ ಬರೆಯಿರಿ ಎಂದಾಗ "ನನಗೆ ಕನ್ನಡ ಏನು ಬರುತ್ತೆ?" ಎಂದರು. "ಕಥೆ ಹೇಳುವ ಹಾಗೇ ಬರೆಯಿರಿ. ಜನ ಮೆಚ್ಚುತ್ತಾರೋ ಇಲ್ಲವೋ, ಹೊಸ ರುಚಿಯನ್ನು ಜನರಿಗೆ ಕಲಿಸಬೇಕು. ನೀವು ಬರೆಯಿರಿ, ನಾನಿದ್ದೇನೆ" ಎಂದು ರಾಮರಾಯರನ್ನು ಹುರಿದುಂಬಿಸಿ ಅವರಿಂದ ಬರೆಸಿದವರು, ಮಾಸ್ತಿ. ಮಕ್ಕಳು ರಾಮರಾಯರನ್ನು ಬರೆಯಲು ಪ್ರೋತ್ಸಾಹಿಸಿದರು. ಇಂಗ್ಲಿಷ್ ಕಥೆಯೊಂದನ್ನು ಮಕ್ಕಳಿಗೆ ಹೇಳುತ್ತಿದ್ದಾಗ ಅವರ ಅಣ್ಣ, "ನೀವೂ ಸೊಗಸಾಗಿ ಕಥೆ ಹೇಳುತ್ತೀರಿ" ಎಂದಾಗ, ರಾಮರಾಯರು ಲೇಖಕರಾದರು. "ಲಕ್ಷ್ಮಣರಾಯರ ಭಾಗ್ಯ", "ತಾವರೆ ಕೋಟೆ", "ಬೆಳಕು ಹರಿಯದ ಕತ್ತಲಲ್ಲಿ" ಮೊದಲಾದ ಕತೆಗಳನ್ನು ಬರೆದರು. "ಕೆಲವು ನೆನಪುಗಳು" ಅಂತಹ ಅಪೂರ್ವ ಗ್ರಂಥವನ್ನು ರಚಿಸಿದರು. ಪ್ರತಿಯೊಬ್ಬ ಲೇಖಕ ಎಳೆಯ ಗಿಡವಿದ್ದಂತೆ. ಅದು ಮಹಾವೃಕ್ಷವಾಗಿ ಫಲ-ಪುಷ್ಪ ಕೊಡುವಂತಹ ಶಕ್ತಿ ಹೊಂದಿದ್ದರೂ ಅದರ ಪೋಷಣೆಗೆ ಬಾಲ್ಯದಲ್ಲಿ ಪ್ರೋತ್ಸಾಹ, ಜಲಸೇಚನೆ ಬೇಕು. ಆ ಕೆಲಸವನ್ನು ರಾಮರಾಯರ ಮಕ್ಕಳು ಮತ್ತು ಮಾಸ್ತಿ ಮಾಡಿದರು.

ರಾಮರಾಯರು ಒಂದು ರೀತಿ ಕರ್ಮಯೋಗಿಗಳೇ ಆಗಿದ್ದರು. ಇಳಿ ವಯಸ್ಸಿನಲ್ಲೂ ಕಾರ್ಯತತ್ಪರರಾಗಿದ್ದರು. ಮನೆಯಿಂದ ಸೆಂಟ್ರಲ್ ಕೋಆಪರೇಟಿವ್ ಸೊಸೈಟಿಗೆ, ನೆಟ್ಟಕಲ್ಲಪ್ಪ ಸರ್ಕಲ್‌ನಿಂದ ಚಾಮರಾಜಪೇಟೆ ಮೊದಲನೇ ರಸ್ತೆಯವರೆಗೆ ನಡೆದು ಹೋಗುತ್ತಿದ್ದರು. ಬ್ಯಾಂಕ್ ಖರ್ಚಿನಲ್ಲಿ ವಾಹನವ್ಯವಸ್ಥೆಗೆ ಒಪ್ಪಲಿಲ್ಲ. ಆರೋಗ್ಯ ಕೆಟ್ಟಾಗಲೂ ಬಸ್ಸಿನಲ್ಲಿ ತಾವೇ ಹಣ ಕೊಟ್ಟು ಹೋಗಿಬರುತ್ತಿದ್ದರು. ಸಾರ್ವಜನಿಕಸೇವೆಯಲ್ಲಿ ಕಾರ್ಯನಿರ್ವಹಿಸುವಾಗ ತಮ್ಮಿಂದ ಒಂದು ಕಾಸೂ ತಮಗಾಗಿ ಸಂಸ್ಥೆಯಿಂದ ಖರ್ಚಾಗಬಾರದೆಂಬ ನಿಯಮ ಅವರದಾಗಿತ್ತು. ಈ

ಹೊತ್ತು ಸಾವಿರಾರು ರೂಪಾಯಿಗಳನ್ನು ಸಂಭಾವನೆ, ಸಾರಿಗೆ ವೆಚ್ಚ ಇತ್ಯಾದಿಯಾಗಿ ಪಡೆಯುತ್ತಿರುವ ಮಹನೀಯರು ರಾಮರಾಯರಿಂದ ಕಲಿಯುವುದು ಬೇಕಾದಷ್ಟಿದೆ ಎಂದರೆ ತಪ್ಪಲ್ಲ. ಅವರಂತಹ ಸಾರ್ವಜನಿಕ ಸೇವಾಧುರಂಧರರ ನೆರವು ಎಷ್ಟು ಅಗತ್ಯವಿತ್ತು ಎಂದರೆ, ಆಚಾರ್ಯ ಪಾಠಶಾಲಾ ಸಮಿತಿಯ ಅಧ್ಯಕ್ಷರಾಗಿದ್ದ ಅವರು, "ನನಗೆ ವಯಸ್ಸಾಗಿದೆ. ಕೈಲಾಗುವುದಿಲ್ಲ, ಅಧ್ಯಕ್ಷಸ್ಥಾನಕ್ಕೆ ಬೇರೆಯವರನ್ನು ನೇಮಿಸಿಕೊಳ್ಳಿ" ಎಂದು ಗೋಗರೆದರೂ, "ನಿಮ್ಮಂಥ ನಿಃಸ್ವಾರ್ಥ, ದಕ್ಷ ಜನಸೇವಾಪರಾಯಣರು ಇನ್ನೊಬ್ಬರಿಲ್ಲ" ಎಂದು, ಅವರು ನಿಧನರಾಗುವವರೆಗೂ ಅಧ್ಯಕ್ಷರನ್ನಾಗಿ ಮಾಡಿಕೊಂಡಿದ್ದರು. ರಾಮರಾಯರು ಹಾಸಿಗೆಯ ಮೇಲೆ ಮಲಗಿಕೊಂಡೇ ಕಾಗದ ಪತ್ರಗಳನ್ನು ಪರಿಶೀಲಿಸಿ ೮೪ನೇ ವಯಸ್ಸಿನಲ್ಲೂ ಸಂಸ್ಥೆಗೆ ಮಾರ್ಗದರ್ಶನ ಮಾಡುತ್ತಿದ್ದರು. ಈ ಬಗೆಯ ಸೇವಾತತ್ಪರತೆ ಈಗ ಎಷ್ಟು ಜನರಲ್ಲಿ ಕಾಣುತ್ತೇವೆ?

ಬಾಲ್ಯದ ಸಹಪಾಠಿಗಳಾದ ರಾಜಾಜಿಯವರೂ, ರಾಮರಾಯರೂ ಅಪೂರ್ವ ಮಿತ್ರರು. ಇಡೀ ಜೀವನಪೂರ್ತಿ ಗಾಢಸ್ನೇಹಿತರಾಗಿದ್ದರು. ರಾಜಾಜಿಯವರು ಗವರ್ನರ್ ಜನರಲ್ ಆಗಿದ್ದಾಗಲೂ ಅವರು ಬಾಲ್ಯಮಿತ್ರ ರಾಮರಾಯರನ್ನು ಮೊದಲಿನ ಪ್ರೀತಿ ವಾತ್ಸಲ್ಯದಲ್ಲೇ ನೋಡುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯಕ್ರಮ ಮುಗಿಸಿಕೊಂಡು, ಖಾಸಗಿಯಾಗಿ ರಾಮರಾಯರ ಮನೆಗೆ ಬಂದು ಅವರೊಡನೆ ನೆಟ್ಟಕಲ್ಲಪ್ಪ ಸರ್ಕಲ್‌ನಲ್ಲಿದ್ದ ಮನೆಯ ಕಾಂಪೌಂಡಿನಲ್ಲಿ ಕಲ್ಲುಬೆಂಚಿನಮೇಲೆ ಕುಳಿತು ರಾಮರಾಯರೊಡನೆ ರಾಜಾಜಿಯವರು ಏಕವಚನದಲ್ಲಿ ಹರಟುತ್ತಿದ್ದರು. ಆ ದೃಶ್ಯ ಕಂಡ ನನಗೆ ಅದೊಂದು ಅಪೂರ್ವ ಅನುಭವ. ರಾಮರಾಯರು ನಿಧನರಾದಾಗ ರಾಜಾಜಿಯವರು ಬೆಳಗಾಂನಲ್ಲಿದ್ದರು. ಬೆಂಗಳೂರಿಗೆ ಬರುವವೇಳೆಗೆ ಅಂತಿಮ ಸಂಸ್ಕಾರ ಮುಗಿದಿತ್ತು. ಮಾರನೆಯ ದಿನ ಸ್ಮಶಾನಕ್ಕೆ ಹೋಗಿ ಅವರ ದಹನವಾದ ಸ್ಥಳದಲ್ಲಿ ಚಿತಾಭಸ್ಮಕ್ಕೆ ಪ್ರದಕ್ಷಿಣೆ ಹಾಕಿ ಕೈ ಮುಗಿದು ಮಿತ್ರನಿಗೆ ಬಾಷ್ಪಾಂಜಲಿಯಿಂದ ಅಂತಿಮ ನಮನ ಸಲ್ಲಿಸಿದವರು, ರಾಜಾಜಿಯವರು.

ರಾಮರಾಯರು ಬರೆದಿರುವ "ಕೆಲವು ನೆನಪುಗಳು" ಗ್ರಂಥ ಎಷ್ಟು ಸಲ ಓದಿದರೂ ಸಂತೋಷಕೊಡುವಂತಹುದು. ಅವರು ಅಮಲ್ದಾರರಾಗಿದ್ದಾಗ ಯಡತೊರೆ, ಟಿ.ನರಸೀಪುರ ಮೊದಲಾದ ಕಡೆಗಳಲ್ಲಿ ನಡೆದ ಪ್ರಸಂಗಗಳನ್ನು ಓದುತ್ತಾ ಹೋದರೆ, ಆ ಕಾಲದ ಜನಜೀವನ ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ಒಬ್ಬ ಸರ್ಕಾರಿ ಅಧಿಕಾರಿ ಆತ್ಮೀಯವಾಗಿ ಜನರೊಡನೆ ಬೆರೆತು ಅವರ ಸಮಸ್ಯೆಗಳ ಪರಿಹಾರಕ್ಕೆ ಹೇಗೆ ಶ್ರಮಿಸಲು ಸಾಧ್ಯವೆಂಬ ಸುಂದರ ಚಿತ್ರಣಗಳ ಸರಮಾಲೆಯೇ "ಕೆಲವು ನೆನಪುಗಳು" ಗ್ರಂಥದಲ್ಲಿ ಇದೆ. ತಿ.ತಾ.ಶರ್ಮರು ಈ ಗ್ರಂಥದ ಬಗ್ಗೆ

ಹೇಳುವ ಮಾತುಗಳನ್ನು ಕೇಳಿದರೆ, ಇಂಥ ಭಾಗ್ಯ ಕನ್ನಡದಲ್ಲಿ ಎಷ್ಟು ಗ್ರಂಥಗಳಿಗಿದೆ? ಎಂದು ಕೇಳುವಂತಾಗುತ್ತದೆ. ಶರ್ಮರು ತಮ್ಮ ಮೆಚ್ಚು ನುಡಿಯಲ್ಲಿ ಹೇಳಿರುವ ಮಾತುಗಳಿವು: "**ಕೆಲವು ನೆನಪುಗಳು** ಗ್ರಂಥವನ್ನು ನಾನು ಮೇಲಿಂದ ಮೇಲೆ ಓದಿ ಆನಂದಪಟ್ಟಿದ್ದೇನೆ. ಓದಿದ ಒಂದೊಂದು ಸಲವೂ ಒಂದೇಗುಣ, ಒಂದೇ ಪ್ರಮಾಣದ ಸುಖವನ್ನು ಅನುಭವಿಸಿದ್ದೇನೆ. ಆ ಸುಖ ಏನೆಂದು ಕೇಳಿದರೆ ವಿವರಿಸಿ ಹೇಳಲಾರೆ, ಆ ಸುಖ ಕಿವಿ ತಾಕುವುದಲ್ಲ, ನಾಲಿಗೆ ನುಡಿಯುವುದಲ್ಲ, ಹೃದಯವನ್ನು ಸೋಂಕುವಂತಹುದು."

ಆಮೇಲೆ ಒಂದು ದಿನ ಅವರ ಮನೆ ಬಳಿ ನನ್ನ ಗುರುಗಳಾದ ಪ್ರೊಫೆಸರ್ ಡಾ.ಎಂ.ವಿ.ಕೃಷ್ಣರಾವ್ ಅವರು ರಾಮರಾಯರೊಡನೆ ಮಾತಾಡುತ್ತಿದ್ದಾಗ ಕೃಷ್ಣರಾವ್ ಅವರ ಜತೆಯಲ್ಲಿದ್ದ ನಾನು ಅವರ ಮೃದುಕೋಮಲದನಿಯ ಮಾತುಗಳನ್ನು ಆಲಿಸಿ ಧನ್ಯನಾದೆ. ರಾಮರಾಯರಿಗೆ ಎಂ.ವಿ.ಕೃಷ್ಣರಾವ್ ಅವರು 'ಈತನು ನನ್ನ ಮೆಚ್ಚಿನ ವಿದ್ಯಾರ್ಥಿ' ಎಂದು ಹೇಳಿ ಪರಿಚಯ ಮಾಡಿಕೊಟ್ಟರು.

"ನೆನಪುಗಳ ಹಲಕೆಲವು ಭಾಗಗಳನ್ನು ವಿದ್ಯಾವಂತರಿಗೆ, ಹಳ್ಳಿಗಾಡಿನವರಿಗೆ, ಹೆಂಗಸರಿಗೆ, ಹುಡುಗರಿಗೆ, ಸೇನಬೋವರಿಗೆ, ಪಟೇಲರಿಗೆ ಓದಿ ಹೇಳಿದ್ದೇನೆ. ನಾನು ಓದಿ ಆನಂದಪಟ್ಟ ಹಾಗೆಯೇ ಅವರೆಲ್ಲರೂ ಕೇಳಿ ಆನಂದಪಟ್ಟಿದ್ದಾರೆ. ಎಲ್ಲ ವಯಸ್ಸಿನವರೂ, ಎಲ್ಲ ಮಟ್ಟದ ಸಂಸ್ಕಾರ ಪಡೆದವರೂ ಸುಖಸ್ಪರ್ಶಾನುಭವ ಪಡೆಯಲು ಯೋಗ್ಯವಾದ ಮೂಲಭೂತ ಪ್ರಕೃತಿಗಳು ಈ ನೆನಪುಗಳಲ್ಲಿ ಇವೆ. ಇದಕ್ಕಿಂತ ಗ್ರಂಥಕ್ಕೆ ಬೇರೆ ಪ್ರಶಸ್ತಿ ಏಕೆ ಬೇಕು? ಕೆಲವು ನೆನಪುಗಳು ಕೇವಲ ಸಾಹಿತ್ಯವಲ್ಲ. ಕಾವ್ಯ, ಕಲೆ, ದರ್ಶನ, ಜೀವನ, ಮಹಾಧರ್ಮ ಈ ಕೃತಿ. ಈ ಸಾಹಿತ್ಯ ಸ್ವರೂಪ ಕನ್ನಡಕ್ಕೆ ಹೊಸದು" ಎಂಬ ಮಾತು ನಿತ್ಯಸತ್ಯ.

ನಮ್ಮ ಸಾಹಿತಿಗಳಲ್ಲಿ ಅನೇಕರು ಬರಹದಲ್ಲಿ ಭವ್ಯರಾಗಿರುತ್ತಾರೆ, ವ್ಯಕ್ತಿತ್ವದಲ್ಲಿ ಭವ್ಯವಾಗಿರುವುದಿಲ್ಲ. ಅಧಿಕಾರದಲ್ಲಿ ನಿಸ್ಪೃಹರಿದ್ದರೆ ಸಾಹಿತಿಗಳಾಗಿರುವುದಿಲ್ಲ. ಸಾಹಿತಿಗಳಾಗಿದ್ದರೂ ಉನ್ನತಾಧಿಕಾರವಿರುವುದಿಲ್ಲ. ಆದರೆ ಆಡಳಿತನಿಪುಣ ರಾಜಸೇವಾಸಕ್ತ ನವರತ್ನ ರಾಮರಾಯರು ಬಹುಮುಖ ಪ್ರತಿಭಾವಂತರು, ಸಾಹಿತಿಗಳು, ವಿಮರ್ಶಕರು, ಕಾವ್ಯಾನುಭವಿಗಳು, ಸಂಗೀತಗಾರರು, ರಸಿಕರು, ಕತೆಗಾರರು, ಭಾಷಣಕಾರರು, ನಿಃಸ್ವಾರ್ಥ ಸಾರ್ವಜನಿಕ ಸೇವಾಧುರಂಧರರು. ಅವರ ಇನ್ನೂ ಅನೇಕ ಮುಖಗಳು ಅನೇಕರಿಗೆ ಜನರಿಗೆ ತಿಳಿದಿಲ್ಲ. ತಲಕಾಡಿನಲ್ಲಿ ಪಂಚಲಿಂಗೇಶ್ವರ ದರ್ಶನದ ವ್ಯವಸ್ಥೆಯನ್ನು ಮೊದಲು ಮಾಡಿದವರು ರಾಮರಾಯರು; ರೇಷ್ಮೆ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದಾಗ ರೇಷ್ಮೆ ಎಳೆ ಬಿಡಿಸುವುದಕ್ಕೆ ಹೊಸ ತರಹದ ಬೋಗುಣಿಯನ್ನು ರೂಪಿಸಿದರು ಅವರೇ.

ಅದಕ್ಕೆ "ರಾಮರಾವ್ ಬೋಗುಣಿ" ಎಂದೇ ಹೆಸರಾಯಿತು. ಭಗವದ್ಗೀತೆಯ ೧೮ ಅಧ್ಯಾಯಗಳನ್ನು ಸರಾಗವಾಗಿ ಬಾಯಲ್ಲಿ ಹೇಳುತ್ತಿದ್ದರು. ಕತ್ತಿ ಕಾಳಗ ಕಲಿತಿದ್ದರು.

ಈಜು, ಕುದುರೆ ಸವಾರಿಯಲ್ಲಿ ಅವರನ್ನು ಮೀರಿಸುವವರೇ ಇರಲಿಲ್ಲ. ಹೀಗೆ ಸುಂದರ ವ್ಯಕ್ತಿತ್ವದ ಭವ್ಯಮೂರ್ತಿಯಾಗಿದ್ದ, ಕನ್ನಡಕ್ಕೆ ವಿಶಿಷ್ಟ ರೀತಿಯಲ್ಲಿ ಸಾಹಿತ್ಯ ಸೇವೆ ಮಾಡಿ ಕನ್ನಡನಾಡಿಗೆ ಜನ ನೆನೆಸುವ ಕಾರ್ಯಗಳನ್ನು ಮಾಡಿದ ನವರತ್ನ ರಾಮರಾಯರು ೨೭.೧೧.೧೯೬೦ರಂದು ವೈಕುಂಠವಾಸಿಗಳಾದರೂ ಕನ್ನಡ ಜನಮನದಲ್ಲಿ ಮರೆಯಲಾಗದ ಕೃತಿ ರಚಿಸಿದ, ಮರೆಯಬಾರದ ಸಾಹಿತಿ. ಭವ್ಯವ್ಯಕ್ತಿಯಾಗಿ ಇಂದಿನ ಜನತೆಗೂ, ಮುಂದಿನ ಜನತೆಗೂ ಆದರ್ಶಪ್ರಾಯ ಸಾಹಿತಿಯಾಗಿದ್ದಾರೆ. ಯುವಜನರಿಗೆ ಬೆಳಕಿನ ದಾರಿದೀಪವಾಗಿದ್ದಾರೆ.

**



೨. ಕನ್ನಡದ ದ್ರೋಣಾಚಾರ್ಯ–ಶಿಸ್ತಿನ ಶಿಕ್ಷಕ

ಎ.ಆರ್.ಕೃಷ್ಣಶಾಸ್ತ್ರಿಗಳು

(೧೨-೨-೧೮೯೦ - ೧-೨-೧೯೬೮)

ಸಾಮಾನ್ಯವಾಗಿ ನಮ್ಮಲ್ಲಿ ಪದ್ಯ ಬರೆದರೆ ಕವಿ, ಗದ್ಯ ಬರೆದರೆ ಸಾಹಿತಿ, ಸಂಶೋಧನೆ ಮಾಡಿದರೆ ವಿದ್ವಾಂಸ, ನಾಟಕ ಬರೆದಾಡಿದರೆ ಕಲಾವಿದ ಎಂದು ಭಾವಿಸುವವರು ಇದ್ದಾರೆ. ಗದ್ಯ ಬರೆವ ಸಾಹಿತಿಯಲ್ಲಿ ಕವಿ ಇರುತ್ತಾನೆ. ಪದ್ಯ ಬರೆಯುವ ಕವಿಯಲ್ಲಿ ಸಾಹಿತಿ, ಸಂಶೋಧಕ ಇರುತ್ತಾನೆ ಎಂಬುದು ತಿಳಿದ ಮಾತು. ವಿ.ಸೀ., ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ ಮೊದಲಾದವರು ಕವಿಗಳು ಎಂಬುದೆಷ್ಟು ನಿಜವೋ ಅವರು ವಿದ್ವಾಂಸರು ಸಾಹಿತಿಗಳು ಎಂಬುದೂ ಅಷ್ಟೇ ನಿಜ. ಹೀಗಾಗಿ ಒಬ್ಬರಲ್ಲಿ ಹಲವು ಬಗೆಯ ಪ್ರತಿಭಾಶಕ್ತಿಗಳು ಅಡಗಿರುವುದನ್ನು ಕಾಣಬಹುದು. ಆದರೆ ಅದು ದೊಡ್ಡ ಪ್ರಮಾಣದಲ್ಲಿ ಹೊರಹೊಮ್ಮಿರುವುದಿಲ್ಲ. ಕೃಷ್ಣಶಾಸ್ತ್ರಿಗಳು ವಿದ್ವಾಂಸರಾದರೂ ಕವಿ ಹೃದಯ ಉಳ್ಳವರು, ಕಾವ್ಯ ಬಲ್ಲವರು, ರಸವತ್ತಾದ ಕಾವ್ಯಾಸ್ವಾದನ ಪ್ರವೀಣರೂ ಕವಿಹೃದಯರೂ ಆಗಿದ್ದರು. ಅವರಲ್ಲಿ ಕವಿತಾಶಕ್ತಿ ಇದ್ದರೂ ಅದು ಸಾಕಷ್ಟು ಹೊರಹೊಮ್ಮಲಿಲ್ಲ ಅನ್ನಿಸುತ್ತದೆ. ಅಪರೂಪಕ್ಕೆ ಒಂದೆರಡು ಕಡೆ ಕಾಣಿಸುವ ತುಣುಕುಗಳೇ ಅವರು ಕವಿತೆ ಬರೆಯಬಲ್ಲರು ಎಂಬುದಕ್ಕೆ ಸಾಕ್ಷಿ ಆಗಿದೆ.

೧೯೪೭ನೇ ಜುಲೈನಲ್ಲಿ ಮೈಸೂರು ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಸ್ವಾಗತ ಕವನವೊಂದನ್ನು ಬರೆದಿದ್ದಾರೆ. ಅದರ ಒಂದು ತುಣುಕು ಇಲ್ಲಿದೆ.

ಮೈಸೂರ ಮಕ್ಕಳಿಗೆ ಅರಿವಿನಮೃತವ ನೀಡಿ
ವಿಶ್ವವಿದ್ಯಾಲಯವ ನಿರಂತರ ಪೋಷಿಸಿದ
ಸುಸಂಸ್ಕೃತ ಕನ್ನಡದ ಹಿರಿಯಣ್ಣರೇ ಬನ್ನಿ

ಪುಟ್ಟ ಕವಿಗಳೇ ಬನ್ನಿ, ದೊಡ್ಡ ಕಾವ್ಯವ ತನ್ನಿ
ಕನ್ನಡ ಕಂದಗಳೇ ಸಾಹಿತ್ಯ ಕಂದಗಳೇ
ಕವಿತೆಯುಕ್ತಾದಿಗಳೇ ಕಾಂಡಗಳೆ ಕಾವ್ಯ–ಮಾಕಂದಗಳೇ
ದಯಮಾಡಿ ತಮಗೆಲ್ಲ ಬಯಸುವೇ ಸ್ವಾಗತವ ಸುಸ್ವಾಗತವ

ಬಂಕಿಮಚಂದ್ರ ಎಂಬ ಸಮಗ್ರಾವಲೋಕನ ಗ್ರಂಥದಲ್ಲಿ ಬಂಕಿಮರ ಕವಿತೆಗಳನ್ನು ಕುರಿತು ಬರೆಯುವಾಗ ಮೂಲ ಕವಿತೆಗಳನ್ನು ಸರಳ ಪದ್ಯಗಳಾಗಿ ಎ.ಆರ್.ಕೃ. ಅನುವಾದಿಸಿದ್ದಾರೆ.

ಮರವನು ಬೆಳಸಿದೆ ಹಣ್ಣಿಗಾಗಿ
ಆದರೆ ದೊರೆಯಿತು ಬರೀ ಮುಳ್ಳೇ;
ಮದುವೆ ಮಾಡಿಕೊಂಡೆ ಸುಖಕ್ಕಾಗಿ
ಆದರೆ ದೊರೆಯಿತು ಪೊರಕೆಯ ಸೇವೆ.

ಮೂಲದಲ್ಲಿ ಕವಿತೆಯಲ್ಲಿರುವ ಶ್ಲೇಷಾರ್ಥವನ್ನು ಕನ್ನಡಕ್ಕೆ ತರಲಾಗದೆ ಅದನ್ನು ಹೀಗೆ ವಿವರಿಸಿದ್ದಾರೆ.

ಕೊನೆಯ ಸಾಲುಗಳು: **"ರಾಜನ ಮೇಲೆ–ರಾಜನಾದರೆ**
ಲಾಟ್ ಸಾಹೇಬನ ಲಾಟ್"

ಇಲ್ಲಿ ಮೊದಲನೆಯ ಲಾಟ್ ಶಬ್ದಕ್ಕೆ ಆಡಳಿತಾಧಿಕಾರಿ (ಗವರ್ನರ್) ಎಂದೂ ಎರಡನೆಯ ಲಾಟ್ ಶಬ್ಬಕ್ಕೆ ಹಣೆಯ ಬರಹವೆಂದೂ ಅರ್ಥವಿರಬಹುದು. ಮೀರ್ ಜಾಫರನ ಕಾಲದಲ್ಲಿದ್ದಂತೆ ಎಂದಿದ್ದಾರೆ.

ಆದರೆ ಕವಿತೆಯಲ್ಲಿ ಪ್ರಣಯಿ ಪ್ರಾಣಾಧಿಕೆಗೆ ಹೇಳುವ ನಾಲ್ಕು ಪದ್ಯಗಳನ್ನು ವಿವರಿಸುವಾಗ ಕೆಲವು ಭಾಗವನ್ನು ಹೀಗೆ ರಚಿಸಿದ್ದಾರೆ.

ಮರುಭೂಮಿಯೊಳೊಂದೆ ಸುಮ
ಸುಗಂಧವಿಡಿದ ಸುಮ,
ಕಾರಿರುಳೊಳೊಂದೇ ತಾರೆ
ಅಂಧಕಾರ ತುಂಬಿರೆ ಗಗನದೊಳು;
ಬೇಸಿಗೆ ಬೇಗೆಯೊಳೊಂದೇ ಸರಸಿ
ವಿಶಾಲ ಪ್ರಾಂತದೊಳಗೆಲ್ಲಾ;
ಅನಂತ ಸಾಗರದೊಳಗಣ ತರಣಿ
ರತ್ನ ಸುಶೋಭಿತ ತರಣಿ,
ನೀನೂ ಸಂಸಾರದೊಳಂತೆನಗೆ ಪ್ರಿಯೇ!

ಬಂಕಿಮರು ಬರೆದ ಕವಿತೆಗಳಲ್ಲಿ ಕಾದಂಬರಿಯ ನಡುವೆ ಬರೆದ ಪದಗಳಲ್ಲಿ ಒಂದಾದ "ವಂದೇ ಮಾತರಂ" ಬಂಗಾಳದಲ್ಲಷ್ಟೇ ಅಲ್ಲದೆ ಭಾರತದಲ್ಲೇ ರಾಷ್ಟ್ರಗೀತೆಯಾಯಿತು. ವಂದೇ ಮಾತರಂ ಎಂಬ ಮಾತು ಪಂಚಾಕ್ಷರಿ ಆಗಿ ಅದರ ಉಚ್ಚಾರಣೆಯಲ್ಲೇ ಲಕ್ಷಾಂತರ ಜನ ತಮ್ಮ ತನುಮನಗಳನ್ನು ದೇಶಕ್ಕೆ ಅರ್ಪಿಸಿದರು. ಐತಿಹಾಸಿಕವಾಗಿ ಇಷ್ಟು ಪ್ರಭಾವ ಬೀರಿದ ಕವಿತೆ ಈ ದೇಶದಲ್ಲಿ ಇನ್ನೊಂದಿಲ್ಲ.

ನಾನು ಶಾಲಾ ವಿದ್ಯಾರ್ಥಿ ಆಗಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎ.ಆರ್.ಕೃ. ಅವರನ್ನು ಹಲವಾರು ಬಾರಿ ದೂರದಿಂದ ನೋಡುತ್ತಿದ್ದೆ. ಸಾಹಿತ್ಯ ಪರಿಷತ್ತಿನಲ್ಲಿ ಅವರದೊಂದು ದತ್ತಿನಿಧಿ ಇದೆ. ಅದು ಮಹಿಳಾ ಕಾರ್ಯಕ್ರಮಕ್ಕೆ ಮೀಸಲು. ಕನ್ನಡ ದೇವರನಾಮ ಸ್ಪರ್ಧೆ, ಆ ಸ್ಪರ್ಧೆ ದತ್ತಿನಿಧಿಯಿಂದ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಕೊಡುತ್ತಿದ್ದರು. ಕೋಸಂಬರಿ, ಕಡಲೆಹಿಟ್ಟು, ಗುಗ್ಗುರಿ, ಹೀಗೆ ಏನಾದರೊಂದು ಚರಪು ನೀಡುತ್ತಿದ್ದರು. ಅದನ್ನು ಆಮೇಲೆ ನಿಲ್ಲಿಸಿಬಿಟ್ಟರು. ವ್ಯವಸ್ಥಾಪಕರನ್ನು ಚರಪು ನೀಡುವುದನ್ನು ಏಕೆ ನಿಲ್ಲಿಸಿದಿರಿ ಎಂದಾಗ, ಅದನ್ನು ಕೊಡಲು ದತ್ತಿನಿಧಿಯಿಂದ ಬರುವ ಹಣ ಸಾಲದು ಎಂದರು. ಇದು ಅನ್ಯಾಯ, ನೀವು ಚರಪು ನಿಲ್ಲಿಸಬಾರದು ಎಂದು ನಾನು, ನನ್ನ ಮಿತ್ರ ವಾದಿಸಿದೆವು. ನಾವು ವಿದ್ಯಾರ್ಥಿಗಳಾದ್ದರಿಂದ ರುಚಿಕರವಾದ ಚರಪಿನ ಸವಿ ಅನುಭವಿಸಿದ್ದೆವು. ಜತೆಗೆ ಸಹಜವಾಗಿ ತಿಂಡಿ ಆಸೆಯ ವಯಸ್ಸು ನಮ್ಮದು. ನಾವು ವಾದ ಮಾಡಿದಾಗ 'ನೀವು ದತ್ತಿ ಇಟ್ಟವರನ್ನು ದತ್ತಿ ಹಣ ಹೆಚ್ಚಿಸಲು ಹೇಳಿ, ಆಗ ಚರಪು ಕೊಡುತ್ತೇವೆ' ಎಂದರು. ನಮಗೆ ಕೃಷ್ಣಶಾಸ್ತ್ರಿಗಳ ಮನೆ ಗೊತ್ತಿತ್ತು, ಮನೆಗೆ ಹೋದೆವು. ಶಾಸ್ತ್ರಿಗಳು ಏನು ಬಂದಿರಿ ಅಂದರು. ವಿಷಯ ಹೇಳಿದೆವು. 'ದತ್ತಿನಿಧಿಯ ವಿಷಯ ನಿಮಗೆ ಬೇಡ. ನೀವು ಹುಡುಗರು ಈ ವಿಷಯಗಳಿಗೆಲ್ಲ ಬರಬಾರದು, ಹೋಗಿ' ಎಂದು ಗದರಿಸಿದ ದನಿಯಲ್ಲಿ ಹೇಳಿದರು. ನಾವು ಪೆಚ್ಚಾಗಿ ಹಿಂದಿರುಗಲು ಸಿದ್ಧರಾದೆವು. 'ನಿಲ್ಲಿ' ಎಂದು ಡ್ರಾಯರಿಂದ ಪೆಪ್ಪರ್‌ಮೆಂಟುಗಳನ್ನು ಕೈತುಂಬ ತೆಗೆದುಕೊಟ್ಟರು. 'ಬೈದರೂ ಎಷ್ಟು ಒಳ್ಳೆಯವರು, ಕೈತುಂಬ ಪೆಪ್ಪರ್‌ಮೆಂಟ್ ಕೊಟ್ಟಿದ್ದಾರೆ' ಎಂದು ನಾನು, ನನ್ನ ಮಿತ್ರ ಮಾತಾಡಿಕೊಂಡು ಖುಷಿಪಟ್ಟೆವು.

ಇನ್ನೊಂದು ಪ್ರಸಂಗ – ಬಸವನಗುಡಿ ಸೊಸೈಟಿಯಲ್ಲಿ ರೇಷನ್ ಕಾರ್ಡ್‌ದಾರರಿಗೆ ರೇಷನ್ ಕೊಡುತ್ತಿದ್ದರು. ನಾನು ಕ್ಯೂನಲ್ಲಿ ನಿಂತು ರೇಷನ್ ತರುತ್ತಿದ್ದೆ. ಶಾಸ್ತ್ರಿಗಳೂ ಕ್ಯೂನಲ್ಲಿ ನಿಂತು ತರುತ್ತಿದ್ದರು. ನಾನು ಕ್ಯೂನಲ್ಲಿ ಮುಂದೆ ಇದ್ದೆ. ಶಾಸ್ತ್ರಿಗಳು ಸಾಕಷ್ಟು ಹಿಂದೆ ನಿಂತಿದ್ದರು. ಚರಪಿನ ಪ್ರಸಂಗದಿಂದ ಶಾಸ್ತ್ರಿಗಳ ಪರಿಚಯ ಆಗಿತ್ತಲ್ಲ, ಆ ವೇಳೆಗೆ ಅವರ ವಚನ ಭಾರತ, ಬಂಕಿಮಚಂದ್ರ,

ಕಥಾಮೃತ ಓದಿದ್ದೆ. ಅವರ ಬಳಿ ಬಂದು 'ಶಾಸ್ತ್ರಿಗಳೇ, ನೀವು ಮುಂದೆ ನಿಲ್ಲಿ. ನಾನು ನಿಮ್ಮ ಜಾಗದಲ್ಲಿ ನಿಲ್ಲುತ್ತೇನೆ' ಎಂದೆ. ಮಧ್ಯಾಹ್ನವಾಗಿತ್ತು, ತುಂಬ ಬಿಸಿಲಿತ್ತು.

ಆಗ ಶಾಸ್ತ್ರಿಗಳು ಹೇಳಿದ ಮಾತು ಈಗಲೂ ನೆನಪಿದೆ. 'ಮಗೂ, ಹಾಗೆಲ್ಲ ಕ್ಯೂ ತಪ್ಪಿಸಬಾರದು. ನಿಯಮ ಪಾಲಿಸಿದರೆ ಚಿಕ್ಕವರೂ ದೊಡ್ಡವರಾಗುತ್ತಾರೆ. ನಿಯಮಭಂಗ ಮಾಡಿದರೆ ದೊಡ್ಡವರೂ ಚಿಕ್ಕವರಾಗುತ್ತಾರೆ. ಹೋಗಿ ನೀನಿರುವ ಕಡೆ ನಿಂತುಕೋ' ಎಂದರು. ಮಾತಾಡದೇ ನಾನಿದ್ದ ಜಾಗಕ್ಕೆ ಬಂದೆ. ಹೀಗೆ ನನ್ನ ಬದುಕಿಗೆ ನೀತಿಪಾಠ ಹೇಳಿದವರು ಎ.ಆರ್.ಕೃ. ಅವರು.

ಮತ್ತೊಮ್ಮೆ ಸೊಸೈಟಿಯ ಬಳಿ ಅವರನ್ನು ಭೇಟಿ ಮಾಡಿದವರೊಬ್ಬರು "ಶಾಸ್ತ್ರಿಗಳೇ, ನಿಮಗೆ ಕನ್ನಡ ಚೆನ್ನಾಗಿ ಬರುತ್ತೆ ಅಂತ ನನ್ನ ಸ್ನೇಹಿತರು ಹೇಳಿದರು. ನೀವು ನಮ್ಮ ಮಗಳಿಗೆ ಕನ್ನಡ ಪಾಠ ಹೇಳಬೇಕು. ಅವಳು ಒಂದನೇ ಕ್ಲಾಸಿನಲ್ಲಿ ಓದುತ್ತಿದ್ದಾಳೆ. ಸರಿಯಾಗಿ ಕನ್ನಡ ಕಲೀತಿಲ್ಲ. ನಾನು ೩ ರೂ. ತಿಂಗಳಿಗೆ ಫೀಸು ಕೊಡ್ತಿದ್ದೆ. ನೀವು ದೊಡ್ಡ ಮೇಷ್ಟ್ರು, ತುಂಬಾ ಚೆನ್ನಾಗಿ ಪಾಠ ಹೇಳ್ತೀರಿ ಅಂತ ನನ್ನ ಸ್ನೇಹಿತರು ಹೇಳಿದರು. ನಿಮಗೆ ೫ ರೂ. ಕೊಡ್ತೀನಿ ತಿಂಗಳಿಗೆ" ಎಂದರು. ಶಾಸ್ತ್ರಿಗಳು ನಕ್ಕು "ಬಹಳ ಸಂತೋಷ, ನಿಮ್ಮ ಮಗು ಕನ್ನಡ ಚೆನ್ನಾಗಿ ಕಲೀಬೇಕು, ಅದಕ್ಕೆ ಕನ್ನಡ ಪಾಠ ಹೇಳಿಸಬೇಕು ಎಂಬುದನ್ನು ಮೆಚ್ಚಿದೆ. ಫೀಸೇನೂ ಬೇಡ, ನಿಮ್ಮ ಮಗು ಕಲಿತರೆ ಅದೇ ನನ್ನ ಫೀಸು" ಎಂದರು. ಅವರು ಬೆರಗಾದರು.

ಮತ್ತೊಂದು ಅವಿಸ್ಮರಣೀಯ ಸಂಗತಿ ಎಂದರೆ, ಕುವೆಂಪು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಬೆಂಗಳೂರಿನಲ್ಲಿ ಟೌನ್‌ಹಾಲಿನಲ್ಲಿ ಸನ್ಮಾನ ಸಮಾರಂಭ ಏರ್ಪಟ್ಟಿತ್ತು. ಸಮಾರಂಭದಲ್ಲಿ ತಮ್ಮ ಗುರುಗಳಾದ ಎ.ಆರ್.ಕೃ. ಅವರನ್ನು ಕುವೆಂಪು ಕಂಡು ಅವರ ಬಳಿ ಬಂದು, "ಗುರುಗಳೇ, ಇದೆಲ್ಲಾ ನಿಮ್ಮ ಅನುಗ್ರಹ" ಎಂದರು. ಆಗ ಕೃಷ್ಣಶಾಸ್ತ್ರಿಗಳು, "ನನ್ನ ಅನುಗ್ರಹ ಅಲ್ಲವಯ್ಯಾ, ನಿನ್ನ ಪ್ರತಿಭೆ ಪಾಂಡಿತ್ಯಕ್ಕೆ ದೊರೆತ ಪ್ರತಿಫಲ. ನಂಗೆ ತುಂಬಾ ಸಂತೋಷವಾಗಿದೆ ನಿನಗೆ ಪ್ರಶಸ್ತಿ ದೊರಕಿದ್ದು" ಎಂದರು.

'ನಿಮಗೆ ಗಂಡು ಮಕ್ಕಳು ಇಲ್ಲವಲ್ಲಾ ಶಾಸ್ತ್ರಿಗಳೇ' ಅಂತ ಒಮ್ಮೆ ಯಾರೋ ಒಬ್ಬರು ಅಂದರಂತೆ ಅದಕ್ಕೆ ಶಾಸ್ತ್ರಿಗಳು 'ನನ್ನ ವಚನಭಾರತ, ನನ್ನ ಶಿಷ್ಯ ಪುಟ್ಟಪ್ಪ ನನ್ನ ಗಂಡುಮಕ್ಕಳು ಕಣಯ್ಯಾ' ಅಂದರಂತೆ ವಿನೋದವಾಗಿ. ಅಂಥ ಶಿಷ್ಯಪ್ರೇಮ ಶಾಸ್ತ್ರಿಗಳದು. ಇಂಥ ಹತ್ತಾರು ಪ್ರಸಂಗಗಳು ತಿಳಿದಮೇಲೆ ಗುರುಗಳು ಅಂದ್ರೆ ಹೀಗಿರಬೇಕು. ಇವರೇ ನಿಜವಾದ ಕನ್ನಡದ ಆಚಾರ್ಯ ದ್ರೋಣರು ಅಂತ ನನಗನ್ನಿಸಿದೆ.

ಹೊಸಗನ್ನಡ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾದ ಅಂಬಳೆ ರಾಮಕೃಷ್ಣಶಾಸ್ತ್ರಿ ಕೃಷ್ಣಶಾಸ್ತ್ರಿ (ಎ.ಆರ್.ಕೃ.) ಹೊಯ್ಸಳ ಕರ್ನಾಟಕ ಪಂಗಡದ ಶ್ರೋತ್ರೀಯ ಅಚ್ಚಗನ್ನಡಿಗರು. ೧೨/೦೨/೧೮೯೦ರಲ್ಲಿ ಮೈಸೂರಿನಲ್ಲಿ ಜನಿಸಿದರು. ತಂದೆ ರಾಮಕೃಷ್ಣಶಾಸ್ತ್ರಿ, ತಾಯಿ ಶಂಕರಮ್ಮ, ಗುರುಗಳು ಟಿ.ಎನ್. ಸುಬ್ಬರಾಯ ಶಾಸ್ತ್ರಿಗಳು.

೫ ಮಂದಿ ಮಕ್ಕಳಲ್ಲಿ ಕೃಷ್ಣಶಾಸ್ತ್ರಿಗಳೇ ಹಿರಿಯರು, ಚಿಕ್ಕಪ್ಪ ಶ್ರೀಕಂಠಶಾಸ್ತ್ರಿಗಳು. ತಂದೆ ರಾಮಕೃಷ್ಣಶಾಸ್ತ್ರಿಗಳಿಂದ ಮೊದಲ ಪಾಠ.

ಅನಂತರ ರಾಯಲ್ ಸ್ಕೂಲಿನಲ್ಲಿ ಎಲ್.ಎಸ್. ಪರೀಕ್ಷೆ ಮುಗಿಸಿ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿದರು. ೧೯೧೨ರಲ್ಲಿ ಬಿ.ಎ. ಮುಗಿಸಿದರು. ಎಂ.ಎ. ಮಾಡಲು ಮದ್ರಾಸಿಗೆ ಹೋಗದೆ ಸ್ವಂತ ವ್ಯಾಸಂಗದಲ್ಲಿ ಪರೀಕ್ಷೆ ಪಾಸು ಮಾಡಿದರು. ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಗುಮಾಸ್ತರಾಗಿ ೩೫ರೂ. ಸಂಬಳಕ್ಕೆ ಸೇರಿದರು. ಅನಂತರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದರು. ಆಮೇಲೆ ಮೈಸೂರಿನ ಪ್ರಾಚ್ಯ ಕೋಶಾಗಾರಕ್ಕೆ ಸೇರಿದರು.

ನಮ್ಮಲ್ಲಿ ಅಧಿಕಾರದಲ್ಲಿದ್ದಾಗ ಹೊಗಳಿಸಿಕೊಳ್ಳುವವರು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ನಿವೃತ್ತರಾದ ಮೇಲೆ ಪ್ರಸಿದ್ಧರಿಂದ ಹೊಗಳಿಸಿಕೊಳ್ಳುವುದು ಸುಲಭವಲ್ಲ. ಏಕೆಂದರೆ ಅಧಿಕಾರ ಇರುವುದಿಲ್ಲ, ಇನ್ನು ತಾರುಣ್ಯದಲ್ಲಿ ಮಾಡಿದ ಸಾಹಸಗಳನ್ನು ನಿವೃತ್ತಿಯ ನಂತರ ಮಾಡಲು ಉತ್ಸಾಹ, ಶಕ್ತಿ ಇರುವುದಿಲ್ಲ. ಆದರೆ ಆ ಮಾತು ಕೃಷ್ಣಶಾಸ್ತ್ರಿಗಳಿಗೆ ಅನ್ವಯಿಸುವುದಿಲ್ಲ. ಕುವೆಂಪು ಕೃಷ್ಣಶಾಸ್ತ್ರಿಗಳ ಬಗ್ಗೆ ಹೇಳಿದ ಈ ಮಾತುಗಳು ಅದಕ್ಕೆ ಸಾಕ್ಷಿ ಆಗಿವೆ.

"ಶ್ರೀ ಕೃಷ್ಣಶಾಸ್ತ್ರಿಗಳು ನಿವೃತ್ತ ಕನ್ನಡ ಪ್ರಾಧ್ಯಾಪಕರು. ನೌಕರಿಯಿಂದ ನಿವೃತ್ತರಾಗುವುದೆಂದರೆ ಹಲವರ ಪಾಲಿಗೆ ಅದೊಂದು ವಿಷಾದದ ಘಟನೆ. ಸಂಬಳ ಕಡಿಮೆ ಆಗುತ್ತದೆ, ಅಧಿಕಾರ ನಿಂತುಹೋಗುತ್ತದೆ. ಮನ್ನಣೆ ಮೊಟಕಾಗುತ್ತದೆ. ಆದ್ದರಿಂದಲೇ ಅನೇಕರು ನಿವೃತ್ತರಾದ ಮೇಲೆ ಹೊಸ ನೌಕರಿಯನ್ನು ಹುಡುಕುತ್ತಾ ಹೋಗುತ್ತಾರೆ. ಕೆಲವು ಜನ ರಾಜಕೀಯಕ್ಕೂ ಇಳಿಯುತ್ತಾರೆ. ಶ್ರೀ ಕೃಷ್ಣಶಾಸ್ತ್ರಿಗಳು ಈ ವರ್ಗಕ್ಕೆ ಸೇರಿದವರಲ್ಲ. ಅವರು ಹೆಸರಿಗೆ ಮಾತ್ರ ನಿವೃತ್ತರು. ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಘಂಟೆಗಳಲ್ಲಿ ಪಾಠ ಹೇಳುವುದನ್ನು ಬಿಟ್ಟರೆ ಉಳಿದಂತೆ ಅವರ ಕಾರ್ಯಕ್ರಮ ಯಥಾಪ್ರಕಾರವಾಗಿದೆ. ಸರ್ಕಾರಿನೌಕರಿಯಿಂದ ನಿವೃತ್ತರಾದ ಮೇಲೆ ಮೀಸಲು ಕಟ್ಟಿಕೊಂಡಿದ್ದವರಂತೆ ಕೃತಿರಚನಾಕಾರ್ಯದಲ್ಲಿ ತೊಡಗಿದರು. ವಚನಭಾರತ, ಕಥಾಮೃತ, ಬಂಕಿಮಚಂದ್ರ ರಚನೆ, ಹೀಗೆ ನಿವೃತ್ತಿಯ ತರುವಾಯ ಬಾಳನ್ನು ಇಷ್ಟು ಸಾರ್ಥಕವಾಗಿ

ಬಳಸಿಕೊಂಡವರು ಬಹಳ ಅಪೂರ್ವ. ನಿವೃತ್ತರಾದ ಮೇಲೆ ಸಾರ್ಥಕಬಾಳನ್ನು ನಡೆಸಿದರು. ೧೯೬೧ರಲ್ಲಿ ನಿವೃತ್ತರಾದ ೧೫ ವರ್ಷಗಳ ನಂತರ ರವೀಂದ್ರನಾಥ ಠಾಕೂರರ ಪ್ರಬಂಧ ಸಂಕಲನ ಪ್ರಕಟವಾಯಿತು. ೭೦ನೇ ವಯಸ್ಸಿನಲ್ಲಿ ಇದನ್ನು ಅನುವಾದಿಸಲು ತೆಗೆದುಕೊಂಡಾಗ ದೈಹಿಕವಾಗಿ, ಮಾನಸಿಕವಾಗಿ ಬಳಲಿದ್ದರೂ, ಬಂಗಾಳಿ ಬಲ್ಲ ಕನ್ನಡಿಗನಾಗಿ ತಾನು ಮಾಡಬೇಕಾದ ಕರ್ತವ್ಯವೆಂದು ಭಾವಿಸಿ ಕೃತಿ ಅನುವಾದಕ್ಕೆ ತೊಡಗಿದರು. ಇಂಥ ಜೀವನೋತ್ಸಾಹವನ್ನು ಶಾಸ್ತ್ರಿಗಳಂಥವರಲ್ಲಿ ಮಾತ್ರ ಕಾಣಲು ಶಕ್ಯ. ಉದ್ಯೋಗದಿಂದ ನಿವೃತ್ತಿ ಆದರೂ ತಾರುಣ್ಯದ ಉತ್ಸಾಹ ಕೆಲವರಿಂದ ನಿವೃತ್ತಿ ಆಗುವುದಿಲ್ಲ ಎಂಬುದಕ್ಕೆ ಶಾಸ್ತ್ರಿಗಳೇ ಸಾಕ್ಷಿ."

ದೃಢದೇಹ-ಸ್ಥಿರಚಿತ್ತ ಆರೋಗ್ಯದ ದೇಹ ಆರೋಗ್ಯಕರ ಮನಸ್ಸಿಗೆ ಸಾಕ್ಷಿ ಎಂಬ ಮಾತಿಗೆ ಎ.ಆರ್.ಕೃ. ಒಳ್ಳೆಯ ಉದಾಹರಣೆ ಆಗಿದ್ದಾರೆ. ಕೃಷ್ಣಶಾಸ್ತ್ರಿಗಳು ಬುದ್ಧಿ ಚುರುಕಾಗಿರುವಷ್ಟೆ ದೇಹ ದೃಢವಾಗಿರಬೇಕು ಎಂದು ನಂಬಿದ್ದರು. ಅವರು ಬೆಳಿಗ್ಗೆ ೪.೩೦ ಗಂಟೆಗೆ ಎದ್ದು ಸಾಮು ಮತ್ತು ಗದೆ ತಿರುಗಿಸುವುದು, ಚಾಮುಂಡಿ ಬೆಟ್ಟದ ಮೆಟ್ಟಿಲುಗಳನ್ನು ಹತ್ತಿ ಇಳಿಯುವುದು, ವ್ಯಾಯಾಮ ಮುಂತಾದುವನ್ನು ಮಾಡುತ್ತಿದ್ದರು. ಒಂದು ಗಂಟೆ ಬಿರುಸಾಗಿ ನಡೆದು ಮನೆಗೆ ಬರುತ್ತಿದ್ದರು. ನಿವೃತ್ತಿಯ ನಂತರವೂ ಮನೆಗೆಲಸಗಳಲ್ಲಿ ತುಂಬಾ ಉತ್ಸಾಹದಿಂದ ನಿರತರಾಗಿರುತ್ತಿದ್ದರು.

ವಿವಿಧ ಬಗೆಯ ಬಣ್ಣಬಣ್ಣದ ಹೂಗಳಿಂದ ದೇವರನ್ನು ಅಲಂಕರಿಸುವುದು ಅವರಿಗೆ ಪ್ರಿಯವಾದ ಕೆಲಸವಾಗಿತ್ತು. ಸಹಸ್ರನಾಮದಿಂದ ದೇವತಾರ್ಚನೆ ಮಾಡುತ್ತಿದ್ದರು. ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಬಾವಿಯಿಂದ ನೀರು ಸೇದಿ ಗಿಡಗಳಿಗೆ ಹಾಕುತ್ತಿದ್ದರು, ಸೌದೆ ಒಡೆಯುತ್ತಿದ್ದರು, ಸ್ವಾವಲಂಬಿಗಳಾಗಿದ್ದರು, ಅಡಿಗೆಯನ್ನು ಮಾಡುತ್ತಿದ್ದರು.

ಹಿಂದಿನ ಕಾಲದವರಿಗೆ ಬೆಳ್ಳಿತಟ್ಟೆಯಲ್ಲಿ ಊಟ ಮಾಡುವುದು, ಬೆಳ್ಳಿ ತಂಬಿಗೆಯಲ್ಲಿ ನೀರು ಕುಡಿಯುವುದು ಪದ್ಧತಿ. ಸುಬೋಧ ರಾಮರಾಯರು ಹಾಗೇ ಮಾಡುತ್ತಿದ್ದರು. ಶಾಸ್ತ್ರಿಗಳು ತಮ್ಮ ತಟ್ಟೆಯನ್ನು ತಾವೇ ತೊಳೆದುಕೊಳ್ಳುತ್ತಿದ್ದರು. ಎ.ಆರ್.ಕೃ ಹಣೆಯಲ್ಲಿ ಅಕ್ಷತೆ ಧರಿಸುತ್ತಿದ್ದರು. ಕಾಲೇಜಿಗೆ ಹೋಗುವಾಗ ರೇಷ್ಮೆ ಅಂಚಿನ ಪಂಚೆ, ಟ್ವೀಡ್ ಕೋಟ್ ಮತ್ತು ದೊಡ್ಡಂಚಿನ ಜರತಾರಿ ಇದ್ದ ಮೈಸೂರು ರುಮಾಲು ಧರಿಸುತ್ತಿದ್ದರು. ಸೈಕಲ್ಲಿನಲ್ಲಿ ಸಂಚರಿಸುತ್ತಿದ್ದರು. ನಿವೃತ್ತರಾದ ಮೇಲೆ ಬೆಂಗಳೂರಿನಲ್ಲಿ ಲಾಲ್‌ಬಾಗಿಗೆ ಹೋಗಿ ಬರುತ್ತಿದ್ದರು. ೧೧ರ ಹೊತ್ತಿಗೆ ಗಾಂಧಿಬಜಾರಿಗೆ ಭೇಟಿ ನೀಡಿ ಹಾಗೆಯೇ ಮಗಳ ಮನೆಗೆ ಬಂದು ಮೊಮ್ಮಗಳನ್ನು ಕರೆದುಕೊಂಡು ಹೋಗುತ್ತಿದ್ದರು. ವಚನಭಾರತ, ಬಂಕಿಮಚಂದ್ರ ಬರೆಯುವಾಗ

ಪರೀಕ್ಷಾ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ಬೆಳಿಗ್ಗೆ ೧೨ ರಿಂದ ೫ ಗಂಟೆಯವರೆಗೆ ಓದಿ ಬರೆಯುತ್ತಿದ್ದರು. ರುಚಿರುಚಿಯಾದ ತಿಂಡಿಗಳನ್ನು ತಿನ್ನುವುದು, ಇತರರಿಗೆ ಕೊಡಿಸುವುದು ಅವರಿಗೆ ಹವ್ಯಾಸವಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುಕಾರ್ಯದ ಸಭೆಗಳಿಗೆ ಮೈಸೂರಿಂದ ಬರುತ್ತಿದ್ದಾಗ ಮೈಸೂರುಪಾಕು, ಮದ್ದೂರುವಡೆ ಇತ್ಯಾದಿ ಭಕ್ಷ್ಯಗಳನ್ನು ತರುತ್ತಿದ್ದರು. ಸದಸ್ಯರು ಶಾಸ್ತ್ರಿಗಳು ಬರಲಿ ಸಭೆ ಶುರು ಮಾಡೋಣ ಎನ್ನುತ್ತಿದ್ದರಂತೆ.

ಎಂ.ವಿ.ಸೀತಾರಾಮಯ್ಯನವರು ಡಾ. ಎ.ಆರ್.ಕೃಷ್ಣಶಾಸ್ತ್ರಿಗಳ ಪರಮಶಿಷ್ಯರಲ್ಲಿ ಒಬ್ಬರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎಂ.ವಿ.ಸೀ. ಸಹಾಯಕರಾಗಿ ಎ.ಆರ್.ಕೃ. ಅವರ ಬಳಿ ಕಾರ್ಯನಿರ್ವಹಿಸುತ್ತಿದ್ದರು. ಒಮ್ಮೆ ತಾವು ಬರೆದ ಕಥಾಸಂಗ್ರಹ ಕೃತಿಯನ್ನು ಎ.ಆರ್.ಕೃ. ಅವರಿಗೆ ಅಭಿಪ್ರಾಯ ನೀಡಲು ಕೊಟ್ಟರು. ಆಗ ಅದನ್ನು ಕಂಡು ಶಾಸ್ತ್ರಿಗಳು ಶಿಷ್ಯನಿಗೆ ಹೇಳಿದ ಮಾತಿದು:

"ಕನ್ನಡ ಎಂ.ಎ. ಮಾಡಿಕೊಂಡು ನೀನು ಕಥೆ ಬರೆಯುತ್ತಾ ಕುಳಿತುಕೊಳ್ಳುವುದು, ಮಹಾ ಸಂಗೀತವಿದ್ವಾಂಸ ಹರಿಕಥೆ ಮಾಡಲು ಹೊರಟ ಹಾಗೆ, ನಿನಗೆ ಶಕ್ತಿ ಇದೆ, ಯಾವುದಾದರೂ ಹಳಗನ್ನಡ ಗ್ರಂಥವನ್ನು ಸಂಪಾದನೆಮಾಡು. ಪಾಂಡಿತ್ಯಪೂರ್ಣ ಲೇಖನಗಳನ್ನು ಇನ್ನೂ ಹೆಚ್ಚಾಗಿ ಬರಿ" ಎಂದು ನಿಜವಾದ ವಾತ್ಸಲ್ಯದಿಂದ ಬುದ್ಧಿ ಹೇಳಿದರು. ಆಗ ಎಂವಿಸೀ ಅವರು ಚಿತ್ರಗಾರನಾಗಲು ಸಾಧ್ಯವಿಲ್ಲದೆ ಎಂ.ಎ.ಗೆ ಸೇರಿದ ಸಂಗತಿ ನೆನಪಿಸಿದಾಗ, ಎ.ಆರ್.ಕೃ. ಹೇಳಿದರು, "ಹೌದು ಹೌದು. ನೀನು ಚಿತ್ರಗಾರನಾಗಬೇಕೆಂದು ಟಿ.ಎಸ್.ವೆಂಕಣ್ಣಯ್ಯನವರಿಗೆ ಆಸೆ ಇತ್ತು. ನನಗೂ ಅದೇ ಆಸೆ ಇತ್ತು. ಆದರೆ ಬ್ರಷ್ ನಿನ್ನ ಕೈಗೆ ಸಿಗಲಿಲ್ಲ. ಲೇಖನಿ ಹಿಡಿದೆ, ಹೋಗಲಿಬಿಡು," ಎಂದಾಗ "ಅಷ್ಟೆ ಅಲ್ಲ ಸಾರ್, ಕಥೆ, ಕಾದಂಬರಿ ಬರೆದರೆ ನಾಲ್ಕು ಕಾಸು ಬರುತ್ತೆ. ನಮ್ಮ ಸೇವೆಯಲ್ಲಿ ಪಾಂಡಿತ್ಯಕ್ಕೆ ಏನು ಬೆಲೆ ಇದೆ? ಪ್ರಮೋಷನ್ ಕೊಡುವಾಗ ಕೂಡಾ ಅದು ಲೆಕ್ಕಕ್ಕೆ ಬರುವುದಿಲ್ಲ" ಎಂದು ಸ್ನೇಹಿತರೊಬ್ಬರ ಪಾಡನ್ನು ನೆನೆದು ಎಂವಿಸೀ ಹೇಳಿದರು.

ಎ.ಆರ್.ಕೃ. ಅವರಿಗೆ ಆ ಮಾತಿನರ್ಥ ಆಯಿತು. ಅದಕ್ಕವರು "ಅದೂ ದಿಟ ಅಂತ ಇಟ್ಟುಕೊ. ಆದರೂ ಪಾಂಡಿತ್ಯದ ಕೆಲಸವನ್ನು ಕರ್ತವ್ಯ ಎಂದು ಮಾಡಬೇಕು" ಎಂದರು. ಆ ಮಾತು ಎಂವಿಸೀ ಅವರ ಮನಸ್ಸಿಗೆ ನಾಟಿತು. ಏಕೆಂದರೆ ಗುರುಗಳು ತಮ್ಮ ಬದುಕನ್ನೇ ಪಾಂಡಿತ್ಯಕ್ಕೆ ಮೀಸಲಾಗಿಟ್ಟಿದ್ದರು.

ಅವರು ಪಾಂಡಿತ್ಯದ ಕೆಲಸವನ್ನು ಕರ್ತವ್ಯಕರ್ಮವಾಗಿ ನಡೆಸಿಕೊಂಡು ಬಂದಿದ್ದರು. ಪೂಜ್ಯ ಶಾಸ್ತ್ರಿಗಳು ತೀರಿಕೊಳ್ಳುವ ಮುನ್ನ ಅಪಘಾತವೊಂದಕ್ಕೆ ಸಿಕ್ಕಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ, ಅವರನ್ನು

ನೋಡಿಕೊಂಡು ಬರಲು ಹೋದ ಎಂವಿಸೀ ಅವರು ವಿದ್ವತ್ಪೂರ್ಣವಾಗಿ ಕವಿರಾಜಮಾರ್ಗವನ್ನು ಸಿದ್ಧಮಾಡುತ್ತಿರುವುದನ್ನು ತಿಳಿಸಿದಾಗ, ಎ.ಆರ್.ಕೃ. ಮಂದಹಾಸದಿಂದ ಸಂತೋಷ ವ್ಯಕ್ತಪಡಿಸಿದರು. ಗುರುವಿನ ಪ್ರಭಾವಕ್ಕೆ ಇದೊಂದೇ ನಿದರ್ಶನ.

"ಸಾಮಾನ್ಯರಿಗೆ ಬೇಕಾದ ಸಾಹಿತ್ಯ ಸುಲಭವಾಗಿರಬೇಕೆಂಬ ತತ್ವವನ್ನು ನಾನೂ ಒಪ್ಪುತ್ತೇನೆ. ತಿಳಿಯದವರನ್ನು ಪಾಂಡಿತ್ಯದಿಂದ ಬೆರಗು ಮಾಡಿದರೆ ಇಬ್ಬರಿಗೂ ಕಷ್ಟ, ಯಾರಿಗೂ ಲಾಭವಿಲ್ಲ. ಆದರೆ ಸಾಹಿತ್ಯವನ್ನು ಕೆಳಗೆ ಇಳಿಸುವುದಕ್ಕಿಂತ ಹೆಚ್ಚಾಗಿ ಸಾಮಾನ್ಯರನ್ನು ಮೇಲಕ್ಕೆ ಎತ್ತುವುದು ದೇಶದ ಉದ್ದೇಶವಾಗಿರಬೇಕು."

ನಿಜ. ಆದರೆ ಮಕ್ಕಳನ್ನು ಎಷ್ಟು ವರ್ಷ ಆದರೂ ಎದೆಹಾಲಿನ ಮೇಲೆಯೇ ಬೆಳೆಸುವುದಕ್ಕಾದೀತೇ?

ಮಾತು ಚಿಕ್ಕದಾಗಿದ್ದು ಸುಲಭವಾಗಿದ್ದರೂ ಅರ್ಥ ಸುಲಭವಿಲ್ಲ.

ಒಮ್ಮೆ ಕೃಷ್ಣಶಾಸ್ತ್ರಿಗಳು ಮೊಮ್ಮಗಳಿಗೆ ಕಥೆ ಹೇಳಲು ಮೊದಲು ಮಾಡಿದರು. ಒಂದು ಕಾಡಿನಲ್ಲಿ ಒಬ್ಬ ಋಷಿಯಿದ್ದನಂತೆ. ಅದಕ್ಕೆ ಆ ಮಗು "ಕಾಡು ಎಂದರೆ ಏನು?" ಎಂದು ಕೇಳಿಬಿಟ್ಟಿತು. ಅವರಿಗೆ ನಾಲಗೆ ಕಟ್ಟಿತು. ಅದಾದ ಒಂದು ತಿಂಗಳ ಮೇಲೆ ಬಾಬಾಬುಡನ್ ಬೆಟ್ಟವನ್ನು ನೋಡುವುದಕ್ಕೆ ಮೊಮ್ಮಗಳೊಂದಿಗೆ ಹೋಗಿದ್ದಾಗ ಅಲ್ಲಿದ್ದ ಕಾಡನ್ನು ತೋರಿಸಿ ಅದರ ಅರ್ಥವನ್ನು ಹೇಳಿದರು. ಆದರೆ ಋಷಿಯನ್ನು ತೋರಿಸುವುದಕ್ಕಾಗಲಿ ಅರ್ಥ ಹೇಳುವುದಕ್ಕಾಗಲಿ ಅವರಿಗೆ ಆಮೇಲೂ ಆಗಲಿಲ್ಲವಂತೆ.

ಮಕ್ಕಳು ಓದುವುದಕ್ಕಾಗಿ "ನಿರ್ಮಲ ಭಾರತೀ" ಎಂಬ ಕೃತಿಯನ್ನು ಸರಳ ಶೈಲಿಯಲ್ಲಿ ಮಕ್ಕಳಿಗಾಗಿ ಬರೆದರು. ಎಡಗಡೆಯ ಪುಟದಲ್ಲಿ ಚಿತ್ರ, ಬಲಗಡೆ ದಪ್ಪಕ್ಷರಗಳಲ್ಲಿ ಪುಟ್ಟ ಪುಟ್ಟ ವಾಕ್ಯಗಳಲ್ಲಿ ಸರಳ ವಿಧಾನಗಳಿಂದ ಕಥೆಗಳ ಮೂಲಕ ಮಹಾಭಾರತವನ್ನು ಪರಿಚಯಿಸಿದ್ದಾರೆ. ಭಾರತದ ಕಥೆಯ ಜತೆಗೆ, ನಳನ ಕಥೆ, ನಾಯಿಯ ಕಥೆ, ಮೂರು ಮೀನುಗಳ ಕಥೆ, ಇಲಿಯ ಕಥೆ, ಗೌತಮಿಯ ಕಥೆ, ಮುಂಗುಸಿಯ ಮೈ ಚಿನ್ನವಾದ ಕಥೆ, ಮೊದಲಾದವನ್ನು ಹೇಳಿದ್ದಾರೆ. "ಮಕ್ಕಳಿಗೆ ಈ ಕಥೆಗಳನ್ನು ಹೇಳುವ ಪುಣ್ಯ ಲಭಿಸಿದ್ದರಿಂದ ಭಗವಂತನಿಗೆ ಪ್ರೀತಿಯಾಗುತ್ತದೆ. ಮಕ್ಕಳ ಸಾಹಿತ್ಯಸೇವೆ ಭಗವಂತನ ಸೇವೆ ಎಂದು ತಿಳಿದಿದ್ದರು. ನಿರ್ಮಲ ಭಾರತಿ ಪುಸ್ತಕದ ಹೆಸರಷ್ಟೆ ಅಲ್ಲದೆ ಅವರ ಮೊಮ್ಮಕ್ಕಳ ಹೆಸರೂ ಆಗಿದೆ."

ಪ್ರಬುದ್ಧ ಕರ್ಣಾಟಕದಂಥ ತ್ರೈಮಾಸಿಕ ಸಾಹಿತ್ಯ ಪ್ರೌಢಪತ್ರಿಕೆಯನ್ನು ನಡೆಸಿ ಕನ್ನಡಕ್ಕೆ ಅವರು ಕೊಟ್ಟ ಕೊಡುಗೆ ಅಪಾರವಾದುದು; ಅಮೂಲ್ಯವಾದುದು.

ಅವರು ಲೇಖಕರನ್ನು ಸೃಷ್ಟಿ ಮಾಡಿದರು, ಹೊಸಗನ್ನಡ ಸಾಹಿತ್ಯದ ಹುಲುಸಾದ ಬೆಳೆ ಬರಲು ಕಾರಣಕರ್ತರಾದರು. ಕರ್ಣಾಟಕ ಸಂಘ, ಪ್ರಬುದ್ಧ ಕರ್ಣಾಟಕದ ಪತ್ರಿಕೆ ಈ ಎರಡೂ ಶಾಸ್ತ್ರಿಗಳು ಕನ್ನಡ ಸಾಹಿತಿಗಳನ್ನು ಕನ್ನಡ ಸಾಹಿತ್ಯವನ್ನು ಹೇಗೆ ಬೆಳೆಸಬೇಕು ಎಂಬುದನ್ನು ತೋರಿಸಿದ್ದಕ್ಕೆ ಸಾಕ್ಷಿ ಆಗಿವೆ. ಉಳಿದವರಿಗೆ ಮಾದರಿ ಆಗಿದೆ.

ಪ್ರಬುದ್ಧ ಕರ್ನಾಟಕದ ಲೇಖನಗಳ ಅಕ್ಷರಕ್ಷರವನ್ನು ಓದಿ ತಿದ್ದಿ ಪರಿಷ್ಕರಿಸುತ್ತಿದ್ದರು. ಮಾಸ್ತಿ ಅವರ **ಸುಬ್ಬಣ್ಣ** ನೀಳ್ಗತೆಯನ್ನು ಪ್ರಕಟಿಸುವಾಗ ಅದರಲ್ಲಿ ಒಂದು ಪದವನ್ನು ನಿಷ್ಠುರವಾಗಿ ತಿದ್ದಿ ಪ್ರಕಟಿಸಿದರು. ಪತ್ರಿಕೆಯ ಗುಣಮಟ್ಟ ಕಾಪಾಡುವುದರಲ್ಲಿ ಅವರು ಎಂದೂ ಹಿಂದುಮುಂದು ನೋಡುತ್ತಿರಲಿಲ್ಲ.

ಪ್ರಬುದ್ಧ ಕರ್ನಾಟಕದ ಕೊಡುಗೆಯನ್ನು, ಕೃಷ್ಣಶಾಸ್ತ್ರಿಗಳ "ಬದುಕು, ಬರಹ" ಎಂಬ ಮಹಾ ಪ್ರಬಂಧವನ್ನು ಬರೆದು ಅವರ ಸಮಗ್ರ ಕೃತಿಗಳ ಸಮೀಕ್ಷೆಯನ್ನು, ಸಂಕ್ಷಿಪ್ತವಾಗಿ ಸೊಗಸಾಗಿ ಮಾಡಿರುವ ಶ್ರೀಮತಿ ರುಕ್ಮಿಣಿ ರಘುರಾಮ ಅವರು ಈ ರೀತಿ ಗುರುತಿಸಿದ್ದಾರೆ. "ಶಾಸ್ತ್ರಿಗಳು ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಕಾಲದಲ್ಲಿ ಪ್ರಬುದ್ಧ ಕರ್ಣಾಟಕದಲ್ಲಿ ೨೫೦ ವಿದ್ವಾಂಸರ ಬರಹಗಳು ಪ್ರಕಟವಾಗಿವೆ. ೨೦೦ ನವೀನಪ್ರಾಚೀನ ಕವಿತೆಗಳು, ೧೪೫ ಸಂಶೋಧನ ಲೇಖನಗಳು, ೧೨೫ ಸಣ್ಣಕತೆ, ಪ್ರಬಂಧ, ಗದ್ಯ ಇತ್ಯಾದಿಗಳು, ೨೨ ನಾಟಕಗಳು, ೨೦ ಐತಿಹಾಸಿಕ ಕಾದಂಬರಿಗಳು, ೪೦೦ ಗ್ರಂಥ ವಿಮರ್ಶೆಗಳು ಪ್ರಕಟವಾಗಿವೆ."

ಈ ಸಾಧನೆ ಸುಲಭವಾಗಿ ಆಗಿಲ್ಲ. ಪ್ರಬುದ್ಧ ಕರ್ಣಾಟಕವನ್ನು ಹೊರಡಿಸುತ್ತಿದ್ದಾಗ ಶಾಸ್ತ್ರಿಗಳು ತಾವೇ ಬೈಸಿಕಲ್ ಮೇಲೆ ಮುದ್ರಣಾಲಯಕ್ಕೆ ಹೋಗಿ, ಮುದ್ರಣ ಮಾಡಿಸಿ, ವಿದ್ಯಾರ್ಥಿಗಳ ನೆರವಿಂದ ಅಂಚೆಗೆ ಸಿದ್ಧಪಡಿಸಿ, ಮನೆ ಮನೆಗೆ ತಾವೇ ಹೋಗಿ ಹಂಚಿ ಚಂದಾ ಕೇಳಿದಾಗ *ಆಗ ಬಾ ಈಗ ಬಾ ಹೋಗಿ ಬಾ* ಎಂಬ ರಾಗ, ಬೇಜಾರಿಲ್ಲದೆ ಹತ್ತಾರು ಸಲ ಹೋಗಿ ಚಂದಾ ವಸೂಲು ಮಾಡುತ್ತಿದ್ದರು. ಜಾಹೀರಾತು ಇಲ್ಲದೆ ಪತ್ರಿಕೆ ನಡೆಸಿದರು. ಪ್ರಬುದ್ಧ ಕರ್ಣಾಟಕದಲ್ಲಿ ಲೇಖನ, ಕತೆ, ಕವಿತೆ ಪ್ರಕಟವಾದರೆ ಅವನು ಗಣ್ಯ, ಲೇಖಕ ಎಂಬ ಮಟ್ಟಕ್ಕೆ ಪ್ರಬುದ್ಧ ಕರ್ಣಾಟಕವನ್ನು ತಂದರು. ಲೇಖನ ಆಯ್ಕೆಯಲ್ಲಿ ನಿಷ್ಠುರರಾಗಿ ವರ್ತಿಸಿ, ಪ್ರಬುದ್ಧ ಕರ್ನಾಟಕದ ಉನ್ನತಮಟ್ಟವನ್ನು ಕಾಪಾಡಿದ್ದಾರೆ. ಇದು ಆ ಕಾಲದಲ್ಲಿ ಬೇರೆ ಯಾರಿಗೂ ಸಾಧ್ಯವಾಗಿಲ್ಲ. ಒಮ್ಮೆ ಪತ್ರಿಕೆಯ ಚಂದಾದಾರರೊಬ್ಬರು ಬಂದು ಸಂಚಿಕೆಯ ರಕ್ಷಾಪುಟ ಮತ್ತು ಕಾಗದದ ಗುಣಮಟ್ಟ ಚೆನ್ನಾಗಿಲ್ಲವೆಂದು ಟೀಕಿಸಿದಾಗ ಅಂದು ಪೇಟೆಯಲ್ಲಿ ಸಿಗುತ್ತಿದ್ದ ಕಾಗದದಲ್ಲಿ ಅತ್ಯುತ್ತಮವಾದದ್ದನ್ನು ಬಳಸಿದೆ ಎಂಬುದನ್ನು ಅಂಕಿ ಅಂಶಗಳಿಂದ ತಿಳಿಸಿದರು.

ಎ.ಆರ್.ಕೃ. ಅವರು ಪ್ರಬುದ್ಧ ಕರ್ನಾಟಕವನ್ನು ಎಷ್ಟು ಶ್ರದ್ಧೆಯಿಂದ, ಪರಿಶ್ರಮದಿಂದ, ಮಿತವ್ಯಯದಿಂದ ಪ್ರಕಟಿಸುತ್ತಿದ್ದರು ಎಂಬುದು ಎಲ್ಲರೂ ಗಮನಿಸಬೇಕಾದ ಸಂಗತಿಗಳಾಗಿವೆ. ನನಗಂತೂ ಮರೆಯಲಾಗದ ಸಂಗತಿಗಳಾಗಿವೆ.

ಒಮ್ಮೆ ನನ್ನ ಬಾಲ್ಯದ ಗೆಳೆಯ ಹೇಳಿದ, 'ನನ್ನ ತಂದೆ ಎ.ಆರ್.ಕೃ. ಅವರ ಶಿಷ್ಯರು. ಪ್ರಬುದ್ಧ ಕರ್ನಾಟಕಕ್ಕೆ ಚಂದಾದಾರರಾಗಿದ್ದರು. ಎ.ಆರ್.ಕೃ. ಅವರೇ ನಮ್ಮ ಮನೆಗೆ ಬಂದು ಪತ್ರಿಕೆಯನ್ನು ತಂದು ಕೊಡುತ್ತಿದ್ದರು. ನಮ್ಮ ತಂದೆಯವರು ನಾನೇ ಬಂದು ಸೆಂಟ್ರಲ್ ಕಾಲೇಜಿನಲ್ಲಿ ತೆಗೆದುಕೊಳ್ಳುತ್ತೇನೆ. ಪತ್ರಿಕೆ ಪ್ರಕಟವಾದದ್ದು ತಿಳಿದರೆ ಸಾಕು ಎನ್ನುತ್ತಿದ್ದರು. ಆದರೆ ಎ.ಆರ್.ಕೃ. ನಮ್ಮ ತಂದೆಗೆ ಹೇಳಿದ ಮಾತು: ಚಂದಾದಾರರಿಗೆ ಮನೆ ಬಾಗಿಲಿಗೆ ಪತ್ರಿಕೆಯನ್ನು ತಲುಪಿಸುವುದು ಪ್ರಕಾಶಕರ ಕರ್ತವ್ಯ ಎಂದು. ಮನೆಗೆ ಪತ್ರಿಕೆಯನ್ನು ಕೊಡಲು ಬಂದಾಗ ಒಳಗೆ ಬನ್ನಿ, ಕೂಡಿ, ಕಾಫಿ ತೆಗೆದುಕೊಂಡು ಹೋಗಿ ಎಂದರೆ, ನಾನೀಗ ಕರ್ತವ್ಯದ ಮೇಲೆ ಇದ್ದೇನೆ, ಚಂದಾದಾರರಿಗೆ ಶೀಘ್ರವಾಗಿ ಪತ್ರಿಕೆ ತಲುಪಬೇಕು. ಈಗ ಬರುವುದಿಲ್ಲ ಇನ್ನೊಮ್ಮೆ ನೋಡೋಣ ಎಂದು ಹೊರಟು ಬಿಡುತ್ತಿದ್ದರು. ಪತ್ರಿಕೆಯನ್ನು ಮಿತವ್ಯಯದಲ್ಲಿ ನಡೆಸಲು ಹಲವಾರು ಕ್ರಮಗಳನ್ನು ಕೈಗೊಂಡಿದ್ದರು. ಸೆಂಟ್ರಲ್ ಕಾಲೇಜಿನಿಂದ ಬಸವನಗುಡಿಯಲ್ಲಿದ್ದ ತಮ್ಮ ಮನೆಗೆ ಹೋಗುವ ದಾರಿಯಲ್ಲಿ ಚಂದಾದಾರರ ಮನೆಗೆ ತಾವೇ ಸಂಚಿಕೆಯನ್ನು ತಲುಪಿಸುತ್ತಿದ್ದರು. ತಮ್ಮ ವಿದ್ಯಾರ್ಥಿಗಳ ಕೈಲಿ ಅವರ ಮನೆಯ ಬಳಿ ಇದ್ದ ಚಂದಾದಾರರಿಗೆ ಪತ್ರಿಕೆ ತಲುಪಿಸಲು ಹೇಳುತ್ತಿದ್ದರು. ಕಾಲೇಜ್ ಆದ ಮೇಲೆ ಕರ್ನಾಟಕ ಸಂಘದ ಸದಸ್ಯರಾಗಿದ್ದ ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ತಮ್ಮ ಖರ್ಚಿನಲ್ಲೇ ಅವರಿಗೆ ಕಾಫಿ ತಿಂಡಿ ಕೊಡಿಸಿ ಪ್ರಬುದ್ಧ ಕರ್ನಾಟಕದ ಸಂಚಿಕೆಗಳ ಮೇಲೆ ಚಂದಾದಾರರ ವಿಳಾಸ ಬರೆಸುವುದು, ಪ್ಯಾಕ್ ಮಾಡುವುದು, ವಿಂಗಡಿಸುವುದು, ಇತ್ಯಾದಿ ಕೆಲಸ ಮಾಡಿಸುತ್ತಿದ್ದರು. ಕಾಸಿಗೆ ಬೆಲೆಯಿದ್ದ ಕಾಲ, ಕಾಸು ಚಾಲ್ತಿಯಲ್ಲಿದ್ದ ಕಾಲ. ಪತ್ರಿಕೆಯ ವಿಷಯದಲ್ಲಿ ಒಂದು ಕಾಸೂ ವ್ಯರ್ಥವಾಗಬಾರದೆಂದು ನಿರ್ಧರಿಸಿದ್ದರು. ಪ್ರಬುದ್ಧ ಕರ್ನಾಟಕವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಟ್ಟಾಗ ಅವರು ನೀಡಿದ ವರದಿಯಲ್ಲಿ ಅಂಕಿಅಂಶಗಳು ಹಣದ ಆಯ ವ್ಯಯ ವೆಚ್ಚ ವಿವರಗಳನ್ನು ಕಂಡಾಗ ಅವರ ಲೆಕ್ಕಾಚಾರ ಪರಿಣತಿಯನ್ನು ಕಂಡು ಲೆಕ್ಕ ಪರಿಶೋಧಕರೇ ಬೆರಗಾಗುವ ಹಾಗಿತ್ತು. ಈವತ್ತು ಸಾರ್ವಜನಿಕ ಸೇವೆಯಲ್ಲಿ ತೊಡಗಿರುವವರು ಹಣದ ವಿಚಾರದಲ್ಲಿ ಮಿತವ್ಯಯ-ಸಾರ್ಥಕ ಬಳಕೆ ಹೇಗೆ ಮಾಡಬೇಕು ಎಂಬುದಕ್ಕೆ ಎ.ಆರ್.ಕೃ. ಅವರು ಮಾದರಿ ಆಗಿದ್ದಾರೆ.'

ಎ.ಆರ್.ಕೃ. ಅವರದೇ ರೀತಿಯ ಸ್ವಭಾವ-ಕಾರ್ಯವೈಶಿಷ್ಟ್ಯಗಳಿದ್ದವು. ಅದಕ್ಕೆ ಒಂದೆರಡು ನಿದರ್ಶನಗಳನ್ನು ಹೇಳಬಹುದು. ಸೆಂಟ್ರಲ್ ಕಾಲೇಜಿಗೆ ಎ.ಆರ್.ಕೃ.

ಅವರು ಸೈಕಲ್‌ನಲ್ಲಿ ಹೋಗಿಬರುತ್ತಿದ್ದರು. ಒಮ್ಮೆ ಕರ್ಣಾಟಕ ಸಂಘದ ಕಾರ್ಯಕ್ರಮ ತಡವಾಗಿ ಮುಗಿಯಿತು. ಆಗ ಅವರ ಮಿತ್ರರೊಬ್ಬರು ಕಾರ್ ಇಟ್ಟಿದ್ದರು. ಅವರು, 'ತಡವಾಗಿದೆ ಬನ್ನಿ, ಕಾರಲ್ಲಿ ಹೋಗೋಣ, ನಿಮ್ಮ ಮನೆಗೆ ಬಿಡುತ್ತೇನೆ' ಎಂದರು. 'ಇಲ್ಲ, ನಾನು ಸೈಕಲಲ್ಲಿ ಬಂದಿದ್ದೇನೆ, ಹೋಗುತ್ತೇನೆ' ಎಂದರು.

ಅದಕ್ಕೆ ಅವರು 'ಸೈಕಲ್ ಇಲ್ಲೇ ಕಾಲೇಜಿನಲ್ಲಿ ಬಿಡಿ, ಹೋಗೋಣ' ಎಂದರು. ಅದಕ್ಕೆ ಎ.ಆರ್.ಕೃ. ಅವರು "ನನಗೇನು ಕಾರಿನ ಚಪಲ ಇಲ್ಲ, ನಾಳೆ ಕಾಲೇಜಿಗೆ ಬರಬೇಕಾದರೆ ನನ್ನ ಸೈಕಲ್ ಬೇಕು, ನಿಮ್ಮ ಕಾರಲ್ಲ. ಧನ್ಯವಾದ. ನೀವು ಹೋಗಿಬನ್ನಿ" ಎಂದರು. ಯಾವುದೇ ಕ್ಷಣಿಕ ಆಸೆಗಳಿಗೆ ಎಂದೂ ಅವರು ಮನಗೊಡುತ್ತಿರಲಿಲ್ಲ.

ಯಾವ ಸಣ್ಣ ಕೆಲಸವನ್ನಾಗಲಿ, ಯಾರಾದರೂ ಹೇಳಿದ ಕೆಲಸವಾಗಲಿ ಅವರು ಮರೆಯುತ್ತಿರಲಿಲ್ಲ. ಕಾಲಕ್ಕೆ ಸರಿಯಾಗಿ ಕೆಲಸ ಮಾಡೋದು ಅವರ ಜಾಯಮಾನ. ಅದಕ್ಕಾಗಿ ಅವರು ಸದಾ ಜೇಬಲ್ಲಿ ಸಣ್ಣ ಚೀಟಿ ತುಂಡುಗಳನ್ನು ಇಟ್ಟುಕೊಂಡಿರುತ್ತಿದ್ದರು. ಮಾಡಬೇಕಾದ ಅಂದಿನ ಕೆಲಸಗಳ ವಿವರಗಳನ್ನು ಬರೆದಿಡುತ್ತಿದ್ದರು. ಮಾಡಿದ ಕೆಲಸದ ಮೇಲೆ ಗೆರೆ ಎಳೆದು ಆದಿನ ಮಾಡಲಾಗದ ಕೆಲಸಗಳ ವಿವರಗಳನ್ನು ಮಾರನೇ ದಿನದ ಕಾಗದದ ತುಂಡಿಗೆ ವರ್ಗಾಯಿಸಿಕೊಳ್ಳುತ್ತಿದ್ದರು. ಯಾವುದೇ ಚಿಕ್ಕ ಕೆಲಸವನ್ನಾಗಲೀ ಹೇಳಿದವರು ಮರೆತರೂ ಎ.ಆರ್.ಕೃ. ಮರೆಯುತ್ತಿರಲಿಲ್ಲ.

ಕಾಯಕವೇ ಕೈಲಾಸ ಎಂದು ತಿಳಿದ ಅವರು ಯಾವ ಕೆಲಸವನ್ನಾಗಲಿ ಕೀಳು ಮೇಲು, ಸಣ್ಣದು ದೊಡ್ಡದು, ಮುಖ್ಯ ಅಮುಖ್ಯ ಎಂದು ಭಾವಿಸುತ್ತಿರಲಿಲ್ಲ. ಉಳಿದೆಲ್ಲಾ ಕೆಲಸಗಳ ನಡುವೆ ಸದಾ ಸಾಹಿತ್ಯದ ಕಾಯಕವನ್ನೂ ನಡೆಸುತ್ತಿದ್ದರು. ಪ್ರಾಚ್ಯವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುವಾಗ ಮಧ್ಯೆ ಮಧ್ಯೆ ವಿರಾಮ ಸಿಗುತ್ತಿತ್ತು. ಆ ವೇಳೆಯನ್ನು ವ್ಯರ್ಥ ಮಾಡದೆ ಸಂಸ್ಕೃತ ನಾಟಕ ಗ್ರಂಥವನ್ನು ರಚನೆ ಮಾಡಿದರು. ಅಂಚೆಯಿಂದ ಬಂದ ಪತ್ರ ಭಾಂಗಿಗಳನ್ನು ಸ್ವೀಕರಿಸುವುದು, ಸಂಸ್ಥೆಯಿಂದ ಸಂಬಂಧ ಪಟ್ಟವರಿಗೆ ಕಳಿಸುವ ಗುಮಾಸ್ತೆ ಕೆಲಸವನ್ನು ವಹಿಸಿದಾಗಲೂ ಸಂತೋಷದಿಂದ ಆ ಕಾರ್ಯವನ್ನು ಸಮರ್ಪಕವಾಗಿ ನಡೆಸಿದರು. ನಾನು ವಿದ್ವಾಂಸ, ಎಂ.ಎ. ಮಾಡಿದವನು, ನಾನು ಈ ಕೆಲಸ ಮಾಡುವುದೇ ಎಂದು ಯಾವತ್ತೂ ಭಾವಿಸಲಿಲ್ಲ. ಎಲ್ಲ ಕೆಲಸವನ್ನು ಕರ್ತವ್ಯವೆಂದು ತಿಳಿದು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಮಕ್ಕಳ ಸಾಹಿತಿ ಹೊಯ್ಸಳರು ಬರೆದಂತೆ 'ದುಡ್ಡು ಬಟ್ಟೆಯಿಂದ ದೊಡ್ಡವರಾದೋರಿಲ್ಲ. ದೊಡ್ಡ ಗುಣದಿಂದ ದೊಡ್ಡವರಾದೋರೆಲ್ಲ' ಎನ್ನುವವರ ಗುಂಪಿಗೆ ಸೇರಿದವರು ಎ.ಆರ್.ಕೃ. ಅವರು.

ಎ.ಆರ್.ಕೃ. ರಚಿಸಿದ ಕೊನೆಯ ಗ್ರಂಥ ನಿಬಂಧಮಾಲಾ ಭಾಗ–೨ ೧೯೬೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾಯಿತು. ರವೀಂದ್ರನಾಥ ಠಾಗೂರರ ಪ್ರಬಂಧಗಳ ಈ ಸಂಗ್ರಹವನ್ನು ಬಂಗಾಳಿಯಿಂದ ನೇರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡದ ಅನುವಾದಕರಲ್ಲಿ ಎರಡು ವರ್ಗದವರು ಇದ್ದಾರೆ. ಮೂಲ ಭಾಷಾ ಅನುವಾದಕರು – ಎಂದರೆ ನೇರವಾಗಿ ಇನ್ನೊಂದು ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದವರು. ಇಂಥ ಅನುವಾದಗಳು ಹೆಚ್ಚು ಪ್ರಾಮಾಣಿಕವಾದವು. "ಮೂಲ ಮೂಲವೇ ಎಂದರೂ ಸಹ ಮೂಲದ ಸ್ವರೂಪವನ್ನು ಅನುವಾದಕ ನೇರವಾಗಿ ಗ್ರಹಿಸಿರುತ್ತಾನೆ. ವ್ಯಾಪಾರದಲ್ಲಿ ಗ್ರಾಹಕ ನೇರವಾಗಿ ಉತ್ಪಾದಕನಿಂದ ವಸ್ತು ಕೊಂಡುಕೊಂಡ ಹಾಗೆ."

ಇನ್ನೊಂದು ಬಗೆಯ ಅನುವಾದಕರಿದ್ದಾರೆ. ಅನ್ಯಭಾಷಾವಲಂಬಿ ಅನುವಾದಕರು – ಎಂದರೆ ಒಂದು ಮೂಲ ಕೃತಿಯ ಭಾಷೆ ತಿಳಿಯದಾದಾಗ ಅದರ ಇನ್ನೊಂದು ಭಾಷೆಯ ಕೃತಿಯನ್ನು ಆಧರಿಸಿ ಅನುವಾದಿಸುವುದು. ಕನ್ನಡದಲ್ಲಿ ಎರಡೂ ಬಗೆಯ ಅನುವಾದಕರಿದ್ದಾರೆ. ಎ.ಆರ್.ಕೃಷ್ಣಶಾಸ್ತ್ರಿಗಳು ಮೊದಲ ವರ್ಗದವರು. ಬಂಗಾಳಿಯಿಂದಲೇ ನೇರವಾಗಿ ಕನ್ನಡಕ್ಕೆ ನಾಗಮಹಾಶಯ, ಶ್ರೀ ರಾಮಕೃಷ್ಣ ಪರಮಹಂಸರ ಜೀವನಚರಿತ್ರೆ, ನಿಬಂಧಮಾಲಾ ಮೊದಲಾದವನ್ನು ಅನುವಾದಿಸಿದ್ದಾರೆ. ದೇವುಡು ಮೊದಲಾದವರು ವಿವೇಕಾನಂದರ ಕೃತಿಗಳನ್ನು ಇಂಗ್ಲಿಷಿನಿಂದ ಅನುವಾದಿಸಿದ್ದಾರೆ. ಸೋಫೋಕ್ಲಿಸನ ನಾಟಕಗಳನ್ನು ನೇರವಾಗಿ ಗ್ರೀಕ್‌ನಿಂದ ಕ.ವೆಂ.ರಾಘವಾಚಾರ್ ಅವರು ಕನ್ನಡಕ್ಕೆ ತಂದರೆ, ಲಂಕೇಶ್ ಮೊದಲಾದವರು ಇಂಗ್ಲಿಷಿನಿಂದ ಕನ್ನಡಕ್ಕೆ ತಂದಿದ್ದಾರೆ. ಮೂಲಕ್ಕೆ ಹತ್ತಿರವಿರುವುದು ಮೂಲ ಭಾಷೆಯಿಂದ ನೇರವಾಗಿ ಕನ್ನಡಕ್ಕೆ ತಂದ ಕೃತಿಗಳೇ ಎಂದರೆ ತಪ್ಪಿಲ್ಲ. ಈ ದೃಷ್ಟಿಯಿಂದ ಸಂಸ್ಕೃತದಿಂದ, ಬಂಗಾಳಿಯಿಂದ ಎ.ಆರ್.ಕೃಷ್ಣಶಾಸ್ತ್ರಿಗಳು ಮಾಡಿದ ಅನುವಾದಿತ ಗ್ರಂಥಗಳು ಆದರ್ಶಪ್ರಾಯವಾದುವು. ಮೂಲ ಮಹಾಭಾರತವನ್ನು, ಅದರ ಟೀಕಾಗ್ರಂಥಗಳನ್ನು ಓದಿ ಕನ್ನಡದಲ್ಲಿ "ವಚನ ಭಾರತ" ಎಂಬ ಗ್ರಂಥವನ್ನು ಸಾರವತ್ತಾಗಿ ನೀಡಿದವರು ಇವರು.

ಹಲವಾರು ವರ್ಷ ಬಂಗಾಳಿ ಸಾಹಿತ್ಯ ಅಭ್ಯಾಸ ಮಾಡಿದ್ದಷ್ಟೇ ಅಲ್ಲದೆ ಸಾಕಷ್ಟು ಪರಿಣತಿ ಪಡೆದರು. ಅನುವಾದಕ್ಕೆ ಒಂದು ಭಾಷೆಯ ಪರಿಚಯ ಇದ್ದರೆ ಸಾಲದು, ವಿಶಾಲ ಓದು, ಭಾಷಾ ಪರಿಣತಿ ಎರಡೂ ಭಾಷೆಗಳಲ್ಲಿ ಇರಬೇಕು. ಎಷ್ಟೋ ಜನ ಲೇಖಕರಿಗೆ ಕನ್ನಡದಲ್ಲಿ ಇರುವ ಪರಿಣತಿ ಅನ್ಯಭಾಷೆಯಲ್ಲಿ ಇಲ್ಲದಾಗ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದಾಗ ಅದು ಪೇಲವವಾಗುತ್ತದೆ. ಮಂಕುತಿಮ್ಮನ ಕಗ್ಗದ ಇಂಗ್ಲಿಷ್ ಅನುವಾದಗಳು, ಉಮರ್ ಖಯ್ಯಾಮನ ಕನ್ನಡಾನುವಾದಗಳು ಈ ಮಾತಿಗೆ ಉದಾಹರಣೆ ಆಗಬಲ್ಲವು.

ಅನುವಾದ ಮಾಡುವಾಗ ಗದ್ಯ ಕೃತಿಗಳ ಅನುವಾದದ ಕಷ್ಟ ಬೇರೆ. ಪದ್ಯ ಕೃತಿಗಳ ಅನುವಾದದ ಕಷ್ಟ ಬೇರೆ. ಪದ್ಯ ಗದ್ಯ ಎರಡೂ ಕೂಡಿರುವ ಕೃತಿಯ ಅನುವಾದ ಮಾಡುವವರು ಕವಿಗಳೂ, ಗದ್ಯ ವಿಚಕ್ಷಕರೂ ಆಗಿರಬೇಕು. ಕೃಷ್ಣಶಾಸ್ತ್ರಿಗಳು ಬಂಗಾಳಿ ಕೃತಿಗಳ ಅನುವಾದದಲ್ಲಿ ಈ ಸಮಸ್ಯೆಯನ್ನು ಎದುರಿಸಿದ್ದಾರೆ. ಸರಳ ಪದ್ಯಾನುವಾದಗಳಿಂದ ಕವಿಪ್ರತಿಭೆ ತೋರಿದ್ದಾರೆ. ನಿಬಂಧಮಾಲಾ-೨ರಲ್ಲಿ ಹಲವಾರು ಪದಗಳ ಅನುವಾದ ಇದಕ್ಕೆ ನಿದರ್ಶನವಾಗಿದೆ.

ಉದಾಹರಣೆಗೆ ರವೀಂದ್ರರ ಬಾಲ್ಯದ ಜೀವನೋತ್ಸಾಹವನ್ನು ಪ್ರತಿಬಿಂಬಿಸುವ ಈ ಸಾಲುಗಳನ್ನು ಗಮನಿಸಬಹುದು:

ನುಡಿಯುತಲಿದ್ದೆನು ಧಾರಾಕಾರದಿ
ನನ್ನಯ ಮಾತನು ನನ್ನ'ರಿಗೆ
ಹೇಳುತಲಿದ್ದೆನು ಮನೆಬಾಗಿಲೊಳು
ಎನಿತೋ ಮನೆ ಮಾತುಗಳ
ನೀನಾ ಮಾತನು ಉರಿಯೊಳು ದಹಿಸಿ
ಮುಳಗಿಸಿ ತೇಲಿಸಿ ಕಣ್ಣೀರೊಳಗೆ
ಹೊಸ ಪ್ರತಿಮೆಯ ಹೊಸ ಕೌಶಲದೆ
ರಚಿಸಿದೆ ನಿನ್ನಯ ಮನ ಮತದೆ.

(ನಿಬಂಧಮಾಲಾ–ಪುಟ ೨೭)

ಈ ಸಂದರ್ಭದಲ್ಲಿ ಬಿ.ಜಿ.ಎಲ್. ಸ್ವಾಮಿ ಹೇಳಿದ ಪ್ರಸಂಗವೊಂದು ನೆನಪಾಗುತ್ತದೆ.

ಕೃಷ್ಣಶಾಸ್ತ್ರಿಗಳು **ನಿಬಂಧಮಾಲಾ** ಅನುವಾದಕಾರ್ಯ ಕೈಗೊಂಡಾಗ ರವೀಂದ್ರರ ಮೂಲ ಕೃತಿಯ ಪದಗಳು, ಆಶಯ ಬಂಗಾಳಿ ಭಾಷೆಯಲ್ಲಿ ಯಾವ ರೀತಿ ಇವೆ ಎಂದು ತಿಳಿಯುವುದಕ್ಕಾಗಿ ಚರ್ಚಿಸಲು ಬೆಂಗಳೂರು ಬಸವನಗುಡಿಯ ರಾಮಕೃಷ್ಣ ಮಠದ ಸ್ವಾಮಿ ಯತೀಶ್ವರಾನಂದರ ಮತ್ತು ಸ್ವಾಮಿ ಸಂಜ್ಞಾನಂದರ ಸಹಾಯ ಪಡೆಯುತ್ತಿದ್ದರು.

ಸ್ವಾಮಿಗಳನ್ನು ಭೇಟಿಯಾದಾಗ ಮೊದಲಿಗೆ ಸ್ವಾಮಿಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಶಾಸ್ತ್ರಿಗಳು ಮಾಡುತ್ತಿದ್ದರು. ಸ್ವಾಮಿಗಳು 'ನೀವು ಹಿರಿಯರು, ವಿದ್ವಾಂಸರು. ನಾವು ನಿಮಗಿಂತ ಕಿರಿಯರು. ನಮಿಸಬೇಡಿ' ಎನ್ನುತ್ತ ಪ್ರತಿ ನಮಸ್ಕಾರ ಮಾಡುತ್ತಿದ್ದರಂತೆ. ಆಗ ಶಾಸ್ತ್ರಿಗಳು 'ವರ್ಣಮಾತ್ರಂ ಕಲಿಸಿದಾತ ಗುರು. ಕಲಿಸುವವರು ಯಾರೇ ಆಗಿರಲಿ ಗುರು; ಕಲಿಯುವರು ಯಾರೇ ಆಗಿರಲಿ ಶಿಷ್ಯ; ನಾನೀಗ ಕಲಿಯಲು ಬಂದವನು' ಎಂದು ಮತ್ತೆ ನಮಿಸುತ್ತಿದ್ದರು.

ವಿದ್ಯಾ ದದಾತಿ ವಿನಯಂ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೇ?

ಕೃಷ್ಣಶಾಸ್ತ್ರಿಗಳ ೧೦ ಸಂಪಾದಿತ ಕೃತಿಗಳಲ್ಲಿ ೧. ಕೆಳದಿ ನೃಪ ವಿಜಯ (೧೯೨೧). ೨. ಧರ್ಮಾಮೃತ (೧೯೨೪), ೩. ಹರಿಶ್ಚಂದ್ರ ಕಾವ್ಯ ಸಂಗ್ರಹ (TSV ಜತೆ) ೧೯೩೧, ೪. ಕವಿಜಿಹ್ವಾಬಂಧನಂ (೧೯೫೨) ವಿದ್ವತ್ಪೂರ್ಣ ಸುಧಾರಿತ ಕೃತಿಗಳು. ಸ್ವತಂತ್ರ ಕೃತಿಗಳಲ್ಲಿ ವಚನಭಾರತ, ಕಥಾಮೃತ, ನಿರ್ಮಲ ಭಾರತಿ, ಭಾಸಕವಿ, ಸಂಸ್ಕೃತ ನಾಟಕ, ಸಾಹಿತ್ಯ ಕುರಿತವು, ಸರ್ವಜ್ಞಕವಿ-ಶ್ರೀಪತಿಯ ಕಥೆಗಳು. ಭಾಷಣಗಳು, ಲೇಖನಗಳು ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ (TSV ಜತೆ) ಕನ್ನಡ ಕೃತಿಗಳು ಬಂಕಿಮಚಂದ್ರ ಬಂಗಾಳಿ ಸಾಹಿತ್ಯ ಆಧಾರಿತ ಸ್ವತಂತ್ರ ಕೃತಿಗಳು.

ಇವುಗಳಲ್ಲಿ ವಚನಭಾರತ ಅದ್ವಿತೀಯ ಜನಪ್ರಿಯ ವಿಶಿಷ್ಟ ಕೃತಿ ಆಗಿದೆ. ಇದು ಕನ್ನಡದಲ್ಲಿ ಮಹಾಭಾರತದ ಗದ್ಯಾನುವಾದದ, ದಿವ್ಯಾನುವಾದದ ಕೃತಿ, ಭಾರತದ ಪರಿಚಯ ಕಥಾನುವಾದ ವಿಮರ್ಶೆಗಳ ಕೃತಿಗಳು ಕನ್ನಡದಲ್ಲಿ ನೂರಾರಿವೆ. ಆದರೆ ವಚನಭಾರತ ಆ ಪೈಕಿ ವಿಶಿಷ್ಟ ಕೃತಿ. ಮೂಲ ಸಂಸ್ಕೃತ ಭಾರತವನ್ನು ಕನ್ನಡಕ್ಕೆ ಇಳಿಸಿರುವ ರೀತಿಯನ್ನು ಕುರಿತು ಅವರೇ ಹೇಳಿದ್ದಾರೆ ಹೀಗೆ:

"ಕನ್ನಡಿಯಲ್ಲಿ ದಿಗ್ಗಜವನ್ನು ತೋರಿಸಿದ ಹಾಗೆ ಮಹಾಭಾರತವನ್ನು ಕಿರಿದಾಗಿ, ಆದರೆ ಎಲ್ಲಾ ಭಾಗಗಳೂ ಇರುವಂತೆ ಸಂಗ್ರಹಿಸಿದ್ದೇನೆ ಎಂದು ಕ್ಷೇಮೇಂದ್ರ ಕವಿ ಹೇಳಿದ್ದಾನೆ. ಈ ಕವಿಯ ಸಾಮರ್ಥ್ಯ ನನ್ನಲ್ಲಿಲ್ಲ. ನನ್ನ ಉದ್ದೇಶವೂ ಸರ್ವಾಂಗೀಣ ಸಂಗ್ರಹವಲ್ಲ."

ಆದರೆ "ಕಬ್ಬಿನ ಜಲ್ಲೆಯಲ್ಲಿ ಬೇರು ಗರಿ ಗಿಣ್ಣುಗಳನ್ನು ಕಿತ್ತುಹಾಕಿ, ಸಿಪ್ಪೆ ಹೆರೆದು, ಸಿಗುರು ಕಳೆದು ಹೋಳು ಮಾಡಿ, ಅದನ್ನು ಬಟ್ಟಲಲ್ಲಿ ತಂದುಕೊಡುವುದು. ಕಿತ್ತಲೆ ಹಣ್ಣಿನ ಸಿಪ್ಪೆ ಸುಲಿದು ತೊಳೆ ಬಿಡಿಸಿ ನಾರು, ಬೀಜಗಳನ್ನು ತೆಗೆದು ಹಾಕಿ ಕುಸುಮವನ್ನು ಒಂದು ಅಡಕವಾದ ಬೆಳ್ಳಿಯ ತಟ್ಟೆಯಲ್ಲಿ ಜೋಡಿಸಿಡುವಂಥದ್ದು. ಮೂಲದಲ್ಲಿ ಸ್ವಾರಸ್ಯವಿದ್ದ ಕಡೆ ಒಂದು ವಾಕ್ಯವನ್ನೂ ಬಿಟ್ಟಿಲ್ಲ. ಒಂದು ಉಪಮಾನವನ್ನೂ ಬಿಟ್ಟಿಲ್ಲ. ಇನ್ನು ಕೆಲವು ಕಡೆ ಸಂಗ್ರಹಿಸಿದ್ದೇನೆ. ದೊಡ್ಡ ದೊಡ್ಡ ಪ್ರಕರಣಗಳನ್ನು ಬಿಟ್ಟಿದ್ದೇನೆ. ಒಂದು ಕಡೆಯೂ ಪುನರಾವರ್ತಿಯಿಲ್ಲ" ಎಂದಿದ್ದಾರೆ.

ವಚನಭಾರತ ಬರೆದಾಗ ಶಾಸ್ತ್ರಿಗಳು ಮಹಾಭಾರತದ ಬಗ್ಗೆ ಅಪಾರ ಚಿಂತನೆ ಅಧ್ಯಯನ ವಿಮರ್ಶೆ ಮಾಡಿದ್ದಾರೆ. ಉದಾಹರಣೆಗೆ ಪುಟ ೬೪ ಪೀಠಿಕೆಯಲ್ಲಿ (ಮೊದಲ ಮುದ್ರಣ) ೧೯೫೦ರಲ್ಲಿ ಒಂದು ಮಾತು ಬರೆದಿದ್ದರು. 'ಮಹಾಭಾರತ

ಯುದ್ಧದಲ್ಲಿ ಹದಿನೆಂಟು ಅಕ್ಷೋಹಿಣಿ ಮಡಿಯಿತಲ್ಲ, ಅವರೆಲ್ಲರೂ ಒಂದೇ ವಿಧವಾದ ಕರ್ಮವನ್ನು, ಆ ೧೮ ದಿನಗಳಲ್ಲಿಯೇ ಫಲ ಕೊಡುವಂಥ ಕರ್ಮವನ್ನು ಮಾಡಿದ್ದರೇ? ಹೌದು ಎನ್ನಲೇಬೇಕು' ಎಂದಿದ್ದರು. ಎರಡನೇ ಮುದ್ರಣದಲ್ಲಿ ಈ ಬಗ್ಗೆ ಟಿಪ್ಪಣಿ ಹೀಗೆ ಬರೆದಿದ್ದಾರೆ:

"ಈ ಮಾತುಗಳನ್ನು ಬರೆದಾಗ ನನ್ನ ಮನಸ್ಸಿನಲ್ಲಿ ದೃಢವಾದ ನಿಶ್ಚಯವೇನೂ ಇರಲಿಲ್ಲ. ಭೂಕಂಪ, ಅಗ್ನಿಪರ್ವತದ ಪ್ರಕೋಪ, ಸಮುದ್ರದ ಹೊರಳಿಕೆ ಮುಂತಾದ ವಿಪತ್ತುಗಳಿಂದ ಅಲ್ಪಕಾಲದಲ್ಲಿ ಬಹು ಪ್ರಾಣಿಗಳು ನಾಶವಾಗುವುದೆಂದು ಗೊತ್ತಿತ್ತು. ಇಂದಿಗೂ ಯುದ್ಧದಲ್ಲಿ ಲಕ್ಷಾಂತರ ಜನರು ಸಾಯುತ್ತಾರೆಂದು ಗೊತ್ತಿತ್ತು. ನಾಗಸಾಕಿಯಲ್ಲಿ ಅಣುಬಾಂಬಿನಿಂದ ಕ್ಷಣಮಾತ್ರದಲ್ಲಿ ಊರಿಗೆ ಊರೇ ನಾಶವಾಯಿತು ಎಂಬುದೂ ಗೊತ್ತಿತ್ತು. ಆದರೆ ಇದು ಕರ್ಮಪರಿಪಾಕ ಫಲವಾಗುವುದು ಸಂಭವವೇ? ದೈವಸಂಕಲ್ಪವಾದೀತೋ? ಪ್ರಕೃತಿನಿಯಮಕ್ಕೆ ಅನುಸಾರಿಯಾಗಿದ್ದೀತೋ? ಎಂದು ಸಂದೇಹ ಬಾಧಿಸುತ್ತಲೇ ಇತ್ತು. ಆದರೂ ಬರೆದುದನ್ನು ಅಚ್ಚಿಗೆ ಕೊಟ್ಟೆ, ಪುಸ್ತಕ ಅಚ್ಚಾದ ಮೇಲೆ ಒಂದು ತಿಂಗಳ ಮೇಲೆ ಚಳಿಗಾಲ ಬಂತು. ಆಗ ನಮ್ಮ ಮನೆಯ ಮುಂದೆ ಇದ್ದ ಒಂದು ದೊಡ್ಡ ಅರಳಿಯ ಮರದ ಎಲೆಗಳು ಹಣ್ಣಾಗಲು ಮೊದಲಾಗಿ ೧೫ ದಿನಗಳೊಳಗೆ ಎಲ್ಲಾ ಉದುರಿಹೋದವು- ಲಕ್ಷಾಂತರ ಎಲೆಗಳು ಉದುರಿ ಎಲ್ಲವೂ ಬರಿಯ ಬರಲಾಗಿ ಉಳಿಯಿತು. ಅದನ್ನು ನೋಡಿ ಪ್ರಕೃತಿಯಲ್ಲಿ ಈ ಎಲೆಗಳಿಗೆ ಅನ್ವಯಿಸುವುದು ಮನುಷ್ಯನಿಗೆ ಅನ್ವಯಿಸಲಾರದೇ ಅನ್ನಿಸಿತು.

ಮನುಷ್ಯನು ತನ್ನ ಮಟ್ಟಿಗೆ ತಾನು ದೊಡ್ಡವನು ಎಂದುಕೊಂಡಿರಬಹುದು, ಆದರೆ ಈ ಸನಾತನವಾದ ಅಶ್ವತ್ಥದಲ್ಲಿ ಮನುಷ್ಯನು ಎಲೆಗಿಂತ ಹೆಚ್ಚಿನವನೇನಲ್ಲ. ಜಗತ್ತಿನ ಅಗಾಧವಾದ ಪರಿಣಾಮವನ್ನು ಮನಸ್ಸಿಗೆ ತಂದುಕೊಂಡರೆ ಎಲೆ ಇರಲಿ, ಅಣುವಿಗಿಂತ ಚಿಕ್ಕದಾದ ಅಣು ಈತ. ವಸಂತಮಾಸ ಬರಲು, ಮರವೆಲ್ಲ ೧೫ ದಿನಗಳಲ್ಲಿ ಉಗುರು ಊರುವುದಕ್ಕೆ ಅವಕಾಶವಿಲ್ಲದಂತೆ ಕೆಂಪು ಚಿಗುರುಗಳಿಂದ ತುಂಬಿ ಹೋಯಿತು, ಆ ಮರದಲ್ಲಿ ಅಷ್ಟು ಚೈತನ್ಯಜನಕ ಶಕ್ತಿ ಎಲ್ಲಿಂದ ಬಂತೋ ಎನ್ನಿಸಿತು.

ವಚನಭಾರತ ರಚನೆ ಆದ ರೀತಿ ಸ್ವಾರಸ್ಯಕರವಾದುದು. ಮೂಲವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಆರೇ ತಿಂಗಳಲ್ಲಿ ವಚನಭಾರತವನ್ನು ತಪಸ್ಸಿನಂತೆ ಶ್ರದ್ಧೆಯಿಂದ ಭಕ್ತಿಯಿಂದ ರಚಿಸಿದರು. ದಿನಕ್ಕೆ ೧೬ ಪುಟಗಳಷ್ಟಾದರೂ ಬರೆಯುತ್ತಿದ್ದರು. ಒಂದೊಂದು ಅಧ್ಯಾಯ ಮುಗಿದ ನಂತರವೂ ಹಸ್ತಪ್ರತಿಯ ಮೇಲೆ ಸರಸ್ವತಿಯ ವಿಗ್ರಹವನ್ನಿಟ್ಟು ಬಗೆ ಬಗೆಯ ಹೂಗಳಿಂದ ಪೂಜಿಸಿ ಸಿಹಿ

ಪ್ರಸಾದವನ್ನು ಮಕ್ಕಳಿಗೆ ಕೊಡುತ್ತಿದ್ದರು. ಅಚ್ಚಿಗೆ ಮಲ್ಯರವರ ಪ್ರೆಸ್ಸಿಗೆ ರಾಜರತ್ನಂ ತಂದು ಕೊಡುತ್ತಿದ್ದರು. ಅಲ್ಲಿ ಕೆಲಸಗಾರರು ಬೀಡಿ ಕುಡಿಯದೆ, ಕೈಕಾಲು ತೊಳೆದುಕೊಂಡು ಕೃತಿಗೆ ನಮಸ್ಕರಿಸಿ ಮೊಳೆ ಜೋಡಿಸುತ್ತಿದ್ದರಂತೆ. ಹೀಗೆ ಪುಸ್ತಕ ಒಂದು ಪೂಜೆ ಎಂಬಂತೆ ಮಡಿಮಡಿಯಾಗಿ ರಚಿತವಾದ ಕೃತಿ ಇದು.

ಕೃಷ್ಣಶಾಸ್ತ್ರಿಗಳು ತಮ್ಮ ೬೦ನೇ ವರ್ಷದ ಹುಟ್ಟುಹಬ್ಬದ ದಿನ ೧೯೫೦ರಲ್ಲಿ ಬಂಧು ಮಿತ್ರರನ್ನೆಲ್ಲಾ ಭೋಜನಕ್ಕೆ ಆಹ್ವಾನಿಸಿ ಅಂದೇ ಬಂದಿದ್ದ ವಚನಭಾರತವನ್ನು ಎಲ್ಲರಿಗೂ ಉಡುಗೊರೆಯಾಗಿ ಕೊಟ್ಟು ಆನಂದಿಸಿದರು.

ಕಥಾಮೃತ ಅವರ ಇನ್ನೊಂದು ಶ್ರೇಷ್ಠ ಕಥಾಗ್ರಂಥ. ಚಂದಮಾಮ ಬಾಲಮಿತ್ರ ಓದಿ ಆನಂದಿಸಿದ ಮಕ್ಕಳಿಂದ ಹಿಡಿದು ಹಿರಿಯರಿಗೆ ನೀತಿಪಾಠ ಹೇಳುವ ಕಥೆಗಳವರೆಗೆ ನಾನಾ ಕಥೆಗಳಿವೆ. ಕಥಾಮೃತ, ವಚನಭಾರತಗಳಿಗೆ ಬರೆದ ವಿದ್ವತ್ಪೂರ್ಣ ವಿಸ್ತಾರವಾದ ಪೀಠಿಕೆಗಳು ಪದೇ ಪದೇ ಓದಿ ಮನನ ಮಾಡುವಂಥ ಪೀಠಿಕೆಗಳಾಗಿವೆ. ಬಂಕಿಮಚಂದ್ರ ಗ್ರಂಥ ರಚನೆಯ ಬಗ್ಗೆ ಶಾಸ್ತ್ರಿಗಳು ಹೇಳಿದ ಮಾತನ್ನು ಗಮನಿಸಬೇಕು. ಬಂಕಿಮರ ಕೃತಿ ಅವರಿಗೆ ಪರಿಚಯವಾದ ಸಂದರ್ಭವೇ ಕುತೂಹಲಕಾರಿಯಾಗಿದೆ. ಕೃಷ್ಣಶಾಸ್ತ್ರಿಗಳ ಪುಸ್ತಕಪ್ರೇಮವೂ ಇದರಲ್ಲಿ ಅಡಗಿದೆ. ಕೃಷ್ಣಶಾಸ್ತ್ರಿಗಳು ಬಂಕಿಮಚಂದ್ರ ಗ್ರಂಥದ ಗ್ರಂಥಕರ್ತನ ಬಿನ್ನಹದಲ್ಲಿ ಹೇಳಿದ ಮಾತುಗಳಿವು:

ಈಗ್ಗೆ ಸುಮಾರು ೬೦ ವರ್ಷಗಳ ಕೆಳಗೆ ನಾನು ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಒಂದು ದಿನ ನನಗೆ ಎರಡು ತಿಂಗಳ ವಿದ್ಯಾರ್ಥಿವೇತನವಾಗಿ ಎರಡು ರೂಪಾಯಿ ಬಂತು (ಸುಮಾರು ೧೯೦೦ನೇ ಇಸವಿ). ಆಗ ಇನ್ನೂ ಒಂದು ರೂಪಾಯಿಗೆ ನೋಟಾಗಲಿ ನಿಕ್ಕಲ್ ನಾಣ್ಯ ಆಗಲಿ ಬಂದಿರಲಿಲ್ಲ. ಆದ್ದರಿಂದ ಬೆಳ್ಳಿಯ ಎರಡು ಗಟ್ಟಿ ರೂಪಾಯಿಗಳು ನನ್ನ ಕೈ ತುಂಬ ಇದ್ದವು. ಬಡತನದಲ್ಲಿ ಬೆಳೆದಿದ್ದ ನಾನು ಅಷ್ಟೊಂದು ಹಣವನ್ನು ನನ್ನದಾಗಿ ಅಲ್ಲಿಯವರೆಗೆ ನೋಡಿರಲಿಲ್ಲ, ಆದ್ದರಿಂದ ಅದನ್ನೇನು ಮಾಡಬೇಕೆಂದು ಗಹನವಾದ ಸಮಸ್ಯೆಯಾಯಿತು. (ಈವತ್ತು ಎರಡು ರೂಪಾಯಿ ಇದ್ದರೆ ಇದನ್ನು ಯಾತಕ್ಕೂ ಬಳಸಲಾಗದಲ್ಲಾ ಎಂಬ ಸಮಸ್ಯೆ ನಮಗೆ).

ದುರ್ವ್ಯಯ ಮಾಡಬಾರದೆಂಬುದೇನೋ ಸಂಪ್ರದಾಯ ಸಂಸ್ಕಾರಗಳಿಂದ ಮನಸ್ಸಿನಲ್ಲಿ ಗೂಢವಾಗಿದ್ದರೂ ಸ್ವಭಾವ ರೂಢಿಮಯವಾಗಿತ್ತು. ಆದರೆ ಸದ್ವ್ಯಯ ಮಾಡುವುದು ಹೇಗೆ? ಅದಕ್ಕೆ ತಿಂಡಿ ಕೊಂಡು ತಿಂದುಬಿಡಬೇಕೆಂಬ ಯೋಚನೆ ಬರಲಿಲ್ಲ. ಅಷ್ಟೊಂದು ಹಣವನ್ನು ನಿಮಿಷಾರ್ಧದಲ್ಲಿ ವೆಚ್ಚಮಾಡಿಬಿಡಬಹುದಾದ ಇಂದಿನ ಭಾವನೆಗಳು ಆಗ ಜನರಲ್ಲಿ ಇನ್ನೂ ಹುಟ್ಟಿರಲಿಲ್ಲ.

ಕಾಸಿಗೆ ಒಂದು ದೋಸೆ, ಕಾಸಿಗೆ ಒಂದು ವಡೆ, ಚಕ್ಕುಲಿ ಮಾರುವಂಥ ಎಲ್ಲೋ ಒಂದೆರಡು ಹೋಟೆಲುಗಳು ಮಾತ್ರ ಇದ್ದವು. ನಾನು ಆ ಎರಡು ರೂಪಾಯಿ ಹಿಡಿದು ಆ ಕಾಲದಲ್ಲಿ ದೊಡ್ಡ ಪುಸ್ತಕ ಷಾಪು ಜಿ.ಟಿ.ವಿಗೆ ಹೋದೆ. ಅದರೊಳಕ್ಕೆ ಹೋಗಿ ಸುತ್ತಲೂ ನೋಡಿದೆ. ನನ್ನ ಕಣ್ಣಿಗೆ ಪ್ರಧಾನವಾಗಿ ಕಂಡದ್ದು ಪುಸ್ತಕಗಳು. ಅದರಲ್ಲಿ ಬಂಕಿಮಚಂದ್ರರ **ಆನಂದಮಠ** ಕಂಡೆ ಆದರಿಂದ ಏನೋ ಆನಂದವಾಯಿತು ಎಂಬುದು ನನ್ನ ಭಾವನೆ. ಸುಮಾರು ಒಂದೂವರೆ ರೂಪಾಯಿ ಕೊಟ್ಟು ಕೊಂಡುಕೊಂಡೆ. ಅದೇ ನನ್ನ ಹಣದಿಂದ ನಾನು ಕೊಂಡುಕೊಂಡ ಮೊದಲನೆಯ ಪುಸ್ತಕ. ಏನೋ ಜಯವನ್ನು ಸಾಧಿಸಿದವನಂತೆ ಮನೆಗೆ ಬಂದು ಅಂದೇ ಆದಷ್ಟೂ ಓದಿದೆ.

ಅದರ ಮೊದಲ ಪುಟದ ಶೈಲಿ ನವೀನವಾಗಿ ಆಕರ್ಷಕವಾಗಿ ಕಂಡಿತು. ಹೀಗೆ ಬರೆದರೆ ನಾವೆಲ್ಲು ಎಂದುಕೊಂಡೆ. ಬಂಕಿಮಚಂದ್ರರ ಸಾಹಿತ್ಯಕ್ಕೆ ನನಗೆ ಪ್ರವೇಶವಾದದ್ದು ಹೀಗೆ.

ನಾನು ಉಪಾಧ್ಯಾಯನಾದಾಗ ವಿಷವೃಕ್ಷ, ದೇವೀ ಚೌಧರಾಣಿ, ಆನಂದಮಠ ಇತ್ಯಾದಿ ಪಠ್ಯಗಳನ್ನು ಪಾಠ ಹೇಳಬೇಕಾಯಿತು. ಪಾಠ ಹೇಳುವಾಗ ಅವುಗಳ ವಿವರವಾದ, ಆಳವಾದ ವ್ಯಾಸಂಗವಾಯಿತು. ಅವುಗಳ ಮೂಲವನ್ನು ನೋಡಬೇಕೆಂದು ಬಂಗಾಳಿ ಗ್ರಂಥಗಳನ್ನು ತರಿಸಿ ಓದಬೇಕಾಯಿತು. ಬಂಗಾಳಿ ಸಾಹಿತ್ಯ ಚರಿತ್ರೆಯನ್ನು ಓದಬೇಕಾಯಿತು. ಬಂಕಿಮಚಂದ್ರರ ಅಪ್ರಕಾಶಿತ ಕೃತಿಗಳನ್ನು, ಎಂದರೆ ಕನ್ನಡಕ್ಕೆ ಭಾಷಾಂತರವಾಗದ ಗ್ರಂಥಗಳನ್ನು, ನೋಡಬೇಕಾಗಿ ಬಂತು. ಇವುಗಳ ವ್ಯಾಸಂಗ ಮೊದಲಾದುದು ಹೀಗೆ, ಆಗಿನಿಂದ ಈಗ ಉಪಾಧ್ಯಾಯ ವೃತ್ತಿಯಿಂದ ನಿವೃತ್ತನಾಗುವವರೆಗೆ ವ್ಯಾಸಂಗ ನಡೆಯುತ್ತಲೇ ಇತ್ತು. ಮೂಲ ಗ್ರಂಥಗಳನ್ನು ಬಂಗಾಳಿಯಲ್ಲೇ ಓದಿ ಚರ್ವಣಮಾಡಿ ಬಂಕಿಮನ ಜೀವನ ಚರಿತ್ರೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸೂಕ್ಷ್ಮವಾದ ಅಭಿಪ್ರಾಯಗಳನ್ನು ನನ್ನದೇ ರೀತಿಯಲ್ಲಿ ಬರೆದಿದ್ದೇನೆ. ಇಲ್ಲಿನ ವಿಮರ್ಶಾಭಾಗವು ಬಹು ಮಟ್ಟಿಗೆ ನನ್ನದೇ.

ಜಿ.ಪಿ.ರಾಜರತ್ನಂ ಬೌದ್ಧ ಧರ್ಮವನ್ನು ಚೆನ್ನಾಗಿ ಮೂಲದಲ್ಲಿ ತಿಳಿಯಲು. ಜೈನಧರ್ಮವನ್ನು ತಮ್ಮ ವಾದಸಮರ್ಥನೆಗೆ ಬಳಸಿಕೊಳ್ಳಲು, ಪಾಳಿ-ಪ್ರಾಕೃತ ಭಾಷೆಗಳನ್ನು ಕಲಿತರು. ಹಾಗೆಯೇ ಗ್ರೀಕ್‌ಅನ್ನು ಕ.ವೆಂ.ರಾಘವಾಚಾರ್, ಬಿ.ಎಂ.ಶ್ರೀ. ಕಲಿತರು. ಬಂಗಾಳಿಯನ್ನು ವಿ.ಸೀ., ವೆಂಕಟಾಚಾರ್, ವೆಂಕಣ್ಣಯ್ಯ, ವ್ಯಾಸರಾವ್, ಮೊದಲಾದವರು ಧನದಾಹಿಗಳಾಗಿ ಅಲ್ಲ, ಜ್ಞಾನದಾಹಿಗಳಾಗಿ ಕಲಿತರು. ಒಬ್ಬ ಲೇಖಕನನ್ನು, ಅವನ ಕೃತಿಗಳನ್ನು ಮೂಲದ ಭಾಷೆಯಲ್ಲಿ ಓದಲು ಆ ಭಾಷೆಯನ್ನೇ ಕಲಿಯಬೇಕು ಎಂಬ ಛಲ, ಆಸೆ, ಆದರ್ಶ

ಕೃಷ್ಣಶಾಸ್ತ್ರಿಗಳಿಗಿದ್ದಂತೆ ಈಗಿನ ಅಧ್ಯಾಪಕರಲ್ಲಿ ಎಲ್ಲಿದೆ? ಇಂದಿನ ನಮ್ಮ ವಿದ್ಯಾಭ್ಯಾಸದ ಮಟ್ಟಕ್ಕೆ. ಇದೊಂದು ಅಳತೆಗೋಲು.

ಎ.ಆರ್.ಕೃಷ್ಣಶಾಸ್ತ್ರಿಗಳು ಎಂದೊಡನೆ ನನಗೆ ನೆನಪಾಗುವುದು ಗುಂಡಿನೇಟಿನಂಥ ಕನ್ನಡದ ಸಿಡಿಲುನುಡಿಗಳು. ಸಿಂಹಘರ್ಜನೆ, ರಣಘೋಷ, ನಿರ್ಭೀತರಾಗಿ ಎನ್ನ ನುಡಿ ಟಾಠಡಾಢಣ ಎಂಬ ಭೀಮವಾಕ್ಕು, ವೀರಯೋಧನವಾಣಿ. ಗಂಡುಗಲಿ ಕನ್ನಡಿಗನ ದಿಟ್ಟ ಗಟ್ಟಿ ನುಡಿಗಳು ಒಂದಲ್ಲ ಎರಡಲ್ಲ, ನೂರಾರು. ಇದಕ್ಕೆ ನಿದರ್ಶನವಾಗಿ ೧೯೪೧ರಲ್ಲಿ ಹೈದರಾಬಾದಿನಲ್ಲಿ ಸೇರಿದ್ದ ೨೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಅವರಾಡಿದ ಅಣಿಮುತ್ತುಗಳನ್ನು ಗಮನಿಸಬಹುದು.

ಮೈಸೂರಿನವರು, ಧಾರವಾಡದವರು, ಮಂಗಳೂರಿನವರು ಹೈದರಾಬಾದಿನವರು ಕೊಡಗಿನವರು ಎನ್ನುವುದಕ್ಕಿಂತ ಕನ್ನಡಿಗರು ಎನ್ನುವುದು ಶ್ರೇಯಸ್ಸು.

ಮರಾಠಿಗರು ತೆಲುಗರು ತಮಿಳರು ಎನ್ನುವುದಕ್ಕಿಂತ ಭಾರತೀಯರು ಎನ್ನುವುದು ಮತ್ತೂ ಶ್ರೇಯಸ್ಸು.

ಭಾರತೀಯರು, ಇಂಗ್ಲಿಷರು, ಅಮೇರಿಕನ್ನರು, ಆಫ್ರಿಕನ್ನರು ಎನ್ನುವುದಕ್ಕಿಂತ ನಾವೆಲ್ಲ ಈ ಭೂಮಿತಾಯಿಯ ಮಕ್ಕಳು ಎನ್ನುವುದು ವಿಶ್ವಭಾವನೆ ಸರ್ವೋತ್ತಮ.

ಹೀಗೆಂದು ಪ್ರತಿಯೊಬ್ಬ ವ್ಯಕ್ತಿಯೂ ವಿಶ್ವಪ್ರಜೆಯಾಗಿ ಕೆಲಸಮಾಡಲು ಆಗುತ್ತದೆಯೇ?

ಪ್ರಪಂಚವನ್ನು ಉದ್ಧಾರ ಮಾಡುತ್ತೇನೆಂದು ಹೊರಡುವುದಕ್ಕಿಂತ ಹೆಚ್ಚಿನ ಅವಿವೇಕ ಮತ್ತೊಂದಿಲ್ಲ.

ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳಬೇಕು. ಆಮೇಲೆ ತನ್ನವರು, ತನ್ನ ನಾಡು, ತನ್ನ ಲೋಕ. ಉದ್ಧಾರಕಾರ್ಯ ದಾನದಂತೆ ತನ್ನಿಂದ ಆರಂಭವಾಗಬೇಕು.

ಆದರೆ ಅದು ತನ್ನಲ್ಲಿಯೇ ನಿಲ್ಲಬಾರದು. ತಾನು ವಿದ್ಯಾವಂತನಾದರೆ ಮತ್ತೊಬ್ಬನಿಗೆ ಹೇಳಿಕೊಡಬಹುದು. ಹಾಗಲ್ಲದೆ ದೇಶವನ್ನು ಉದ್ಧಾರ ಮಾಡುತ್ತೇನೆ ಎಂದು ಯಾರಾದರೂ ತನ್ನನ್ನೂ, ತನ್ನ ತಾಯಿ ತಂದೆಗಳನ್ನೂ, ಹೆಂಡತಿ ಮಕ್ಕಳನ್ನೂ ಅಲಕ್ಷ್ಯ ಮಾಡಿದರೆ ಅದು ದೇಶೋದ್ಧಾರವಲ್ಲ, ದೇಶದ್ರೋಹ. ಊರಿನ ಅಭಿಮಾನದಿಂದ ಊರನ್ನು ಬೆಳೆಸಿಕೊಂಡು ಬಂದರೆ ಅದರಿಂದ ಒಟ್ಟು ದೇಶಕ್ಕೆ ಹಾನಿಯಿಲ್ಲ, ಕನ್ನಡಿಗರು ತಮ್ಮ ನಾಡಿನ ಅಭಿಮಾನದಿಂದ ಅದನ್ನು ಪುಷ್ಟಿಗೊಳಿಸಬೇಕೆಂದರೆ ಅದು ಸ್ವಾಭಾವಿಕವೂ ನ್ಯಾಯವೂ ಆಗಿರುವುದು. ಅಲ್ಲದೆ ಒಟ್ಟು ದೇಶಕ್ಕೂ ಕ್ಷೇಮ.

ನಮ್ಮ ದೇಶದಲ್ಲಿ ಹಲವಾರು ಭಾಷೆಗಳು ಖಿಲವಾಗಿ ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿಹೋಗುವುದಾದರೆ ಅದು ಬೌದ್ಧ ಧರ್ಮದಂತೆ ಹೊರದೇಶಗಳಲ್ಲಿ ಬದುಕಿರುತ್ತದೆ, ಬಾಳುತ್ತಿರುತ್ತದೆ. ಆದರೆ ಕನ್ನಡ?

ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾ ದೇಶದ ದಕ್ಷಿಣಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೀವು ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು.

ಅದು ಹೋದರೆ ಹೋಗಲಿ ಎನ್ನುವುದಾಗಿದ್ದರೆ, ಈ ಕಡೆ ಬಂಗಾಳಕೊಲ್ಲಿ ಇದೆ; ಆ ಕಡೆ ಅರಬ್ಬಿ ಸಮುದ್ರ ಇದೆ; ಗುಡಿಸಿ ಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ.

ಮಾತೃಭಾಷೆಯ ಮೂಲಕ ಕಲಿತಿದ್ದೇ ಮೈಹತ್ತುವುದು; ಮಾತೃಭಾಷೆಯಲ್ಲಿ ಬರೆದಿದ್ದೆ ನಿಲ್ಲುವುದು, ಪರಭಾಷೆಯಲ್ಲಿ ಯಾರು ಎಷ್ಟೇ ಪಂಡಿತರಾಗಿ ಏನೇ ಬರೆಯಲಿ, ಅದು ಆ ಸಾಹಿತ್ಯಕ್ಕೆ ಸೇರಿ ಗಣ್ಯವಾದ ಸ್ಥಾನ ಪಡೆಯುತ್ತದೆಂಬುದು ಸಂದೇಹದ ಮಾತು. ಕೃಷ್ಣಶಾಸ್ತ್ರಿಗಳು ಈ ಮಾತನ್ನು ಹೇಳುವಾಗ ನನಗೆ ಶ್ರೀಕಂಠೇಶಗೌಡರ ಮಾತು ನೆನಪಾಗುತ್ತದೆ. ಷೇಕ್ಸ್‌ಪಿಯರನ ಮ್ಯಾಕ್ಬೆತನ್ನು ಕನ್ನಡಕ್ಕೆ ಅನುವಾದಿಸಿದ ಸಂದರ್ಭದಲ್ಲಿ ಹೇಳಿದ ಮಾತು – ನಾನು ಎಷ್ಟೇ ಚೆನ್ನಾಗಿ ಇಂಗ್ಲಿಷಿನಲ್ಲಿ ಬರೆದರೂ ಷೇಕ್ಸ್‌ಪಿಯರನ್ನು ಮೀರಿಸಲಾರೆ; ಷೇಕ್ಸ್‌ಪಿಯರ್ ಎಷ್ಟೇ ಚೆನ್ನಾಗಿ ಕನ್ನಡದಲ್ಲಿ ಬರೆದರೂ ನನ್ನನ್ನು ಮೀರಿಸಲಾರ. ಈ ಮಾತು ಮಾತೃಭಾಷೆಯ ಮಹತ್ವವನ್ನು ಚೆನ್ನಾಗಿ ತಿಳಿಸುತ್ತದೆ.

ಎ.ಆರ್.ಕೃ. ಹೇಳುತ್ತಾರೆ, 'ರವೀಂದ್ರನಾಥ ಠಾಗೂರರು ಇಂಗ್ಲಿಷನ್ನು ಇಂಗ್ಲಿಷರಿಗಿಂತ ಚೆನ್ನಾಗಿ ಬರೆಯಬಲ್ಲ ಶಕ್ತಿಯನ್ನು ಗಳಿಸಿದರು. ನೊಬೆಲ್ ವಿಶ್ವಪ್ರಶಸ್ತಿ ಬಹುಮಾನ ಬಂತು ನಿಜ. ಆದರೆ, ಅವರ ಕಾವ್ಯಗಳು ಇಂಗ್ಲಿಷ್ ಸಾಹಿತ್ಯ ಚರಿತ್ರೆಯಲ್ಲಿ ಸ್ಥಾಯಿಯಾದ ಸ್ಥಾನ ಪಡೆದಿದೆಯೋ? ಇಂಥವರು ಭರತಖಂಡಕ್ಕೆಲ್ಲಾ ಬೆರಳು ಮಾಡಿಸುವಷ್ಟು ಜನ ಕೂಡ ಸಿಗಲಾರರು. ಆದ್ದರಿಂದ ಎಲ್ಲರೂ ಮೊದಲು ತಂತಮ್ಮ ನುಡಿಯೊಳ್ ಜಾಣರ್ ಆಗಬೇಕು.

ಜಾತಿ ಮತ ವೇಷಭೂಷಣ ಊಟ ತಿಂಡಿ ಸತ್ಕಾರ ಮುಂತಾದವುಗಳಲ್ಲಿ ಕನ್ನಡಿಗರು ತಮ್ಮ ಕನ್ನಡವನ್ನೂ ಕನ್ನಡತನವನ್ನೂ ಉಳಿಸಿಕೊಂಡರೆ ಅದೇ ಸಾಕಾಗಿದೆ. ನಾವು ಮೊದಲು ಕನ್ನಡಿಗರು. ಆನಂತರ ಭಾರತೀಯರು ಎಂದರೆ ಅದು ಸ್ವಾಭಾವಿಕ. ಕಾರ್ಯಸಾಧ್ಯ, ಕ್ಷೇಮಕರ. ಅವಶ್ಯ ಕರ್ತವ್ಯ. ಆದ್ದರಿಂದ ಮಾತೃಭಾಷೆಗೆ ಮೊದಲ ಸ್ಥಾನ, ದೇಶ ಭಾಷೆಗೆ ಎರಡನೇ ಸ್ಥಾನ, ಮೂರನೆಯದು ಇಂಗ್ಲಿಷ್.

ಎಲ್ಲಿ ಮಾತೃಭಾಷೆಯೇ ದೇಶಭಾಷೆ ಆಗುತ್ತದೋ ಅಲ್ಲಿ ದಾರಿ ಸುಗಮವಾಯಿತು. ಸೋದರಳಿಯನೇ ಸ್ವಂತ ಅಳಿಯನಾದಂತೆ ಆಯಿತು. ನೆಂಟೂ ಉಳಿಯಿತು, ಗಂಟೂ ಉಳಿಯಿತು. ಇಲ್ಲದಿದ್ದರೆ ಹೊರಗಿನಿಂದ ಒಬ್ಬ ಹುಡುಗನನ್ನು ಹಿಡಿದು ತಂದು ವರಪೂಜೆ ಮಾಡಿ ಮಗಳನ್ನು ಕೊಟ್ಟು ಬಳುವಳಿ ಕೊಟ್ಟು ಉಪಚಾರ ಮಾಡಿ ಒಲಿಸಿಕೊಂಡಂತಾಯಿತು. ಮಗನ ಜೊತೆಗೆ ಅವನೂ ಒಬ್ಬ ಮಗಳ ಗಂಡ, ಮಿಕ್ಕ ಭಾಷೆಗಳು ಮನೆಗೆ ಬರುವ ನೆಂಟರು ಇಷ್ಟರ ಹಾಗೆ. ಆದರೆ ಅವರೆಲ್ಲರನ್ನೂ ಮಗನಂತೆ, ಅಳಿಯನಂತೆ ಕಾಣಲಾಗುವುದಿಲ್ಲ. ಆದ್ದರಿಂದ ನಮ್ಮ ದೇಶದಲ್ಲಿ ವಿದ್ಯಾವಂತನೆನ್ನಿಸಿಕೊಳ್ಳಬೇಕಾದವನು ತನ್ನ ಜನಕ್ಕೆ ತಿಳಿವಳಿಕೆ ಕೊಡಬೇಕಾದರೆ, ನೆಲೆಸಿದ ಕಡೆ ಬದುಕಿ ಬಾಳಬೇಕಾದರೆ, ಕನಿಷ್ಠ ಎರಡು ಭಾಷೆಗಳನ್ನಾದರೂ ಕಲಿಯಬೇಕು.

ಸಂಸ್ಕೃತದಿಂದ ಸಾರವತ್ತಾದುದನ್ನು ಕೃತಜ್ಞತೆಯಿಂದ ತೆಗೆದುಕೊಳ್ಳೋಣ ಕನ್ನಡಿಸಿಕೊಳ್ಳೋಣ. ಬರಿಯ ಅದರ ಗಾಂಭೀರ್ಯಕ್ಕೆ ಮರುಳಾಗದಿರೋಣ, ಭಾಷೆಗಿಂತಲೂ ಭಾವ ಮುಖ್ಯ.

ಭಾಷೆ ಗಾಡಿಯಿದ್ದ ಹಾಗೆ. ಗೊಬ್ಬರದ ಗಾಡಿಯಲ್ಲಿ ಚಿನ್ನದ ಗಟ್ಟಿಗಳನ್ನು ಹೇರಿಕೊಂಡು ಬಂದರೆ ಅವಕ್ಕೆ ಬೆಲೆ ಕಡಿಮೆ ಆಗುತ್ತದೆಯೇ? ಗಂಭೀರ ಭಾಷೆ, ಗಂಡುಭಾಷೆ ಎಂದು ಅನ್ಯಭಾಷೆಗಳಿಗೆ ಸೋತುಬಿಡೋಣವೇ? ಉಹುಂ. ಅದರ ಬದಲು ಭಾಷಾಂತರ ಮಾಡಿಕೊಂಡರೆ ಸಿಪ್ಪೆ, ಸ್ವಲ್ಪ ಹಣ್ಣು ಹೋದರೂ ತಿರುಳು ಸಿಗುತ್ತದೆ.'

ಅನ್ಯಭಾಷೆಗಳಿಗೆ ಯಾವ ಸ್ಥಾನಮಾನ ಕೊಡಬೇಕು ಎಷ್ಟರಮಟ್ಟಿಗೆ ಅವುಗಳನ್ನು ಬಳಸಿಕೊಳ್ಳಬೇಕು ಎಂಬುದನ್ನು ಮಾರ್ಮಿಕವಾಗಿ ಕೃಷ್ಣಶಾಸ್ತ್ರಿಗಳು ಹೇಳಿದ್ದಾರೆ:

'ನಾವು ಮನುಷ್ಯರು, ಮನುಷ್ಯತ್ವವನ್ನು ಉಳಿಸಿಕೊಳ್ಳೋಣ, ಉತ್ತಮಪಡಿಸಿಕೊಳ್ಳೋಣ ಎಂದರೆ ಮಿಕ್ಕ ಪ್ರಾಣಿಗಳ ಮೇಲೆ ದ್ವೇಷವೆಂದಲ್ಲ. ಹಸುಗಳನ್ನು ಸಾಕಿಕೊಳ್ಳೋಣ, ಹಾಲು ಕರೆದುಕೊಳ್ಳೋಣ, ಕುರಿಗಳನ್ನು ಸಾಕೋಣ, ಕಂಬಳಿಗಳನ್ನು ಮಾಡಿಕೊಳ್ಳೋಣ. ನಮ್ಮ ಕೆಲಸಕ್ಕೆ ಉಪಯೋಗವಾಗುವುದಾದರೆ ಬೆಕ್ಕು ಮುಂತಾದ ಪ್ರಾಣಿಗಳನ್ನು ಸಾಕಿಕೊಳ್ಳೋಣ, ಆದರೆ ಅವು ಎಲ್ಲಿರಬೇಕೋ ಅಲ್ಲಿರಲಿ. ಅವನ್ನು ಊಟದ ಮನೆಗೆ ಬಿಟ್ಟರೆ ನಾವು ತಿನ್ನುವ ಅನ್ನವೂ, ನಮ್ಮ ಮಕ್ಕಳು ಕುಡಿಯುವ ಹಾಲೂ ಅವುಗಳ ಪಾಲಾಗುತ್ತದೆ.'

ಇದರ ಪ್ರಸ್ತಾಪ ಬಂದಾಗ ಒಬ್ಬ ಅಧ್ಯಾಪಕರು ಹಸು ಎಂದರೆ ಸಂಸ್ಕೃತ, ಕುರಿ ಎಂದರೆ ಇಂಗ್ಲಿಷ್, ಬೆಕ್ಕು ಎಂದರೆ ಇತರ ಪಾಶ್ಚಾತ್ಯ ಭಾಷೆಗಳು ಅಂತ ತಿಳಿಯಬೇಕು ಎಂದಿದ್ದರು.

'ನನ್ನ ಕನ್ನಡದ ಅಭಿಮಾನವನ್ನು ಕನ್ನಡದ ಮೇಲಿನ ಮಮತೆಯನ್ನು ಹಿಂದಿಯ ದ್ವೇಷ, ಸಂಸ್ಕೃತದ ವೈರ ಎನ್ನಬಹುದು (ಯಾರಾದರೂ). ನನಗೂ ಅಲ್ಪಸ್ವಲ್ಪ ಹಿಂದಿಯ ಪರಿಚಯವಿದೆ. ಅದರ ವಿಚಾರವಾಗಿ ಬರೆದಿರುವ ಲೇಖನ ಗ್ರಂಥಗಳ ಪರಿಚಯವಿದೆ. ಅದಕ್ಕಿಂತ ಹೆಚ್ಚಾಗಿ ಸಂಸ್ಕೃತದ ಪರಿಚಯವಿದೆ. ನಾನು ಬರೆದಿರುವ ಲೇಖನಗಳು, ಗ್ರಂಥಗಳು ಕನ್ನಡಕ್ಕಿಂತ ಹೆಚ್ಚಾಗಿ ಸಂಸ್ಕೃತ ವಿಷಯಗಳಿಗೆ ಸಂಬಂಧಪಟ್ಟದ್ದಾಗಿವೆ. ಆದರೂ ಕನ್ನಡಿಗರ ಅಭ್ಯುದಯ ದೃಷ್ಟಿಯಿಂದ ಕನ್ನಡಕ್ಕೆ ಪ್ರಥಮಸ್ಥಾನ ಬೇಕೆಂದು ಹೇಳುತ್ತೇವೆ. ಪೋಷಣೆ ಬೇಕೆಂದು ಹೇಳುತ್ತೇವೆ.' ಈ ಮಾತುಗಳನ್ನು ಹೇಳಿದ ಶಾಸ್ತ್ರಿಗಳು ಅಚ್ಚಕನ್ನಡಿಗರೆಂದು ನಾವು ನೆನಪಿಡಬೇಕು. ಅವರ ಮನೆಮಾತು ಕನ್ನಡ, ವಾಸ ಕರ್ನಾಟಕದಲ್ಲಿ, ಬಾಳಿದ ಸಂಸ್ಕೃತಿ ಕರ್ನಾಟಕಸಂಸ್ಕೃತಿ.

ಯಾರೇ ಆಗಲಿ ಕನ್ನಡ ಓದುಬರಹ ಮಾತು ಕಲಿತು ಕನ್ನಡಿಗರಾಗಬೇಕು, ಅದು ಮುಖ್ಯ ಎಂಬುದನ್ನು ತುಂಬಾ ಸೊಗಸಾಗಿ ಹೇಳಿದ್ದಾರೆ ಶಾಸ್ತ್ರಿಗಳು. ಕನ್ನಡ ಪ್ರೋತ್ಸಾಹ, ಪ್ರಶಸ್ತಿ ಬಹುಮಾನಗಳಿಂದ ಉದ್ಧಾರವಾಗದು ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಂತ ಪ್ರಶಸ್ತಿ, ಪ್ರೋತ್ಸಾಹ ಬೇಕಿಲ್ಲ ಎಂದಲ್ಲ. ಆದರೆ ಅದಕ್ಕಿಂತ ಪ್ರಾಶಸ್ತ್ಯ, ಆದ್ಯತೆ ಕೊಡಬೇಕಾದ್ದು ಕನ್ನಡ ಕಲಿಕೆಗೆ, ಕನ್ನಡ ವಿದ್ಯಾಭ್ಯಾಸಕ್ಕೆ ಎಂಬುದನ್ನು ಒತ್ತಿ ಒತ್ತಿ ಹೇಳಿದ್ದಾರೆ.

"ಕನ್ನಡಕ್ಕೆ ಕೊಡುವ ಪ್ರೋತ್ಸಾಹ" ಬಿಕ್ಷೆಯಾದರೆ ಅದು ಆರೋಗ್ಯ ಸೂಚಕವಲ್ಲ. ಅದು ಅಜೀರ್ಣವಿರುವ ರೋಗಿಗೆ ಉತ್ತೇಜಕವಾದ ಔಷಧಿಯನ್ನು ಕೊಟ್ಟು ಹಸಿವುಂಟು ಮಾಡುವ ಹಾಗೆ. ಅದು ಕೃತಕ ಸ್ಪರ್ಧೆಗಳನ್ನು ಏರ್ಪಡಿಸಿ ಪದಕಗಳನ್ನು ಪಾತ್ರೆಗಳನ್ನು ಕೊಡುವುದು. ಹೀಗೆಯೇ ಗಿಡ ಚೆನ್ನಾಗಿರಲೆಂದು ಅದರ ಒಂದೆರಡು ರೆಂಬೆಗೆ ಸುನೇರಿಯನ್ನು ಅಂಟಿಸಿ ದೀಪಗಳನ್ನು ತಗುಲಿಹಾಕಿದ ಹಾಗೆ. ಗಿಡವೇ ಹೂ ಬಿಡಬೇಕು. ಜೀವದಿಂದ ಕಳಕಳಿಸಬೇಕು ಆಗ ಒಂದೊಂದು ಎಲೆಯೂ, ಹೂವೂ ಸುನೇರಿಗಿಂತ, ದೀಪಗಳಿಗಿಂತ ಸಾವಿರಪಾಲು ಸುಂದರವಾಗಿರುತ್ತದೆ ಸಜೀವವಾಗಿರುತ್ತದೆ. ಸ್ವಾಭಾವಿಕವಾದ ಆರೋಗ್ಯ, ದಾರ್ಢ್ಯ, ಸೌಂದರ್ಯ ಬರಬೇಕಾದರೆ, ಒಂದೂವರೆ ಕೋಟಿ ಕನ್ನಡಿಗರಲ್ಲಿ (ಆಗ) ಒಂದು ಕೋಟಿ ಜನವಾದರೂ ಅಕ್ಷರಸ್ಥರಾಗಿ ಐವತ್ತು ಲಕ್ಷ ಜನವಾದರೂ ವಿದ್ಯಾವಂತರಾಗಿ, ಐದು ಲಕ್ಷ ಜನರಾದರೂ ದುಡ್ಡು ಕೊಟ್ಟು (ಕನ್ನಡ ಪುಸ್ತಕ ಪತ್ರಿಕೆಗಳನ್ನು) ಕೊಂಡು ಓದುವಂತಾಗಬೇಕು."

ಅಂದಿನ ಎ.ಆರ್.ಕೃ ಅವರ ವಾಣಿ ಇಂದಿಗೂ ಕನ್ನಡಕ್ಕೆ ಅಮೃತವಾಣಿ.

**



೩. ಹಿರಿಯ ಸಾಹಿತಿ–ಕನ್ನಡ ಸಾಹಿತ್ಯ ಮಾರ್ಗದರ್ಶಕ

ಮಾಸ್ತಿ ವೆಂಕಟೇಶ ಅಯ್ಯಂಗಾರ್

(೬–೬–೧೮೯೧ / ೬–೬–೧೯೮೬)

ಮಾಸ್ತಿ ಕನ್ನಡದ ಆಸ್ತಿ ಎಂಬ ಮಾತಿಗೆ ಅನೇಕ ಅರ್ಥಗಳಿವೆ. ಕನ್ನಡದಲ್ಲಿ ಸಣ್ಣಕತೆಯ ಕೊರತೆ ತುಂಬಿ ಅದಕ್ಕೆ ಒಂದು ವಿಶಿಷ್ಟ ಸ್ಥಾನ ದೊರಕಿಸಿ ಸಣ್ಣಕತೆಯ ಜನಕರೆಂಬ ಪ್ರಶಸ್ತಿಗೆ ಪಾತ್ರರಾದವರು ಮಾಸ್ತಿ; ಅನೇಕರ ಜೀವನದಲ್ಲಿ ಆಪತ್ಕಾಲದ ಮಿತ್ರರಾಗಿ ಉಪಕಾರ ಮಾಡಿ ಅವರ ಬಾಳಿನಲ್ಲಿ ಚಿರನೆನಪಿನ ಆಸ್ತಿ ಆದವರು, ಮಾಸ್ತಿ ಅನೇಕ ಯುವಜನರ ಬಾಳಿಗೆ ಬೆಳಕಾಗಿ ಆಸ್ತಿ ಆದವರು... ಹೀಗೆ ನಾಡಿನ ಆಸ್ತಿ (ಕನ್ನಡಕ್ಕೆ ಹೋರಾಡಿ) ಸಾಹಿತ್ಯದ ಆಸ್ತಿ (ಸಾಹಿತ್ಯ ಸಾಧನೆಗಳಿಂದ) ಜನರ ಆಸ್ತಿ (ಅನೇಕರ ಮೇಲೆ ಪ್ರಭಾವ ಬೀರಿದ್ದರಿಂದಲೂ, ಆಪತ್ಕಾಲಕ್ಕೆ ನೆರವಾದ್ದರಿಂದಲೂ), ಅವರು ಮರೆಯಲಾಗದ ಆಸ್ತಿ ಆಗಿದ್ದಾರೆ.

ಮಾಸ್ತಿ ನನ್ನ ಪಾಲಿಗೆ ಅಮೂಲ್ಯ ನೆನಪುಗಳ ಆಸ್ತಿ ಆಗಿದ್ದಾರೆ. ತಕ್ಷಣಕ್ಕೆ ನೆನಪಾದ ಕೆಲವು ನೆನಪು–ಅನುಭವಗಳು ಹೀಗಿವೆ:

ಚಿಗುರುವ ಗಿಡಗಳನ್ನು ಬೆಳೆಸಬೇಕು

೧೯೫೦–೫೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಎಂ.ಆರ್.ಶ್ರೀನಿವಾಸಮೂರ್ತಿ ಅವರು. ಆಗ ನಾನು ಹೈಸ್ಕೂಲ್ ವಿದ್ಯಾರ್ಥಿ. ನನಗೆ ಬಂದ ೫ ರೂ. ಸ್ಕಾಲರ್‌ಷಿಪ್ ಹಣವನ್ನು ಕಟ್ಟಿ ಪರಿಷತ್ತಿನ ಸದಸ್ಯನಾಗಬೇಕೆಂದು ಹೋದಾಗ ಅಲ್ಲಿಯ ಕಾರ್ಯದರ್ಶಿಗಳು "ಪರಿಷತ್ತು ಹುಡುಗರಿಗಲ್ಲ. ನೀವು ಸದಸ್ಯರಾಗಲು ಸಾಧ್ಯವಿಲ್ಲ" ಎಂದರು. ಆಗ ಅಲ್ಲೇ ಇದ್ದ ಮಾಸ್ತಿಯವರು "ಯಾಕೆ ಹಾಗೆ ಹೇಳ್ತೀರಿ? ಹುಡುಗ ಆಸೆಯಿಂದ ಬಂದಿದ್ದಾನೆ.

ಯಾರದೇ ಸಾಹಿತ್ಯಾಸಕ್ತಿಯನ್ನು ಪರಿಷತ್ತು ಪ್ರೋತ್ಸಾಹಿಸಬೇಡವೇ? ಅವನನ್ನು ಸದಸ್ಯನನ್ನಾಗಿ ಮಾಡಿಕೊಳ್ಳಿ, ಚಿಗುರುವ ಗಿಡಗಳನ್ನು ಬೆಳೆಸಬೇಕು: ಮುದಿಮರಗಳು ಬಹು ಕಾಲ ಇರುವುದಿಲ್ಲ" ಎಂದರು. ಅವರ ಮಾತಿನಿಂದ ನಾನು ಪರಿಷತ್ತಿನ ಸದಸ್ಯನಾದೆ.

ದೇಹ ಹೇಳಿದಂತೆ ಕೇಳಬೇಕು ನಾನು

ಮಹಾರಾಣಿ ಕಲಾ ಕಾಲೇಜಿನಲ್ಲಿ ನಾನು ಕನ್ನಡ ಅಧ್ಯಾಪಕನಾಗಿದ್ದೆ. ಆಗ ಕರ್ಣಾಟಕ ಸಂಘದ ಉದ್ಘಾಟನೆಗೆ ಮಾಸ್ತಿ ಅವರನ್ನು ಕರೆಯಲು ಸಂಘದ ವಿದ್ಯಾರ್ಥಿನಿಯರನ್ನು ಕಳಿಸಿದ್ದೆ. ಅವರು ಮಧ್ಯಾಹ್ನ ವಿಶ್ರಾಂತಿಯಲ್ಲಿದ್ದರು. ವಿದ್ಯಾರ್ಥಿನಿಯರು ಬಂದ ಕೂಡಲೆ ಪ್ರೀತಿಯಿಂದ ಮಾತಾಡಿದರು. "ನೀನು ಯಾರ ಮಗಳು? ನಿನ್ನ ತಂದೆ ಏನು ಮಾಡುತ್ತಿದ್ದಾರೆ? ನಿಮ್ಮೂರು ಯಾವುದು? ಯಾವ ಕ್ಲಾಸಿನಲ್ಲಿ ಓದುತ್ತಿದ್ದೀಯ? ಇವೇ ಮೊದಲಾಗಿ ಪ್ರತಿಯೊಬ್ಬರನ್ನೂ ವಿಚಾರಿಸುತ್ತಾ "ಹೋ ಹೋ! ನಿಮ್ಮ ತಂದೆಯವರ ದೊಡ್ಡಪ್ಪ ನನ್ನ ಸ್ನೇಹಿತರು. ನಿಮ್ಮೂರಿಗೆ ಬಂದಿದ್ದೆ. ನಿಮ್ಮ ತಾತನ ಮನೆಯಲ್ಲಿ ಇಳಿದುಕೊಂಡಿದ್ದೆ. ಅವರು ದೊಡ್ಡ ವಿದ್ವಾಂಸರು, ಅಯ್ಯೋ ಪಾಪ! ನಿಮ್ಮ ತಾಯಿ ತೀರಿಕೊಂಡರೇ? ಅವರ ಅಣ್ಣನನ್ನು ನಾನು ಮೈಸೂರಲ್ಲಿದ್ದಾಗ ಭೇಟಿಯಾಗಿದ್ದೆ. ಒಳ್ಳೇ ಹುಡುಗ." ಹೀಗೆ ಒಬ್ಬೊಬ್ಬರ ಬಗ್ಗೆ ಆತ್ಮೀಯವಾಗಿ ಮಾತಾಡುತ್ತಾ ಸುಮಾರು ೧/೨ ಗಂಟೆ ಆದ ಮೇಲೆ "ಕ್ಷಮಿಸಿ. ಈಗ ನಾನು ಕಾರ್ಯಕ್ರಮಕ್ಕೆ ಬರಲಾಗುವುದಿಲ್ಲ" ಎಂದರು. "ಸಾರ್. ಒಂದೈದು ನಿಮಿಷ ಕಾರಲ್ಲಿ ಬಂದು ಹೋಗಿ; ದೀಪ ಹಚ್ಚಿ ಉದ್ಘಾಟನೆ ಮಾಡಿ ಹೋಗಿ ಸಾರ್" ಎಂದು ವಿದ್ಯಾರ್ಥಿನಿಯರು ಗೋಗರೆದರು. ಆಗ ಮಾಸ್ತಿ ಹೇಳಿದರು. "ಅಮ್ಮಾ, ನೀವು ಹೇಳುತ್ತಿರುವುದು ಸರಿ. ಆದರೆ ನನಗೆ ಈ ಸಮಯ ನನ್ನ ವಿಶ್ರಾಂತಿ ಕಾಲ, ಬರಲು ಆಗುವುದಿಲ್ಲ. ನಿಮಗೆ ಈಗ ತಿಳಿಯೋಲ್ಲ ನೀವೆಲ್ಲಾ ಯುವತಿಯರು. ಕಲ್ಲನ್ನು ತಿಂದು ಜೀರ್ಣಿಸಿಕೊಳ್ಳುವ ಕಾಲ. ನಮ್ಮಂಥ ವಯಸ್ಸಾದವರಿಗೆ ಅನ್ನ ತಿಂದರೇನೇ ಜೀರ್ಣವಾಗುವುದು ಕಷ್ಟ. ಅದಕ್ಕಿಂತ ಹೆಚ್ಚಾಗಿ, ನೋಡಿ, ೫೦ ಆದ ಮೇಲೆ ದೇಹ ಹೇಳಿದ ಹಾಗೆ ಕೇಳಬೇಕು ಅದಕ್ಕೆ ಮುಂಚೆ ನಾವು ಹೇಳಿದ ಹಾಗೆ ದೇಹ ಕೇಳುತ್ತೆ. ಈ ಮಾತು ನಿಮಗೆ ಈಗ ಅರ್ಥವಾಗುವುದಿಲ್ಲ. ನಿಮ್ಮ ತಾಯಿ, ತಂದೆಯರಿಗೆ, ಅಜ್ಜ, ಅಜ್ಜಿಯರಿಗೆ ತಿಳಿಯುತ್ತೆ" ಎಂದರು. ಹುಡುಗಿಯರಲ್ಲಿ ಒಬ್ಬಳು ಸಪ್ಪೆಮುಖ ಮಾಡಿಕೊಂಡಾಗ ಮಾಸ್ತಿ "ಈ ವಯಸ್ಸು ಅರಳಿದ ಹೂವಿನ ಕಾಲ. ಹೂ ಅರಳುವ ಕಾಲದಲ್ಲಿ ಬಾಡಬಾರದು ಮಗೂ" ಎಂದು ಮಗಳನ್ನು ಮಾತಾಡಿಸುವಂತೆ ನಗುತ್ತಾ ಮಾತಾಡಿದರು. ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹುಡುಗಿಯರು

ಹಿಂತಿರುಗಿದರು. ಆದರೆ ಆ ದಿನದ ಪ್ರಸಂಗವನ್ನು ವಿದ್ಯಾರ್ಥಿನಿಯರು ಜೀವನದಲ್ಲಿ ಮರೆಯಲಿಲ್ಲ. "ಇಷ್ಟು ಆತ್ಮೀಯವಾಗಿ ನಮ್ಮನ್ನು ಯಾರೂ ಇದುವರೆಗೆ ಹೀಗೆ ಮಾತಾಡಿಸಿಲ್ಲ" ಎಂದರು.

ನೀನೇ ಪುಣ್ಯವಂತೆ ಎಂದರು ಕಂಬಾರರು

ಹಿಂತಿರುಗಿ ಬಂದ ವಿದ್ಯಾರ್ಥಿಗಳ ಪೈಕಿ ವಿದ್ಯಾರ್ಥಿನಿಯರ ಕಾರ್ಯದರ್ಶಿನಿಯು ನನ್ನ ಬಳಿ ಬಂದು "ಸಾರ್, ಕರೆದೆವು. ಏನು ಹೇಳಿದರೂ ಬರಲಿಲ್ಲ" ಎಂದು ಹೇಳಿದಳು. ಆಗ ನಾನು "ಅವರು ಬರುವುದಿಲ್ಲ. ಮಧ್ಯಾಹ್ನ ಅವರ ವಿಶ್ರಾಂತಿ ಕಾಲ; ಆದರೂ ನಿಮ್ಮನ್ನು ಕರೆಯಲು ಬೇಕಂತಲೇ ಕಳಿಸಿದೆ" ಅಂದೆ. "ಏನ್ಸಾರ್ ತಿಳಿದೂ ತಿಳಿದೂ ಅವರು ಬರುವುದಿಲ್ಲ ಅಂತ ಗೊತ್ತಿದ್ದು ಏಕೆ ಕರೆಯಲು ಕಳಿಸಿದಿರಿ?" ಅಂದಳು.

ಅದಕ್ಕೆ ನಾನು "ಮಾಸ್ತಿ ಅಂಥವರನ್ನು ನೋಡುವುದು ಮಾತಾಡುವುದು ಯುವಕ-ಯುವತಿಯರಿಗೆ ಜೀವನದಲ್ಲೇ ಅಮೃತಕ್ಷಣಗಳ ಅನುಭವವಾಗುತ್ತದೆ ಅದಕ್ಕಾಗಿ ಕಳಿಸಿದೆ" ಎಂದೆ. ಆಗ ಒಬ್ಬ ಹುಡುಗಿ "ಹೌದು ಸಾರ್, ಅವರು ನನ್ನ ಜತೆ ಮಾತಾಡಿದಾಗ ಕೆಲವು ವರ್ಷಗಳ ಹಿಂದೆ ತೀರಿಕೊಂಡ ನನ್ನ ತಾತ ನೆನಪಾದರು" ಎಂದಳು. ಇನ್ನೊಬ್ಬ ವಿದ್ಯಾರ್ಥಿನಿ ತನ್ನ ತಂದೆಯನ್ನು ಮತ್ತೊಮ್ಮೆ ನೋಡಿದಂತಾಯಿತು ಎಂದಳು. ಇನ್ನೊಬ್ಬಳು "ಇದುವರೆಗೆ ನನ್ನನ್ನು ನಮ್ಮ ಮನೆಯಲ್ಲಿ ಯಾರೂ ಇಷ್ಟು ಪ್ರೀತಿಯಿಂದ ಮಾತಾಡಿಸಿಲ್ಲ ಸಾರ್" ಎಂದಳು.

ಈ ಘಟನೆ ಆದ ೩ ವರ್ಷಗಳ ನಂತರ ನನ್ನ ಒಬ್ಬ ವಿದ್ಯಾರ್ಥಿನಿ ಕನ್ನಡ ಎಂಎಗೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೇರಿದಳು. ಮಾಸ್ತಿಯ ಕೃತಿಗಳು ವಿಶೇಷ ಪಠ್ಯವಾಗಿತ್ತು. ಚಂದ್ರಶೇಖರ ಕಂಬಾರರು ಅವುಗಳನ್ನು ಪಾಠ ಮಾಡುವವರಿದ್ದರು. ಅವರು ಮೊದಲನೇ ತರಗತಿಯಲ್ಲಿ "ವಿದ್ಯಾರ್ಥಿಗಳೇ, ನಿಮ್ಮಲ್ಲಿ ಯಾರಾದರೂ ಮಾಸ್ತಿ ಅವರನ್ನು ನೋಡಿದ್ದೀರಾ? ಅವರ ಮಾತನ್ನು ಕೇಳಿದ್ದೀರಾ? ಅವರ ಪುಸ್ತಕಗಳನ್ನು ಓದಿದ್ದೀರಾ?" ಎಂದು ಕೇಳಿದರು.

ನೋಡಿದ್ದೇವೆ ಸಾರ್ ಎಂದರು. ಎಲ್ಲಿ ಎಂದರೆ ಚಿತ್ರದಲ್ಲಿ ಎಂದರು. ಮಾತು ಕೇಳಿಲ್ಲ, ಪುಸ್ತಕ ಓದಿಲ್ಲ ಎಂದರು.

ಆಗ ಒಬ್ಬ ವಿದ್ಯಾರ್ಥಿನಿ "ಸಾರ್, ನಾನು ನೋಡಿದ್ದೇನೆ. ಮಾತಾಡಿಸಿದ್ದೇನೆ. ಅವರ ಸಣ್ಣಕತೆಗಳನ್ನು ಓದಿದ್ದೇನೆ. ಅವರ ಭಾಷಣ ಕೇಳಿದ್ದೇನೆ" ಎಂದಳು. ಎಲ್ಲಿ ಹೇಗೆ ಎಂದು ಕೇಳಿದಾಗ, ಮೇಲೆ ವಿವರಿಸಿದ ಘಟನೆಯನ್ನು ಹೇಳಿ, ಕ್ಲಾಸಿನಲ್ಲಿ ಮಾಸ್ತಿ ಅವರ ಕಥೆಯನ್ನು ಪಾಠ ಮಾಡಿದ ನನ್ನ ಹೆಸರನ್ನು ಹೇಳಿದಳು.

ಕೂಡಲೇ ಕಂಬಾರರು "ನಿಮ್ಮ ಮೇಷ್ಟ್ರು ನನ್ನ ಸ್ನೇಹಿತರು, ಶಹಬ್ಬಾಷ್! ನೀನೇ ಪುಣ್ಯವಂತೆ. ನಿನಗೊಬ್ಬಳಿಗಾದರೂ ಆ ಭಾಗ್ಯವಿದೆಯಲ್ಲಾ, ಸಂತೋಷ. ವಿದ್ಯಾರ್ಥಿಗಳೇ, ಈಗಲಾದರೂ ಮಾಸ್ತಿಯವರನ್ನು ಒಮ್ಮೆ ನೋಡಿ ಮಾತಾಡಿಸಿ ಜನ್ಮಸಾರ್ಥಕ ಮಾಡಿಕೊಳ್ಳಿ. ಮಾಸ್ತಿಯನ್ನು ಕಂಡರೆ ಕಲಿಯುವುದನ್ನು ಯಾವ ಪುಸ್ತಕ–ಪಾಠ–ಕ್ಲಾಸು ಪಾಠಗಳಿಂದಲೂ ಕಲಿಯಲು ಸಾಧ್ಯವಿಲ್ಲ" ಎಂದರು.

ಅದೇ ದಿನ ಸಂಜೆ ಆ ವಿದ್ಯಾರ್ಥಿನಿ ನಮ್ಮ ಮನೆಗೆ ಬಂದು "ಸಾರ್, ನಿಮ್ಮಿಂದ ಈವತ್ತು ಕ್ಲಾಸಲ್ಲಿ ಹಿರೋಯಿನ್ ಆಗಿಬಿಟ್ಟೆ" ಎಂದು ನಡೆದ ಸಂಗತಿ ಹೇಳಿದಳು. "ಕಂಬಾರರು ನನ್ನ ಮಿತ್ರರು. ಅವರಿಗೆ ಮಾಸ್ತಿ ಅವರನ್ನು ಕಂಡರೆ ತುಂಬಾ ಅಭಿಮಾನ ಆಸಕ್ತಿ" ಎಂದೆ. ಆ ವಿದ್ಯಾರ್ಥಿನಿ ಇಂದು ಬೆಂಗಳೂರಿನ ಬಿ.ಎಂ.ಎಸ್. ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಶೀಲಾ ಮಳೀಮಠ. ಯುವಜನರ ಮೇಲೆ ಮಾಸ್ತಿ ಪ್ರಭಾವಕ್ಕೆ ಇದೊಂದು ನಿದರ್ಶನ ಅಷ್ಟೆ.

ಪರಿಷತ್ತಿಗೆ ದುಡಿದರೆ ಸಾಲದು, ತ್ಯಾಗ ಮಾಡಬೇಕು

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಂಪನಾ ಅವರ ಕಾಲದಲ್ಲಿ ೧೯೭೭ರಲ್ಲಿ ಕಾರ್ಯದರ್ಶಿ ಆಗಿದ್ದೆ. ಆಗ ನಡೆದ ಪ್ರಸಂಗ. ಪರಿಷತ್ತನ್ನು ನಡೆಸಿದ ಆದರ್ಶಪ್ರಾಯ ಅಧ್ಯಕ್ಷರಲ್ಲಿ ಮಾಸ್ತಿ ಒಬ್ಬರು. ಅವರು ಪರಿಷತ್ತಿಗೆ ದುಡಿದವರಷ್ಟೇ ಅಲ್ಲ, ತ್ಯಾಗ ಮಾಡಿದವರಲ್ಲಿ ಒಬ್ಬರು. ಯಾವುದೇ ಸಂಸ್ಥೆಯಲ್ಲಿ ಒಬ್ಬ ವ್ಯಕ್ತಿ ಸೇವೆ ಸಲ್ಲಿಸುವಾಗ ಸಂಸ್ಥೆಯ ಒಂದು ಬಿಡಿಕಾಸನ್ನೂ ಯಾವುದೇ ಕಾರಣಕ್ಕೆ ಮುಟ್ಟಬಾರದು, ತನಗಾಗಿ ಬಳಸಬಾರದು ಎಂಬ ತತ್ವವನ್ನು ಕಟ್ಟುನಿಟ್ಟಾಗಿ ಪಾಲಿಸಿದ ಕೆಲವೇ ಅಧ್ಯಕ್ಷರಲ್ಲಿ ಮಾಸ್ತಿಯವರೂ ಒಬ್ಬರು.

ಪರಿಷತ್ತಿನ ನಿಯಮಾನುಸಾರ ಹಲವು ಸೌಲಭ್ಯಗಳನ್ನು ಬಳಸಿಕೊಳ್ಳಲು ಪರಿಷತ್ತಿನ ಅಧ್ಯಕ್ಷರಿಗೆ, ಅಧಿಕಾರಿಗಳಿಗೆ ನ್ಯಾಯಸಮ್ಮತ ಅವಕಾಶಗಳಿರುತ್ತವೆ. ಅದನ್ನು ಬಹು ಮಂದಿ ಪರಿಷತ್ತಿನ ಅಧ್ಯಕ್ಷರು ರಾಜಾರೋಷವಾಗಿ ಬಳಸಿದ್ದಾರೆ. ಅದರಲ್ಲಿ ತಪ್ಪೇನಿಲ್ಲವಾದರೂ, ಅದು ಆದರ್ಶ ಮಾರ್ಗವಲ್ಲ. ಪರಿಷತ್ತಿಗೆ ಮಾಸ್ತಿಯವರದು ಮಾಡಿದ್ದು ಆದರ್ಶ ಸೇವೆ.

ಪರಿಷತ್ತು ಹಿರಿಯರ ಮಾರ್ಗದರ್ಶನಕ್ಕಾಗಿ ಹಿಂದೆ ಹಿರಿಯ ಸಾಹಿತಿಗಳನ್ನು ಸಮಿತಿ ಸಭೆಗಳಿಗೆ ಕರೆಯಲಾಗುತ್ತಿತ್ತು. ಸಮಿತಿಗಳ ಸಭೆಯಲ್ಲಿ ಭಾಗವಹಿಸಿದವರಿಗೆಲ್ಲ ಪ್ರಯಾಣಭತ್ಯೆ ನೀಡುವುದು ಸಂಪ್ರದಾಯ. ಮಾಸ್ತಿ ಅವರು ಸಮಿತಿ ಸಭೆಯೊಂದರಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದರು. ಆಗ ಪರಿಷತ್ತಿನ

ನಿಯಮಾವಳಿಯಂತೆ ಪ್ರಯಾಣದ ವೆಚ್ಚವಾಗಿ ನಗರದಲ್ಲಿರುವವರಿಗೆ ಆಟೋಚಾರ್ಜ್ ನೀಡಲಾಗುತ್ತಿತ್ತು. ಆ ಪ್ರಕಾರ ಸಭೆ ಮುಗಿದ ಮೇಲೆ ಮಾಸ್ತಿ ಅವರಿಗೆ ಕೊಡಲು ಹೊರಟಾಗ "ಹುಚ್ಚು ಹುಡುಗ ನೀನು" ಎಂದು ಹೇಳಿ ನಕ್ಕು "ಈ ಸಂಸ್ಥೆಯನ್ನು ನಮ್ಮಂಥವರು ಕಟ್ಟಿದವರು, ಸಂಸ್ಥೆಗೆ ಸೇವೆ ಸಲ್ಲಿಸುವವರು ನಮ್ಮ ಕೈಲಾದಷ್ಟು ಧನಸಹಾಯವನ್ನು ಸಂಸ್ಥೆಗೆ ಮಾಡಬೇಕು ಅಷ್ಟೆ. ಪರಿಷತ್ತಿನಿಂದ ಯಾವ ರೂಪದಲ್ಲಿ ಆಗಲಿ ಯಾವ ಕಾರಣಕ್ಕಾಗಲಿ ಹಣ ಪಡೆಯಬಾರದು. ತಿಳಿಯಿತೇ?" ಎಂದರು. ಆಗ ನಾನು "ಸಾರ್ ನೀವು ಹೇಳಿದ ಮಾತು ಒಪ್ಪಬೇಕಾದ್ದೇ. ಆದರೆ ಇನ್ನೊಂದು ಮಾತನ್ನು ನೀವು ಗಮನಿಸಬೇಕು. ಪರಿಷತ್ತು ನಿಯಮಾನುಸಾರ ನಡೆಯುವ ಸಂಸ್ಥೆ. ನೀವೂ ಅಧ್ಯಕ್ಷರಾಗಿ ನಿಯಮಾನುಸಾರ ಪರಿಷತ್ತನ್ನು ನಡೆಸಿದ್ದೀರಿ. ಸಭೆಗೆ ಬಂದವರಿಗೆ ಪ್ರಯಾಣ ವೆಚ್ಚ ಕೊಡಬೇಕಾದದ್ದು ಪರಿಷತ್ತಿನ ನಿಯಮ. ಆದ್ದರಿಂದ ನೀವು ತೆಗೆದುಕೊಳ್ಳಬೇಕು. ಈ ಅತ್ಯಲ್ಪ ಹಣ ನಿಮಗೆ ಬೇಕಿದೆ ಎಂದು ನಾನು ತಿಳಿದಿಲ್ಲ ಆದರೆ ಪರಿಷತ್ತನ್ನು ಕಟ್ಟಿ ಬೆಳೆಸಿದ ನೀವು ಸಂಸ್ಥೆಯ ನಿಯಮವನ್ನು ಪರಿಪಾಲಿಸುವುದು ಬೇಡವೇ...?" ಇತ್ಯಾದಿಯಾಗಿ ವಾದ ಮಾಡಿದೆ. ಆಗ ಅವರು "ನಿಯಮಕ್ಕಿಂತ ಆದರ್ಶ, ನಿಯತ್ತು ವ್ಯಕ್ತಿಗೆ ಮುಖ್ಯ. ಆದ್ದರಿಂದ ನೀನೇನೇ ಹೇಳಿದರೂ ತೆಗೆದುಕೊಳ್ಳುವುದಿಲ್ಲ" ಎಂದರು. ಆಗ ನಾನು "ಸಾರ್, ಹಾಗಾದರೆ ನೀವೊಂದು ಕೆಲಸ ಮಾಡಿ. ಈ ವೋಚರಿಗೆ ಸಹಿ ಹಾಕಿ. ಆ ಹಣಕ್ಕೆ ಒಂದು ಪುಸ್ತಕ ಕೊಂಡು ಪರಿಷತ್ತಿನ ಪುಸ್ತಕ ಭಂಡಾರಕ್ಕೆ ನಿಮ್ಮ ಹೆಸರಲ್ಲಿ ಸೇರಿಸುತ್ತೇನೆ. ಪರಿಷತ್ತಿನ ಪುಸ್ತಕಭಂಡಾರ ಬೆಳೆಯುವುದಕ್ಕೆ ನಿಮ್ಮ ವಿರೋಧವಿಲ್ಲವಲ್ಲ; ಮತ್ತೆ ನೀವೇನೂ ಹಣ ಪಡೆದಂತೆ ಆಗಲಿಲ್ಲ" ಎಂದೆ. "ಜಾಣ ನೀನು" ಎಂದು ನಕ್ಕು ವೋಚರಿಗೆ ಸಹಿ ಹಾಕಿದರು. ಹಣ ಮುಟ್ಟಲಿಲ್ಲ. ಆ ಹಣದ ಮೊತ್ತ ಎಷ್ಟು ಗೊತ್ತೆ? ೨೫ ರೂ.

ಮಾಸ್ತಿ ಅವರದು ಅಮೃತಹಸ್ತ

ಮಾಸ್ತಿ ಅವರೊಡನೆ ಕಾಸರಗೋಡಿನಲ್ಲಿ ನಡೆದ ಕೈಯಾರ ಕಿಞ್ಞಣ್ಣ ರೈ ಏರ್ಪಡಿಸಿದ್ದ ಯುವಜನ ಸಮ್ಮೇಳನಕ್ಕೆ ಹೋಗಿದ್ದೆ. ಧರ್ಮಸ್ಥಳದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ಮಾಸ್ತಿ ಅವರನ್ನು ಜಿ.ಪಿ.ರಾಜರತ್ನಂ ಮೊದಲಾದ ಇತರ ಸಾಹಿತಿಗಳನ್ನು ಕಿಞ್ಞಣ್ಣ ರೈ ಸಮ್ಮೇಳನಕ್ಕೆ ಕಾಸರಗೋಡಿಗೆ ಆಹ್ವಾನಿಸಿದ್ದರು. ಜಿ.ಪಿ.ರಾಜರತ್ನಂ ಕಾರ್ಯನಿಮಿತ್ತ ಬರದೆ ಹಿಂದಿನ ದಿನವೇ ಬೆಂಗಳೂರಿಗೆ ಹೋದರು. ಅವರ ಬದಲು ಭಾಗವಹಿಸಲು ನನಗೆ ಹೇಳಿದರು. "ನೋಡಿ, ಯುವಜನ ಸಮ್ಮೇಳನಕ್ಕೆ ಕರೆದಿದ್ದಾರೆ. ನೀವು ಯುವಕರು ಹೋಗಬೇಕು. ನಾನು ಹಿರಿಯ" ಎಂದರು. ರೈ ಅವರಿಗೆ "ನಿಮ್ಮದು ಯುವಜನ ಸಮ್ಮೇಳನ. ನನಗಿಂತ

ಇವರು ಯುವಜನರು. ಇವರನ್ನು ಕರೆದುಕೊಂಡು ಹೋಗಿ" ಎಂದರು. "ಪುಟ್ಟಮಕ್ಕಳ ಕಾರ್ಯಕ್ರಮ ನನಗಿದೆ, ಗೊತ್ತಲ್ಲಾ" ಎಂದರು. "ಗೊತ್ತು ಸಾರ್" ಎಂದೆ. ಮಾರನೇ ದಿನ ಅವರು ಬೆಂಗಳೂರಿನಲ್ಲಿ ಗಾಂಧೀ ಸಾಹಿತ್ಯ ಸಂಘದಲ್ಲಿ ಮಕ್ಕಳಿಗೆ ಕಥೆ ಹೇಳುವ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಎಷ್ಟಾದರೂ ಮಕ್ಕಳ ಸಾಹಿತಿ ರಾಜರತ್ನಂ ಅವರು.

ಕಾಸರಗೋಡಿನ ಸಮ್ಮೇಳನಕ್ಕೆ ಮಾಸ್ತಿ ಮತ್ತು ಇತರರೊಂದಿಗೆ ಧರ್ಮಸ್ಥಳ ಸಮ್ಮೇಳನ ಮುಗಿಸಿ ಹೊರಟೆವು. ಮಾಸ್ತಿ ಅಧ್ಯಕ್ಷ ಭಾಷಣ ಮಾಡುತ್ತಾ ಹಿಂದೆ ತಾವು ಬಂದಾಗ ಕರ್ನಾಟಕ ಏಕೀಕರಣಕ್ಕೆ ದುಡಿದ ದೇಶಭಕ್ತರಾದ ಸ್ಥಳದ ನಾಯಕರಾಗಿದ್ದ ಭಂಡಾರಿ ಅಂತ ಕಾಣುತ್ತೆ (ಹೆಸರು ಸರಿಯಾಗಿ ನನಗೆ ನೆನಪಿಲ್ಲ) ಅವರನ್ನು ನೆನಪಿಸಿಕೊಂಡರು. ಅವರ ಮನೇಲಿ ತಿಂದ ಪತ್ರೊಡೆಯ ಸವಿ ಈಗಲೂ ನನ್ನ ನಾಲಿಗೆಯ ಮೇಲೆ ಇದೆ ಎಂದು ಅವರ ಆತಿಥ್ಯವನ್ನು ಹೊಗಳಿದರು. ಆ ಸಭೆಗೆ ಅವರ ಕುಟುಂಬದವರು ಬಂದಿದ್ದರು. ಅವರು ಕೂಡಲೆ ರೈ ಅವರನ್ನು ಭೇಟಿ ಮಾಡಿ "ಈ ಅತಿಥಿಗಳನ್ನೆಲ್ಲ ದಯವಿಟ್ಟು ನಮ್ಮ ಮನೆಗೆ ಊಟಕ್ಕೆ ಕಳಿಸಿ" ಎಂದು ಕೇಳಿಕೊಂಡರು.

ಅನಂತರ ಸಭೆ ಮುಗಿದ ಮೇಲೆ ನಾವೆಲ್ಲ ಹಾಮಾನಾ, ಎಚ್.ಎಂ. ಶಂಕರನಾರಾಯಣರಾವ್, ವೆಂಕಟರಾಮಪ್ಪ, ಮಾಸ್ತಿ, ಡಿ.ಲಿಂಗಯ್ಯ ಇನ್ನು ಹಲವರು, ಅವರ ಮನೆ ಊಟಕ್ಕೆ ಹೊರಟೆವು.

ಹಳೆಯ ದೊಡ್ಡಮನೆ, ಹಾಲಿನಲ್ಲಿ ಟೇಬಲ್ಲುಗಳ ಮೇಲೆ ಊಟ ಬಡಿಸಿದ್ದರು. ಮಾಸ್ತಿ ಅವರು ಭಂಡಾರಿ ಅವರ ಮಗನ ಯೋಗಕ್ಷೇಮ ಕೇಳಿದಾಗ ಮನೆಯವರ ಮುಖ ಚಿಕ್ಕದಾಯಿತು. "ಯಾಕೆ ಏನಾಯಿತು?" ಎಂದು ಮಾಸ್ತಿ ಕೇಳಿದರು. "ಅವರಿಗೆ ಅನಾರೋಗ್ಯ ಒಳಗೆ ಕೋಣೆಯಲ್ಲಿ ಮಲಗಿದ್ದಾರೆ" ಎಂದರು. ಕೂಡಲೇ ಊಟ ಪ್ರಾರಂಭಿಸಬೇಕಾದ ಮಾಸ್ತಿ ಎದ್ದು, "ಎಲ್ಲಿ ಎಲ್ಲಿದ್ದಾರೆ ಅವರು?" ಅಂತ ಕೇಳಿ ಆ ಕೋಣೆಗೆ ಬಂದರು. ನಾವು ಅವರ ಹಿಂದೆ ಬಂದೆವು. ಮಾಸ್ತಿ ಅವರನ್ನು ನೋಡಿ, "ಏನಪ್ಪಾ ಮಲಗಿದ್ದೀಯಾ, ಏನಾಗಿದೆಯಪ್ಪಾ?" ಎಂದು ಪ್ರೀತಿ, ವಾತ್ಸಲ್ಯದಿಂದ ಮಾತಾಡುತ್ತಾ ಮೈದಡವಿ ಮಾತಾಡಿಸಿದರು. ಅರೆ ಎಚ್ಚರದಲ್ಲಿ ಆ ವ್ಯಕ್ತಿ ಹಾ ಹಾ ಎಂದು ತಡವರಿಸುತ್ತಾ "ನೀವು ಮಾಸ್ತಿ ಅವರು ಅಲ್ಲವೇ?" ಅಂತ ಹೇಳುತ್ತಾ ಕೈ ಮುಗಿಯಲು ಯತ್ನಿಸಿದರು "ಬೇಡಿ ಬೇಡಿ. ಮಲಗಿ ವಿಶ್ರಾಂತಿ ತೆಗೆದುಕೊಳ್ಳಿ. ಆರೋಗ್ಯವಂತರಾಗುತ್ತೀರಿ. ಚಿಂತಿಸಬೇಡಿ. ದೇವರಿದ್ದಾನೆ" ಎಂದು ಸಾಂತ್ವನ ಹೇಳಿದರು. ಆಗ ಮನೆಯವರ ಮುಖದಲ್ಲೆಲ್ಲಾ ಸಂತೋಷ ಉಕ್ಕಿ ಚಿಮ್ಮಿ ಹರಿದಿತ್ತು. ಏಕೆ ಗೊತ್ತೆ? ಹಲವು ದಿನಗಳಿಂದ ಎಚ್ಚರವಿಲ್ಲದೆ

ಮಲಗಿದ್ದ ಅವರನ್ನು ಮಾಸ್ತಿಯವರ ಪ್ರೀತಿಯ ಮಾತು ವಾತ್ಸಲ್ಯದ ಸ್ಪರ್ಶದ ಅಮೃತಹಸ್ತದ ಅನುಭವ ಎಚ್ಚರಗೊಳಿಸಿತ್ತು. ಇದು ನಾನು ಕಣ್ಣಾರೆ ಕಂಡ ನೋಟ.

ರಾಜರತ್ನಂರಿಗಾಗಿ ಕಣ್ಣೀರಿಟ್ಟರು

ಜಿ.ಪಿ. ರಾಜರತ್ನಂ ಅವರ ಮೇಲಿನ ಅಭಿಮಾನ ಮಾಸ್ತಿಯವರಿಗೆ ಮೊದಲಿನಿಂದಲೂ ಇತ್ತು. ಜಿ.ಪಿ. ರಾಜರತ್ನಂ ಎಂಡ್ಕುಡ್ಕರತ್ನನ ಪದಗಳನ್ನು ಸಹೃದಯ ಬಳಗದೆದುರು ವಾಚಿಸುವಂತೆ ಮಾಡಿ, ಅದನ್ನು ಪ್ರಕಟಿಸಿ, ಅವರು ಕವಿ-ಲೇಖಕ ಆಗಲು ಪ್ರೋತ್ಸಾಹಿಸಿದವರು, ಸ್ಫೂರ್ತಿ ನೀಡಿದವರು ಮಾಸ್ತಿ ಅವರು.

ಕಾಸರಗೋಡು ಯುವಜನ ಸಮ್ಮೇಳನದಿಂದ ಮಾಸ್ತಿಯವರೊಡನೆ ಡಿ.ಲಿಂಗಯ್ಯ, ನಾನು ಮತ್ತಿತರರು ಕಾಗಿನಲ್ಲಿ ಬೆಂಗಳೂರಿಗೆ ಹಿಂದಿರುಗುವಾಗ ದಾರಿಯಲ್ಲಿ ಆ ದಿನ ರಾತ್ರಿ ಜಿ.ಪಿ. ರಾಜರತ್ನಂ ನಿಧನರಾದ ಸುದ್ದಿ ತಿಳಿಯಿತು. ಕೂಡಲೇ ಬೆಂಗಳೂರಿಗೆ ಬರುತ್ತಿದ್ದ ನಾವು ನೇರವಾಗಿ ಕಾರಿನಲ್ಲಿ ಜಿ.ಪಿ. ರಾಜರತ್ನಂರ ಮನೆ ಸೇರಿ ಶ್ರದ್ಧಾಂಜಲಿ ಅರ್ಪಿಸಿದೆವು. ಅವರ ಪರವಾಗಿ ಸಮ್ಮೇಳನದಲ್ಲಿ ಹಾಕಿದ ಹಾರವನ್ನು ರಾಜರತ್ನಂ ಅವರಿಗೇ ಅರ್ಪಿಸಿ ನಾನು ಕೈ ಮುಗಿದೆ. ಆಗ ಮಾಸ್ತಿ ಶೋಕಿಸುತ್ತಾ ಹೇಳಿದ ಮಾತಿದು: ನಮ್ಮಂಥವರು ಬಹಳ ದಿನ ಬದುಕಿರಬಾರದು ಎಂದಾಗ ಪಕ್ಕದಲ್ಲಿದ್ದ ನಾನು ಏಕೆ ಹಾಗೆ ಹೇಳುತ್ತೀರಾ ಎಂದು ಕೇಳಿದಾಗ ನಮ್ಮ ಕಣ್ಣೆದುರೇ ಇಂಥ ಪ್ರತಿಭಾವಂತ ಸಾವನ್ನು ಕಾಣುವ ದೌರ್ಭಾಗ್ಯ ನಮ್ಮದಾಗುತ್ತದಲ್ಲಾ ಎಂದು ಮರುಗಿದರು.

ನನ್ನ ಜತೆ ಮಾತಾಡಲು ಸಂಕೋಚವೇಕೆ?

ಮಾಸ್ತಿ ಅವರನ್ನು ಅದೆಷ್ಟು ಸಲ ಭೇಟಿ ಆಗಿದ್ದೇನೋ ನೆನಪಿಲ್ಲ. ಕೆಲವೊಮ್ಮೆ ಬೆಳಿಗ್ಗೆ ೧೦-೧೧ರ ಸುಮಾರಿನಲ್ಲಿ ವಾಕಿಂಗ್ ಹೊರಟಾಗ ಗವಿಪುರದ ಮನೆಯಿಂದ ಹೊರಟು ರಾಮಕೃಷ್ಣಾಶ್ರಮದ ಮುಂದೆ ಬಂದು ಗೇಟಿನಲ್ಲಿ ನಿಂತು ಕೈಮುಗಿದು, ಮರಾಠ ಹಾಸ್ಟೆಲಿನ ಪಕ್ಕದಿಂದ ಶಂಕರಮಠದ ರಸ್ತೆಯಲ್ಲಿ ಸಾಗಿ ಗಾಂಧಿ ಬಜಾರ್ ರಸ್ತೆಯಿಂದ ಮನೆಗೆ ಸಾಗುತ್ತಿದ್ದರು. ಆಗ ಭೇಟಿಯಾದಾಗಲೆಲ್ಲ ಅವರ ಜತೆ ಉದ್ದಕ್ಕೂ ಮಾತಾಡಿಸುತ್ತಾ ಸಾಗುತ್ತಾ ಹತ್ತಾರು ವಿಷಯಗಳನ್ನು ಪ್ರಶಾಂತದನಿಯಲ್ಲಿ ಕೇಳಿದ್ದೀನಿ. ಒಮ್ಮೆ ಹೀಗೆ ವಾಕಿಂಗ್‌ನಲ್ಲಿ ಮಾತಾಡಿದಾಗ, ಪತ್ರಿಕೆಯೊಂದರಲ್ಲಿ ಅವರ ಬಗ್ಗೆ ಟೀಕೆಯೊಂದು ಬಂದಿತ್ತು. ಅದನ್ನು ಬೆಳಿಗ್ಗೆ ಓದಿದ್ದರು. ನಾನು ಆ

ಬಗ್ಗೆ ಕೇಳಿದಾಗ "ಆ ನನ್ನ ಮಿತ್ರರು ಬರೆಯಬೇಕಿರಲಿಲ್ಲ ನನ್ನನ್ನೇ ಬಂದು ಕೇಳಿದ್ದರೆ ನಾನೇ ಉತ್ತರ ಹೇಳುತ್ತಿದ್ದೆ. ನನ್ನ ಜತೆ ಮಾತಾಡೋಕೆ ಅವರಿಗೇಕೆ ಸಂಕೋಚವೋ ತಿಳಿಯದು" ಎಂದಿದ್ದರು.

ದೇಹಕ್ಕೆ ವಯಸ್ಸಾದರೂ ಮನಸ್ಸಿಗೆ ಆಗಿಲ್ಲ

ಇನ್ನೊಮ್ಮೆ ಹಂಪನಾ ಅವರ ಜತೆ ಪರಿಷತ್ತಿನ ವಿಚಾರವಾಗಿ ಹೋಗಿದ್ದಾಗ ಯಾವುದೋ ನಾಟಕವನ್ನು ಅಂತ ಕಾಣುತ್ತೆ, ಬರೆಯುತ್ತಿದ್ದರು ಅದೊಂದು ಯುವಕ-ಯುವತಿಯರ ಪ್ರಣಯ ಪ್ರಸಂಗ ಅಂತ ಕಾಣುತ್ತೆ. ಅದನ್ನು ಲವಲವಿಕೆಯಿಂದ ಹೇಳತೊಡಗಿದರು, ಆ ಬಗ್ಗೆ ಬರೆಯುತ್ತಿದ್ದೇನೆ ಎಂದರು. ಅವರು ಆ ಇಳಿವಯಸ್ಸಿನಲ್ಲಿ ನಗುನಗುತ್ತ ಸಂತೋಷದಿಂದ, ಹೆಮ್ಮೆಯಿಂದ, ಭಾವಪೂರ್ಣವಾಗಿ ಆ ಕಥೆಯನ್ನು ಹೇಳಿದ್ದು ಈಗಲೂ ನೆನಪಿದೆ. ಈಚೆ ಬಂದ ಮೇಲೆ ನಾನು ಹಂಪನಾ ಮಾತಾಡಿಕೊಂಡೆವು, "ಈ ಅಜ್ಜನಿಗೆ ಅದೆಂಥಾ ತಾರುಣ್ಯಭಾವ ಈ ವಯಸ್ಸಲ್ಲೂ! ನಮಗೆ ಈ ವಯಸ್ಸಿಗೇ ಇಲ್ಲವಲ್ಲಾ. ನಾವೇ ಮುದುಕರು ಅವರೇ ತರುಣರು" ಎಂದೆ. ಹಂಪನಾ "ಹೌದು. ನೀನು ಹೇಳೋದು ನಿಜ, ವಯಸ್ಸು ದೇಹಕ್ಕೆ, ಮನಸ್ಸಿಗಲ್ಲ" ಎಂದರು.

ಇಂಥಾ ಅನುಭವಗಳಷ್ಟೋ ಆಗಿವೆ. ಮಾಸ್ತಿಯವರ ಜತೆ ಮಾತಾಡಿದಾಗಲೆಲ್ಲ, ಇನ್ನು ಅವರ ಭಾವ, ಅರ್ಚನ ಮೊದಲಾದ ಕೃತಿಗಳಲ್ಲಿ ಅವರ ಬಗ್ಗೆ ಬಂದ, ಗೌರವ ಗ್ರಂಥಗಳಲ್ಲಿ ಬಂದ ಪ್ರಸಂಗಗಳನ್ನು ಕಂಡರೆ, ಇಷ್ಟು ವಿಪುಲ ರೋಚಕ ಆನಂದಮಯ ಅನುಭವಗಳ ಅಕ್ಷಯಪಾತ್ರೆಯು ಕನ್ನಡದ ಬೇರಾವ ಕನ್ನಡ ಸಾಹಿತಿಗಳಲ್ಲೂ ಇಂಥ ಪ್ರಸಂಗಗಳು ಈ ಪ್ರಮಾಣದಲ್ಲಿ ಇಲ್ಲ ಎನ್ನಿಸುತ್ತೆ.

ಡಿವಿಜಿ ರಾಳ್ಳಪಳ್ಳಿ ಅವರ ಬಗ್ಗೆ ಒಮ್ಮೆ ಹೇಳಿದ ಮಾತು ನೆನಪಾಗುತ್ತೆ: "ಇಂಥಾ ಮಹಾಪುರುಷರ ಜತೆಯಲ್ಲಿದ್ದಾಗ ದೊರೆಯುವ ಅನುಭವದ ದನಿ, ಮಾತಿನ ಸೊಗಡು ಅಂತಃಕರಣದ ನುಡಿ ಸಾಂತ್ವನ, ರಸಾನುಭವ, ಯಾವ ವಿಶ್ವವಿದ್ಯಾನಿಲಯದ ಶಿಕ್ಷಣದಿಂದಲೂ ಸಿಗುವುದಿಲ್ಲ." ಈ ಮಾತಿಗೆ ಮಾಸ್ತಿಯೇ ಸಾಕ್ಷಿ, ಮಾಸ್ತಿಯವರ ಬಗ್ಗೆ ನಾನೇ ಸಾಕ್ಷಿ.

**



೪. ಘನವಿದ್ವಾಂಸ–ಮಕ್ಕಳ ಸಾಹಿತಿ

ದೇವುಡು ನರಸಿಂಹಶಾಸ್ತ್ರಿ

(೨೯-೧೨-೧೮೯೧ / ೨೭-೧೦-೧೯೬೨)

ಕನ್ನಡ ಸಾಹಿತಿಗಳಲ್ಲಿ ಎಲ್ಲರೂ ಮಕ್ಕಳ ಸಾಹಿತಿಗಳಲ್ಲ. ಮಕ್ಕಳ ಜತೆ ನಲಿದಾಡಿ ಪಾಡಿದರೂ ಮಕ್ಕಳಿಗಾಗಿ ಕಥೆ ಬರೆದು, ಪದ್ಯ ಬರೆದು, ನಾಟಕ ಬರೆದು ಓದಿದವರು ಆಡಿಸಿದವರಲ್ಲ. ಇನ್ನು ಮಕ್ಕಳ ಸಾಹಿತ್ಯ ಬರೆದವರು ಎಷ್ಟೋ ಮಂದಿ ಘನವಿದ್ವಾಂಸರಲ್ಲ. ಆದರೆ ದೇವುಡು ನರಸಿಂಹಶಾಸ್ತ್ರಿಗಳು ಘನವಿದ್ವಾಂಸರೂ ಹೌದು, ಮಕ್ಕಳ ಸಾಹಿತಿಗಳೂ ಹೌದು. ಅಷ್ಟೇ ಅಲ್ಲ, ಕೇವಲ ಪರಂಪರೆಯಿಂದ ಹಿರಿಯರಿಂದ ಬಂದ ಮನೆಮಾತು ತೆಲುಗಾದರೂ, ಟಿ.ಎಸ್.ವೆಂಕಣ್ಣಯ್ಯನವರಂತೆ ಕನ್ನಡ ದೇಶವೇ ನನ್ನ ಮನೆ, ಕನ್ನಡ ಭಾಷೆಯೇ ನನ್ನ ಜೀವ ಭಾಷೆ. ಕನ್ನಡ ಸೇವೆಯೇ ದೇವರ ಸೇವೆ ಎಂದು ತಿಳಿದವರು. ಹಾಗೆಯೇ ಬಾಳಿದವರು.

ದೇವುಡು ಅವರು ಕನ್ನಡ ಭಾಷಾ ಪ್ರೌಢಿಮೆ, ಸಂಸ್ಕೃತ ಪಾಂಡಿತ್ಯ, ಇಂಗ್ಲಿಷ್ ಪರಿಣತಿ ಹೊಂದಿರುವುದರ ಜತೆಗೆ ಅವರಲ್ಲಿ ಕಂಡು ಬರುವ ಅದ್ವಿತೀಯ ವ್ಯಕ್ತಿತ್ವದ ಅಂಶ ಎಂದರೆ ಅವರ ಸರ್ವಸೋದರ ಭಾವ, ಹೃದಯವೈಶಾಲ್ಯ, ಮನುಜಕುಲ ಒಂದೆಕುಲವೆಂಬ ದೇಶಾಚಾರ, ಕುಲಾಚಾರಗಳನ್ನು ಮೀರಿದ ಮಾನವೀಯ ಸ್ವಭಾವ. ಒಂದು ರೀತಿಯಲ್ಲಿ ವಿಶ್ವಮಾನವರು ದೇವುಡು ಅವರು, ದೇವುಡು ಅಂದರೆ ದೇವರು ಎಂದರ್ಥ. ಕವಿ ಎಂ.ಎನ್.ವ್ಯಾಸರಾವ್ ಹೇಳುವಂತೆ ದೇವತಾ ಮನುಷ್ಯ ಅವರು.

"ಉರುಳಿ ಹೋದ ಯುಗಗಳನ್ನು ಕಣ್ಣ ಮುಂದೆ ಮರಳಿಸಿ
ಮರೆತು ಹೋದ ಆಶ್ರಮಗಳನ್ನು ಮತ್ತೆ ಇಲ್ಲಿ ಸೃಷ್ಟಿಸಿ
ದೇವಲೋಕ ಮರ್ತ್ಯಲೋಕ ಬೆಸೆದು ಒಂದುಗೂಡಲು
ದೈವತ್ವಕೆ ಒಯ್ದರಂದು ಮನುಜರನು ದೇವುಡು"

ದೇವುಡು ಅವರ ಸರ್ವಧರ್ಮ ಸಮಭಾವವನ್ನು ಸ್ನೇಹ ಮಾನವೀಯತೆಗಳನ್ನು ಎತ್ತಿಹಿಡಿದ ಅನೇಕ ಜೀವನ ಪ್ರಸಂಗಗಳಲ್ಲಿ ಈ ಪ್ರಸಂಗ ಅತಿ ಪ್ರಸಿದ್ಧವಾದುದು. ದೇವುಡು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಆಗಿದೆ.

ಸರ್ವಜ್ಞ ಕವಿಯನ್ನು ಬೆಳಕಿಗೆ ತಂದು ಪ್ರಸಿದ್ಧರಾಗಿದ್ದ ಕನ್ನಡ ಸಾಹಿತಿ ಫಾದರ್ ರೆವರೆಂಡ್ ಉತ್ತಂಗಿ ಚೆನ್ನಪ್ಪನವರು ಒಮ್ಮೆ ಧಾರವಾಡದಿಂದ ಬೆಂಗಳೂರಿಗೆ ಬಂದಿದ್ದಾಗ ಅವರನ್ನು ತಮ್ಮ ಮನೆಗೆ ದೇವುಡು ಅವರು ಭೋಜನಕ್ಕೆ ಆಹ್ವಾನಿಸಿದರು. ಆ ಸುದ್ದಿ ತಿಳಿದು ಜುಟ್ಟು ಬಿಟ್ಟು ಪಂಚೆ ಉಟ್ಟು ಶಾಲು ಹೊದ್ದು ವೇದಾಭ್ಯಾಸ ಮಾಡಿದ ಶುದ್ಧ ವೈದಿಕ ಸಂಪ್ರದಾಯದ ಶಾಸ್ತ್ರಿಗಳು ಅನ್ಯಮತೀಯನನ್ನು ಕರೆದು ತಮ್ಮ ಮನೆಯೊಳಗೆ ಊಟ ಹಾಕುವುದು ಸರಿಯಲ್ಲ, ಸಂಪ್ರದಾಯಕ್ಕೆ, ಶಾಸ್ತ್ರಿಗಳ ವೈದಿಕತನಕ್ಕೆ ಅಪಚಾರ ಎಂದು ಹಲವರು ಆಕ್ಷೇಪಿಸಿದರು. ಆ ಕಾಲ ಹಾಗಿತ್ತು. ಈಗ ಹಾಗಿಲ್ಲ ಎನ್ನಿ, ಈ ಆಕ್ಷೇಪಣೆ ಕರ್ಣಾಕರ್ಣಿಯಾಗಿ ದೇವುಡು ಅವರ ಕಿವಿಗೆ ಬಿತ್ತು. ಆಗ ಬೆಂಗಳೂರು ಶಂಕರಮಠದಲ್ಲಿ ವೇದಾಭ್ಯಾಸ ಮಾಡುತ್ತಿದ್ದ ಶಾಸ್ತ್ರಿಗಳು ತಮಗೆ ಮೀಮಾಂಸಾ ಶಾಸ್ತ್ರ ಬೋಧಿಸುತ್ತಿದ್ದ ಪ್ರಕಾಂಡಪಂಡಿತ, ಪರಿಶುದ್ಧ ಸಂಪ್ರದಾಯವಾದಿ, ಸನಾತನ ಮಾನವಧರ್ಮಾಚಾರ್ಯ, ಮೀಮಾಂಸಾರತ್ನ ಬಿರುದಾಂಕಿತರಾದ, ತಮ್ಮ ಗುರುಗಳಾದ ಪರಮಪೂಜ್ಯ ವೈದ್ಯನಾಥ ಶಾಸ್ತ್ರಿಗಳನ್ನು ಈ ಬಗ್ಗೆ ಏನು ಮಾಡಬೇಕೆಂದು ಕೇಳಿದರು. ಆಗ ಶಿಷ್ಯನಿಗೆ ವೈದ್ಯನಾಥಶಾಸ್ತ್ರಿಗಳು ಹೇಳಿದ ಮಾತುಗಳು ಇಂದಿಗೂ ಆದರ್ಶಪ್ರಾಯವಾಗಿವೆ; ಅಂಥಾ ಕಟ್ಟಾವೈದಿಕ ಸಂಪ್ರದಾಯವಾದಿ, ಆದರೆ ನಿಜವಾದ ಮಾನವತಾವಾದಿ ವೈದ್ಯನಾಥಶಾಸ್ತ್ರಿಗಳು ಶಾಸ್ತ್ರಿಗಳಿಗೆ ಹೇಳಿದ ಮಾತಿದು: "ಕ್ರಿಸ್ತನು ನಿಮ್ಮ ಮನೆಗೆ ಬಂದಿದ್ದರೆ ಹೇಗೆ ಗೌರವಿಸಿ ಸ್ವಾಗತಿಸುತ್ತಿದ್ದೆಯೋ ಹಾಗೆಯೇ ಮಾಡು" ಈ ಮಾತನ್ನು ದೇವುಡು ಅವರು ತಮ್ಮ ನೋಟ್ ಬುಕ್ಕಿನಲ್ಲಿ ಸ್ವಹಸ್ತಾಕ್ಷರದಲ್ಲಿ ಬರೆದಿಟ್ಟಿದ್ದಾರೆ.

ಅನಂತರ ಗುರುಭಕ್ತರಾದ ದೇವುಡು ಅವರು ಉತ್ತಂಗಿಯವರನ್ನು "ಅತಿಥಿ ದೇವೋಭವ" ಎಂಬ ಉಪನಿಷತ್ತಿನ ವಾಕ್ಯದಂತೆ, ಅತಿಥಿಯನ್ನು ದೇವರೆಂದು ಭಾವಿಸಿ ಸ್ವಾಗತಿಸಿ ಸತ್ಕರಿಸಿದರು. ಅರ್ಘ್ಯಪಾದ್ಯಾದಿಗಳಿಂದ ಬರಮಾಡಿಕೊಂಡು ಕುಶಲ ವಿಚಾರಿಸಿ ದೇವರನ್ನು ನಮ್ಮಲ್ಲಿ ಪೂರ್ವಾಭಿಮುಖವಾಗಿ ಕೂಡಿಸುತ್ತೇವೆ. ಹಾಗೆ ಉತ್ತಂಗಿ ಅವರನ್ನು ದೇವದಿಕ್ಕಿನಲ್ಲಿ ಊಟಕ್ಕೆ ಪೂರ್ವಾಭಿಮುಖವಾಗಿ ಕೂಡಿಸಿದರು. "ನಮ್ಮ ಮನೆಗೆ ಇಂದು ಸಾಕ್ಷಾತ್ ಏಸುಕ್ರಿಸ್ತನೇ ನಿಮ್ಮ ರೂಪದಲ್ಲಿ ಬಂದಿದ್ದಾನೆ" ಎಂದರು. ಆಗ ಉತ್ತಂಗಿ ಹೇಳಿದರು. "ನಾನು ಏಸುಭಕ್ತ ಅಷ್ಟೆ, ಏಸು ಪ್ರತಿನಿಧಿ ಅಲ್ಲ." ಅದಕ್ಕೆ ದೇವುಡು "ನಮ್ಮಲ್ಲಿ ಭಗವಂತ ಭಕ್ತಪರಾಧೀನ, ಭಕ್ತನ ಮೂಲಕ ಭಗವಂತನ ಸಾನ್ನಿಧ್ಯ ಕಾಣುವುದು ನಮ್ಮ ಸಂಪ್ರದಾಯ

ಪದ್ಧತಿ. ಅದಕ್ಕೇನೆ ದೇವಸ್ಥಾನಗಳಲ್ಲಿ ಗರುಡಗಂಬ ಅಥವಾ ನಂದಿಯನ್ನು ದರ್ಶಿಸಿದ ನಂತರವೇ ವಿಷ್ಣು ಅಥವಾ ಶಿವನ ದರ್ಶನ" ಎಂದರು. ದೇವುಡು ಅವರು ವೇದಸಾಹಿತ್ಯದ ಹಾಗೇ ಕ್ರಿಸ್ತಸಾಹಿತ್ಯವನ್ನು, ಬೈಬಲ್ಲನ್ನು ಚೆನ್ನಾಗಿ ಅಭ್ಯಾಸ ಮಾಡಿದವರಾಗಿದ್ದರು. ಧರ್ಮ ತಿಳಿಯಲು ಕುಲಜಾತಿ ಭೇದಗಳಿಲ್ಲ, ಯೇಸು, ವಿಚಾರಣೆ ಮುಂತಾದ ಕ್ರಿಸ್ತನನ್ನು ಕುರಿತ ನಾಟಕಗಳನ್ನು ಕನ್ನಡದಲ್ಲಿ ದೇವುಡು ರಚಿಸಿದ್ದಾರೆ. ಸರ್ವಧರ್ಮ ಸಮಭಾವವನ್ನು ಕೇವಲ ಭಾಷಣ, ಲೇಖನಗಳಿಗೆ ಮೀಸಲಿಟ್ಟವರಲ್ಲ, ಆಚರಣೆಯಲ್ಲಿ ತಂದುಕೊಂಡವರು ದೇವುಡು ಅವರು.

ದೇವುಡು ಅವರು ವೇದಶಾಸ್ತ್ರ ಸಂಪನ್ನ ರಾಜಪುರೋಹಿತರ ಮನೆತನಕ್ಕೆ ಸೇರಿದವರು. ದೇವುಡು ಎಂಬುದು ಮನೆತನದ ಹೆಸರು. ಈ ಮನೆತನದಲ್ಲಿ ಹತ್ತಾರು ಮಂದಿ ಹಿರಿಯರು ವಿದ್ವಾಂಸರು ಆಗಿಹೋಗಿದ್ದಾರೆ. ಈ ವಂಶದಲ್ಲಿ ಪೂರ್ವಿಕರಲ್ಲಿ ಯಾರೋ ಒಬ್ಬರಿಗೆ ದೇವರು ಪ್ರತ್ಯಕ್ಷವಾಗಿದ್ದನಂತೆ! ಅದರಿಂದ ದೇವುಡು ಎಂಬ ಹೆಸರು ಮನೆತನಕ್ಕೆ ಬಂದಿತಂತೆ! ಇಂಥ ಭವ್ಯ ಪರಂಪರೆಯ ಮನೆತನಕ್ಕೆ ಸೇರಿದ ದೇವುಡು ಅವರು ೨೯ ಡಿಸೆಂಬರ್ ೧೮೯೬ರಲ್ಲಿ ಸುಬ್ಬಮ್ಮ ಕೃಷ್ಣಶಾಸ್ತ್ರಿ ದಂಪತಿಗಳಿಗೆ ಎರಡನೆಯ ಮಗನಾಗಿ ಜನಿಸಿದರು. ಹೆಂಡತಿ ಗೌರಮ್ಮ ಸಾಧ್ವೀ ಶಿರೋಮಣಿ, ಆದರ್ಶ ಸತಿ. ೬ ಜನ ಹೆಣ್ಣುಮಕ್ಕಳು ೩ ಜನ ಗಂಡು ಮಕ್ಕಳು. ಗಂಡು ಮಕ್ಕಳ ಪೈಕಿ ಮೊದಲ ಮಗ ರಾಮು ಕುವೆಂಪು ಅವರ ಪ್ರಿಯಶಿಷ್ಯ, ಪ್ರತಿಭಾವಂತ ಸಾಹಿತಿ ಆಗಿದ್ದರು. ಗಂಗಾಧರ, ಸದಾಶಿವ, ಉದ್ಯಮರಂಗದಲ್ಲಿ ಪ್ರಸಿದ್ಧರಾಗಿದ್ದಾರೆ. ತುಂಬುಸಂಸಾರದ ಸದ್ಗೃಹಸ್ಥ ದೇವುಡು ಈಸಬೇಕು ಇದ್ದು ಜೈಸಬೇಕು ಎಂಬಂತೆ ಸಂಸಾರದಲ್ಲೇ ಸಂನ್ಯಾಸಿಗಳಾಗಿ, ಅವಧೂತರಾಗಿ, ವೇದಾಂತಿಗಳಾಗಿ, ಸಾಹಿತಿಗಳಾಗಿ ಸಾರ್ವಜನಿಕ ಸೇವಾಧುರಂಧರರಾಗಿ ಬಾಳಿದರು. ಬಸವಣ್ಣನವರು ಹೇಳುವಂತೆ ಇಲ್ಲಿಯೂ ಸಲ್ಲುವವರು ಆದರು; ಅಲ್ಲಿಯೂ ಸಲ್ಲುವವರಾದರು.

ದೇವುಡು ಅವರು ವಿದ್ಯಾರ್ಥಿ ಜೀವನದಲ್ಲಿದ್ದಾಗಲೇ ಪ್ರತಿಭಾವಂತರಾಗಿದ್ದರು. ಜ್ಞಾನದಾಹಿಗಳಾಗಿದ್ದರು; ಪ್ರಚಂಡ ವಿದ್ಯಾರ್ಥಿ ಎನಿಸಿದ್ದರು. ಆಟಪಾಟಗಳಲ್ಲಿ ಗ್ರಂಥಾಭ್ಯಾಸಗಳಲ್ಲಿ ಜತೆಯವರನ್ನೆಲ್ಲ ಮೀರಿಸಿದ್ದರು. ಮೈಸೂರಿನಲ್ಲಿ ಆಗ ಅವರಿಗಿದ್ದ ಸಾಹಿತ್ಯಿಕ, ಸಾಮಾಜಿಕ, ಕೌಟುಂಬಿಕ, ಧಾರ್ಮಿಕ, ವಾತಾವರಣ ಇವರನ್ನು ರೂಪಿಸಿತು. ಅವರು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ ಆಗಿದ್ದಾಗ ಒಂದು ಘಟನೆ ನಡೆಯಿತು.

ಮೈಸೂರಿನಲ್ಲಿ ಅವರಿದ್ದ ಬೀದಿಯಲ್ಲಿ ಸಂಧ್ಯಾಸಂಘವೆಂಬ ಮಹಿಳಾ ಸಂಘವೊಂದಿತ್ತು. ಅಲ್ಲಿ ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಮಹಿಳೆಯರು

ಸೇರಿ ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದರು. ಕುಶಾಗ್ರಮತಿ ಬಾಲಕ ದೇವುಡು ಅಲ್ಲಿಗೆ ಹೋಗುತ್ತಿದ್ದರು. ಅವನ ಕೈಲಿ ಹಾಡುಗಳನ್ನು ಹೇಳಿ ಬರೆಯಿಸುತ್ತಿದ್ದರು. ಒಮ್ಮೆ ಆ ಸಂಘದಲ್ಲಿ ಚರ್ಚೆಗೆ ಸವಾಲು ಹೀಗಿತ್ತು: ಕೃಷ್ಣನು ಕೊಳಲು ಊದಿದಾಗ ಬೃಂದಾವನದಲ್ಲಿ ಇದ್ದ ಒಣಗಿದ ಗಿಡ ಮರಗಳೆಲ್ಲ ಚಿಗುರಿದವಲ್ಲ. ಅವನ ಕೈಲಿದ್ದ ಬಿದಿರಿನ ಕೊಳಲು ಒಣಗಿತ್ತು. ಅದೇಕೆ ಚಿಗುರಲಿಲ್ಲ?

ಆಗ ಆ ಮಹಿಳಾಮಣಿಗಳ ನಡುವೆ ಇದ್ದ ಬಾಲಕ ದೇವುಡು ಹೇಳಿದ; "ಇದೇನು ಮಹಾ ದೊಡ್ಡ ಪ್ರಶ್ನೆ. ತಾನು ಚಿಗುರಿದರೆ ತನ್ನನ್ನು ಕೃಷ್ಣ ಎಸೆದು ಬಿಡುತ್ತಾನೆ. ಏಕೆಂದರೆ ನುಡಿಸಲು ಬರುವುದಿಲ್ಲವಲ್ಲಾ ಎಂದು ಕೃಷ್ಣನ ಕೈಲಿದ್ದ ಕೊಳಲು ಹೆದರಿಕೊಂಡು ಚಿಗುರಲಿಲ್ಲ."

ಮಾಧ್ಯಮಿಕ ಶಾಲಾ ವಿದ್ಯಾರ್ಥಿ ಆಗಿದ್ದಾಗಲೇ ರಾಮಾಯಣ, ಭಾರತ, ಭಾಗವತ, ಬ್ರಹ್ಮಾಂಡಪುರಾಣಗಳನ್ನು ಇತರರಿಗೆ ಓದಿ ಹೇಳುವುದರ ಮೂಲಕ ಪರಿಚಯ ಮಾಡಿಕೊಂಡ ದೇವುಡು ಹೈಸ್ಕೂಲ್ ವಿದ್ಯಾರ್ಥಿ ಆಗುವ ವೇಳೆಗೆ ಕನ್ನಡಪರಿಣಿತ ಆಗಿದ್ದರು. ಶಬ್ದಮಣಿದರ್ಪಣ, ನಾಗವರ್ಮನ ಛಂದೋಂಬುಧಿ ಮುಂತಾದ ಗ್ರಂಥಗಳನ್ನು ಅರಗಿಸಿಕೊಂಡು, ಎಫ್.ಎ. ಬಿ.ಎ ವಿದ್ಯಾರ್ಥಿಗಳಿಗೆ ಈ ಹೈಸ್ಕೂಲು ಬಾಲಕ ಪಾಠ ಹೇಳುತ್ತಿದ್ದ.

೧೯೧೨ರ ವೇಳೆಗೆ ವಿದ್ಯಾರ್ಥಿದೆಸೆಯಲ್ಲೇ **ಸಾಹಸವರ್ಮ** ಎಂಬ ಕಾದಂಬರಿ ಬರೆದಿದ್ದನು, ರತ್ನಾವಳಿ, ಕಂಸ ವಿಜಯ ನಾಟಕಗಳನ್ನು ಬರೆದ ರಾಜಕವಿ ಶ್ರೀನಿವಾಸ ಅಯ್ಯಂಗಾರ್ ಅವರಿಂದ ನಾಟಕರಚನೆ, ಪದ್ಯರಚನೆ ಕಲಿತು ನಾಟಕ ಬರೆದು ಹುಡುಗರಿಂದ ಆಡಿಸಿದ್ದನು. ಪ್ರತಿಭಾವಂತ ಬಾಲಸಾಹಿತಿ ಎನಿಸಿಕೊಂಡಿದ್ದನು.

೧೯೧೭ರಿಂದ ೧೯೨೫ ವರೆಗೆ ಕಾಲೇಜು ವಿದ್ಯಾಭ್ಯಾಸ ಮಾಡಿ ಎಂ.ಎ. ಪದವಿ ಗಳಿಸಿದ ದೇವುಡು ಅವರು ವಿಸೀ ಅವರ ಸಹಪಾಠಿಗಳಾಗಿದ್ದರು. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಸಾಹಿತ್ಯ, ವೇದಾಂತಗಳಲ್ಲಿ ಕನ್ನಡ ತೆಲುಗು, ಇಂಗ್ಲಿಷ್-ಸಂಸ್ಕೃತಗಳಲ್ಲಿ ಚತುರ್ಭಾಷಾ ಪಂಡಿತರಾಗಿದ್ದು ಆ ಕಾಲದ ಅದ್ಭುತ ವಾಗ್ಝರಿಯ ವಾಗ್ಮಿಗಳಲ್ಲಿ ಒಬ್ಬರಾಗಿದ್ದರು. ೧೯೨೫ರ ವೇಳೆಗೆ ಮೈಸೂರಿನಲ್ಲಿ ಸದ್ವಿದ್ಯಾ ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಉದ್ಯೋಗಿಗಳಾದ ಅವರು ತಿರುಮಲೆ ತಾತಾಚಾರ್ಯ ಶರ್ಮ, ಸಿದ್ದವನಹಳ್ಳಿ ಕೃಷ್ಣಶರ್ಮರ ಕರೆಯ ಮೇರೆಗೆ ಬೆಂಗಳೂರಿಗೆ ಬಂದರು. ಅನಂತರ ಜೀವನಪರ್ಯಂತ ೨೭-೧೦-೧೯೬೨ರಲ್ಲಿ ನಿಧನರಾಗುವವರೆಗೆ ಬೆಂಗಳೂರುವಾಸಿಗಳೇ ಆಗಿದ್ದರು.

ಬೆಂಗಳೂರಿಗೆ ಬರುವ ಮುಂಚೆ ಸ್ವಲ್ಪಕಾಲ ಶೃಂಗೇರಿಮಠದ ಸೇವೆಯಲ್ಲಿದ್ದರು. ಆಗ ಸ್ವತಂತ್ರಪ್ರವೃತ್ತಿಯ ಸ್ವಾಭಿಮಾನಿ ದೇವುಡು ಕಲಿತ ಪಾಠವೆಂದರೆ "ಯಾರ ಕೈ ಕೆಳಗೂ ಕೆಲಸ ಮಾಡಬಾರದು. ಹಾಗೆ ಮಾಡುವುದು ನನ್ನ ಜಾಯಮಾನವಲ್ಲ" ಈ ನಿರ್ಧಾರದಿಂದ ಅವರು ಮುಂದೆ ಜೀವನದಲ್ಲಿ ಎಂಥೆಂಥ ಉನ್ನತಹುದ್ದೆಗಳನ್ನು ಅಲಂಕರಿಸುವ ಸುವರ್ಣಾವಕಾಶಗಳು ಬಂದರೂ ಅವುಗಳನ್ನು ಸ್ವೀಕರಿಸಲಿಲ್ಲ. ಒಂಟಿ ಸಲಗದಂತೆ ಸ್ವತಂತ್ರರಾಗಿಯೇ ಉಳಿದರು. ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ದೇವುಡು ಅವರ ಸಲಹೆಯ ಮೇರೆಗೆ ಸ್ಥಾಪಿಸಿದಾಗ ಅದಕ್ಕೆ ಅವರೇ ನಿರ್ದೇಶಕರಾಗಲು ಸೂಚಿಸಿದರು. ಆದರೆ ದೇವುಡು ಅವರು ಸಿ.ಕೆ.ವೆಂಕಟರಾಮಯ್ಯನವರನ್ನು ಆ ಜಾಗಕ್ಕೆ ಸೂಚಿಸಿದರು.

ದೇವುಡು ಅವರು ಶಿಕ್ಷಣತಜ್ಞರು, ಮಕ್ಕಳಪ್ರೇಮಿ; ಮಕ್ಕಳಸಾಹಿತಿಯಾಗಿ ಬಾಳನ್ನು ಕಳೆದವರು. ಆದರ್ಶ ಅಧ್ಯಾಪಕರು ಅವರು. ಅವರ ಮಕ್ಕಳಪ್ರೇಮ ಎಷ್ಟಿತ್ತು ಎಂದರೆ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಗಳಿಗೆ ಬರುತ್ತಿದ್ದಾಗಲೆಲ್ಲ ಪರಿಷತ್ತಿನ ಬಳಿ ಇದ್ದ, ಆರ್. ಕಲ್ಯಾಣಮ್ಮ ಸ್ಥಾಪಿಸಿದ ಮಕ್ಕಳಕೂಟಕ್ಕೆ ತಾವಾಗಿ ಬಂದು ಮಕ್ಕಳಿಗೆ ಕಥೆ ಹೇಳುತ್ತಿದ್ದರು. ಈ ರೀತಿ ತಾವಾಗಿ ಬಂದು ಮಕ್ಕಳಿಗೆ ಕಥೆ ಪದ್ಯ, ನಾಟಕ ಹೇಳುತ್ತಿದ್ದ ಮಕ್ಕಳ ಸಾಹಿತಿಗಳೆಂದರೆ ಜಿ.ಪಿ.ರಾಜರತ್ನಂ, ಬಿ.ಶ್ರೀ.ಪಾಂಡುರಂಗರಾವ್ ಮತ್ತು ಹೊಯಿಸಳ ಅವರು. ೧೯೩೦ರಲ್ಲಿ ಒಮ್ಮೆ ದೇವುಡು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಬಳಿ ನಿಂತಿದ್ದರು. ಆಗ ಅಲ್ಲೊಂದು ವಿದ್ಯಾರ್ಥಿಗಳ ಮೆರವಣಿಗೆ ಬರುತ್ತಿತ್ತು. ಬೆಂಗಳೂರಿನ ನ್ಯಾಷನಲ್ ಸ್ಕೂಲ್ ಅದುವರೆಗೆ ಹೊಸತರಗು ಪೇಟೆ (ಮಂಡಿಪೇಟೆ)ಯಲ್ಲಿ ಬಾಡಿಗೆ ಕಟ್ಟಡದಲ್ಲಿತ್ತು. ಈಗಿರುವ ನ್ಯಾಷನಲ್ ಸ್ಕೂಲಲ್ಲಿ ಹೊಸ ಹೆಂಚಿನ ಕಟ್ಟಡ ನಿರ್ಮಾಣವಾಗಿ ಅಲ್ಲಿಗೆ ಶಾಲೆಯನ್ನು ಬದಲಾಯಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲ ಸರಸ್ವತಿಪಠ ಹಿಡಿದು ಮಂಗಳವಾದ್ಯಗಳೊಡನೆ ಶಾಲೆಯ ಸಾಮಗ್ರಿ ಹೊತ್ತು ಹೊಸಕಟ್ಟಡಕ್ಕೆ ಮೆರವಣಿಗೆ ಹೊರಟಿದ್ದರು.

ಪರಿಷತ್ತಿನ ಮುಂದೆ ವಿದ್ಯಾರ್ಥಿಗಳ ಮೆರವಣಿಗೆ ಬಂದಾಗ ದೇವುಡು ಅವರಿಗೆ ವಿಷಯ ತಿಳಿಯಿತು. ಓದುವ ಮಕ್ಕಳಿಗೆ ಸ್ವಂತ ಮನೆ-ಕಟ್ಟಡ ಸಿಕ್ಕಿತಲ್ಲಾ ಎಂಬ ಸಂತೋಷದಿಂದ ಆನಂದಪರವಶರಾದರು. ಅವರಿಗೆ ಸಂತೋಷ ಎಷ್ಟು ಉಕ್ಕಿ ಹರಿಯಿತು ಎಂದರೆ ಜತೆಯಲ್ಲಿದ್ದ ಮಿತ್ರರನ್ನು ಕುರಿತು "ನಮಗೆ ಮನೆ ಇದ್ದರೆ ನಮ್ಮ ಮಕ್ಕಳಿಗೆ ಸಂತೋಷ. ಶಾಲೆಗೆ ಕಟ್ಟಡ ಸಿಕ್ಕರೆ ದೇಶದ ಎಲ್ಲ ಮಕ್ಕಳಿಗೆ ಸಂತೋಷ, ನಾಡಿಗೆ ಭಾಗ್ಯ. ಇದಕ್ಕಿಂತ ಆನಂದ ಇನ್ನೇನಿದೆ ಹೇಳಿ" ಎಂದವರೇ ಅಲ್ಲೇ ರಸ್ತೆ ಬದಿಯಲ್ಲಿ ಕೈಗಾಡಿ ತುಂಬ ದ್ರಾಕ್ಷಿಯನ್ನಿಟ್ಟುಕೊಂಡು ವ್ಯಾಪಾರ

ಮಾಡುತ್ತಿದ್ದ ವ್ಯಾಪಾರಿಯನ್ನು ಕಂಡು, ಎಷ್ಟು ಬುಟ್ಟಿ ದ್ರಾಕ್ಷಿ ಇದೆ ಎಂದು ಕೇಳಿ. ಅವನಲ್ಲಿದ್ದ ಬುಟ್ಟಿಗಳ ದ್ರಾಕ್ಷಿಯಷ್ಟನ್ನೂ ಕೊಂಡು, ಗಾಡಿಯನ್ನೇ ಖಾಲಿ ಮಾಡಿದರು. ಆ ಬುಟ್ಟಿ ಬುಟ್ಟಿ ದ್ರಾಕ್ಷಿಯನ್ನು ವಿದ್ಯಾರ್ಥಿಗಳಿಗೆಲ್ಲ ಕೈತುಂಬ ಹಂಚಿ ಸಂತೋಷಪಟ್ಟವರು ದೇವುಡು ಅವರು. ಆದರ್ಶ ವಿದ್ಯಾರ್ಥಿಪ್ರೇಮಿ ಆದ ಅವರು ಆದರ್ಶ ಶಾಲಾಸ್ಥಾಪಕರೂ ಹೌದು. ೧೯೪೨ರಲ್ಲಿ ಗಾಂಧೀನಗರ ಪ್ರೌಢಶಾಲೆ ಸ್ಥಾಪಿಸಿದರು. ಬೆಟಗೇರಿ ಕೃಷ್ಣಶರ್ಮ, ಗೋಪಾಲಕೃಷ್ಣ ಅಡಿಗ, ಹೆಚ್.ಎಸ್.ದೊರೆಸ್ವಾಮಿ ಮೊದಲಾದ ಪ್ರಸಿದ್ದರೆಲ್ಲ ಅಲ್ಲಿ ಅಧ್ಯಾಪಕರಾಗಿ ದೇವುಡು ನೇತೃತ್ವದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಹೇಳಿದ್ದಾರೆ.

ಪಠ್ಯಪುಸ್ತಕ ಸಮಿತಿಗಳಲ್ಲಿದ್ದು ಪಠ್ಯಪುಸ್ತಕ ರಚಿಸಿದ್ದಾರೆ. ಸಂಸ್ಕೃತ ಕಲಿಯುವ, ಇಂಗ್ಲಿಷ್ ಕನ್ನಡ ಕಲಿಯುವ ವಿನೂತನ ಗ್ರಂಥಗಳನ್ನು, ಭಾಷಾಂತರ ಗ್ರಂಥಗಳನ್ನು ರಚಿಸಿದ್ದಾರೆ. ಪರೀಕ್ಷಾ ಸಮಿತಿಗಳಲ್ಲಿ, ಗ್ರಂಥ ಪ್ರಕಟನ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ನಾಡಿನಲ್ಲಿ ಶಿಕ್ಷಣರಂಗದಲ್ಲಿ ಆದರ್ಶ ರೀತಿಯಲ್ಲಿ ಶಿಕ್ಷಣರಂಗದಲ್ಲಿ ಸೇವೆ ಸಲ್ಲಿಸಿದ ಶಿಕ್ಷಣತಜ್ಞರಲ್ಲಿ ದೇವುಡು ಅವರ ಕೊಡುಗೆ ಅನನ್ಯವಾದುದು.

ಸ್ವಾತಂತ್ರ್ಯಪೂರ್ವದಲ್ಲಿ ಪತ್ರಿಕೆ ನಡೆಸಿ, ಸಂಘ ಕಟ್ಟಿ, ಮಕ್ಕಳೊಡನೆ ಬೆರೆತು ಅವರಿಗೆ ಕಥೆ ಹೇಳಿ, ಪದ್ಯ ಹಾಡಿ, ನಾಟಕ ಬರೆದು, ಮಕ್ಕಳ ನಡುವೆ ಮಕ್ಕಳಾಗಿ ಮಕ್ಕಳಿಗೆ ಸೇವೆ ಸಲ್ಲಿಸಿದವರ ಪೈಕಿ ಮಹಿಳಾ ಸಾಹಿತಿಗಳಲ್ಲಿ ಶ್ರೀಮತಿ ಆರ್.ಕಲ್ಯಾಣಮ್ಮನವರೂ, ಪುರುಷ ಸಾಹಿತಿಗಳಲ್ಲಿ ದೇವುಡು ಅವರೂ ಅಗ್ರಗಣ್ಯರು. ದೇವುಡು ಅವರು ಬರೆದ ೧೦೦ಕ್ಕೂ ಹೆಚ್ಚು ಕಥೆಗಳ ಮಕ್ಕಳಪುಸ್ತಕಗಳನ್ನು ಓದಿ ಬೆಳೆದ ಇಂದಿನ ಕಾಲದ ಎಲ್ಲ ಹಿರಿಯರು ಸಾಹಿತಿಗಳು ಗಣ್ಯರು ಆಗಿದ್ದಾರೆ. ಅವರ ದೇಶಾಂತರ ಕಥೆಗಳು, ಬುದ್ಧಿಯ ಕಥೆಗಳು, ಮಂಗಪ್ಪಾಜಿ ಪುರಾಣ, ಯವನ ಪುರಾಣ, ಭೀಮಸೇನ ಬೆಕ್ಕು, ಕಂದನ ಕಥೆಗಳು ಮುಂತಾದವನ್ನು ಓದಿ ನಕ್ಕು ನಲಿಯದ ಮಕ್ಕಳೇ ಆ ಕಾಲದಲ್ಲಿ ಇರಲಿಲ್ಲ.

ಯುವಕರಾದವರಿಗೆ ರಾಮಾಯಣದ ಮಹಾಪುರುಷರು, ಭಾರತದ ಮಹಾಪುರುಷರು, ಪಂಚತಂತ್ರ, ಕಥಾಸರಿತ್ಸಾಗರ ಗ್ರಂಥಗಳು ಖುಷಿಯ ಮೇಲೆ ಖುಷಿ ಕೊಟ್ಟವು.

ಹಿರಿಯರಿಗಂತೂ ಅವರ ಕಾದಂಬರಿಗಳು ರಸಗವಳಗಳಾಗಿದ್ದವು. ಅಂತರಂಗ, ಮಯೂರ, ಮಲ್ಲಿ, ಚಿನ್ನ, ಡಾ.ವೀಣಾ, ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ ಕಾದಂಬರಿಗಳನ್ನು ಒಂದು ಸಲ ಅಲ್ಲ, ಹತ್ತಾರು ಸಲ ಓದಿದ ಓದುಗರೇ ಹೆಚ್ಚು, ಮಹಾಬ್ರಾಹ್ಮಣ ಕಾದಂಬರಿಯಂಥ ಕಾದಂಬರಿ ಕನ್ನಡದಲ್ಲೇ

ಇನ್ನೊಂದಿಲ್ಲ. ಅಂಥ ರೀತಿಯಲ್ಲಿ ನಾನೊಂದು ಕಾದಂಬರಿ ಬರೆಯಬೇಕೆಂಬ ಆಸೆಯಿಂದ **ಬೆಳಕು ತಂದ ಬಾಲಕ** ಎಂಬ ನಚಿಕೇತನನ್ನು ಕುರಿತು ತ.ರಾ.ಸು ಕಾದಂಬರಿ ಬರೆದಾಗ ಹೆಜ್ಜೆ ಹೆಜ್ಜೆಗೂ ದೇವುಡು ಅವರಿಂದ ಆಶೀರ್ವಾದ, ಮಾರ್ಗದರ್ಶನ ಪಡೆದು ಬರೆದರು. ಧಾರ್ಮಿಕ ಕಾದಂಬರಿ ಬರೆಯುವವರಿಗೆ ಪರಮಗುರು ದೇವುಡು. "**ಮಕ್ಕಳ ಪುಸ್ತಕ**" ಮತ್ತು "**ನಮ್ಮ ಪುಸ್ತಕ**" ಪತ್ರಿಕೆಗಳ ಮೂಲಕ ಮಕ್ಕಳಿಗೆ ಅವರು ಸಲ್ಲಿಸಿದ ಸೇವೆ ಇಂದಿಗೂ ನಮ್ಮ ಜನರಿಗೆ ಮಾದರಿ ಆಗಿದೆ. ದೇವುಡು ಅವರು ಮಕ್ಕಳ ಪತ್ರಿಕೆ ಹೊರಡಿಸಿದ ಹಾಗೆ ನಮ್ಮ ನಾಡಿನಲ್ಲಿ ಯಾರೂ ಹೊರಡಿಸಿಲ್ಲ ಎಂದರೆ ಸತ್ಯದ ಮಾತು. ಅವರು **ನಮ್ಮ ಪುಸ್ತಕ** ಮಾಸಪತ್ರಿಕೆಯಲ್ಲಿ ૩ ಭಾಗ ಮಾಡಿದ್ದರು. ಬಾಲಕರ ವಿಭಾಗ, ವಿದ್ಯಾರ್ಥಿ ವಿಭಾಗ, ತಾಯಿತಂದೆ ವಿಭಾಗ, ಚಿಕ್ಕ ಮಕ್ಕಳಿಗೆ ನರ್ಸರಿ, ಮಕ್ಕಳಿಗೆ ಚಿತ್ರಕಥೆ, ಅಕ್ಷರ ಪರಿಚಯ, ಚಿತ್ರ ಲಿಪಿ, ದಾರಿ ಹುಡುಕು, ಪುಟ್ಟ ಕಥೆ, ಚುಟುಕ ಪದ್ಯ ಇತ್ಯಾದಿ ಇರುತ್ತಿದ್ದವು. **ಪ್ರೌಢಶಾಲಾ ವಿದ್ಯಾರ್ಥಿ ವಿಭಾಗ**ದಲ್ಲಿ ಕಥೆ, ಪದ್ಯ, ನಾಟಕ, ಪ್ರಬಂಧ, ವಿಜ್ಞಾನ, ಶಿಕ್ಷಣ ಲೇಖನಗಳಿರುತ್ತಿದ್ದವು. **ತಾಯಿ ತಂದೆ ವಿಭಾಗ**ದಲ್ಲಿ ಮಕ್ಕಳ ಬಗ್ಗೆ, ಶಿಕ್ಷಣದ ಬಗ್ಗೆ ತಾಯಿ ತಂದೆಯರ ಕರ್ತವ್ಯದ ಬಗ್ಗೆ ಲೇಖನಗಳಿರುತ್ತಿದ್ದವು. ಹೀಗೆ ಸರ್ವಾಂಗಪೂರ್ಣವಾಗಿ ಮನೆಮಂದಿಗೆಲ್ಲ ಮಕ್ಕಳಿಂದ ಕುಟುಂಬದ ಹಿರಿಯರಿಗೆಲ್ಲ ಬೇಕಾಗಿದ್ದ, ನಿಜವಾದ ಅರ್ಥದಲ್ಲಿ ಕೌಟುಂಬಿಕ ಮಕ್ಕಳ ಪತ್ರಿಕೆ **ನಮ್ಮ ಪುಸ್ತಕ** ಆಗಿತ್ತು. ಉದಾಹರಣೆಗೆ, ಎಂಥ ನಾಗರಿಕ ಶಿಕ್ಷಣದ ಮಾತುಗಳು ಆ ಪತ್ರಿಕೆಯಲ್ಲಿ ತಾಯಿ ತಂದೆಯರಿಗೆ ಹೇಳುತ್ತಿದ್ದರು ಎಂದರೆ ೧೯೩೭ನೇ ಅಕ್ಟೋಬರ್ **ನಮ್ಮ ಪುಸ್ತಕ** ಸಂಚಿಕೆಯಲ್ಲಿ ಹೇಳಿದ ಮಾತುಗಳನ್ನು ಗಮನಿಸಬೇಕು:

"ಮಕ್ಕಳಿಗೆ ಮೊದಲಿನಿಂದಲೂ ಕಸವನ್ನು ಬಿಸಾಡುವುದರ ವಿಚಾರವಾಗಿ ಪಾಠ ಕಲಿಸಬೇಕು. ಮನೆಯಲ್ಲಿ ಒಂದು ಕಡೆ ಒಂದು ಪುಟ್ಟಿಯನ್ನು ಇಟ್ಟು, ಮನೆಯಲ್ಲಿ ಎಲ್ಲಿ ಕಸ ಬಿದ್ದರೂ ಆ ಪುಟ್ಟಿಗೆ ಹಾಕಬೇಕು. ಮನೆಯ ಪುಟ್ಟಿ ಕಸವನ್ನು ಮನೆಯ ಮುಂದಿನ ಬೀದಿಕಸವನ್ನು ರಸ್ತೆಯ ತೊಟ್ಟಿಯ ಒಳಗೆ ಹಾಕಿಸಬೇಕು. **ಮನೆಯಲ್ಲಿ ಬುಟ್ಟಿಗೆ ಕಸ ಬೀದಿಯಲ್ಲಿ ತೊಟ್ಟಿಗೆ ಕಸ** ಹಾಕಿಸುವುದನ್ನು ಮಕ್ಕಳಿಗೆ ಕಲಿಸಿದರೆ ಮುಂದಿನ ತಲೆಮಾರಿನವರಿಗೆ ಉಪಕಾರ ಮಾಡಿದಂತಾಗುತ್ತದೆ. ನಾಡಿನ ಋಣ ತೀರುತ್ತದೆ. ಊರಿನ ನೈರ್ಮಲ್ಯ, ಗೃಹನೈರ್ಮಲ್ಯ ಕಾಪಾಡಿ ಆರೋಗ್ಯರಕ್ಷಣೆ ಮಾಡುವುದು ಎಲ್ಲರ ಕರ್ತವ್ಯ. ಎಲ್ಲರಿಗೂ ಸೇರಿದ ಕೆಲಸವನ್ನು ಯಾರೂ ಅದು ನನ್ನ ಕೆಲಸ ಅಲ್ಲ ಎನ್ನಬಾರದು." ಮನೆ ಕಸ ಬುಟ್ಟಿಗೆ ರಸ್ತೆಕಸ ತೊಟ್ಟಿಗೆ ಎಂಬ ಅವರ ಮಾತು ಇಂದಿಗೂ ಆದರ್ಶದ ನುಡಿ ನಮ್ಮೆಲ್ಲರಿಗೆ. ಇನ್ನು ಅವರು ಈ ಪತ್ರಿಕೆಯ ಮೂಲಕ ಹಾಗೂ ತಾವೇ ಶಿಬಿರಗಳನ್ನು ನಡೆಸಿ

ಮಾಡಿದ, ಸಾಕ್ಷರತಾ ಪ್ರಚಾರ ಇಂದಿಗೂ ಮಾದರಿ ಆಗಿದೆ. ಅವರು ಮತ್ತು ಎಂ.ಆರ್.ಶ್ರೀ ಅವರು ನಮ್ಮ ನಾಡಿನಲ್ಲಿ ಅಕ್ಷರಪ್ರಚಾರವನ್ನು ಕೈಗೊಂಡ ಹಾಗೆ ಇನ್ನಾರೂ ಆ ಪ್ರಮಾಣದಲ್ಲಿ ನಡೆಸಿಲ್ಲ ಎಂದರೆ ಅತಿಶಯೋಕ್ತಿ ಅಲ್ಲ.

ಮೈಸೂರು ಅಕ್ಷರಪ್ರಚಾರ ಯೋಜನೆ ಮೂಲಕ ವಯಸ್ಕರ ಶಿಕ್ಷಣ ಪ್ರಾರಂಭಿಸಿದವರು ದೇವುಡು ಅವರು. ಮಕ್ಕಳಿಗೂ ಹಿರಿಯರಿಗೂ ಕೆಲವೇ ವಾರಗಳಲ್ಲಿ ಎಒದರಲ ಅಕ್ಷರಪದ್ಧತಿಯ ಮೂಲಕ, ಎಂದರೆ ಎಒದರಲ ೫ ಅಕ್ಷರಗಳ ಕಲಿಕೆಯ ಮೂಲಕ ಕನ್ನಡ ಓದು ಬರಹ ಕಲಿಸುವ ವಿನೂತನ ಪದ್ಧತಿಯನ್ನು ಕಂಡು ಹಿಡಿದು ನಾಡಿನಲ್ಲಿ ಸಾವಿರಾರು ಜನರನ್ನು ಅಕ್ಷರಸ್ಥರನ್ನಾಗಿ ಮಾಡಿದ ಹಿರಿಮೆ ದೇವುಡು ಅವರದು. ಅಕ್ಷರ, ಚಿತ್ರ, ಪದ, ವಾಕ್ಯ ಸಂಯೋಜನೆಯಲ್ಲಿ ಅವರು ಕನ್ನಡ ಕಲಿಸುವ ಪದ್ಧತಿಯನ್ನು ಅಳವಡಿಸಲು ಸ್ಥಾಪಿಸಿದ ಸಂಸ್ಥೆಯೇ ವಯಸ್ಕರ ಶಿಕ್ಷಣ ಇಲಾಖೆ. ದೇವುಡು ಅವರು ಈ ಪದ್ಧತಿಯನ್ನು ಬಳಕೆಗೆ ತಂದಾಗ ಸರ್ಕಾರದ ಅಧಿಕಾರಿಗಳು ಆಗಿನ ಕ್ಲೋಸ್‌ಪೇಟೆ ಈಗಿನ ರಾಮನಗರದಲ್ಲಿ ೨೭-೧೧-೧೯೩೯ರಲ್ಲಿ ದೇವುಡು ಅವರು ಹಲವು ವಾರಗಳಲ್ಲಿ ಕನ್ನಡ ಕಲಿಸಿದ ಶಿಬಿರಗಳನ್ನು ಪರೀಕ್ಷಿಸಿದ ಶಿಕ್ಷಣಾಧಿಕಾರಿಗಳಲ್ಲಿ ಆಗ ಸಲ್ಲಿಸಿದ ವರದಿ ಹೀಗಿದೆ:

"ಕ್ಲೋಸ್ಪೇಟೆಯಲ್ಲಿ ಕ್ಲಾಸುಗಳು ನಡೆದುದು ೧೯೩೯ರ ಸೆಪ್ಟೆಂಬರ್ ಆದಿಭಾಗದಲ್ಲಿ ೧೫ ದಿನಗಳು ಮಾತ್ರ. ಅಲ್ಲಿ ಇಬ್ಬರು ಮೈಸೂರು ಪದ್ಧತಿಯ ರೀಡರುಗಳನ್ನು ಬಲು ಚೆನ್ನಾಗಿ ಓದಿದರು. ಚನ್ನಪಟ್ಟಣದಲ್ಲಿ ಒಬ್ಬನು ಅದುವರೆಗೆ ನೋಡದೆ ಇದ್ದ ಪುಸ್ತಕವನ್ನು ಓದಿದನು. ಮತ್ತಿಕೆರೆಯ ಒಬ್ಬನು ಒಂದೂವರೆ ತಿಂಗಳು ಪಾಠವನ್ನು ಕಲಿತವನು ಡಿಪಾರ್ಟ್‌ಮೆಂಟಿನ ನಾಲ್ಕನೇ ರೀಡರನ್ನು ಧಾರಾಳವಾಗಿ ಓದಿದನು. ೧೦ ದಿನಗಳು ಮಾತ್ರ ಕ್ಲಾಸಿಗೆ ಬಂದಿದ್ದವನು, ಮೈಸೂರು ಪದ್ಧತಿಯ ರೀಡರನ್ನು ದಡದಡನೆ ಓದಿದನು ೬ ದಿನ ಮಾತ್ರ ಶಿಬಿರಕ್ಕೆ ಬಂದಿದ್ದ ಹರಿಜನ ಬಾಲಕನು (೧೪ ವರ್ಷ) ಬಾಲಬೋಧೆಯ ದಪ್ಪ ದಪ್ಪ ಅಕ್ಷರದ ಪಾಠಗಳನ್ನು ಓದಿದನು."

ಸರ್ಕಾರದವರು ನಾಡಿನಾದ್ಯಂತ ಶಿಬಿರಗಳನ್ನು ಮಾಡಿ ಜನರನ್ನು ಅಕ್ಷರಸ್ಥರನ್ನಾಗಿ ಮಾಡಲು ದೇವುಡು ಅವರನ್ನು ಪ್ರಾರ್ಥಿಸಿದರು. ಇಂದು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಸರ್ಕಾರಿ ಸಂಸ್ಥೆಗಳು ದೇವುಡು ಅವರ ಮೈಸೂರು ಅಕ್ಷರಪ್ರಚಾರ ಪದ್ಧತಿಯನ್ನು ಜಾರಿಗೆ ತಂದರೆ ನಾಡಿಗೆ ಕೋಟ್ಯಂತರ ರೂ. ಉಳಿಯುತ್ತದೆ. ಕನ್ನಡನಾಡಿನ ಮಕ್ಕಳು ನಿಜಕ್ಕೂ ಸರಿಯಾಗಿ ತಪ್ಪಿಲ್ಲದೆ ಕನ್ನಡ ಕಲಿಯುತ್ತವೆ. ದೇವುಡು ಹೇಳಿದ ಮಾತು

ನೆನೆಯಬೇಕು: "ಇಂದಿನ ಅಕ್ಷರಪ್ರಚಾರ ಮುಂದಿನ ಸಾಹಿತಿಗಳ ಕಾಮಧೇನು. ಅಷ್ಟೇ ಅಲ್ಲ, ನಾಡಿನ ಕಲ್ಯಾಣ ಅದರಲ್ಲಿ ಅಡಗಿದೆ." ದೇವುಡು ಅವರು ಕನ್ನಡಕ್ಕೆ ಶ್ರಮಿಸಿದಷ್ಟೇ ಸಂಸ್ಕೃತ ಭಾಷೆಗಾಗಿ ಶ್ರಮಿಸಿದ್ದಾರೆ. 'ಗೀತಾ ಪ್ರಚಾರ' ಅವರ ಜೀವನ ಧ್ಯೇಯಗಳಲ್ಲಿ ಒಂದಾಗಿತ್ತು. ಆಚಾರ್ಯತ್ರಯರ ಭಾಷ್ಯವುಳ್ಳ ಗೀತಾ ಗ್ರಂಥವನ್ನು ಉಚಿತವಾಗಿ ಉಡುಗೊರೆಯಾಗಿ ಪ್ರತಿಯೊಬ್ಬ ವಿಶ್ವವಿದ್ಯಾಲಯದ ಪದವೀಧರನಿಗೆ ನೀಡಬೇಕೆಂದು ಅವರ ಆಸೆ ಆಗಿತ್ತು. ಮಕ್ಕಳಿಂದ ಪಂಡಿತರವರೆಗೆ ಎಲ್ಲರಿಗೂ ಉಪಯುಕ್ತವಾಗುವ ಬೇರೆ ಬೇರೆ ಮಟ್ಟದ ಗೀತಾಗ್ರಂಥಗಳನ್ನು ರಚಿಸುವುದು ಅವರ ಹೆಬ್ಬಯಕೆ ಆಗಿತ್ತು. ಈ ರೀತಿ ಪ್ರಯತ್ನ ಮಾಡಿದವರಲ್ಲಿ ಹೊಸಕೆರೆ ಚಿದಂಬರಯ್ಯ ಮತ್ತು ಆಲೂರು ವೆಂಕಟರಾಯರು ಗಣ್ಯರು, ದೇವುಡು ಆ ವಿಷಯದಲ್ಲಿ ಆದರ್ಶಪ್ರಾಯರು.

ಗೀತೆಯನ್ನು ಕೇವಲ ಪ್ರಚಾರಕ್ಕೆ ಅಲ್ಲದೆ ಜೀವನದಲ್ಲೇ ಅನುಷ್ಠಾನ ಮಾಡಿದವರು ದೇವುಡು ಅವರು. ಇದಕ್ಕೊಂದು ನಿದರ್ಶನ ಎಂದರೆ, ಒಮ್ಮೆ ಉಡುಪಿಯ ಪರ್ಯಾಯೋತ್ಸವದಲ್ಲಿ ಗೀತೆಯ ಬಗ್ಗೆ ಉಪನ್ಯಾಸ ಮಾಡಲು ದೇವುಡು ಅವರು ಆಹ್ವಾನಿತರಾಗಿದ್ದರು. ವೇದಿಕೆ ಹತ್ತಿ ಉಪನ್ಯಾಸ ಪ್ರಾರಂಭಮಾಡುವ ವೇಳೆಗೆ ಅವರ ಕೈಗೆ ಚೀಟಿಯೊಂದನ್ನು ವ್ಯವಸ್ಥಾಪಕರು ಕೊಟ್ಟರು. ಅದರಲ್ಲಿ ಅವರ ಹಿರಿಯಮಗ ರಾಮು ಕೋಲಾರದಲ್ಲಿ ನಿಧನರಾದ ಸುದ್ದಿ ಇತ್ತು. ಅದನ್ನೋದಿ ಒಂದು ಕ್ಷಣ ಮೌನಿಗಳಾದ ಅವರು ಸಾವರಿಸಿಕೊಂಡು ಮಾತನಾಡಲು ಸಿದ್ಧರಾದರು. ಅವರ ಮುಖಭಾವ ಕಂಡ ಪಕ್ಕದಲ್ಲಿದ್ದವರು, ಏನು ಸುದ್ದಿ ಎಂದು ಕೇಳಿದರು.

ದೇವುಡು ಅವರು "ಯಾವುದೋ ಪುಸ್ತಕ ಪ್ರಕಟನೆಯ ವಿಚಾರ" ಎಂದು ಹೇಳಿ ನಿರ್ವಿಕಾರಚಿತ್ತರಾಗಿ ಏನೂ ಆಗದವರಂತೆ ಶುದ್ಧ ಮನಸ್ಕರಾಗಿ ಅತ್ಯಮೋಘವಾಗಿ ಗೀತಾ ಪ್ರವಚನ ಮಾಡಿದರು. ಎಷ್ಟರ ಮಟ್ಟಿಗೆ ಎಂದರೆ ಸಭೆಯಂತೂ ಎಲೆ ಅಲುಗದ ಸಭೆ ಆಗಿತ್ತು. ಸ್ವಾಮಿಗಳು "ದಯಮಾಡಿ ಇನ್ನೊಂದು ವಾರ ಇದ್ದು ಮತ್ತೊಂದು ಗೀತಾ ಸಪ್ತಾಹ ಕಾರ್ಯಕ್ರಮ ನಡೆಸಿಕೊಡಿ. ನಿಮ್ಮ ಗೀತಾ ಪ್ರವಚನ ಅಮೋಘ" ಎಂದರು. ಕಾರ್ಯಕ್ರಮ ಮುಗಿದ ಮೇಲೆ ಜತೆಗಿದ್ದ ಆತ್ಮೀಯ ಮಿತ್ರರಾದ ಬೆಳಗೆರೆ ಕೃಷ್ಣಶಾಸ್ತ್ರಿಗಳು, "ಈ ಸಂಯಮ ನಿಮಗೆ ಹೇಗೆ ಸಾಧ್ಯವಾಯಿತು? ಪುತ್ರಶೋಕವನ್ನು ಪಕ್ಕಕ್ಕಿಟ್ಟು ತಲ್ಲೀನಚಿತ್ತರಾಗಿ ಗೀತಾ ಪ್ರವಚನ ಮಾಡುವ ಶಕ್ತಿ ಎಲ್ಲಿಂದ ಬಂತು?" ಎಂದು ಕೇಳಿದರು. ಅದಕ್ಕೆ ದೇವುಡು ಹೇಳಿದರು. "ನಾನು ಸಭೆಯಲ್ಲಿ ಗೀತೆಯ ಬಗ್ಗೆ ಭಾಷಣ ಮಾಡಲಿಲ್ಲ. ನನಗೆ ನಾನೇ ಗೀತೋಪದೇಶ ಮಾಡಿಕೊಂಡೆ, ಸ್ಥಿತಪ್ರಜ್ಞನ ಲಕ್ಷಣಗಳನ್ನು – ಸುಖದಲ್ಲಾಗಲಿ ದುಃಖದಲ್ಲಾಗಲಿ, ಲಾಭ ನಷ್ಟಗಳಲ್ಲಾಗಲಿ, ಸಮಭಾವ ತಾಳು – ಎಂಬ ಕೃಷ್ಣನ

ಗೀತಾವಾಕ್ಯಗಳನ್ನು ನನಗೆ ನಾನೇ ಬೋಧಿಸಿಕೊಂಡೆ ಅದರಿಂದ ಮಾತಾಡಲು ಸಾಧ್ಯವಾಯಿತು." ಹೀಗೆ ಜೀವನದಲ್ಲಿ ಗೀತಾ ಸಂದೇಶವನ್ನು ಅನುಷ್ಠಾನಕ್ಕೆ ತಂದುಕೊಂಡ ಗೀತಾಭಕ್ತರು ದೇವುಡು ಅವರು.

ದೇವುಡು ಅವರ ವಾಗ್ವಿಲಾಸದ ವೈಭವ ಕುರಿತು ಒಂದು ಪ್ರಸಂಗ ಹೇಳಬೇಕು. ಕನ್ನಡದಲ್ಲಿ ಅನಕೃ ಅಂಥ ವಾಗ್ಮಿಗಳ ಸಾಲಿಗೆ ನಿಲ್ಲಬಲ್ಲವರು ದೇವುಡು ಅವರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾಳಿದಾಸನ ಬಗ್ಗೆ ಅಮೋಘ ವಿಶೇಷ ಉಪನ್ಯಾಸ ನೀಡಿದಾಗ, ಒಬ್ಬ ವಿದ್ವಾಂಸರು "ಎಷ್ಟು ವರ್ಷ ಕಾಳಿದಾಸನನ್ನು ಅಭ್ಯಾಸ ಮಾಡಿದಿರಿ ಈ ಉಪನ್ಯಾಸಕ್ಕೆ?" ಎಂದರು. ಅದಕ್ಕೆ ದೇವುಡು ನಕ್ಕು "ಭಾಷಣ ಪ್ರಾರಂಭ ಮಾಡುವ ಮುಂಚೆ ಕೆಲವು ನಿಮಿಷಗಳು ಮಾತ್ರ" ಎಂದರು.

ಒಮ್ಮೆ ಬೆಂಗಳೂರಿನ ಮಹಾರಾಣಿ ಕಾಲೇಜಿನ ಬಳಿಯ ಓಣಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ದೇವುಡು ಉಪನ್ಯಾಸ ಮಾಡಿದರು. ಆಗಿನ ಮುಖ್ಯಮಂತ್ರಿಗಳು ಕೆಂಗಲ್ ಹನುಮಂತಯ್ಯನವರು ಹಲವು ಸಚಿವರೊಡನೆ ಆ ಸಭೆಗೆ ಬಂದಿದ್ದರು. "ದೇವುಡು ಅವರು ಏನು ಮಾತನಾಡುತ್ತಾರೆ, ಗೊಡ್ಡು ಶಾಸ್ತ್ರಿ ಭಾಷಣದಲ್ಲಿ ಏನಿರುತ್ತೆ" ಅಂತ ತಿರಸ್ಕಾರ ಭಾವದಿಂದ ಇದ್ದ ಇತರ ಸಚಿವರು ಮುಖ್ಯಮಂತ್ರಿಗಳ ಮಾತು ತೆಗೆದುಹಾಕಲಾರದೆ ಅವರ ಜತೆ ಬಂದಿದ್ದರಂತೆ. ದೇವುಡು ಅವರ ಭಾಷಣ ಕೇಳಿದ ಮೇಲೆ ಅವರ ಬಗ್ಗೆ ಪೂಜ್ಯ ಭಾವ ತಾಳಿ "ನಿಮ್ಮ ಮಾತನ್ನು ಕೇಳದೆ ಇದುವರೆಗೆ ನಮ್ಮ ಜನ್ಮವನ್ನು ವ್ಯರ್ಥ ಮಾಡಿಕೊಂಡೆವು" ಎಂದರಂತೆ. ಮುಖ್ಯಮಂತ್ರಿಗಳು "ನಿಮಗೇನು ಬೇಕು ಕೇಳಿ ಶಾಸ್ತ್ರಿಗಳೇ ಕೊಡ್ತೇನೆ. ಈಗ ನನಗೆ ಅಧಿಕಾರವಿದೆ" ಎಂದರಂತೆ. ಆಗ ದೇವುಡು ಅವರು "ನನಗೇನೂ ಬೇಡ. ಈ ದೇವಸ್ಥಾನಕ್ಕೆ ಪ್ರವಚನಕ್ಕೆ, ದೇವರ ದರ್ಶನಕ್ಕೆ ಜನ ಬಂದರೆ ಸಾಕಷ್ಟು ಜಾಗ ಇಲ್ಲ. ದೇವಸ್ಥಾನಕ್ಕೆ ಸ್ವಲ್ಪ ಜಾಗ ಕೊಡಿ" ಅಂದರಂತೆ. ಆಗ ದೊರಕಿದ ಜಾಗದಲ್ಲಿ ಈಗ ಕಟ್ಟಡವಿದೆ. ಈಗ ಹೆಸರಿಗೆ ಓಣಿ ಆಂಜನೇಯ ದೇವಸ್ಥಾವನ. ಆದರೆ ಆಂಜನೇಯ ಇದ್ದಾನೆ, ಓಣಿ ಇಲ್ಲ. ದೇವುಡು ಪ್ರವಚನದ ಪ್ರಭಾವ!

ದೇವುಡು ಅವರಿಗೆ ಸಾರ್ವಜನಿಕ ಜೀವನದಲ್ಲೂ ದೂರದೃಷ್ಟಿ ಇತ್ತು. ಅವರೊಮ್ಮೆ ಸ್ಥಳೀಯ ಚುನಾವಣೆಗೆ ನಿಂತಿದ್ದರು. ಆಗ "ನಾನೇನಾದರೂ ಆರಿಸಿ ಬಂದರೆ ಕ್ರಾಪ್ ಇನ್ಸೂರೆನ್ಸ್ (ಬೆಳೆ ವಿಮೆ) ಜಾರಿಗೆ ತರುತ್ತೇನೆ" ಎಂದು ಹೇಳಿದರು. ಭಾಷಣ ಕೇಳುತ್ತಿದ್ದವರಲ್ಲಿ ಒಬ್ಬರು ಹಾಸ್ಯ ಮಾಡಿದ್ದು ಕ್ರಾಪ್ ಇಲ್ಲದ ಈ ಆಸಾಮಿ ಕ್ರಾಪ್ ಇನ್ಸೂರೆನ್ಸ್ ಜಾರಿಗೆ ತರುತ್ತಾರಂತೆ ಎಂದು. ಆದರೆ ಇಂದು ಬೆಳೆವಿಮೆ ಜಾರಿಯಾಗಿ ದೇವುಡು ಅವರ ದೂರದೃಷ್ಟಿಯ ಮಾತು ನಿಜವಾಗಿದೆ.

ಅರ್ಧ ಶತಮಾನದ ಹಿಂದೆ ಬೆಂಗಳೂರಿನಲ್ಲಿ ಬಾಲ್ಯವಿವಾಹವನ್ನು ಸಮರ್ಥಿಸಿ ವಾದ ಮಾಡಿದ ಪಂಡಿತ ಮಂಡಳಿಯ ಸಭೆಯಲ್ಲಿ ಶಾಸ್ತ್ರಾಧಾರಗಳಿಂದ ಬಾಲ್ಯವಿವಾಹವನ್ನು ಖಂಡಿಸಿ ವಾದ ಮಂಡಿಸಿದವರಲ್ಲಿ ದೇವುಡು ಅವರು ಒಬ್ಬರು.

ದೇವುಡು ಅವರು ಕೇವಲ ಸಾಹಿತಿ, ವೇದಾಂತಿ ಶಿಕ್ಷಣತಜ್ಞ ಅಷ್ಟೇ ಆಗಿರಲಿಲ್ಲ. ದೇಶಪ್ರೇಮಿ, ಭಾಷಾಪ್ರೇಮಿ ಆಗಿದ್ದರು. ಗಾಂಧಿಭಕ್ತರಾಗಿದ್ದರು. ಗಾಂಧಿಸೇವಾನಿಷ್ಠರಾದ ಸಿದ್ದವನಹಳ್ಳಿ ಕೃಷ್ಣಶರ್ಮ, ತಿ.ತಾ.ಶರ್ಮ ಮೊದಲಾದವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದವರು. ಒಂದು ಕಾಲದಲ್ಲಿ ನಿಷ್ಠಾವಂತ ಕಾಂಗ್ರೆಸ್ಸಿಗರಲ್ಲಿ ದೇವುಡು ಅವರೂ ಒಬ್ಬರಾಗಿದ್ದರು. ೧೯೩೬ರಲ್ಲಿ ಗಾಂಧೀಜಿ ನಾಲ್ವಡಿ ಕೃಷ್ಣರಾಜ ಒಡೆಯರ ಆಹ್ವಾನದ ಮೇರೆಗೆ ಬೆಂಗಳೂರಿಗೆ ಬಂದಾಗ ಗಾಂಧಿಬಿಡಾರದಲ್ಲಿ ಸ್ವಯಂಸೇವಕರ ಮೇಲ್ವಿಚಾರಣೆ ವಹಿಸಿದವರು ದೇವುಡು ಅವರು, ಅವರ ಕೈ ಕೆಳಗೆ ಸ್ವಯಂಸೇವಕರಾಗಿ ಸೇವೆ ಸಲ್ಲಿಸಿದವರಲ್ಲಿ ನ್ಯಾಷನಲ್ ಕಾಲೇಜಿನ ಡಾ.ಎಚ್.ನರಸಿಂಹಯ್ಯನವರೂ ಒಬ್ಬರಾಗಿದ್ದರು.

ರಾಜಕೀಯ ಚಳುವಳಿಗಳ ಸಭೆಗಳಲ್ಲಿ ಗುಂಡೇಟಿಗೂ ಜಗ್ಗದೆ ಭಾಗವಹಿಸುತ್ತಿದ್ದವರು ದೇವುಡು ಅವರು, ೧೯೩೦ರಲ್ಲಿ ನಾರೀಮನ್ ಗಲಾಟೆಯ ಚಳುವಳಿ ನಡೆದಾಗ ಬೆಂಗಳೂರಿನ ಮೈಸೂರು ಬ್ಯಾಂಕ್ ಚೌಕದ ಬಳಿ ಉಜ್ವಲ ಭಾಷಣ ಮಾಡಿ ಗೋಲಿಬಾರಿನಲ್ಲಿ ಗಾಯಗೊಂಡವರು ದೇವುಡು. ೧೯೨೮ರಲ್ಲಿ ಬೆಂಗಳೂರಿನ ಸುಲ್ತಾನ್ ಪೇಟೆ ಗಣಪತಿ ಗಲಭೆಯ ಸಭೆಯೊಂದು ಬಳೇಪೇಟೆ ಚೌಕದಲ್ಲಿ ನಡೆದಾಗ ಗುಂಡಿನ ಮಳೆಯನ್ನು ಪೊಲೀಸರು ಸುರಿಸಿದರು. ಆಗ ಆ ಗುಂಡಿನ ಸುರಿಮಳೆಯ ನಡುವೆ ಜೀವದ ಹಂಗು ತೊರೆದು ನುಗ್ಗಿ ಹಣ್ಣು ಹಣ್ಣು ವೃದ್ಧರೊಬ್ಬರನ್ನು ರಕ್ಷಿಸಿದವರು ದೇವುಡು ಅವರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮೆರವಣಿಗೆಯಲ್ಲಿ ಪೊಲೀಸರನ್ನು ಪ್ರತಿಭಟಿಸಿ ಮುನ್ನುಗ್ಗಿ ಬಲವಾಗಿ ಲಾಠಿ ಏಟು ತಿಂದು ಹಲವಾರು ತಿಂಗಳು ನರಳಿದವರು ದೇವುಡು ಅವರು. ಇಂಥ ಸಾಹಸಗಳು ಅದೆಷ್ಟೋ, ಸ್ವಾತಂತ್ರ್ಯ ಹೋರಾಟದಲ್ಲಿ ಹೀಗೆ ನಿರಂತರ ಭಾಗವಹಿಸಿದ ಅವರು ಸ್ವಾತಂತ್ರ್ಯ ಬಂದ ಮೇಲೆ ಸರ್ಕಾರದಿಂದ ಪೆನ್ಷನ್, ಸೈಟ್, ಪ್ರಶಸ್ತಿ, ಮಾಸಾಶನ ಯಾವುದನ್ನು ಬಯಸದೆ ಅದನ್ನು ಕೊಟ್ಟರೂ ಬೇಡವೆಂದು ತಿರಸ್ಕರಿಸಿದ ಅಪ್ಪಟ ದೇಶಪ್ರೇಮಿ. ಒಮ್ಮೆ ಸ್ವಾತಂತ್ರ್ಯ ಹೋರಾಟದಲ್ಲಿ ಇವರ ಪ್ರಭಾವವನ್ನು ತಡೆಯಲಾಗದೆ ದಿವಾನರೊಬ್ಬರು ಇವರಿಗೆ "ನೀವು ರಾಜಕಾರಣದಿಂದ ನಿವೃತ್ತರಾಗುವುದಾದರೆ ಸರಕಾರದಿಂದ ಪ್ರತಿ ತಿಂಗಳೂ ನಿವೃತ್ತಿ ವೇತನ ದೊರೆಯುವಂತೆ ಇತರ ಸೌಲಭ್ಯ ಪಡೆಯುವಂತೆ ಏರ್ಪಾಡು ಮಾಡುತ್ತೇನೆ" ಎಂದರಂತೆ. ಆಗ ದೇವುಡು ನಕ್ಕು, "ನೀವು ನನ್ನ ಬೆಲೆ ಎಷ್ಟು

ಅಂತ ತಿಳಿದಿಲ್ಲ. ನನ್ನ ದೇಶಪ್ರೇಮದ ಬೆಲೆ ಎಷ್ಟಿದೆ ಎಂದರೆ, ಜಗತ್ತಿನಲ್ಲಿ ಯಾವ ಕೋಟ್ಯಧೀಶನೇ ಆಗಲಿ ಸರಕಾರವೇ ಆಗಲಿ ನನ್ನನ್ನು ಕೊಳ್ಳಲಾರರು" ಎಂದರಂತೆ.

ದೇವುಡು ದೇಶಭಕ್ತರೂ ಸಾಹಿತಿಗಳೂ ಆಗಿದ್ದಂತೆ ನಾಟಕಕಾರರು, ಕಲಾವಿದರೂ ಚಲನಚಿತ್ರ ನಟರೂ ಆಗಿದ್ದರು. ಬಹುಮುಖ ಪ್ರತಿಭೆ ಅವರದು. **ರಂಗಭೂಮಿ ಪತ್ರಿಕೆ**ಯ ಸಂಪಾದಕರಾಗಿದ್ದರು. ರತ್ನಾವಳಿ ಕಂಪೆನಿ, ಚಾಮುಂಡೇಶ್ವರಿ ನಾಟಕ ಕಂಪೆನಿ ಮುಂತಾದ ಕಡೆಗಳಲ್ಲಿ ನಟರಾಗಿ, ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ವಾಜಶ್ರವಸಮುನಿ, ರಾವಣ, ಮಾರ್ಕಂಡೇಯ ಮೊದಲಾದ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸಿದ್ದಾರೆ. ದೇವುಡು ಪಾತ್ರ ವಹಿಸಿದ ನಾಟಕಗಳು ಶತದಿನೋತ್ಸವ ಕಂಡಿವೆ. ದುರ್ಮಂತ್ರಿ, ಸಾವಿತ್ರಿ, ವಿಚಿತ್ರಶಿಕ್ಷೆ, ಮೊದಲಾದ ಮಕ್ಕಳನಾಟಕ ರಚಿಸಿ ಆಡಿಸಿದ್ದಾರೆ.

೧೯೨೬ರಲ್ಲಿ ಕಳ್ಳರ ಕೂಟ ಎಂಬ ಮೂಕಿ ಚಿತ್ರವನ್ನು ತಯಾರಿಸಿದ್ದರು. **ಚಿರಂಜೀವಿ** ಚಿತ್ರದಲ್ಲಿ ಮೃಕಂಡು ಪಾತ್ರ ಅಭಿನಯಿಸಿದ್ದನ್ನು ನೋಡಲು ೧೯೩೬ರಲ್ಲಿ ಮೆಜೆಸ್ಟಿಕ್‌ನಲ್ಲಿ ಆ ಚಿತ್ರದ ಪ್ರಥಮ ಪ್ರದರ್ಶನಕ್ಕೆ ಸರ್. ಸಿ.ವಿ.ರಾಮನ್, ಸರ್ ಪುಟ್ಟಣಶೆಟ್ಟರು, ಬಿಎಂಶ್ರೀ, ಲೇಡಿ ಮಿರ್ಜಾ ಇಸ್ಮಾಯಿಲ್, ಮುಂತಾದ ಗಣ್ಯರು ಹಾಜರಿದ್ದರು. ಕನ್ನಡ ಚಲನಚಿತ್ರರಂಗಕ್ಕೆ ಅಸ್ತಿಭಾರ ಹಾಕಿದವರಲ್ಲಿ ದೇವುಡು ಅವರು ಒಬ್ಬರು.

ದೇವುಡು ಅವರು ದೈವಭಕ್ತರು ಅವಧೂತರು, ದೈವಸಿದ್ಧಿ ಪಡೆದವರು, ಬಾಲ್ಯದಲ್ಲೇ ದೇವೀಕೃಪಾಕಟಾಕ್ಷಕ್ಕೆ ಒಳಗಾದವರು. ದತ್ತಾತ್ರೇಯನ ಉಪಾಸಕರು. ಅವರ ಬಾಲ್ಯದ ಆತ್ಮಕಥನ ಪ್ರಸಂಗವೊಂದು ಅವರಿಗೆ ದೇವೀಕೃಪೆ ಬಾಲ್ಯದಲ್ಲೇ ಒದಗಿದ್ದಕ್ಕೆ ಸಾಕ್ಷಿ ಆಗಿದೆ.

ದೇವುಡು ಅವರು ಮೈಸೂರಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದರು. ೧೯೦೬ರ ಸುಮಾರಿನಲ್ಲಿ ಬಾಲಕ ದೇವುಡು ಅವರನ್ನು ಅವರಮ್ಮ ಮನೆಯಲ್ಲಿ ಸೀಮೆಎಣ್ಣೆ ದೀಪದ ಚಿಮಣಿಗೆ ಗಾಜಿನ ಬುರುಡೆ ತರಿಸಲು ಕಳಿಸಿದರು. ಎರಡಾಣೆ ಕೊಟ್ಟು, ಜತೆಗೆ ಚಿಕ್ಕ ಹುಡುಗ ಆದ್ದರಿಂದ ಜತೆಗಿರಲಿ ಎಂದು ಮನೆಯಲ್ಲಿದ್ದ ರಾಮು ಎಂಬ ದಡ್ಡಶಿಖಾಮಣಿಯನ್ನು ಕಳಿಸಿದರು. ಗೋಡೆಲ್ಯಾಂಪಿನ ಚಿಮಣಿಯ ಗಾಜಿನ ಬುರುಡೆಯನ್ನು ಒಂದಾಣೆ ಒಂಬತ್ತು ಕಾಸು ಬೆಲೆ ಕೊಟ್ಟು ಕೊಂಡರು. ಉಳಿದ ಮೂರು ಕಾಸಿಗೆ ಕಡಲೆಪುರಿ ಕೊಂಡು ತಿನ್ನುತ್ತಾ ಕುಣಿದಾಡುತ್ತಾ ಬಂದರು. ದಾರಿಯಲ್ಲಿ ರಸ್ತೆ ಅಂಚಿನ ಕಟ್ಟೆಯ ಮೇಲೆ ಬರುತ್ತಿದ್ದರು. ದೇವುಡು ಜಾರಿಬಿದ್ದರು. ಚಿಮಣಿ ಒಡೆಯಿತು. ತಕ್ಷಣ ದೇವುಡು ಅವರಿಗೆ ಅವರ ತಾಯಿಯ

ನೆನಪಾಯಿತು. "ಕೈಯಲ್ಲಿ ಸಿಕ್ಕಿದುದರಲ್ಲಿ ಹೊಡೆಯುವ ತಾಯಿಯ ಚಿತ್ರ ಕಣ್ಣ ಮುಂದೆ ಬಂತು." ದಿಗಿಲಾಗಿ ಅಳಲು ಶುರು ಮಾಡಿದರು. ರೋದನ ಹೆಚ್ಚಾಗಲು ಸುಮಾರು ೧೦-೧೫ ಜನ ಸೇರಿದರು. ವಯಸ್ಸಾದ ಹೆಂಗಸು ಒಬ್ಬಳು ಬಂದಳು, ಹಣೆತುಂಬ ಕುಂಕುಮ, ತಲೆತುಂಬ ಮುಸುಕು, ಬಾಯಿತುಂಬ ಎಲೆ ಅಡಿಕೆ, ಸುತ್ತಲಿನ ಜನರನ್ನೆಲ್ಲಾ ತಳ್ಳಿಕೊಂಡು ಬಂದು ದೇವುಡು ಅವರನ್ನು 'ಯಾಕಪ್ಪಾ ಅಳುತ್ತೀ, ಏನಪ್ಪಾ ಆಯಿತು?' ಅಂತ ಕೇಳಿ ಅವನ ಕಣ್ಣೀರನ್ನು ಒರೆಸಿ, ವಿಷಯ ತಿಳಿದುಕೊಂಡಳು. ಇಷ್ಟೇನಾ ಎಂದು ತನ್ನ ಎಲೆ ಅಡಿಕೆ ಚೀಲದಿಂದ ಎರಡಾಣೆ ತೆಗೆದುಕೊಟ್ಟು ನಿವಾಳಿಸಿ ತೆಗೆದು ನೆಟಿಕೆ ಮುರಿದು ತನ್ನ ಪಾಡಿಗೆ ತಾನು ಹೊರಟುಹೋದಳು. ಹತ್ತಾರು ವರ್ಷಗಳಾದ ಮೇಲೂ ದೇವುಡು ಅವರು ತಮ್ಮ ಮಿತ್ರರ ಬಳಿ ಈ ಮಾತು ಹೇಳುತ್ತಿದ್ದರು. "ಆಗ ನಡೆದುದೆಲ್ಲ ವಿವರವಾಗಿ ಈಗಲೂ ಒಂದಿಷ್ಟೂ ತಪ್ಪದೆ ಮನಸ್ಸಿನ ರಜತಪರದೆಯ ಮೇಲೆ ಕಂಡಂತೆ ಸ್ಪಷ್ಟವಾಗಿ ಕಾಣುತ್ತದೆ. ಆ ತಾಯಿಯ ನೆನಪು, ವಾತ್ಸಲ್ಯ, ನೋಟ, ಮಾತು, ಪ್ರೀತಿ ಮನಸ್ಸಿನಲ್ಲಿ, ಹೃದಯದಲ್ಲಿ ವಜ್ರಖಚಿತವಾಗಿದೆ. ಆಕೆಯ ನೆನಪು, ಅನುಗ್ರಹ ಇಂದಿಗೂ ನನ್ನನ್ನು ದಯೆಯತ್ತ ನಡೆಸುತ್ತಿದೆ. ಈ ನನ್ನ ಕೈ, ಸುರಿವ ಕಂಬನಿ ಒರೆಸಿ ನಗೆಯುಂಟುಮಾಡಲು ಕಾರಣವಾಗಿರುವ ಕೈದೀವಿಗೆ, ಆ ತಾಯಿ ನೆನಪು."

ಶೃಂಗೇರಿ ಜಗದ್ಗುರುಗಳಿಂದ ಮಂತ್ರೋಪದೇಶ ಪಡೆದು 'ದತ್ತಸಿದ್ಧಿ' ಪಡೆದ ದೇವುಡು ಅವರು ಗಾಯಿತ್ರಿ ಸಾಕ್ಷಾತ್ಕಾರ ಹೊಂದಿದವರು. ಅವರ ಅಧ್ಯಾತ್ಮಸಿದ್ಧಿ ಹೊರಜಗತ್ತಿಗೆ ಅಷ್ಟಾಗಿ ತಿಳಿದಿಲ್ಲ. ಬೇಂದ್ರೆ ಅವರು ದೇವುಡು ಅವರನ್ನು ಅವಧೂತರೆಂದು ತಿಳಿದಿದ್ದರು. ದೇವುಡು ಅವರನ್ನು ಕುರಿತು ಬೇಂದ್ರೆ ಅವರು ಬರೆದ ಪದ್ಯವೊಂದರಲ್ಲಿ.

ಬಾಲನಂಥ ದೇವುಡು । ಉನ್ಮತ್ತನಾದ ದೇವುಡು ।
ಜಡ-ಪಿಶಾಚಿ ದೇವುಡು । ಹುಚ್ಚು-ಮರುಳು ದೇವುಡು
ಜೀವನವೇ ನಾಟಕ । ತಾನೂ ಒಬ್ಬ ನಾಟಕ
ಆಟವೋ ಬೂಟಾಟವೋ ನೋಟವೆಂದ ದೇವುಡು

ಎಂದಿದ್ದಾರೆ.

ದೇವುಡು ಅವರು ತಮ್ಮ ಅಧ್ಯಾತ್ಮ ಸಿದ್ಧಿಯ ಫಲವನ್ನು ಸಾಂದರ್ಭಿಕವಾಗಿ ಇತರರಿಗೂ ನೀಡಿದ್ದಾರೆ. ಆದರೆ ಅದು ಗುಪ್ತದಾನ.

ಅರಮನೆಯ ಶ್ರೀ ಚೆಲುವಾಜಮ್ಮಣ್ಣಿ ಅವರಿಗೆ ಗೌರೀ ಪಂಚಾಕ್ಷರೀ ಉಪದೇಶ ಮಾಡಿದರು. ೧೯೫೫ರಲ್ಲಿ ಹಿರಿಯೂರಿನಲ್ಲಿ ರಾಮೋತ್ಸವ ಸಂದರ್ಭದಲ್ಲಿ ಉಪನ್ಯಾಸಕ್ಕೆ ಹೋದಾಗ ವ್ಯವಸ್ಥಾಪಕರೂ ಶಾಲಾ ಮುಖ್ಯೋಪಾಧ್ಯಾಯರೂ

ಆದ ವೆಂಕಟೇಶಯ್ಯ ಅವರು ಹಾಸಿಗೆ ಹಿಡಿದು ಮಲಗಿದ್ದಾಗ ಅವರ ಕೈ ಹಿಡಿದು ಹತ್ತಿಪ್ಪತ್ತು ಕ್ಷಣ ಧ್ಯಾನ ಮಾಡಿ ಅವರ ಸುಸ್ತು, ಜ್ವರವನ್ನು ಪೂರ್ಣವಾಗಿ ಮಂಗಮಾಯ ಮಾಡಿದರು. “ಲೋಕದಲ್ಲಿ ಜಡ-ಚೇತನ ಎಂದು ಸೃಷ್ಟಿ ಎರಡು ವಿಧವಾಗಿದ್ದರೂ ಜಡ ಚಲಿಸಿದರೆ ಚೇತನವಾಗುತ್ತದೆ. ಚೇತನ ಇಲ್ಲದಿದ್ದರೆ ಜಡವಾಗುತ್ತದೆ. ಈ ಅನುಭವ ನೋಡುವವರ ವಿಧಾನದ ಮೇಲೆ ನಿಂತಿದೆ" ಎಂದು ಅತೀತಾನುಭವವನ್ನು ಒಂದೆಡೆ ದೇವುಡು ವಿವರಿಸಿದ್ದಾರೆ. ಇಂಥಾ ಅಧ್ಯಾತ್ಮ ಸಿದ್ಧಿ ಇದ್ದುದರಿಂದಲೇ ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನದಂಥ ಅಪೂರ್ವ ಧಾರ್ಮಿಕ ಕಾದಂಬರಿತ್ರಯ ಬರೆಯಲು ಸಾಧ್ಯವಾಯಿತು.

ಅತಿಥಿ ಸತ್ಕಾರಕ್ಕೆ ಬಡತನಕ್ಕೆ ಸಂಬಂಧವಿಲ್ಲ ಎಂದು ದೇವುಡು ತಮ್ಮ ಜೀವನದಲ್ಲಿ ಅನೇಕ ಬಾರಿ ತೋರಿಸಿಕೊಟ್ಟಿದ್ದಾರೆ. ದೀನಾರ್ತರನ್ನು ಕಂಡರೆ ಅವರ ಹೃದಯ ಕರಗುತ್ತಿತ್ತು. ಸಂಪದ್ಗಿರಿ ರಾಯರು ಹೇಳುವಂತೆ “ದೇವುಡು ಅವರ ಎರಡು ಕಣ್ಣುಗಳು ಎರಡು ನೀರಿನ ಟ್ಯಾಂಕುಗಳಾಗಿದ್ದವು. ಕಷ್ಟ ಕಾರ್ಪಣ್ಯದಲ್ಲಿರುವವರನ್ನು ಕಂಡರೆ ಸಾಕು, ಅವು ಧುಮ್ಮಿಕ್ಕುತ್ತಿದ್ದವು.”

ಒಮ್ಮೆ ಅವರ ಪತ್ನಿ ಗೌರಮ್ಮನವರು “ಮನೆಯಲ್ಲಿ ಈವತ್ತು ಒಂದು ಅಕ್ಕಿ ಕಾಳೂ ಇಲ್ಲ. ಬರೋವರಿಗೆ ಇರಲಿ, ಇರೋವರಿಗೆ ಊಟವಿಲ್ಲ” ಎಂದರು. ಆಗ ದೇವುಡು ಪ್ರಕಾಶಕರೊಬ್ಬರ ಬಳಿಗೆ ಹೋಗಿ ಪುಸ್ತಕವೊಂದನ್ನು ವಾರದೊಳಗೆ ಬರೆದುಕೊಡುವ ಭರವಸೆ ಕೊಟ್ಟು ಸಾಕಷ್ಟು ಹಣ ತಂದರು. ಮನೆಗೆ ಬರುವ ವೇಳೆಗೆ ಸರಿಯಾಗಿ ಮಿತ್ರರೊಬ್ಬರು ತಮ್ಮ ಸಂಕಷ್ಟ ಸ್ಥಿತಿ ಹೇಳಿಕೊಂಡಾಗ ಸಾಲವಾಗಿ ತಂದ ಹಣದಲ್ಲಿ ಅಂದು ಊಟದ ಖರ್ಚಿಗೆ ಅಂತ ೫ ರೂ. ಉಳಿಸಿಕೊಂಡು ಉಳಿದ ಹಣವನ್ನೆಲ್ಲಾ ಅವನ ಕೈಗಿಟ್ಟು, "ಈ ಹೊತ್ತು ಊಟಕ್ಕೆ ಅಂತ ೫ ರೂ. ಇಟ್ಟುಕೊಂಡಿದ್ದೇನೆ ಉಳಿದಿದ್ದೆಲ್ಲಾ ಕೊಟ್ಟಿದ್ದೇನೆ. ದೇವರು ನಿನಗೆ ಒಳ್ಳೆಯದು ಮಾಡಲಿ" ಎಂದರು. ಆ ಹಣವನ್ನು ಮತ್ತೆ ಇವರು ಕೇಳಲಿಲ್ಲ ಅವರೂ ಕೊಡಲಿಲ್ಲ.

“ಎಷ್ಟೋ ಸಲ ಮನೆ ಎಷ್ಟು ಖಾಲಿ ಇರುತ್ತಿತ್ತು ಎಂದರೆ, ಒಮ್ಮೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಅವರ ಮನೆಗೆ ಬಂದಾಗ ದೇವುಡು ಅವರು, "ಕೃಷ್ಣಶಾಸ್ತ್ರಿಗಳು ಬಂದಿದ್ದಾರೆ. ಏನಾದರೂ ಕೊಡು" ಎಂದರು. ಮನೆಯೆಲ್ಲ ತಡಕಾಡಿದರೂ ಏನೂ ಇರಲಿಲ್ಲ. ಕೊನೆಗೆ ಡಬ್ಬವೊಂದರ ಬುಡದಲ್ಲಿ ಸೇರಿಕೊಂಡಿದ್ದ ೨ ಕೋಡುಬಳೆ ತಂದು ಮುಂದಿಟ್ಟರು. ಆಗ ದೇವುಡು ನಗುತ್ತಾ "ಬೆಳೆಗೆರೆಯ ಬಚ್ಚುಬಾಯಿ ನೋಡಿಲ್ವಾ ನೀನು? ಕೋಡುಬಳೆ ತಂದಿಟ್ಟಿದ್ದೀಯಲ್ಲಾ" ಎಂದರು. ಅವರು ಕಣ್ ಕಣ್ ಬಿಟ್ಟಾಗ ದೇವುಡುಗೆ ಮನೆಯಲ್ಲಿ ಏನೂ ಇಲ್ಲ ಎಂದು

ತಿಳಿಯಿತು. ಆಗ ದೇವುಡು "ಹೋಗಲಿ ಬಿಡು, ಕೃಷ್ಣಶಾಸ್ತ್ರಿ ಏನೂ ತಿಳಿದುಕೊಳ್ಳೋದಿಲ್ಲ. ಮನೆಯಲ್ಲಿ ಏನೂ ಇಲ್ಲ ಅಂತ ಹೇಳಲು ಸಂಕೋಚ ಪಡಬೇಕಾಗಿಲ್ಲ. ಒಂದು ಲೋಟ ಮಜ್ಜಿಗೆ ಕೊಡು" ಎಂದರು.

ಇರಲಿ ಇಲ್ಲದಿರಲಿ ನಾಸ್ತಿ ಎನ್ನದೆ ದೇಹಿ ಎನ್ನದೆ ಇದ್ದುದ್ದನ್ನು ತೆತ್ತುಬಿಡುವ ದೇವುಡು ಅವರು ಕೊಡುವುದರಲ್ಲೇ ಸುಖ ಕಂಡ ಜೀವಿ. ಸರಳ ಜೀವಿ, ಸ್ವತಂತ್ರ ಜೀವಿ, ಸ್ವಾಭಿಮಾನಿ, ಉನ್ನತಚಿಂತಕ, ಸಾಹಿತಿ, ಅನುಭಾವಿ, ಸ್ನೇಹಪ್ರೇಮಿ, ಮಕ್ಕಳ ಒಡನಾಡಿ, ಘನವಿದ್ವಾಂಸ, ಶಿಕ್ಷಣತಜ್ಞ, ಕಾದಂಬರಿಕಾರ, ನಟ, ವಾಗ್ಮಿ, ಜ್ಞಾನಪ್ರಚಾರಕ, ಗೀತಾಭಕ್ತ ದೇವುಡು ನರಸಿಂಹಶಾಸ್ತ್ರಿ ಕನ್ನಡ ಸಾಹಿತ್ಯದ ಅನರ್ಘ್ಯ ರತ್ನ, ಆದರ್ಶಜೀವಿ.

**



೫. ವಚನ ಸಾಹಿತಿ–ಆದರ್ಶ ಶಿಕ್ಷಕ

ಎಂ.ಆರ್.ಶ್ರೀನಿವಾಸಮೂರ್ತಿ

(೨೮-೮-೧೮೯೨ / ೧೬-೯-೧೯೫೩)

ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ ಸಾಹಿತಿಗಳಿಗೆಲ್ಲ ಕನ್ನಡನಾಡು–ನುಡಿ ಪ್ರೇಮವಷ್ಟೇ ಆಧಾರವಾಗಿತ್ತು, ಆದರ್ಶವಾಗಿತ್ತು. ಜಾತಿಮತಗಳ ಭೇದ ಅವರ ಕನಸು ಮನಸಿನಲ್ಲಿಯೂ ಸುಳಿದಿರಲಿಲ್ಲ. ಸಾಹಿತಿಯನ್ನು ಜಾತಿದೃಷ್ಟಿಯಿಂದ ನೋಡುವುದು ಇತ್ತೀಚಿನ ವರ್ಷಗಳಲ್ಲಿ ಬೆಳೆದು ಬಂದಿರುವ ವ್ಯಾಧಿ. ೨೦ನೇ ಶತಮಾನದ ಪೂರ್ವಾರ್ಧದ ಕನ್ನಡ ಸಾಹಿತಿಗಳೆಲ್ಲ ದೇಶಪ್ರೇಮದಿಂದ, ಸಾಹಿತ್ಯ ಪ್ರೇಮದಿಂದ ತಮಗಿಷ್ಟವಾದ ಸಾಹಿತ್ಯ ಪ್ರಕಾರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇದಕ್ಕೆ ವೀರಶೈವಸಾಹಿತ್ಯದ ಇತಿಹಾಸವನ್ನು ಗಮನಿಸಿದರೆ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ವೀರಶೈವಸಾಹಿತ್ಯಾಭಿವೃದ್ಧಿಗೆ ಕೇವಲ ವೀರಶೈವರಷ್ಟೇ ಅಲ್ಲ, ವೀರಶೈವೇತರ ಸಾಹಿತಿಗಳೂ ಅಮೋಘ ಸೇವೆ ಸಲ್ಲಿಸಿದ್ದಾರೆ. ರಂಗನಾಥ ರಾಮಚಂದ್ರ ದಿವಾಕರ, ಅನಕೃ, ಉತ್ತಂಗಿ ಚೆನ್ನಪ್ಪ, ಎಂ.ಆರ್.ಶ್ರೀನಿವಾಸಮೂರ್ತಿ ಮೊದಲಾದವರನ್ನು ಈ ನಿಟ್ಟಿನಲ್ಲಿ ಉದಾಹರಿಸಬಹುದು. ವೀರಶೈವಸಾಹಿತ್ಯದಲ್ಲಿ ವಚನಸಾಹಿತ್ಯ ವಿಶ್ವಮಾನ್ಯ ಸಾಹಿತ್ಯವಾಗಿದ್ದು, ಎಲ್ಲ ಕಾಲಕ್ಕೂ ಬೆಳಕು ನೀಡಬಲ್ಲ ಸ್ಫೂರ್ತಿ ಉಕ್ಕಿಸಬಲ್ಲ ಸಾಹಿತ್ಯವಾಗಿದೆ.

ಕನ್ನಡ ಸಾಹಿತ್ಯ ತನ್ನ ಸ್ವಂತಿಕೆಯಿಂದ ವಿಶ್ವಸಾಹಿತ್ಯಕ್ಕೆ ನೀಡುವ ಕೊಡುಗೆಗಳು ಎಂದರೆ ವಚನಸಾಹಿತ್ಯ ಮತ್ತು ದಾಸಸಾಹಿತ್ಯ. ಭಾಷೆ, ಸಂಸ್ಕೃತಿ ಮಹಾಪುರುಷರನ್ನು ಒಳಗೊಂಡ ಸಾಹಿತ್ಯ ಪ್ರಕಾರಗಳಿವು. ಈ ಪೈಕಿ ವಚನಸಾಹಿತ್ಯ ತನ್ನದೇ ಆದ ವೈಶಿಷ್ಟ್ಯಗಳಿಂದ ಕೂಡಿದೆ. ವಚನಸಾಹಿತ್ಯ ಮತ್ತು ವೀರಶೈವ ಕಾವ್ಯಗಳೆರಡೂ ಕನ್ನಡದ ಅಪೂರ್ವನಿಧಿಗಳು, ಈ ನಿಧಿಗಳನ್ನು ಕನ್ನಡ ಜನತೆಗೆ, ಹೃನ್ಮನಗಳಿಗೆ

ಕರೆದೊಯ್ದ ಭಗೀರಥರಲ್ಲಿ ಎಂ.ಆರ್.ಶ್ರೀನಿವಾಸಮೂರ್ತಿ ಅವರು ಅಗ್ರಗಣ್ಯರು. ಅವರ ಜನ್ಮತಃ ತೆಲುಗು ಮಾಧ್ವ ಬ್ರಾಹ್ಮಣರಾದರೂ ತಮ್ಮ ಅಧ್ಯಯನ, ಸಂಶೋಧನೆ, ಆಸಕ್ತಿ, ಶ್ರದ್ಧೆಗಳಿಂದ ವೀರಶೈವ ಸಾಹಿತ್ಯ ಮತ್ತು ವಚನಸಾಹಿತ್ಯಗಳಲ್ಲಿ ಬೆಳಕು ಬೀರುವ, ಕಣ್ತೆರೆಸುವ ಕೆಲಸ ಮಾಡಿದ್ದಾರೆ. ಅವರು ವೀರಶೈವ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿದ ಎಷ್ಟೋ ಜನರು ಅವರನ್ನು ವೀರಶೈವರೆಂದೇ ಭಾವಿಸಿದ್ದರು. ಅವರು ನಿಧನರಾದಾಗ ಅವರ ಮನೆಯ ಬಳಿ ಸೇರಿದ್ದ ಅಪಾರ ವೀರಶೈವ ಜನರೇ ಅದಕ್ಕೊಂದು ಸಾಕ್ಷಿ. ವಾಗ್ಮಿಗಳಾದ ಎಂ.ಆರ್.ಶ್ರೀ. ಅವರು ವಚನಸಾಹಿತ್ಯದ ಬಗ್ಗೆ, ವೀರಶೈವ ಕಾವ್ಯಗಳ ಬಗ್ಗೆ ಮಾತನಾಡತೊಡಗಿದರೆ ಅಲ್ಲಮ–ಬಸವಣ್ಣನವರೇ ಅವರ ಮೂಲಕ ಮಾತನಾಡುತ್ತಿದ್ದಾರೇನೋ ಎಂಬಷ್ಟರ ಮಟ್ಟಿಗೆ ಭಾಷಣ ಅಮೋಘವಾಗಿರುತ್ತಿತ್ತು. ಕನ್ನಡ ಸಾಹಿತ್ಯದ ಇತರ ವಿಷಯಗಳಲ್ಲೂ ಅಷ್ಟೇ ಪ್ರಭುತ್ವವನ್ನು ಸಾಧಿಸಿದ್ದರು. ಮಕ್ಕಳಸಾಹಿತ್ಯದಲ್ಲಿ ಅವರನ್ನು ಸರಿಗಟ್ಟುವವರು ಕನ್ನಡದಲ್ಲಿ ಎಲ್ಲೋ ಒಂದಿಬ್ಬರು ಅಷ್ಟೇ. ಅವರು ರಚಿಸಿದ ಮೆಕ್ಮಿಲನ್ ಕಂಪನಿಯ ಬಾಲಬೋಧೆಗಳು, ಮೈಸೂರು ಸರಕಾರದ ಶಾಲಾ ಪಠ್ಯಗಳು, ವಯಸ್ಕರ ಶಿಕ್ಷಣ ಸಂಸ್ಥೆಗಾಗಿ ರಚಿಸಿದ ಪಠ್ಯಗಳು, ಸ್ಕೌಟ್ ಬಾಲಕರಿಗಾಗಿ ರಚಿಸಿದ ನಾಟಕ, ಕವನ, ಕತೆಗಳು ಅವರು ಮಕ್ಕಳತಜ್ಞರೂ, ಶಿಕ್ಷಣತಜ್ಞರೂ, ಶಿಶುಸಾಹಿತಿಗಳೂ ಆಗಿದ್ದಕ್ಕೆ ಸಾಕ್ಷಿಯಾಗಿವೆ. ಇಂದಿಗೂ ಅವರ ಒಂದನೇ ತರಗತಿಯ ಪಠ್ಯ ಕನ್ನಡ ಕಲಿಯುವವರಿಗೆ ಕಾಮಧೇನು ಆಗಿದೆ. ಎರಡನೆಯ ತರಗತಿ ಪಠ್ಯದ ಪಾಠಗಳು ಮನನೀಯವಾಗಿವೆ. ಇನ್ನು "ರಂಗಣ್ಣನ ಕನಸಿನ ದಿನಗಳು" ಮತ್ತು "ನಾಗರಿಕ ನಾಟಕ" ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಣ್ಯಸ್ಥಾನ ಪಡೆದಿವೆ. ಅವರ ಎಷ್ಟೋ ಮಹತ್ವದ ಲೇಖನಗಳು ನಮ್ಮ ನಾಡಿನ ಸಂಶೋಧಕರ, ಸಾಹಿತ್ಯ ಚರಿತ್ರಕಾರರ ಗಮನಕ್ಕೆ ಬಂದಿಲ್ಲ. ಎಂ.ಆರ್.ಶ್ರೀ. ಬಗ್ಗೆ ಸಂಶೋಧನಾ ಪ್ರಬಂಧ ಬರೆದರೂ ಗಮನಿಸಲಿಲ್ಲ. ಉದಾಹರಣೆಗೆ, ೧೯೩೦ರಲ್ಲಿ ಹೈಸ್ಕೂಲ್ ತರಗತಿಗಳಿಗಾಗಿ ನಿಯಮಿತವಾದ ಪಠ್ಯ 'ಮೈಸೂರು ಕೈಪಿಡಿ' (ಸು.೫೧೨ ಪುಟಗಳು) ಬೃಹತ್ ಗ್ರಂಥವನ್ನು ಎಂ.ಆರ್.ಶ್ರೀ., ವಿ.ಸೀ. ಮತ್ತು ಕಂದಾಡೆ ಕೃಷ್ಣಯ್ಯಂಗಾರ್ ಅವರು ರಚಿಸಿದರು. ಇದರಲ್ಲಿ "ಕನ್ನಡ ಸಾಹಿತ್ಯ ಚರಿತ್ರೆಯ ಸಂಕ್ಷಿಪ್ತ ನೋಟದ ಕನ್ನಡ ಸಾಹಿತ್ಯ" ಎಂಬ ಲೇಖನವನ್ನು (ಪುಟ ೪೭೬–೪೮೯) ಎಂ.ಆರ್.ಶ್ರೀ. ಅವರು ರಚಿಸಿದ್ದಾರೆ. (ವಿ.ಸೀ. ಅವರೇ ಒಮ್ಮೆ ನನಗೆ ತಿಳಿಸಿದ್ದರು.) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಎಂ.ಆರ್.ಶ್ರೀ. ಅವರಿಗೆ ತಿಳಿದಿತ್ತು ಎಂಬುದಕ್ಕೆ ಈ ಲೇಖನ ಸಾಕ್ಷಿ. ಕನ್ನಡ ಸಾಹಿತ್ಯ ಚರಿತ್ರೆಯನ್ನು ವಿನೂತನವಾಗಿ ವರ್ಗೀಕರಿಸಿರುವುದು ಮತ್ತು ಕನ್ನಡದ ಮಹತ್ವ ಕವಿಗಳ ಸಂಕ್ಷಿಪ್ತ ಪರಿಚಯ ನೀಡಿರುವುದು ಇಲ್ಲಿಯ ವಿಶೇಷ. ಎಂ.ಆರ್.ಶ್ರೀ, ಅವರ ಸಮಗ್ರ ಸಾಹಿತ್ಯ ಪ್ರಕಟವಾಗಿಲ್ಲ. ಪ್ರಕಟವಾಗಿರುವ ಲೇಖನಗಳು ಅನೇಕವು ಅನೇಕರ ಗಮನಕ್ಕೆ ಬಂದಿಲ್ಲ.

ವಿಶಿಷ್ಟ ವ್ಯಕ್ತಿತ್ವದಿಂದ ಬೆಳಗಿದ ಕನ್ನಡ ಸಾಹಿತಿಗಳಲ್ಲಿ ಎಂ.ಆರ್.ಶ್ರೀ ಅವರೂ ಒಬ್ಬರು. ಕೇವಲ ಸಾಹಿತ್ಯ ಕ್ಷೇತ್ರದಲ್ಲಷ್ಟೇ ಅಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತು ಸ್ಕೌಟ್ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೊದಲಾದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಅವರು ಜನಿಸಿದ್ದು ೨೮.೮.೧೮೯೨ರಲ್ಲಿ ಹಾಸನದಲ್ಲಿ. ರಾಮಚಂದ್ರರಾವ್ ಮತ್ತು ಸಾವಿತ್ರಮ್ಮ ಅವರ ೨ನೆಯ ಮಗನಾಗಿ ಜನಿಸಿದ ಅವರು ೧೯೧೫ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವೀಧರರಾದರು. ೧೯೧೬ರಲ್ಲಿ ಹಂಗಾಮಿ ಉಪಾಧ್ಯಾಯರಾಗಿ ಶಿಕ್ಷಣಕ್ಷೇತ್ರಕ್ಕೆ ಕಾಲಿಟ್ಟ ಅವರು ೧೯೪೭ರಲ್ಲಿ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ್ ಆಗಿ ನಿವೃತ್ತರಾದರು. ಅವರ ಸೇವಾವಧಿ ಕಾಲದಲ್ಲಿ ಸ್ಕೂಲ್ ಇನ್‌ಸ್ಪೆಕ್ಟರಾಗಿ, ನಾರ್ಮಲ್ ಸ್ಕೂಲ್ ಮುಖ್ಯೋಪಾಧ್ಯಾಯರಾಗಿ, ಎಸ್.ಜೆ. ಪಾಲಿಟೆಕ್ನಿಕ್‌ನಲ್ಲಿ ವಿಜ್ಞಾನ ಬೋಧಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಇಂ–ಕ, ನಿಘಂಟಿನ ಸಹಾಯಕ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ. ಹೀಗೆ ೪ ದಶಕಗಳ ಕಾಲ ಸೇವೆ ಸಲ್ಲಿಸಿದ ಎಂ.ಆರ್.ಶ್ರೀ. ಅವರು ೧೬–೧೯–೧೯೫೩ರಂದು ಕಾಲರಾ ರೋಗಕ್ಕೆ ಬಲಿಯಾಗಿ ನಿಧನರಾದರು.

ಎಂ.ಆರ್.ಶ್ರೀ, ಅವರು ನಾಟಕ, ಕವಿತೆ, ವಿಮರ್ಶೆ, ಚರಿತ್ರೆ, ಮಕ್ಕಳ ಸಾಹಿತ್ಯ, ಶಿಕ್ಷಣ, ನಿಘಂಟು, ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದರೂ ಅವರು ವೀರಶೈವ ಸಾಹಿತ್ಯಕ್ಕೆ ಮತ್ತು ವಚನಸಾಹಿತ್ಯಕ್ಕೆ ಸಲ್ಲಿಸಿರುವ ಕೊಡುಗೆಗಳಿಂದ ವಿಶಿಷ್ಟ ವ್ಯಕ್ತಿಗಳಾಗಿದ್ದಾರೆ. ಅವರ ಸಾಹಿತ್ಯ ಸೇವೆಯಲ್ಲಿ ಸಿಂಹಪಾಲು ವೀರಶೈವ ಸಾಹಿತ್ಯದ್ದೇ ಎಂದರೆ ತಪ್ಪಲ್ಲ. ಅವರು ರಚಿಸಿರುವ ವೀರಶೈವ ಗ್ರಂಥ, ಲೇಖನಗಳು ಹೀಗಿವೆ:

ವಚನ ಧರ್ಮಸಾರ (೧೯೪೬ ಎರಡನೆಯ ಮುದ್ರಣ), **ಭಕ್ತಿ ಭಂಡಾರಿ ಬಸವಣ್ಣನವರು, ಪ್ರಭುಲಿಂಗ ಲೀಲೆಯ ಸಂಗ್ರಹ, ಚೆನ್ನಬಸವ ಪುರಾಣ ಸಂಗ್ರಹ.** ಈ ಗ್ರಂಥಗಳಲ್ಲಿ ಎರಡು ವಚನಸಂಗ್ರಹ–ವಿಮರ್ಶೆ ಗ್ರಂಥಗಳಾದರೆ, ಇನ್ನೆರಡು ಗ್ರಂಥಗಳು ವೀರಶೈವ ಕಾವ್ಯ ಸಂಗ್ರಹ–ವಿಮರ್ಶೆ ಗ್ರಂಥಗಳಾಗಿವೆ. ವೀರಶೈವ ಸಾಹಿತ್ಯ ಕುರಿತು ಸಾಕಷ್ಟು ವಿಮರ್ಶಾ ಲೇಖನಗಳನ್ನು ಬರೆದಿರುವುದು ಇವರ ವಿಶೇಷ ಕೊಡುಗೆಗಳಲ್ಲಿ ಒಂದು, ಶೂನ್ಯ ಸಂಪಾದನೆಗಳನ್ನು ಕುರಿತ ಲೇಖನ ಐತಿಹಾಸಿಕ ಮಹತ್ವದಾಗಿದೆ. ಅವರ ಬರಹಗಳ ಸಂಗ್ರಹವಾದ ಸಾಹಿತ್ಯ ಲೋಕದಲ್ಲಿರುವ ವೀರಶೈವ ಸಂಬಂಧಿಸಿದ ಲೇಖನಗಳು ಗಮನಿಸುವಂತಿವೆ.

೧. ಸಿದ್ಧರಾಮ ಸನ್ನಿಧಿಯಲ್ಲಿ (೩೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ)

೨. ಕರ್ನಾಟಕ ಸಾಹಿತ್ಯ ಚರಿತ್ರೆ (೧೧೫೦-೧೬೦೦) (ಈ ಬರಹದಲ್ಲಿ ವಿಶೇಷವಾಗಿ ಈ ಅವಧಿಯಲ್ಲಿನ ವೀರಶೈವ ಪುರಾಣಗಳ ಬಗ್ಗೆ ನಿರೂಪಿಸಿದ್ದಾರೆ.)

೩. ವೀರಶೈವ ಪುರಾಣ ಲಕ್ಷಣ (ವೀರಶೈವ ಪುರಾಣ ಕಾವ್ಯಗಳ ಪ್ರಸ್ತಾಪವಲ್ಲದೆ. ಅವುಗಳ ವೈಶಿಷ್ಟ್ಯ ಇಲ್ಲಿ ಪ್ರತಿಪಾದಿತವಾಗಿದೆ.)

೪. ಪ್ರಭುಲಿಂಗಲೀಲೆ ಸಂಗ್ರಹದ ಪೀಠಿಕೆ (ಎಂ.ಎಸ್.ಬಸವಲಿಂಗಯ್ಯನವರೊಂದಿಗೆ ಸಂಪಾದಿಸಿದ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಪ್ರಕಟವಾದ ಗ್ರಂಥಗಳಲ್ಲಿ ಒಂದು. "ಪ್ರಭುಲಿಂಗ ಲೀಲೆ ಸಂಗ್ರಹ" ಶ್ರೇಷ್ಠ ಕಾವ್ಯಸಂಗ್ರಹಗಳಲ್ಲಿ ಒಂದಾಗಿದ್ದು ಎಂ.ಆರ್.ಶ್ರೀ. ಅವರ ವಿದ್ವತ್‌ಪೂರ್ಣ ಪೀಠಿಕೆ ಈ ಲೇಖನದಲ್ಲಿದೆ; ಚಾಮರಸ ಮತ್ತು ಅಲ್ಲಮರ ಜೀವನ ಮತ್ತು ಪ್ರಭುಲಿಂಗಲೀಲೆ ಕಾವ್ಯದ ವಿಮರ್ಶೆ ವಿಸ್ತಾರವಾಗಿದೆ.)

೫. ವೀರಶೈವಾಮೃತ ಮಹಾಪುರಾಣದ ಪರಿಚಯ ("ವೀರಶೈವ ಮಹಾ ಸಾಗರಂ" ಆಗಿರುವ ಗುಬ್ಬಿ ಮಲ್ಲಣಾರ್ಯನ ಈ ಕಾವ್ಯವನ್ನು ಶಾಸ್ತ್ರದೃಷ್ಟಿಯಿಂದಲೂ, ಕಾವ್ಯದೃಷ್ಟಿಯಿಂದಲೂ ವಿಮರ್ಶಿಸಿದ್ದಾರೆ.)

೬. ಚೆನ್ನಬಸವಪುರಾಣ ಸಂಗ್ರಹ-ಪೀಠಿಕೆ ಮತ್ತು ವಿಮರ್ಶೆ (ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ೧೯೩೪ರಲ್ಲಿ ಪ್ರಕಟಿಸಿದ ಚೆನ್ನಬಸವ ಪುರಾಣ ಕಾವ್ಯದ ಬಗ್ಗೆ ಪ್ರಬುದ್ಧ ಕರ್ನಾಟಕದಲ್ಲಿ ವಿಮರ್ಶೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಎಂ.ಆರ್.ಶ್ರೀ. ಅವರೇ ಸಂಪಾದಿಸಿದ ಚೆನ್ನಬಸವ ಪುರಾಣ ಸಂಗ್ರಹದ ಪೀಠಿಕೆಯನ್ನು ಗಮನಿಸಿದಾಗ ಚೆನ್ನಬಸವ ಪುರಾಣದ ಸಮಗ್ರ ನೋಟ ತಿಳಿಯುತ್ತದೆ).

೭. ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಸಿದ್ಧರಾಮ ಚಾರಿತ್ರದ ಅಲ್ಲಮಪ್ರಭು, ಅಲ್ಲಮ ಎಂಬ ಶಬ್ದ ಪ್ರಾಚೀನವಾದುದು-(ಈ ಮೂರು ಲೇಖನಗಳಲ್ಲಿ ಅಲ್ಲಮನ ಬಗ್ಗೆ ವಿಮರ್ಶೆ ಮಾಡಿದ್ದಾರೆ).

೮. ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ (ಗ್ರಂಥ ವಿಮರ್ಶೆ)

೯. ಗಿರಿಜಾ ಕಲ್ಯಾಣದ ಶೈಲಿ ಹರಿಹರನ ಸ್ಥಾನ ನಿರ್ದೇಶನ (ಲೇಖನಗಳು)

೧೦. ಷಡಕ್ಷರಿಯ ರಾಜಶೇಖರ ವಿಳಾಸ, ಷಡಕ್ಷರಿಯ ಕೃತಿಗಳು, ಷಡಕ್ಷರಿಯ ಶೈಲಿ, ಕರ್ನಾಟಕ ಸಾಹಿತ್ಯದಲ್ಲಿ ಷಡಕ್ಷರಿಯ ಸ್ಥಾನ ನಿರ್ದೇಶನ (ಲೇಖನಗಳು)

೧೧. ಸಂಪಾದನೆಯ ಪರ್ವತೇಶ್ವರನ ಚತುರಾಚಾರ್ಯ ಪುರಾಣ.

೧೨. ಗುರುಲಿಂಗವಿಭುವಿನ ಭಿಕ್ಷಾಟನೆ ಚರಿತ್ರೆ.

೧೩. ಗುಬ್ಬಿ ಮಲ್ಲಣ್ಣ ಮತ್ತು ತೋಂಟದ ಸಿದ್ಧೇಶ್ವರರ ಕಾಲ ವಿಚಾರ.

೧೪. ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣ.

೧೫. ಶೂನ್ಯ ಸಂಪಾದನೆಗಳು (ಐದು ಶೂನ್ಯ ಸಂಪಾದನೆಗಳ ವಿವರಗಳು). ಈ ಲೇಖನದ ಬಗ್ಗೆ ಬಂದ ಪ್ರತಿಕ್ರಿಯೆಗೆ ಉತ್ತರವಾಗಿ ಶರಣ ಸಾಹಿತ್ಯದಲ್ಲಿ ಎಂ.ಆರ್.ಶ್ರೀ. ಅವರು "ಆಕ್ಷೇಪಣೆಗಳಿಗೆ ಒಂದು ಸಮಾಧಾನ," ಲೇಖನ ಬರೆದಿದ್ದಾರೆ.

೧೬. ಅಲ್ಲಮಪ್ರಭು, ಅಂಬಿಗರ ಚೌಡಯ್ಯ, ದೇವರ ದಾಸಿಮಯ್ಯ, ವಚನಕಾರ್ತಿಯರು, ಸಿದ್ಧರಾಮ, ಸಿದ್ಧನಂಜೇಶ್ವರ, ಚೆನ್ನಬಸವಾಂಕ, ನಿಜಗುಣ ಶಿವಯೋಗಿ, ಚೆನ್ನಬಸವಣ್ಣನವರ ಬೆನ್ನುಡಿಗಳು, ವೀರಭದ್ರರಾಜ– ಈ ೧೦ ಪರಿಚಯಾತ್ಮಕ ಅಪ್ರಕಟಿತ ಲೇಖನಗಳನ್ನು ಡಾ. ನಗುವನಹಳ್ಳಿ ರತ್ನ ನಾಗರಾಜ್ ಅವರು "ಎಂ.ಆರ್.ಶ್ರೀ. ಅವರ ಶರಣ–ಶರಣೆ" ಗ್ರಂಥದಲ್ಲಿ ಪ್ರಕಟಿಸಿದ್ದಾರೆ.

೧೭. ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ "ಸಾಹಿತ್ಯಲೋಕ"ದಲ್ಲಿ ಎಂ.ಆರ್.ಶ್ರೀ. ಅವರ ೨೪ ಪ್ರಕಟಿತ ಲೇಖನಗಳು, ೭ ಅಪ್ರಕಟಿತ ಲೇಖನಗಳು, ೩೭ ಗ್ರಂಥ ವಿಮರ್ಶೆಗಳು ಪ್ರಕಟವಾಗಿವೆ. ಈ ಲೇಖನಗಳಲ್ಲಿ ಬಹುಪಾಲು ಲೇಖನಗಳು ವೀರಶೈವ ಧರ್ಮ–ಸಾಹಿತ್ಯಗಳಿಗೆ ಸಂಬಂಧಿಸಿವೆ. ಉಳಿದವು ಕನ್ನಡ ಸಾಹಿತ್ಯದ ಇತರ ವಿಷಯಗಳಿಗೆ ಸಂಬಂಧಿಸಿವೆ.

ಗ್ರಂಥ ಸಂಗ್ರಹಗಳು

ಎಂ.ಆರ್.ಶ್ರೀ. ಅವರು ಒಳ್ಳೆಯ ಕಾವ್ಯ ಸಂಗ್ರಹಕಾರರು ಮತ್ತು ವಿಮರ್ಶಕರು. ಪ್ರಕಟವಾದ ಕಾವ್ಯ ಸಂಗ್ರಹಗಳು ಎರಡೇ – "ಪ್ರಭುಲಿಂಗ ಲೀಲೆ ಕಾವ್ಯ ಸಂಗ್ರಹ" ಮತ್ತು "ಚೆನ್ನಬಸವ ಪುರಾಣ ಕಾವ್ಯ ಸಂಗ್ರಹ." ಅಪ್ರಕಟಿತ ಕಾವ್ಯ ಸಂಗ್ರಹಗಳೂ ಇವೆ. ಬಸವಪುರಾಣ ಸಂಗ್ರಹ, ಶಬರ ಶಂಕರ ವಿಳಾಸ ಸಂಗ್ರಹ, ರಾಜಶೇಖರ ವಿಳಾಸ ಸಂಗ್ರಹ, ಇತ್ಯಾದಿ. ಅಷ್ಟೇ ಅಲ್ಲ ಪೂರ್ಣಕಾವ್ಯಗಳನ್ನು ಕವಿ–ಕೃತಿ ಪೀಠಿಕೆಯೊಂದಿಗೆ ಪರಿಷ್ಕರಿಸಿ ಪ್ರಕಟನೆಗೆ ಸಿದ್ಧಪಡಿಸಿದ್ದರು. ಹರಿಹರ, ಚತುರ್ಮುಖ ಬೊಮ್ಮರಸ, ಸರ್ವಜ್ಞ, ವಿರಕ್ತ ತೋಂಟದಾರ್ಯ ಸಿದ್ಧೇಶ್ವರ ಪುರಾಣ,

ಚೆನ್ನ ಬಸವಾಂಕನ ಮಹಾದೇವಿಯಕ್ಕನ ಪುರಾಣ, ನಿಜಗುಣ ಶಿವಯೋಗಿಯ ಏಳು ಕಾವ್ಯಗಳು, ವೀರಶೈವಾಮೃತ ಪುರಾಣ, ಗುರುರಾಜ ಚರಿತ್ರೆ, ಶಿವತತ್ವ ಚಿಂತಾಮಣಿ, ರಾಘವಾಂಕನ ಕಾವ್ಯ, ಇತ್ಯಾದಿ ವೀರಶೈವ ಕಾವ್ಯಗಳನ್ನು ಸಮಗ್ರವಾಗಿ ಸಂಪಾದಿಸಿದರು. ವೀರಶೈವ ಸಾಹಿತ್ಯ ಚರಿತ್ರೆಯನ್ನೇ ಬರೆಯುವ ಗುರಿ ಇಟ್ಟುಕೊಂಡು ಎಲ್ಲ ವೀರಶೈವ ಕಾವ್ಯಗಳನ್ನು ಅಧ್ಯಯನ ಮಾಡಿದ್ದರು. (ಈ ಬಗ್ಗೆ ಒಮ್ಮೆ ಪ್ರಸ್ತಾಪಿಸಿದಾಗ ಅವರು "ಹೌದು. ಆ ಉದ್ದೇಶ ಇತ್ತು" ಎಂದು ಹೇಳಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವರ ಪರಿಚಯ ನಾನು ವಿದ್ಯಾರ್ಥಿ ಆಗಿದ್ದಾಗಿನಿಂದ ಇತ್ತು. ಅವರ ಮಕ್ಕಳಲ್ಲಿ ಒಬ್ಬರಾದ ಭೀಮರಾವ್ ಶಾಲಾ ವಿದ್ಯಾರ್ಥಿಯಾಗಿದ್ದಾಗಿನಿಂದ ನನ್ನ ಗೆಳೆಯನಾಗಿದ್ದ. ಅವರ ಮನೆಯ ಹತ್ತಿರದಲ್ಲೇ ನಮ್ಮ ಮನೆಯಿತ್ತು ಬೆಂಗಳೂರಿನ ಚಾಮರಾಜಪೇಟೆಯಲ್ಲಿ).

ಮೇಲ್ಕಂಡ ಕವಿ–ಕೃತಿ, ಕಾವ್ಯ ಸಂಗ್ರಹ, ಲೇಖನ, ವಿಮರ್ಶೆಗಳನ್ನು ಕಂಡಾಗ ಎಂ.ಆರ್.ಶ್ರೀ. ಅವರು ಗಣ್ಯ ವೀರಶೈವ ಸಾಹಿತಿ ವಿದ್ವಾಂಸರು ಆಗಿದ್ದರು ಎಂಬುದು ಸುವ್ಯಕ್ತವಾಗುತ್ತದೆ.

ಬಹುಮುಖ ಪ್ರತಿಭೆ

ಎಂ.ಆರ್.ಶ್ರೀ. ಅವರು ಬಹುಮುಖ ಪ್ರತಿಭೆ ಉಳ್ಳವರು ಆಗಿದ್ದರು. **ಸಾವಿತ್ರಿ, ಮಹಾತ್ಯಾಗ, ರಂಗಣ್ಣನ ಕನಸಿನ ದಿನಗಳು** ಕೃತಿಗಳನ್ನು ರಚಿಸಿದ ಕಾದಂಬರಿಕಾರರೂ, **ಕವಿಯ ಸೋಲು** ಕವನಸಂಕಲನದಿಂದ ಮತ್ತು **ಕಂಠೀರವ ವಿಜಯ, ನಾಗರಿಕ** ಮೊದಲಾದ ನಾಟಕಗಳನ್ನು ಸರಳರಗಳೆಯಲ್ಲಿ ರಚಿಸಿದ ಕವಿಗಳೂ, **ಸ್ಕೌಟುಗಳ ಕೈಪಿಡಿ, ಉಪಾಧ್ಯಾಯರ ಆರೋಗ್ಯ ಶಾಸ್ತ್ರ** ಮೊದಲಾದ ಗ್ರಂಥಗಳ ರಚಿಸಿದ ಶಿಕ್ಷಣತಜ್ಞರೂ, ಕನ್ನಡ ಒಂದನೆಯ ಪುಸ್ತಕ, ಎರಡನೆಯ ಪುಸ್ತಕ, ಮೆಕ್ಮಿಲನ್ ಬಾಲಬೋಧೆ, ವಯಸ್ಕರ ಶಿಕ್ಷಣ, ಅಕ್ಷರಕಲಿಕೆ ಪುಸ್ತಕಗಳನ್ನು ರಚಿಸಿದ ಮಕ್ಕಳ ಶಿಕ್ಷಣತಜ್ಞರೂ ಇಂಗ್ಲಿಷ್–ಕನ್ನಡ ನಿಘಂಟಿನ ಕಾರ್ಯದ ಮೂಲಕ ಕೋಶಕಾರರೂ, **ಆಯಸ್ಕಾಂತ ಮತ್ತು ವಿದ್ಯುಚ್ಛಕ್ತಿ** ಗ್ರಂಥ ರಚನೆ ಮತ್ತು ಬೋಧನೆಗಳಿಂದ ವಿಜ್ಞಾನ ಉಪಾಧ್ಯಾಯರೂ ಆದ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಂಘಟನಾ ಸಾಹಿತಿಗಳೂ ಆಗಿದ್ದರು.

ಇಷ್ಟೆಲ್ಲಾ ವಿವಿಧ ಕ್ಷೇತ್ರಗಳಲ್ಲಿ ಪರಿಶ್ರಮ ಹೊಂದಿದ್ದರೂ, ಕೃತಿಗಳನ್ನು ರಚಿಸಿದ್ದರೂ, ಅವರ ಒಲವೆಲ್ಲಾ ವೀರಶೈವ ಸಾಹಿತ್ಯ ಧರ್ಮದ ಕಡೆಗೇ ಇತ್ತು. ಅದರಲ್ಲೂ ವೀರಶೈವ ಕಾವ್ಯ, ವಚನಸಾಹಿತ್ಯ ಅವರ ಎರಡು ಕಣ್ಣುಗಳಾಗಿದ್ದವು ವಚನಸಾಹಿತ್ಯಾನುಭವಕ್ಕೆ ೧೯೩೦ರಲ್ಲಿ ಸೊಲ್ಲಾಪುರದಲ್ಲಿ ಸಿದ್ಧರಾಮ ಕ್ಷೇತ್ರದಲ್ಲಿ

ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಹೇಳಿದ ಮಾತುಗಳೇ ಸಾಕ್ಷಿಯಾಗಿವೆ.

"ಕನ್ನಡಕ್ಕೆ ವಿಶಿಷ್ಟಲಕ್ಷಣವಾಗಿರುವ ವಚನಸಾಹಿತ್ಯವನ್ನು ಶರಣರು ನಮಗೆ ರಚನೆ ಮಾಡಿಕೊಟ್ಟಿದ್ದಾರೆ. ಸಾಹಿತ್ಯ ದೇವಿಯ ತಪೋಭೂಮಿಯಲ್ಲಿ ಅನುಭವ ಮಂಟಪ ಪ್ರಕಾಶಿಸುತ್ತಿದೆ. ಇತರ ಸಾಹಿತ್ಯಗಳಲ್ಲಿ ಇದಕ್ಕೆ ಸಂವಾದಿಯಾದುದನ್ನು ತೋರಿಸಿಕೊಡಲಿ" (ಪುಟ ೪೬೭)-(ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಭಾಷಣಗಳು ಸಂಪುಟ ೨).

ಎಂ.ಆರ್.ಶ್ರೀ ಅವರ ಗ್ರಂಥ-ಲೇಖನಗಳು ವಿಶಿಷ್ಟವಾಗಿರುವಂತೆಯೇ ಅವರ ವ್ಯಕ್ತಿತ್ವ, ಚಾರಿತ್ರ್ಯವೂ ಆದರ್ಶಪ್ರಾಯವಾಗಿ ಅನುಕರಣೀಯವಾಗಿವೆ. ನೋಡಲು ಅತಿ ಸುಂದರ ವ್ಯಕ್ತಿಯಾದ ಎಂ.ಆರ್.ಶ್ರೀ. ಅವರು "ಎತ್ತರವಾದ ಆಳು, ಕೆಂಬಿಳುಪಿನ ಮೈಬಣ್ಣ, ನಗುಮುಖ, ಸರಿಗೆಯ ಪಂಚೆ, ವಿನಯದ ಮಾತು, ಕೈಯಲ್ಲಿ ಸಣ್ಣ ಬೆತ್ತ, ಠೀವಿಯ ನಡಿಗೆ"- ಇವು ನವಯೌವ್ವನದ ಮರುಕಳಕೆಯಂತಿರುವ ಎಂ.ಆರ್.ಶ್ರೀ. ಆದರೆ "ಜರಿಪೇಟ, ಪಟ್ಟೆಯಾಗಿ ಮಡಿಸಿದ ಶಲ್ಯ, ಎದ್ದು ತೋರುವ ಕಿವಿ ಕಡಕುಗಳಿಂದ, ಇಳಿವಯಸ್ಸಿನ ಎಂ.ಆರ್.ಶ್ರೀ. ಆಗಿದ್ದರು." ಡಿ.ವಿ.ಜಿ. ಅವರು ಜ್ಞಾಪಕ ಚಿತ್ರ ಶಾಲೆಯಲ್ಲಿ ಹೇಳುವಂತೆ, "ನಾನು ಕಂಡಿರುವ ಸ್ಫುರದ್ರೂಪಿಗಳಾದ ಗಂಡಸರಲ್ಲೆಲ್ಲ ಗಣ್ಯರಾದವರು ಎಂ.ಆರ್.ಶ್ರೀ. ಇನ್ನೊಬ್ಬರು ಆ ಕಾಲಕ್ಕೆ ರಸಿಕರು, ಎತ್ತರದ ವ್ಯಕ್ತಿಗಳು, ಗಣ್ಯರು, ಸಾಹಿತಿಗಳು, ವಿದ್ವಾಂಸರು, ಸ್ಫುರದ್ರೂಪಿಗಳು ಆದವರು ಎಂದರೆ ಟಿ.ಎಸ್.ವೆಂಕಣ್ಣಯ್ಯನವರು ಎನ್ನಬಹುದು."

ಆಕರ್ಷಕ ರೂಪಿನಂತೆಯೇ ಆಕರ್ಷಕ ವಾಗ್ಝರಿಯ ವಾಗ್ಮಿಗಳೂ ಅವರಾಗಿದ್ದರು. ಅವರ ಉಪನ್ಯಾಸ ರಸದೌತಣವಿದ್ದಂತೆ. ರನ್ನ, ಬಸವಣ್ಣ, ಕುಮಾರವ್ಯಾಸ ಯಾರೇ ಇರಲಿ, ಅವರ ಬಗ್ಗೆ, ಅವರ ಕೃತಿಗಳ ಬಗ್ಗೆ ಮಾತನಾಡಲು ಹೊರಟರೆ ಸಾಕ್ಷಾತ್ ಶಾರದೆಯೇ ನಲಿದು ನರ್ತಿಸುತ್ತಿದ್ದಳು ಅವರ ಜಿಹ್ವೆಯಲ್ಲಿ. ಅವರ ಸ್ಮರಣಶಕ್ತಿ ಅದ್ಭುತ. ಅನಕೃ ಹೇಳುವಂತೆ "ಕನ್ನಡ ನಾಡಿನ ಪುಸ್ತಕ ಭಂಡಾರಗಳಲ್ಲಿರುವ ವೀರಶೈವ ಸಾಹಿತ್ಯ ಗ್ರಂಥಗಳೆಲ್ಲಾ ನಶಿಸಿಹೋದರೂ ಶ್ರೀನಿವಾಸಮೂರ್ತಿಗಳು ಒಬ್ಬರಿದ್ದರೆ ಅವನ್ನು ಪುನರುಜ್ಜೀವನಗೊಳಿಸಬಹುದು."

ನೆನಪಿನ ಗಣಿಯಾದ ವಿದ್ವಾಂಸ ಡಿ.ಎಲ್.ನರಸಿಂಹಾಚಾರ್ಯರ ಮಾತಿದು: "ಸಮಗ್ರ ವಚನಸಾಹಿತ್ಯ ಯಾವ ಕಾರಣದಿಂದಲಾದರೂ ನಮ್ಮ ಕೈತಪ್ಪಿ ಹೋದರೆ ಅದನ್ನು ಸಂಪೂರ್ಣವಾಗಿ ಉಳಿಸುವ ನೆನಪು ಅವರದಾಗಿತ್ತು." ಡಿ.ವಿ.ಜಿ. ಹೇಳುವಂತೆ, "ಸಾವಿರಾರು ವಚನಗಳು ಅವರಿಗೆ ಮುಖಸ್ಥವಾಗಿದ್ದವು." ಇಂಥವರಿಗೆ 'ವಚನವಾಙ್ಮಯ ವಿಶಾರದ' ಎಂಬ ಪ್ರಶಸ್ತಿ ದೊರಕಿದ್ದು ಸಾರ್ಥಕವಾದದ್ದು.

ಎಂ.ಆರ್.ಶ್ರೀ. ಅವರ ವ್ಯಕ್ತಿತ್ವದ ಇನ್ನೊಂದು ಮುಖ ಎಂದರೆ ವಿನೋದಪರತೆ. ಇದಕ್ಕೆ ಹತ್ತಾರು ನಿದರ್ಶನಗಳನ್ನು ನೀಡಬಹುದು. ನಾನು ಕಂಡ ಒಂದು ಪ್ರಸಂಗ: ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮಧ್ಯಾಹ್ನ ಊಟಕ್ಕೆ ಮನೆಗೆ ಹೋಗುತ್ತಿದ್ದರು (ಆಗ ಪರಿಷತ್ತು ಬೆಳಿಗ್ಗೆ ೯ ರಿಂದ ೧೨, ಸಂಜೆ ೪ರಿಂದ ೭ರ ವರೆಗೆ ತೆರೆದಿರುತ್ತಿತ್ತು. ಈಗಿನ ಹಾಗೆ ಸರಕಾರಿ ಕಚೇರಿ ವೇಳೆ ಆಗಿರಲಿಲ್ಲ.) ಒಮ್ಮೆ ಅವರ ಜತೆಯಲ್ಲಿ ನಾನೂ ಹೋಗುತ್ತಿದ್ದೆ. ಚಾಮರಾಜಪೇಟೆ ನಾಲ್ಕನೇ ರಸ್ತೆಯಲ್ಲಿ ಅವರ ಮನೆಯ ಬಳಿ ಅವರು ಬರುವ ವೇಳೆಗೆ ಅವರ ಶ್ರೀಮತಿಯವರು ಸರಸರನೇ ರೀ, ರೀ, ಎಂದು ಕರೆಯುತ್ತಾ ಬಂದರು, ಎಂ.ಆರ್.ಶ್ರೀ. ತಲೆ ಎತ್ತಿ ನೋಡದೇ ಮನೆ ಬಾಗಿಲವರೆಗೆ ಬಂದರು. ಬಾಗಿಲಲ್ಲಿ ಅವರ ಮನೆಯವರು, "ಅಲ್ಲಿಂದ ರಸ್ತೇಲಿ ನಿಮ್ಮನ್ನು ಕೂಗುತ್ತಾ ಬರುತ್ತಲೇ ಇದ್ದೀನಿ, ನೀವು ತಲೆಯೆತ್ತಿ ನೋಡೋದೇ ಬೇಡವಾ?" ಎಂದರು, (ಆಗ ಅವರು ಮನೆಗೆ ಬಂದ ನೆಂಟರಿಗೆ ವಿಳ್ಳೇದೆಲೆ, ತೆಂಗಿನಕಾಯಿ, ಇತ್ಯಾದಿ ಅಂಗಡಿಯಿಂದ ತರಲು ಹೊರಟಿದ್ದರು) ಅದಕ್ಕೆ ಎಂ.ಆರ್.ಶ್ರೀ. ಅವರು ಪ್ರಶಾಂತವಾಗಿ ಹೇಳಿದರು, "ಲೇ, ನಂಗೆ ರಸ್ತೇಲಿ ಹೆಂಗಸರ ಕಡೆ ತಲೆ ಎತ್ತಿ ನೋಡೋ ಅಭ್ಯಾಸವಿಲ್ಲ ಕಣೆ." ಈ ಸಂದರ್ಭದಲ್ಲಿ ನಾನು ಅವರ ಮಗ ನನ್ನ ಗೆಳೆಯ ಭೀಮನನ್ನು ನೋಡಲು ಅವರೊಡನೆ ಅವರ ಮನೆಗೆ ಹೊರಟಿದ್ದೆ.

ಇನ್ನೊಂದು ಪ್ರಸಂಗವನ್ನು ಹಾ.ಮಾ.ನಾ ಅವರು ವಿವರಿಸಿದ್ದಾರೆ: ಹಾ.ಮಾ.ನಾ. ಅವರ ಅತಿಥಿಗಳಾಗಿ ಭಾರತದ ಗಮಕಿ ಬಿಂದೂರಾಯರು, ಶ್ರೀನಿವಾಸಮೂರ್ತಿಗಳು ಅವರ ಮನೆಗೆ ಬಂದಿದ್ದರು. ಅಂದು ಗುರುವಾರವಾದ್ದರಿಂದ ಗಮಕಿ ಬಿಂದೂರಾಯರು (ಸಂಪ್ರದಾಯಸ್ಥರು) ರಾತ್ರಿ ಊಟ ಮಾಡುವುದಿಲ್ಲ, ಫಲಾಹಾರ ಸ್ವೀಕರಿಸುತ್ತೇನೆ ಎಂದರು. ಆಗ ಶ್ರೀನಿವಾಸಮೂರ್ತಿಗಳು ಹಾ.ಮಾ.ನಾ. ಅವರಿಗೆ ಹೇಳಿದರಂತೆ: "ನೋಡಪ್ಪಾ, ಫಲಾಹಾರದ ಪ್ರಮಾಣ ಊಟಕ್ಕಿಂತ ಕಡಿಮೆ ಆಗಿರಬಾರದು!" "ಅರ್ಥವಾಯಿತು" ಎಂದರಂತೆ ಹಾ.ಮಾ.ನಾ. ಅವರು.

ಎಂ.ಆರ್.ಶ್ರೀ ಅವರ ಮಿತ್ರತ್ವ ಆದರ್ಶಪ್ರಾಯವಾದುದು. ತಮ್ಮ ಮಿತ್ರರ ಸುಖದುಃಖಗಳಲ್ಲಿ ಭಾಗಿಯಾಗುವುದು, ನೆರವಾಗುವುದು ಅವರಿಗೆ ಸಂಭ್ರಮಿಸುವ ಕಾರ್ಯವಾಗಿತ್ತು.

ಒಮ್ಮೆ ವಿ.ಸೀ. ಅವರು ತಮ್ಮ ಮಗನ ಮುಂಜಿ ಮಾಡಲು ಮನೆಯಲ್ಲಿ ಸ್ಥಳಾವಕಾಶ ಸಾಲದು, ಇನ್ನೆಲ್ಲಿ ಮಾಡುವುದು ಎಂದು ಚಿಂತಾಕ್ರಾಂತರಾಗಿದ್ದರು. ಈ ವಿಷಯವನ್ನು ತಿಳಿದ ಆಪ್ತಮಿತ್ರರಾಗಿದ್ದ ಎಂ.ಆರ್.ಶ್ರೀಯವರು ವಿ.ಸೀ. ಅವರನ್ನು ಕರೆದು "ಅಲ್ಲಯ್ಯಾ, ನನ್ನ ಮನೆಯ ಹಜಾರ ಸಾಕಷ್ಟು ದೊಡ್ಡದಲ್ಲವೇ?

ನಮ್ಮ ಕುಟುಂಬ ನಿನ್ನ ಸೇವೆಗೆ ಇರುತ್ತದೆ ಎಂಬುದನ್ನು ಮರೆತುಹೋದೆಯಾ?" ಎಂದು ತಮ್ಮ ಮನೆಯಲ್ಲಿ ಮುಂಜಿಗೆ ವ್ಯವಸ್ಥೆ ಮಾಡುವ ಏರ್ಪಾಡುಗಳಿಗೆ ತಾವೇ ಮುಂದಾದರು. ಇದಲ್ಲವೇ ಸ್ನೇಹದ ರೀತಿ, ಪ್ರೀತಿ!

ಎಂ.ಆರ್.ಶ್ರೀ. ಅವರು ಶಿಸ್ತಿನ ಸಿಪಾಯಿ, ಅಚ್ಚುಕಟ್ಟಿನ ಮೂರ್ತಿ. ಕೇವಲ ಉಡುಪಷ್ಟೇ ಶುಭ್ರವಲ್ಲ, ಅವರ ಕರ್ತವ್ಯಶೀಲತೆ ಪರಿಶುಭ್ರ; ನಾನೇ ಕಂಡಂತೆ ಪರಿಷತ್ತಿನಲ್ಲಿ ನಡೆದ ಒಂದು ಪ್ರಸಂಗ: ಹೆಂಗಸರು ಗಂಡಸರು ಅವರ ಕಾಲದಲ್ಲಿ ಪು.ತಿ.ನ. ಅವರ ಗೋಕುಲ ನಿರ್ಗಮನ ಸಮಗ್ರ ಕಾವ್ಯದ ವಾಚನವನ್ನು ಏರ್ಪಡಿಸಿದ್ದರು. ಪ್ರತಿವಾರಕ್ಕೊಮ್ಮೆ ಎಲ್.ಜಿ. ಸುಮಿತ್ರ, ಕಮಲ, ವಿಮಲ–ಎಲ್.ಗುಂಡಪ್ಪನವರ ಮಕ್ಕಳು–ಹಾಡುತ್ತಿದ್ದರು, ಸಂಜೆ ೪ರ ಸುಮಾರಿಗೆ ಹಳೇ ಸಭಾಂಗಣದಲ್ಲಿ ಜಮಖಾನ ಹಾಸಿ (ಆಗ ಕುರ್ಚಿಗಳಿರಲಿಲ್ಲ ಪರಿಷತ್ತಿನಲ್ಲಿ) ಎರಡು ಚಿಕ್ಕ ಸ್ಕ್ರೀನ್‌ಗಳನ್ನು ಅಡ್ಡ ಇಡುತ್ತಿದ್ದರು (ಸ್ತ್ರೀ–ಪುರುಷರು ಬೇರೆ ಬೇರೆ ಕುಳಿತುಕೊಳ್ಳಲು.) ಒಂದು ದಿನ ಪರಿಷತ್ತಿನ ಜವಾನರಲ್ಲಿ ಒಬ್ಬನಾದ (ಆಗಿದ್ದವರು ಇಬ್ಬರೇ ಹನುಮಯ್ಯ,–ಕರಿಯಣ್ಣ) ಕರಿಯಣ್ಣ ತಡವಾಗಿ ಬಂದ. ಆ ವೇಳೆಗೆ ಅಲ್ಲೇ ವಾಚನಾಲಯದಲ್ಲಿದ್ದ ನಮ್ಮನ್ನೆಲ್ಲ ಕಂಡು ನಮ್ಮ ಸಹಾಯದಿಂದ ಎಂ.ಆರ್.ಶ್ರೀ. ಅವರು ಕಸಪೊರಕೆ ತಂದು ಕಸ ಗುಡಿಸಿ ಜಮಖಾನ ಹಾಸಿ ಕಾರ್ಯಕ್ರಮಕ್ಕೆ ಸಿದ್ಧತೆ ಪೂರೈಸಿದರು. ಆ ವೇಳೆಗೆ ಬಂದ ಕರಿಯಣ್ಣ "ತಪ್ಪಾಯಿತು. ಸ್ವಾಮಿ, ತಡವಾಯಿತು" ಎಂದ. ಅದಕ್ಕೆ ಎಂ.ಆರ್.ಶ್ರೀ, "ನೋಡು, ನೀನೂ ಜವಾನ: ನಾನೂ ಜವಾನ. ಪರಿಷತ್ತಿನಲ್ಲಿ ನೀನು ಚಿಕ್ಕ ಜವಾನ, ನಾನು ದೊಡ್ಡ ಜವಾನ. ವ್ಯವಸ್ಥೆಯಲ್ಲಿ ಏರುಪೇರಾದರೆ ನಿನ್ನನ್ನು ಯಾರೂ ಕೇಳೋಲ್ಲ. ನನ್ನನ್ನು, ದೊಡ್ಡ ಜವಾನನನ್ನು, ಕೇಳ್ತಾರೆ" ಎಂದರು. ಅಂದಿನಿಂದ ಅವರಿದ್ದಷ್ಟು ಕಾಲ ಒಂದು ದಿನವೂ ಕರಿಯಣ್ಣ ಪರಿಷತ್ತಿಗೆ ತಡವಾಗಿ ಬರಲಿಲ್ಲ. ಎಂ.ಆರ್.ಶ್ರೀ. ಪರಿಷತ್ತಿನ ಒಳಗೆ ಬರುವಾಗ ತಮ್ಮ ಪಾದರಕ್ಷೆಗಳನ್ನು ಹೊರಗೆ ಬಿಡುತ್ತಿದ್ದರು. ಸಾಹಿತ್ಯ ಪರಿಷತ್ತು ಶಾರದೆಯ ದೇಗುಲ, ತಾವು ಸೇವೆ ಮಾಡುವ ಭಕ್ತರು ಎಂದು ಎಂ.ಆರ್.ಶ್ರೀ. ತಿಳಿದಿದ್ದರು. ಇಂಥ ಪ್ರಸಂಗಗಳು ಇನ್ನೆಷ್ಟೋ!

ಎಂ.ಆರ್.ಶ್ರೀ ಅವರು ನಿಟ್ಟೂರು ಶ್ರೀನಿವಾಸರಾಯರಿಗೆ ಶಿವಮೊಗ್ಗ ಹೈಸ್ಕೂಲಿನಲ್ಲಿ ಗುರುಗಳಾಗಿದ್ದರು. ಅವರು ಪಾಠ ಮಾಡುತ್ತಿದ್ದಾಗ ಗಲಾಟೆ ಮಾಡಿದ ಹುಡುಗನನ್ನು ಹತ್ತಿರ ಇದ್ದ ಹುಡಿಗೆಯರ ಶಾಲೆಯವರೆಗೆ ಹೋಗಿ ಬರುವಂತೆ ಮಾಡುತ್ತಿದ್ದರಂತೆ. ಆ ಕಾಲಕ್ಕೆ ಹುಡುಗಿಯರ ಶಾಲೆಯ ಮುಂದೆ ಹುಡುಗರು ತಿರುಗಾಡಿದರೆ ಅವಮಾನವೆಂದು ಭಾವಿಸುತ್ತಿದ್ದ ಕಾಲ. ನಿಟ್ಟೂರರಿಗೆ ಎಂ.ಆರ್.ಶ್ರೀ ಬಗ್ಗೆ ಬಲು ಗೌರವ. ಅವರ ಆತ್ಮಕಥೆಯನ್ನು ಹೇಳಿ ಬರೆಯಿಸಿದಾಗ ನಾನು, ಹೆಚ್.ಕೆ.ರಂಗನಾಥ್, ಎಂ.ಎಚ್.ಕೃಷ್ಣಯ್ಯ ಪ್ರಶ್ನೆಗಳನ್ನು ಕೇಳುತ್ತಾ ಹೋದೆವು

ಅವರು ಉತ್ತರಿಸುತ್ತಾ ಹೋದರು. ಆಗ ಹೇಳಿದ ಮಾತುಗಳಿವು. ಎಂ.ಆರ್.ಶ್ರೀ ಬಗ್ಗೆ ಮಾತು ಬಂದಾಗಲೆಲ್ಲ 'ಮಹಾನುಭಾವರು ನಮ್ಮ ಗುರುಗಳು' ಎಂದು ಎರಡು ಕೈಗಳಲ್ಲಿ ನಮಸ್ಕರಿಸಿ ಅವರ ಬಗ್ಗೆ ಮಾತನಾಡಲು ಪ್ರಾರಂಭಿಸುತ್ತಿದ್ದರು. ಎಂ.ಆರ್.ಶ್ರೀ ಅವರ ಬಗ್ಗೆ ವಿದ್ಯಾರ್ಥಿಗಳಿಗೆ ಇದ್ದ ಗೌರವಭಾವವನ್ನು ಈ ಪ್ರಸಂಗ ಸೂಚಿಸುತ್ತದೆ.

ಎಂ.ಆರ್.ಶ್ರೀ ವಿನಯಶೀಲತೆಗೆ ಒಂದು ನಿದರ್ಶನವೆಂದರೆ ಅವರಿಗೆ ಒಂದು ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ. ಸಾಹಿತ್ಯ ಪರಿಷತ್ತಿನ ಸಿಬ್ಬಂದಿಗೆ ಅವರನ್ನು ಕಂಡರೆ ಅಪಾರ ಗೌರವ, ಅಷ್ಟೆ ಭಯವೂ ಇತ್ತು. ಕೆಲಸ ಸರಿಯಾಗಿ ಮಾಡದಿದ್ದರೆ ಸೌಮ್ಯವಾಗಿ ವಿನಯದ ನುಡಿಗಳಲ್ಲೇ ಕ್ರಮ ಕೈಗೊಳ್ಳುತ್ತಿದ್ದರು. ಒಮ್ಮೆ ಸಿಬ್ಬಂದಿಯ ಪದಾಧಿಕಾರಿಯವರು ಅಂದಿನ ಹಣದಲ್ಲಿ ತುರ್ತಾಗಿ ವೈಯಕ್ತಿಕ ವೆಚ್ಚಕ್ಕಾಗಿ ಸ್ವಲ್ಪ ಹಣವನ್ನು ಬಳಸಿಕೊಂಡಿದ್ದರು. ಮಾರನೇದಿನ ಆ ಹಣವನ್ನು ಪರಿಷತ್ತಿಗೆ ಭರ್ತಿಮಾಡುವವರಿದ್ದರು. ಹಣದ ಲೆಕ್ಕವನ್ನು ಅವರು ಒಪ್ಪಿಸುತ್ತಿದ್ದಾಗ ಎಂ.ಆರ್.ಶ್ರೀ ಅವರ ಗಮನಕ್ಕೆ ಈ ಸಂಗತಿ ಬಂದಿತು. ಕೂಡಲೇ ಎಂ.ಆರ್.ಶ್ರೀ ಒಂದು ಬಿಳಿ ಹಾಳೆ ತಂದಿರಿಸಿ "ರಾಜೀನಾಮೆ ಬರೆಯಿರಿ ನಿಮ್ಮ ಸ್ಥಾನಕ್ಕೆ" ಎಂದು ಬರೆಯಿಸಿಕೊಂಡರು. ತಮ್ಮ ಜೇಬಿನಿಂದ ಆ ದಿನದ ಪರಿಷತ್ತಿನ ಹಣದ ಜಮೆಗೆ ಆ ಮೊತ್ತವನ್ನು ತಾವೇ ಸೇರಿಸಿ ಅದನ್ನು ಬ್ಯಾಂಕಿಗೆ ಕಟ್ಟಿಸಿದರು. ಈ ಘಟನೆ ನಡೆದಾಗ ಪರಿಷತ್ತಿನ ಗ್ರಂಥಭಂಡಾರದಲ್ಲಿ ಪುಸ್ತಕ ಓದುತ್ತಾ ಕುಳಿತಿದ್ದೆ. ಆಗ ಪುಸ್ತಕಭಂಡಾರ, ಕಚೇರಿ ಒಟ್ಟಿಗೆ ಒಂದೇ ಕಡೆ ಇತ್ತು. ಕಚೇರಿಯ ವಿದ್ಯಮಾನವೆಲ್ಲ ಪುಸ್ತಕ ಭಂಡಾರದಲ್ಲಿದ್ದವರಿಗೆ ತಿಳಿಯುತ್ತಿತ್ತು. ಹೀಗೆ ಕಟ್ಟುನಿಟ್ಟಿನ ಶಿಸ್ತಿನವರಾಗಿದ್ದರು ಎಂ.ಆರ್.ಶ್ರೀ.

ಕನ್ನಡದಲ್ಲಿ ಪಂಪ ಪೊನ್ನ ರನ್ನರು ರತ್ನತ್ರಯರು ಎಂದು ಪ್ರಸಿದ್ಧರಾಗಿದ್ದಾರಷ್ಟೆ. ಹಾಗೆಯೇ ಆಧುನಿಕ ಕನ್ನಡದಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರು, ತಿರುಮಲೆ ತಾತಾಚಾರ್ಯಶರ್ಮರು, ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ಶರ್ಮತ್ರಯರೆಂದೂ, ಆರ್.ನರಸಿಂಹಾಚಾರ್, ಡಿ.ಎಲ್.ನರಸಿಂಹಾಚಾರ್, ಪು.ತಿ.ನರಸಿಂಹಾಚಾರ್ ಆಚಾರ್ಯತ್ರಯರೆಂದೂ ಹೆಸರಾದಂತೆ ಬಿ.ಎಂ.ಶ್ರೀ., ಎಂ.ಆರ್.ಶ್ರೀ., ತೀ.ನಂ.ಶ್ರೀ. ಅವರು ಶ್ರೀತ್ರಯರೆಂದು ಹೆಸರಾಗಿದ್ದಾರೆ. ಶ್ರೀತ್ರಯರಲ್ಲಿ ಎಂ.ಆರ್.ಶ್ರೀ. ಅವರು ವ್ಯಕ್ತಿತ್ವದಲ್ಲಿ ಎದ್ದುಕಾಣುವ ವ್ಯಕ್ತಿ ಆಗಿದ್ದಾರೆ.

ಎಂ.ಆರ್.ಶ್ರೀ. ಅವರ ಒಂದೊಂದು ಕೃತಿಯೂ ವಿಶಿಷ್ಟವೇ ಆಗಿದ್ದರೂ ಅವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟ ಕೃತಿಗಳು ಕೆಲವೇ. ಅವುಗಳಲ್ಲಿ ಮುಖ್ಯವಾದುದು "ವಚನಧರ್ಮಸಾರ." ಸಮಗ್ರ ವಚನಾವಲೋಕನದ ಹಲವು

ಕೃತಿಗಳು ಬಂದಿದ್ದರೂ "ವಚನಧರ್ಮಸಾರ" ಇಂದಿಗೂ ದಾರಿದೀಪದ ಕೃತಿಯಾಗಿ ಉಳಿದಿದೆ. ವಚನಸಾಹಿತ್ಯ ಪ್ರವೇಶಕ್ಕೆ, ನಿಷ್ಪಕ್ಷಪಾತ ವಿಮರ್ಶೆಗೆ, ಆಳ ಅಧ್ಯಯನಕ್ಕೆ ಹೆಸರಾಂತ ಕೃತಿ ಅದು.

ವಚನಧರ್ಮಸಾರವನ್ನು ಏಕೆ ಬರೆದೆ ಎಂಬುದನ್ನು ಎಂ.ಆರ್.ಶ್ರೀ. ಅವರೇ ಪೀಠಿಕೆಯಲ್ಲಿ ಹೇಳಿಕೊಂಡಿದ್ದಾರೆ: "ಸಾಮಾನ್ಯ ಜನರ ದೃಷ್ಟಿಯಿಂದ ಈ ಗ್ರಂಥವನ್ನು ಬರೆಯಲಾಗಿದೆಯೇ ಹೊರತು ಸಿದ್ಧಾಂತ ಪ್ರತಿಪಾದನೆಯ ಪಂಡಿತ ದೃಷ್ಟಿಯಿಂದ ಇದನ್ನು ಬರೆದಿಲ್ಲ." ದೇವರು, ಭಕ್ತಿ, ಜ್ಞಾನ ಮೊದಲಾದ ವಿಚಾರಗಳಲ್ಲಿ ವಚನಕಾರರು ಯಾವ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದ್ದಾರೆ ಎಂಬುದನ್ನೂ, ಸಮಾಜ ರಚನೆಯನ್ನು ಅವರು ಹೇಗೆ ಉದ್ದೇಶಿಸಿದ್ದಾರೆ ಎಂಬುದನ್ನೂ ತೋರಿಸುವುದಕ್ಕೆ ಈ ಗ್ರಂಥದಲ್ಲಿ ಪ್ರಯತ್ನ ಪಟ್ಟಿದೆ.

ಹಳಕಟ್ಟಿ ಅವರು ಪ್ರಕಟಿಸಿದ ವಚನ ಸಂಗ್ರಹ ಗ್ರಂಥಗಳಿಂದ ವಚನಗಳನ್ನು ತೆಗೆದುಕೊಂಡಿದ್ದಾರಾದರೂ, ಪಾಠಭೇದಗಳನ್ನು ಗಮನಿಸಿ ವಚನ ಪರಿಷ್ಕರಣೆ ಕಾರ್ಯವನ್ನು ಮಾಡಿದ್ದಾರೆ, ಲೇಖಕರಾಗಿ ಅಷ್ಟೇ ಅಲ್ಲ, ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಆದ್ದರಿಂದಲೇ "ವಚನಗಳನ್ನು ಉದ್ಧರಿಸುವಾಗ ಬಹಳ ಕಷ್ಟ ಪಡಬೇಕಾಯಿತು" ಎಂದಿದ್ದಾರೆ.

"ಸಾಮಾನ್ಯವಾಗಿ ವಚನ ಶಾಸ್ತ್ರ ಸಾರವನ್ನು ಆಯಾ ವಚನಕಾರರ ವಚನ ಗ್ರಂಥಗಳನ್ನು ಅನುಸರಿಸಿ ಸೂಕ್ತವಾದ ಪಾಠವನ್ನು ಇಟ್ಟುಕೊಂಡು ಈ ಗ್ರಂಥದಲ್ಲಿ ವಚನಗಳನ್ನು ಉದ್ಧರಿಸಲಾಗಿದೆ" ಎಂದಿದ್ದಾರೆ. ಆದ್ದರಿಂದ ಮೊದಲ ಬಾರಿಗೆ ಶುದ್ಧ ರೂಪದ ವಚನಗಳನ್ನು ಈ ಗ್ರಂಥದಲ್ಲಿ ಕಾಣುತ್ತೇವೆ. ಪಠ್ಯ ಭಾಗದಲ್ಲಿ ೪೬೪ ವಚನಗಳನ್ನು, ವಚನ ಸಂಗ್ರಹ ಭಾಗದಲ್ಲಿ ೩೦೦ ವಚನಗಳನ್ನು, ಒಟ್ಟು ೭೬೪ ವಚನಗಳನ್ನು ವರ್ಗೀಕರಿಸಿ ಕೊಟ್ಟಿದ್ದಾರೆ. ವಚನಗಳಲ್ಲಿ ಬರುವ ಕಠಿಣ ಶಬ್ದಗಳಿಗೆ ಅರ್ಥವನ್ನು, ವಚನಕಾರರ ಅಂಕಿತವನ್ನು ಕೊಟ್ಟಿದ್ದಾರೆ.

ವಚನ ಸಂಗ್ರಹದಲ್ಲಿ ಷಟ್ಸ್ಥಲಾನುಸಾರ ವಚನಗಳನ್ನು ಗುಂಪು ಮಾಡಿದ್ದರೂ ಅವುಗಳಿಗೆ ಕೊಟ್ಟಿರುವ ಶೀರ್ಷಿಕೆಗಳು ಗಮನಾರ್ಹವಾಗಿವೆ, ವಿನೂತನವಾಗಿವೆ: (೧) ಪರಮಾತ್ಮ, ಆತ್ಮ (ಭಕ್ತಸ್ಥಲ), (೨) ಮೊರೆ (ಮಹೇಶ್ವರಸ್ಥಲ), (೩) ಭಕ್ತಿ, ನಿಷ್ಠೆ (ಪ್ರಸಾದಿಸ್ಥಲ), (೪) ಸದಾಚಾರ (ಪ್ರಾಣಲಿಂಗಿಸ್ಥಲ), (೫) ಶರಣರ ಮಹತ್ವ (ಶರಣಸ್ಥಲ) (೬) ಮುಕ್ತಿ, ಬಯಲು (ಐಕ್ಯಸ್ಥಲ).

ಈವತ್ತು ನಮ್ಮಲ್ಲಿ ಪುಟಗಟ್ಟಲೆ ಅವರಿವರ ಮಾತುಗಳನ್ನೇ ಉದ್ಧರಿಸಿ (ಒಮ್ಮೊಮ್ಮೆ ಆಕರಗಳನ್ನು ಉಲ್ಲೇಖಿಸದೆ) ತಮ್ಮ ಸ್ವಂತಿಕೆ ಶೋಧನ ಇಲ್ಲದೆ ಬರೆಯುವವರೇ ಹೆಚ್ಚು. ಆದರೆ ಎಂ.ಆರ್.ಶ್ರೀ. ಅವರು ಹಾಗಲ್ಲ. ಅವರು ಎಲ್ಲವನ್ನೂ ಗಮನಿಸುತ್ತಾರೆ.

ಆದರೆ ತಮ್ಮದೇ ಆದ ವಿಚಾರ ಮಂಡನೆ ಮಾಡುತ್ತಾರೆ. ಇದಕ್ಕೊಂದು ನಿದರ್ಶನ ವಚನಕಾರ ಅಂಕಿತದ ಬಗ್ಗೆ ಹೇಳುವಾಗ ಮಾದಾರ ಧೂಳಯ್ಯನ "ಚೆನ್ನಯ್ಯ ಪ್ರಿಯ ಧೂಳ" ಅಂಕಿತದ ಬಗ್ಗೆ ಹೀಗೆ ಬರೆಯುತ್ತಾರೆ:

"ವಚನ ಶಾಸ್ತ್ರಸಾರದಲ್ಲಿ "ಕಾಮಧೂಮ ಧೂಳೇಶ್ವರಲಿಂಗ" ಎಂದಿದೆ. ನಾವು ಉದಾಹರಿಸುವ ವಚನದಲ್ಲಿ "**ಚೆನ್ನಯ್ಯ ಪ್ರಿಯ ಧೂಳ**" ಎಂದು ಅಂಕಿತವಿದೆ. ವಚನ ಶಾಸ್ತ್ರಸಾರದಲ್ಲಿ **ಮಾರಯ್ಯ ಪ್ರಿಯ ಅಮರೇಶ್ವರಲಿಂಗ** ಅಂಕಿತವು ಆಯ್ದಕ್ಕಿ ಮಾರಯ್ಯನದೆಂದು ತಿಳಿಸಿದೆ. ಆದರ ಶೂನ್ಯ ಸಂಪಾದನೆಯಲ್ಲಿ ಇದು ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮನದೆಂದು ತಿಳಿಸಿದೆ. ಶೂನ್ಯ ಸಂಪಾದನೆಯಲ್ಲಿರುವುದು ಸರಿಯೆಂದು ನಮಗೆ ತೋರುತ್ತದೆ." ಇತರರ ಸಾಲುಗಳನ್ನು, ವಚನಗಳನ್ನು ಉಲ್ಲೇಖಿಸುವಾಗ ಪ್ರತಿ ಸಾಲೂ ಎಲ್ಲಿಯದು ಎಂಬುದನ್ನು ತಪ್ಪದೆ ಅಡಿಟಿಪ್ಪಣಿಯಲ್ಲಿ ತೋರಿಸುತ್ತಾರೆ, ಅಭಿಪ್ರಾಯ ಭೇದವಿದ್ದರೆ ಅದನ್ನೂ ಕಾಣಿಸುತ್ತಾರೆ. (ಉದಾಹರಣೆಗೆ, ಪುಟ ೭೪ರಲ್ಲಿ ಗುಹೇಶ್ವರನಲ್ಲಯ್ಯ ಅಂಕಿತದ ಬಗ್ಗೆ ಟಿಪ್ಪಣಿ ನೋಡಿ).

ಈ ಗ್ರಂಥದ ೧೬ ಅಧ್ಯಾಯಗಳನ್ನು ಗಮನಿಸಿದಾಗ ಅದರಲ್ಲಿ ವೈಚಾರಿಕ ವರ್ಗೀಕರಣವನ್ನು ಕಾಣುತ್ತೇವೆ. ಸಾಹಿತ್ಯಿಕ ದೃಷ್ಟಿ–ಸಾಮಾಜಿಕ ದೃಷ್ಟಿ–ಧಾರ್ಮಿಕ ದೃಷ್ಟಿ ಎಂದು ಮುಮ್ಮುಖವಾಗಿ ವೀರಶೈವ ಧರ್ಮವನ್ನು, ಸಾಹಿತ್ಯವನ್ನು, ವಚನಗಳನ್ನು ಗಮನಿಸಿದ್ದಾರೆ. ಸಾಹಿತ್ಯಿಕ ದೃಷ್ಟಿಯಲ್ಲಿ ವಚನಗಳ ಪ್ರಾಶಸ್ತ್ಯ, ವಚನಗಳಲ್ಲಿ ಕಾವ್ಯಲಕ್ಷಣಗಳು, ವಚನ ಸಂಗ್ರಹ ಇತ್ಯಾದಿ ಗಮನಿಸಬಹುದು. ಸಾಮಾಜಿಕ ದೃಷ್ಟಿಯಲ್ಲಿ ವಚನ ಧರ್ಮದಲ್ಲಿ ನೀತಿ, ವಚನಕಾರರ ವಿಚಾರವಾದ, ವಚನಧರ್ಮವೂ ಸ್ತ್ರೀಯರೂ, ವಚನಧರ್ಮದಲ್ಲಿ ಸಮಾಜ ರಚನೆ, ಇತ್ಯಾದಿ ಗಮನಿಸಬಹುದು. ಧಾರ್ಮಿಕದೃಷ್ಟಿಯಲ್ಲಿ ತಾತ್ತ್ವಿಕವಾಗಿ ಅಷ್ಟಾವರಣ, ಷಟ್ಸ್ಥಲಸಿದ್ಧಾಂತ, ಪರವಸ್ತು–ದೇವರು ಸಮನ್ವಯ ದೃಷ್ಟಿ ಅಧ್ಯಾಯಗಳನ್ನು ವೀರಶೈವ ಧರ್ಮದ ಸಾಧನ ಸ್ವರೂಪವಾಗಿ ಭಕ್ತಿ–ಬಸವಣ್ಣನವರು, ಜ್ಞಾನ–ಚೆನ್ನಬಸವಣ್ಣನವರು, ವೈರಾಗ್ಯ–ಅಲ್ಲಮಪ್ರಭು, ಕರ್ಮಯೋಗ–ಸಿದ್ಧರಾಮ, ಶರಣಪತಿ–ಲಿಂಗಪತಿ–ಮಹಾದೇವಿಯಕ್ಕ ಅಧ್ಯಾಯಗಳನ್ನು ಕಾಣಬಹುದು.

ವಚನ ಧರ್ಮಸಾರದ ಶೈಲಿ ಎಂಥವರನ್ನೂ ಮನಸೆಳೆಯುತ್ತದೆ. ವಚನಸಾಹಿತ್ಯದ ಸಮಗ್ರ ಸಮೀಕ್ಷಾಗ್ರಂಥಗಳು ಹಲವಾರು ಕನ್ನಡದಲ್ಲಿ ಬಂದಿವೆ. ಅವುಗಳಲ್ಲಿ ಯಾವುದರಲ್ಲೂ ಎಂ.ಆರ್.ಶ್ರೀ. ಅವರ ವಚನಧರ್ಮಸಾರದಲ್ಲಿರುವ ಚೇತೋಹಾರಿ ನಿರೂಪಣೆ, ಸರಳ ಭಾಷೆ, ಖಚಿತಾಭಿಪ್ರಾಯ, ನಿಷ್ಪಕ್ಷಪಾತ ತೌಲನಿಕದೃಷ್ಟಿ ಅಷ್ಟಾಗಿ ಕಂಡುಬರದು. ಅವರ ಪ್ರಾರಂಭದ ಮಾತುಗಳೇ ಅಪೂರ್ವ ಅನುಭವ ನೀಡುತ್ತಾ ವಿಷಯ ಪ್ರವೇಶ ಮಾಡಿಸುತ್ತವೆ: "ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಹರಿಸುತ್ತ

ಬರುವಾಗ ಒಂದು ಕಡೆ ತಪೋವನವನ್ನು ಪ್ರವೇಶಿಸಿದಂತೆಯೂ, ಸಿದ್ಧ ಸಾಧಕ ಋಷಿಗಳ ಸಂದರ್ಶನ ಪಡೆದು ಅವರ ಉದಾತ್ತಜೀವನ ಧರ್ಮಬೋಧೆಗಳಿಂದ ನಮ್ಮ ಅಂತರಂಗ ಪರಿಶುದ್ಧವಾದಂತೆಯೂ, ಆತ್ಮನ ಬಂಧನಗಳು ಕಳಚಿಬಿದ್ದು ನಾವು ಮುಕ್ತರಾದಂತೆಯೂ ಒಂದು ದಿವ್ಯವಾದ ಆನಂದಾನುಭವ ಉಂಟಾಗುತ್ತದೆ. ಇಲ್ಲಿ ಪಟ್ಟಣವಾಸದ ಗೊಂದಲವಿಲ್ಲ; ರಾಜಾಸ್ಥಾನದ ವೈಭವ ದೃಶ್ಯಗಳಿಲ್ಲ. ತಪೋವನದ ಸಹಜ ·ಶಾಂತಿ, ಪರಸ್ಪರ ಪ್ರೇಮ, ಸಮತಾಭಾವ, ಸ್ವಾತಂತ್ರ್ಯ ಇವು ಮೂರ್ತಿವೆತ್ತಾಗಿ ಕಾಣುತ್ತೇವೆ."

ವಚನಸಾಹಿತ್ಯವೇ ತಪೋವನದ ಈ ಉಪನಿಷತ್ಸಾಹಿತ್ಯ, ವಚನಕಾರರೇ ಉಪನಿಷತ್ ಕರ್ತೃಗಳಾದ ಮಹರ್ಷಿಗಳು. ಉಪನಿಷತ್ತುಗಳ ಆಧಾರದಿಂದ ಹೇಗೆ ವಿವಿಧ ಸಿದ್ಧಾಂತಗಳನ್ನು ಕಲ್ಪಿಸಿಕೊಳ್ಳಬಹುದಾಗಿದೆಯೋ ಹಾಗೆಯೇ ವಚನಸಾಹಿತ್ಯದಿಂದಲೂ ವಿವಿಧ ಸಿದ್ಧಾಂತಗಳನ್ನು ಕಲ್ಪಿಸಿಕೊಳ್ಳಬಹುದಾಗಿದೆ.

ವೈಯಕ್ತಿಕ ಮನೋಭಾವ, ಅಂತರಂಗದ ಹೋರಾಟ, ಧರ್ಮಬೋಧೆ, ಹೃದಯದಿಂದ ಹೊರಟು ನೇರವಾಗಿ ಹೃದಯವನ್ನು ಮುಟ್ಟುವ ಸರಳ ಶೈಲಿ– ಇವುಗಳು ವಚನಗಳಲ್ಲಿರುವುದರಿಂದ ಈ ಸಾಹಿತ್ಯದಲ್ಲಿ ಜೀವಕಳೆಯಿದೆ ಮತ್ತು ಈ ಸಾಹಿತ್ಯ ಅಮೂಲ್ಯವಾಗಿದೆ.

ಆಧುನಿಕ ಸಾಹಿತ್ಯ ಸ್ತ್ರೀವಾದಿ ನೆಲೆಗಳನ್ನು ಎಂ.ಆರ್.ಶ್ರೀ. ಅವರು "ವಚನ ಸಾಹಿತ್ಯವೂ ಸ್ತ್ರೀಯೂ" ಅಧ್ಯಾಯದಲ್ಲಿ ಮಾರ್ಮಿಕವಾಗಿ ನಿರೂಪಿಸಿದ್ದಾರೆ. ವಚನಧರ್ಮಸಾರ ಸಾರ್ವಕಾಲಿಕ ಗ್ರಂಥವಾಗಿರುವುದಕ್ಕೆ, ಇದೊಂದು ನಿದರ್ಶನ ಅಷ್ಟೆ.

ಈ ಮಾತುಗಳನ್ನು ಗಮನಿಸಿ: "ವಚನ ಧರ್ಮದಲ್ಲಿ ಸ್ತ್ರೀಯರಿಗೆ ಪುರುಷರಂತೆಯೇ ಸಮಾನವಾದ ಹಕ್ಕುಗಳೂ ಗೌರವವೂ ಉಂಟು." ಶಿವ ಶರಣೆಯರ ಜ್ಞಾನ, ಸಂಸ್ಕೃತಿ, ಸೌಜನ್ಯ, ಮೊದಲಾದುವನ್ನು ನೋಡಿದರೆ ನಮ್ಮ ಮನಸ್ಸು ವೇದೋಪನಿಷತ್ತುಗಳ ಕಾಲಕ್ಕೆ ಹೋಗುತ್ತದೆ. ಶಾಂಡಿಲಿ, ಮೈತ್ರೇಯಿ, ಮೊದಲಾದವರ ಜ್ಞಾಪಕ ಬರುತ್ತದೆ. "ಗಂಡು ಹೆಚ್ಚು ಹೆಣ್ಣು ಕಡಿಮೆ ಎಂದು ಹೆಣ್ಣನ್ನು ಅಲ್ಲಗಳೆಯಬಾರದು ಸ್ತ್ರೀ ದೇಹಧಾರಿಗೂ ಮೋಕ್ಷವುಂಟು, ಲಿಂಗೈಕ್ಯವುಂಟು" ಎಂದು ವಚನಧರ್ಮ ಹೇಳುತ್ತದೆ.

"ತಾಯಿ ದೇವರೆಂದು ವೇದ ಹೇಳಿತು. ಹೆಣ್ಣೇ ದೇವರೆಂದು ವಚನ ಧರ್ಮ ಸಾರಿತು" ಒಂದೇ ಮಾತಿನಲ್ಲಿ ಸೂತ್ರ ಪ್ರಾಯವಾಗಿ ಎಂ.ಆರ್.ಶ್ರೀ. ಇಡೀ ವಚನ ಸಾಹಿತ್ಯದಲ್ಲಿ ಸ್ತ್ರೀಗೆ ದೊರೆತ ಸ್ಥಾನಮಾನಗಳನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ವಚನಧರ್ಮಸಾರ ಜನಸಾಮಾನ್ಯರ ಭಗವದ್ಗೀತೆ ಎಂದರೆ ತಪ್ಪಾಗದು.

ಎಂ.ಆರ್.ಶ್ರೀ. ಅವರ ಮತ್ತೊಂದು ಸ್ವತಂತ್ರ ಮೇರುಕೃತಿ, **"ಭಕ್ತಿ ಭಾಂಡಾರಿ ಬಸವಣ್ಣನವರು."** ಕನ್ನಡದಲ್ಲಿ ಬಸವಣ್ಣನ ಜೀವನ ಸಾಧನೆಗಳನ್ನು ಕುರಿತ ಜೀವನಚರಿತ್ರ ಗ್ರಂಥಗಳು ವಿಮರ್ಶಾ ಗ್ರಂಥಗಳು ನೂರಾರು ಬಂದಿವೆ, ಬರುತ್ತಲಿವೆ. ಆದರೆ ಇವುಗಳಲ್ಲಿ ಸ್ವಂತಿಕೆ, ಸಂಶೋಧನೆ, ಸಮರಸತೆ, ಸಾತ್ವಿಕ ನಿರೂಪಣೆ ಇರುವ ಗ್ರಂಥಗಳು ಅಪರೂಪ. ತೀರಾ ಜೊಳ್ಳಾದ ಗ್ರಂಥಗಳು ಒಂದೆಡೆ ಆದರೆ, ತೀರಾ ಪಾಂಡಿತ್ಯದಿಂದ ತುಳುಕುವ ಗ್ರಂಥಗಳು ಇನ್ನೊಂದೆಡೆ. ಜನಸಾಮಾನ್ಯರಿಗೆ ಸಮರ್ಪಕವೆನಿಸುವ ಸುಲಭವೆನಿಸುವ ಗ್ರಂಥಗಳು ವಿನೂತನ-ಪ್ರಾಮಾಣಿಕ, ಸರಳ ಗ್ರಂಥಗಳು ಬಹಳ ಕಡಿಮೆ. ಉದಾಹರಣೆಗೆ, ಪ್ರಭುಶಂಕರರ "ಬೆರಗು," ಚಿದಾನಂದಮೂರ್ತಿ ಅವರ ಬಸವಣ್ಣನವರು, ಇತ್ಯಾದಿ ಗ್ರಂಥಗಳನ್ನು ಉದಾಹರಿಸಬಹುದು. ಈ ಎಲ್ಲ ಗ್ರಂಥಗಳಿಗೂ ಮಾದರಿ ಗ್ರಂಥವೆಂದರೆ ಎಂ.ಆರ್.ಶ್ರೀ. ಅವರ "ಭಕ್ತಿ ಭಂಡಾರಿ ಬಸವಣ್ಣ"ನವರು ಎಂದರೆ ತಪ್ಪಾಗದು.

ಈ ಗ್ರಂಥದಲ್ಲಿ ಬಸವಣ್ಣನವರ ವಚನಗಳ ಅಧಾರದ ಮೇಲೆ ಅವರ ಸಾಧನೆ ಸಿದ್ಧಿಗಳನ್ನು ವ್ಯಕ್ತಿತ್ವವನ್ನು ಎಂ.ಆರ್.ಶ್ರೀ. ನಿರೂಪಿಸುತ್ತಾ ಹೋಗುತ್ತಾರೆ. ಪುಟ ಪುಟದಲ್ಲೂ ಮಾತು ಮಾತಿಗೂ ವಚನಗಳನ್ನು ಉಲ್ಲೇಖಿಸುತ್ತಾ ಹೋಗುತ್ತಾರೆ. ವಚನಧರ್ಮಸಾರದಲ್ಲಿ ಬಸವಣ್ಣನವರ ಸಂಕ್ಷಿಪ್ತ ಚಿತ್ರ ಕಂಡರೆ ಇಲ್ಲಿ ಸಮಗ್ರ ಚಿತ್ರ ಕಾಣುತ್ತದೆ.

ನಮ್ಮಲ್ಲಿ ಅನೇಕ ಲೇಖಕರು ಒಮ್ಮೆ ಏನನ್ನಾದರೂ ಬರೆದರೆ ಮತ್ತೆ ಆ ಕಡೆ ತಿರುಗಿ ನೋಡುವುದಿಲ್ಲ. ಪುಸ್ತಕ ಮರುಮುದ್ರಣ ಆಗುವ ಕಾಲದಲ್ಲಿ ಆ ಕೃತಿ ಪರಿಷ್ಕೃತ ಮುದ್ರಣ ಆಗಿರುವುದೇ ಇಲ್ಲ. ಆದರೆ ಡಿ.ವಿ.ಜಿ., ಎ.ಆರ್.ಕೃ., ಎಂ.ಆರ್.ಶ್ರೀ ಅಂಥವರು ಒಮ್ಮೆ ಬರೆದರೆ ಅದಕ್ಕೆ ಸಂಬಂಧಿಸಿದ ವಿವರ ವಿಚಾರಗಳನ್ನು ಸದಾ ಗಮನಿಸುತ್ತಲೇ ಇರುತ್ತಾರೆ. ಅವರ ಸಂಶೋಧಕ ಬುದ್ಧಿ ಹೊಸದಾಗಿ ಹೊಳೆದುದನ್ನು-ಓದಿದ್ದನ್ನು ಗ್ರಹಿಸುತ್ತಲೇ ಇರುತ್ತದೆ. ಮರುಮುದ್ರಣ ಕಾಲದಲ್ಲಿ ತಾವು ಕಂಡ ಸತ್ಯಗಳನ್ನು ತಮ್ಮಗಳ ಒಪ್ಪಿಗೆಯನ್ನು ಬದಲಿಸಿಕೊಂಡ ಅಭಿಪ್ರಾಯಗಳನ್ನು ಅಳವಡಿಸಿ ಪರಿಷ್ಕೃತ ಮುದ್ರಣ ತರುತ್ತಾರೆ. ಎಂ.ಆರ್.ಶ್ರೀ. ಅವರು ಬಸವಣ್ಣನವರ ಗ್ರಂಥದಲ್ಲಿ ಈ ಕೆಲಸ ಮಾಡಿದ್ದಾರೆ. ನಿರಂತರ ಸತ್ಯಶೋಧಕ ಸಾಹಿತಿ ವಿದ್ವಾಂಸರು ಅವರು. ಇದಕ್ಕೆ ನಿದರ್ಶನವಾಗಿ ಒಂದು ಸಂಗತಿಯನ್ನು ಉಲ್ಲೇಖಿಸಬಹುದು. ಎರಡನೆಯ ಮುದ್ರಣ (೧೯೩೬) ಮತ್ತು ಮೂರನೆಯ ಮುದ್ರಣಗಳನ್ನು ಹೋಲಿಸಿದಾಗ ಈ ಸಂಗತಿ ತಿಳಿದು ಬರುತ್ತದೆ. ಒಂದನೆಯ ಮತ್ತು ಎರಡನೆಯ ಮುದ್ರಣದಲ್ಲಿ "ಪುರಾಣಗಳಲ್ಲಿ ಹೇಳಿರುವುದನ್ನೆಲ್ಲ ನಾವು ಪ್ರಮಾಣವನ್ನಾಗಿ ಅಂಗೀಕರಿಸಲಾಗುವುದಿಲ್ಲ. ಆದರೆ ಜನಗಳಿಗೆ ಸಾಮಾನ್ಯವಾಗಿ ಪುರಾಣಗಳಲ್ಲಿ ಗೌರವವಿರುವುದರಿಂದಲೂ, ಬಹು ಕಾಲದಿಂದ ಬಸವಣ್ಣನವರ

ಜೀವನಚರಿತ್ರೆ ತನ್ಮೂಲಕ ತಿಳಿದು ಬಂದಿರುವುದರಿಂದಲೂ. ಆ ಪುರಾಣಗಳನ್ನು ಒಮ್ಮಿಂದೊಮ್ಮೆ ತಿರಸ್ಕರಿಸದೆ ಅವುಗಳಲ್ಲಿ ಗರ್ಭೀಕೃತವಾದ ಬಸವಣ್ಣನವರ ವೃತ್ತಾಂತವನ್ನು ಅವಗಾಹನೆಗೆ ತಂದುಕೊಳ್ಳುವುದು ಒಳ್ಳೆಯದು" ಎಂದು ಹೇಳಿ, "ಕನ್ನಡದಲ್ಲಿ ಪ್ರಸಿದ್ಧವಾದ ಭೀಮ ಕವಿಯ ಬಸವಪುರಾಣವನ್ನು ಅನುಸರಿಸಿ ಕಥಾ ಭಾಗವನ್ನು ಇಲ್ಲಿ ಮೊದಲು ಸಂಕ್ಷೇಪಿಸಿ ಬರೆಯುತ್ತೇವೆ" (ಪುಟ–೨) ಎಂದಿದ್ದಾರೆ. ಅಡಿಟಿಪ್ಪಣಿಯಲ್ಲಿ ಬಸವರಾಜ ದೇವರ ರಗಳೆ ಮತ್ತು ಸಿಂಗಿರಾಜ ಪುರಾಣದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಆದರೆ ೩ನೆಯ ಮುದ್ರಣದಲ್ಲಿ ಪುನರ್ವಿಮರ್ಶೆ ಮಾಡಿದ್ದರ ಫಲವಾಗಿ ಬಸವಪುರಾಣದ ಕಥಾ ಸಂಗ್ರಹ ಕೈಬಿಟ್ಟು ಸಿಂಗಿರಾಜ ಪುರಾಣದನುಸಾರ ಬಸವಣ್ಣನವರ ಜೀವನಚರಿತ್ರೆ ಕೊಟ್ಟಿದ್ದಾರೆ, ಸಿಂಗಿರಾಜ ಪುರಾಣವನ್ನು ಈ ಮುದ್ರಣದಲ್ಲಿ ಅನುಸರಿಸಿದ್ದಕ್ಕೆ ಅವರು ಕೊಟ್ಟ ಕಾರಣ ಹೀಗಿದೆ: "ಬಸವಣ್ಣನವರ ಜೀವನಚರಿತ್ರೆಯನ್ನು ಅವರ ವಚನಗಳ ಆಧಾರದಿಂದ ತಿಳಿಯಲು ಪ್ರಯತ್ನ ಪಟ್ಟವನು ಸಿಂಗಿರಾಜನು. ಅವನು ಹಲವು ವಚನಗಳನ್ನು ಸಂಗ್ರಹಿಸಿ, ಅವು ಯಾವ ಸಂದರ್ಭದಲ್ಲಿ ಬಸವಣ್ಣನವರ ಯಾವ ಮನೋಭಾವದಲ್ಲಿ ಹೊರಸೂಸಿದವು ಎಂಬುದನ್ನು ಆಲೋಚಿಸಿ ಅವರ ಜೀವನಚರಿತ್ರೆಯನ್ನು ಪುನರ್ರಚಿಸಲು ಪ್ರಯತ್ನಪಟ್ಟಿದ್ದಾನೆ. ಬಸವಣ್ಣನವರ ಪವಾಡಗಳನ್ನು ವರ್ಣಿಸಿರುವುದಾದರೂ, ಅವರನ್ನು ಮಾನವಸಹಜವಾದ ದೃಷ್ಟಿಯಿಂದ ಶೋಧಿಸಿ ಅವರ ಮನುಜತ್ವವನ್ನು ಚೆನ್ನಾಗಿ ಚಿತ್ರಿಸಿದ್ದಾನೆ. ಆದುದರಿಂದ, ಸಿಂಗಿರಾಜಪುರಾಣವನ್ನಾಧರಿಸಿ ಬಸವಣ್ಣನವರ ಜೀವನಚರಿತ್ರೆಯನ್ನು ಇಲ್ಲಿ ಮೊದಲು ಸಂಕ್ಷೇಪಿಸಿ ಬರೆಯುತ್ತೇವೆ" ಎಂದಿದ್ದಾರೆ. ಜತೆಗೆ ಇತರ ಪುರಾಣಗಳಲ್ಲಿರುವ ಬಸವಣ್ಣನವರ ಜೀವನಚರಿತ್ರೆಯನ್ನು ಪರಿಶಿಷ್ಟದಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. "ಶೈವಶಾಖೆಗಳು" ಎಂಬ ಪರಿಚಯ ಲೇಖನವನ್ನು ಪರಿಶಿಷ್ಟದಲ್ಲಿ ಕೊಟ್ಟಿದ್ದನ್ನು ೮ನೆಯ ಪ್ರಕರಣದಲ್ಲಿ ಸೇರಿಸಿದ್ದಾರೆ. ದೇವರ ದಾಸಿಮಯ್ಯನ ಬಗ್ಗೆ ಪರಿಶಿಷ್ಟದಲ್ಲಿ ಮಾಡಿದ್ದ ಚರ್ಚೆಯನ್ನು ದೇವರ ದಾಸಿಮಯ್ಯನೇ ಜೇಡರದಾಸಿಮಯ್ಯ ಎಂದು ಬಹುಮಟ್ಟಿಗೆ ಈಗ ಅಂಗೀಕಾರವಾದುದರಿಂದ ಅದರ ಚರ್ಚೆಯನ್ನು ಕೈಬಿಡಲಾಗಿದೆ. ಹಿಂದೆ ಪರಿಶಿಷ್ಟ ೧೮ ಪುಟಗಳಷ್ಟು ಇದ್ದುದು ಈಗ ೬೪ ಪುಟಗಳಾಗಿದೆ.

ಹೀಗೆ ಸಾಕಷ್ಟು ಬದಲಾವಣೆ–ಪರಿಷ್ಕಾರಗಳನ್ನು ೩ನೆಯ ಮುದ್ರಣದಲ್ಲಿ ಕಾಣುತ್ತೇವೆ. ಸದಾ ಮುಕ್ತಮನದವರೂ ತೆರೆದ ಮನದವರೂ ಆದ ಲೇಖಕರು ಸಂಶೋಧಕ ವಿದ್ವಾಂಸರೂ ಆಗಿದ್ದಾಗ ಮಾತ್ರ ಈ ರೀತಿ ಪರಿಷ್ಕೃತ ಮುದ್ರಣ

ಹೊರತರಲು ಶಕ್ಯ. ಹೀಗಾಗಿ "ಭಕ್ತಿ ಭಾಂಡಾರಿ ಬಸವಣ್ಣನವರು" ಜೀವನಚರಿತ್ರೆ ಇಂದೂ ಮೌಲಿಕ ಗ್ರಂಥವಾಗಿದೆ.

"ಭಕ್ತಿ ಭಾಂಡಾರಿ ಬಸವಣ್ಣನವರು" ಗ್ರಂಥದ ಇನ್ನೊಂದು ವಿಶೇಷವೆಂದರೆ, ಎಂ.ಆರ್.ಶ್ರೀ. ಅವರು ಮೊದಲಬಾರಿಗೆ ಅನೇಕ ಹೊಸ ವಿಚಾರಗಳನ್ನು ಮಂಡಿಸುತ್ತಾರೆ. ಉದಾಹರಣೆಗೆ, ವಚನಗಳಿಗೂ ಉಗಾಭೋಗಗಳಿಗೂ ಇರುವ ಸಾಹಿತ್ಯಿಕ ಸಾದೃಶ್ಯವನ್ನು ಕನ್ನಡದಲ್ಲಿ ಅನೇಕ ವಿದ್ವಾಂಸರು (ಆರ್.ಎಸ್.ಪಂಚಮುಖಿ, ರಂ.ಶ್ರೀ.ಮುಗಳಿ, ಚಿದಾನಂದಮೂರ್ತಿ, ಆರ್.ಸತ್ಯನಾರಾಯಣ, ಜಿ.ವರದರಾಜರಾವ್, ಎಲ್.ಬಸವರಾಜು, ಇತ್ಯಾದಿ) ಪ್ರಸ್ತಾಪಿಸಿದ್ದಾರೆ, ಚರ್ಚಿಸಿದ್ದಾರೆ. ಈ ಅಂಶವನ್ನು ಮೊದಲ ಬಾರಿಗೆ ಗಮನಕ್ಕೆ ತಂದವರು ಎಂ.ಆರ್.ಶ್ರೀ. ಅವರೇ ಎಂಬುದನ್ನು ಗಮನಿಸಬೇಕು. ಈ ಗ್ರಂಥದಲ್ಲಿ "ಬಸವಣ್ಣನವರ ಪ್ರಭಾವ ಮುದ್ರೆ" ಎಂಬ ಪ್ರಕರಣದಲ್ಲಿ (ಪುಟ ೧೬೦-೧೬೧) "ವೀರಶೈವ ವಚನಗಳಿಗೂ ಹರಿದಾಸರುಗಳ ಉಗಾಭೋಗಗಳಿಗೂ ಲಕ್ಷಣ ಸಂಬಂಧವಿರುವುದೆಂದು ಹೇಳಬೇಕಾಗಿದೆ. ಎರಡರ, ಕೊನೆಗಳಲ್ಲಿಯೂ ಆಯಾ ಭಕ್ತನ ಇಷ್ಟದೈವದ ಅಂಕಿತವಿರುವುದೂ, ರಸಭಾವ ರಂಜಿತವಾದ ಗದ್ಯ ಗೀತಗಳಂತೆ ಮೊಟಕಾಗಿ ನಾಣ್ಣುಡಿಗಳಂತೆ ಅರ್ಥಗರ್ಭಿತವಾಗಿರುವುದೂ ಇವುಗಳ ವಿಶೇಷ ಲಕ್ಷಣ. ಬಸವಣ್ಣನವರು ಮುಂದೆ ಹೇಳಿರುವ ವಚನಗಳಿಗೂ ಅವುಗಳಿಗೆ ಸಂವಾದಿಯಾದ ಪುರಂದರದಾಸರ ಉಗಾಭೋಗಗಳಿಗೂ ಇರುವ ಹೋಲಿಕೆಯನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ" ಎಂದಿದ್ದಾರೆ. ಹರಿವ ಹಾವಿಂಗಂಜೆ... ಬೇವಿನ ಬೀಜವ ಬಿತ್ತಿ... ಆರು ಮುನಿದು ಎಮ್ಮನೇನ ಮಾಡುವರು... ಈ ಬಸವಣ್ಣನವರ ವಚನಗಳಿಗೆ ಸಂವಾದಿಯಾಗಿ ಉರಿಗಂಜೆ, ಸೆರಗಂಜೆ... ಬೇವಿನ ಬೀಜ ಬಿತ್ತಿ... ಆರು ಮುನಿಸದು ನಮಗೇನು ಮಾಡುವರಯ್ಯ? ಎಂಬ ಪುರಂದರ ಉಗಾಭೋಗಗಳನ್ನು ಹೋಲಿಕೆಗಾಗಿ ಉದಾಹರಿಸಿದ್ದಾರೆ.


ಎಂ.ಆರ್.ಶ್ರೀ. ಅವರು ಭಕ್ತಿ ಭಾಂಡಾರಿ ಬಸವಣ್ಣನವರು ಜೀವನಚರಿತ್ರೆಯನ್ನು ಜನಪರ ದೃಷ್ಟಿಯಿಂದ ಬರೆದರು ಎಂಬುದು ಮಹತ್ವದ ಸಂಗತಿಯಾಗಿದೆ. ಆಧುನಿಕ ವಚನಸಾಹಿತ್ಯದ ವಿದ್ವಾಂಸರ ನವೀನದೃಷ್ಟಿಯನ್ನು ಎಂ.ಆರ್.ಶ್ರೀ. ಅವರು ಹತ್ತಾರು ವರ್ಷಗಳ ಹಿಂದೆ ತಮ್ಮ ಈ ಗ್ರಂಥದಲ್ಲಿ ಅಳವಡಿಸಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ. ಇದಕ್ಕೆ ಪೀಠಿಕೆಯಲ್ಲಿರುವ ಮಾತುಗಳನ್ನು ಗಮನಿಸಬೇಕು. ೧೯೩೧ರಲ್ಲಿ (ಮೊದಲ ಮುದ್ರಣ) ಗ್ರಂಥವನ್ನು ವಿಮರ್ಶಿಸುತ್ತ ಪಿ.ಜಿ. ಹಳಕಟ್ಟಿ ಅವರು "ಷಟ್‌ಸ್ಥಲಗಳಲ್ಲಿ ಅಡಕವಾದ ಶಿವಾನುಭವ (ಮಿಸ್ಟಿಸಿಜಮ್)ವನ್ನು ಗಮನಿಸಿ ಶಿವಶರಣರ ವಿಚಾರ ವಿಶೇಷಗಳನ್ನು ಪರಾಮರ್ಶಿಸುವುದು ಅವಶ್ಯವಿರುತ್ತದೆ" ಎಂದು ತಿಳಿಸಿದರು.

ಅದಕ್ಕೆ ಉತ್ತರವಾಗಿ ಎಂ.ಆರ್.ಶ್ರೀ. ಹೇಳಿದ ಮಾತುಗಳು ಇವು: "ಅಧ್ಯಾತ್ಮ ಪ್ರಪಂಚದಲ್ಲಿ ಬಸವಣ್ಣನವರ ಸ್ಥಾನ ಮಹತ್ತಾದುದು ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಬಸವಣ್ಣನವರ ಮೂರ್ತಿ ಮಹತ್ವ, ವ್ಯಕ್ತಿ ಸ್ವರೂಪ, ಲೌಕಿಕ ಪ್ರಪಂಚದಲ್ಲಿ ಅವರ ಉನ್ನತಸ್ಥಾನ, ಇವುಗಳನ್ನು ಮಿಸ್ಟಿಸಿಸಂ ತೋರಿಸಿಕೊಡಲಾರದು. ಈಗ ಬಸವಣ್ಣನವರ ಮಹಾಕಾವ್ಯಗಳಿಂದ ನಾವು ಕಲಿಯಬೇಕಾದ ಅಂಶಗಳು ಹಲವಿವೆ. ಇವುಗಳನ್ನು ತೋರಿಸಿಕೊಡುವುದು ನನ್ನ ಉದ್ದೇಶ. ಮಿಸ್ಟಿಸಿಸಂನ ಮೂಲಕ ಬಸವಣ್ಣನವರನ್ನು ಚಿತ್ರಿಸುವುದಕ್ಕೆ ಅವಕಾಶವಿರಬಹುದು. ಆದರೆ ಅದನ್ನು ಇತರರು ಮಾಡಬಹುದು."

ಸಾರ್ವಜನಿಕ ಜೀವನವನ್ನು ಸತ್ಯಮಾರ್ಗದಲ್ಲಿ ಹರಿಯಿಸಿ ಸತ್ವಮಯವನ್ನಾಗಿ ಮಾಡಲು ಬಸವಣ್ಣನವರು ಪ್ರಯತ್ನಪಟ್ಟರು. ಈ ಪ್ರಯತ್ನದ ರೀತಿ, ಬಂದ ತೊಡರುಗಳು, ದೊರೆತ ಫಲ, ಈ ಹೋರಾಟದಲ್ಲಿ ಬಸವಣ್ಣನವರ ಚಿತ್ತ ವೃತ್ತಿ–ಇವುಗಳನ್ನು ಲೌಕಿಕ ದೃಷ್ಟಿಯಿಂದ ನಾನು ನೋಡಿ ಪುಸ್ತಕವನ್ನು ಬರೆದಿದ್ದೇನೆ ಎಂದಿದ್ದಾರೆ. ಈ ಲೌಕಿಕ ದೃಷ್ಟಿಯೇ ಅನಂತರ ಬಂದ ಲೇಖಕರಿಗೆಲ್ಲ ಗುರಿಯಾಗಿ ಕತೆ, ಕಾದಂಬರಿ, ನಾಟಕಗಳನ್ನು ಬಸವಣ್ಣನವರನ್ನು ಕುರಿತು ರಚಿಸಿರುವುದನ್ನು ಗಮನಿಸಿದರೆ, ಎಂ.ಆರ್.ಶ್ರೀ. ಅವರು ಈ ಗ್ರಂಥದ ಮೂಲಕ ಹಾಗೂ ವಚನಧರ್ಮಸಾರದ ಮೂಲಕ ಆದರ್ಶಮಾದರಿ ಗ್ರಂಥಗಳನ್ನು ರಚಿಸಿ ಅಪೂರ್ವ ಕೊಡುಗೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ ಎಂದರೆ ತಪ್ಪಿಲ್ಲ.

ಎಂ.ಆರ್.ಶ್ರೀ. ಅವರು ಹೊಸಗನ್ನಡದ ಪುಣ್ಯಪುರುಷರಲ್ಲಿ ಒಬ್ಬರಾಗಿದ್ದು, ಸಾಹಿತಿ ಜಾತ್ಯತೀತ ಎಂಬುದನ್ನು ಸಾಬೀತು ಪಡಿಸಿದ, ಸಾಹಿತಿಯ ಬದುಕು–ಬರಹಗಳೆರಡೂ ಶುದ್ಧವಾಗಿರಬೇಕು, ಮುಂದಿನ ತಲೆಮಾರಿಗೆ ಬೆಳಕಾಗಬೇಕು ಎಂಬುದಕ್ಕೆ ಅನುಪಮ ನಿದರ್ಶನದ ವ್ಯಕ್ತಿ ಆಗಿದ್ದಾರೆ. ಇಂದಿಗೂ ಸ್ಫೂರ್ತಿಕಾರಣರಾಗಿದ್ದಾರೆ.

**



೬. ಸರಸ ಸಾಹಿತಿ-ಸಜ್ಜನ ವಿದ್ವಾಂಸ

ವಿ.ಸೀತಾರಾಮಯ್ಯ

(೨-೧೦-೧೮೯೯ / ೪-೯-೧೯೮೩)

ಸಜ್ಜನರ ಸಂಗ ಹೆಜ್ಜೇನು ಸವಿದಂತೆ ಎಂಬುದು ಸರ್ವಜ್ಞನ ನುಡಿ. ಹೆಜ್ಜೇನಿನ ಹಾಗೆ ಸಜ್ಜನರ ಮಾತುಕತೆಗಳು ರುಚಿಕರವಷ್ಟೇ ಅಲ್ಲ: ಆರೋಗ್ಯವರ್ಧಕವೂ ಹೌದು. ಎಷ್ಟೋ ಜನ ಸಾಹಿತಿಗಳು ಬರಹಗಳಲ್ಲಿ ಹೊರನೋಟದಲ್ಲಿ ಸಜ್ಜನರ ಹಾಗೆ ಕಾಣಿಸಿಕೊಳ್ಳುತ್ತಾರೆ. ಆದರೆ ಅವರ ಬಳಿ ಹೋದಾಗ, ಅವರ ಒಳಬದುಕನ್ನು ಕಂಡಾಗ ಅವರು ಹೆಜ್ಜೇನು ಆಗಿರದೆ, ಹೆಜ್ಜೇನಿನ ಹುಳ ಆಗಿರುವುದನ್ನು ಕಾಣುತ್ತೇವೆ. ಆದರೆ ವಿ.ಸೀ. ಆ ಗುಂಪಿನವರಲ್ಲ. ನಿಜವಾಗಿಯೂ ರುಚಿಕರ ಮಧು ಸತ್ಸಂಗದ ಸವಿಯ ಹಜ್ಜೇನು, ಮೈಸೂರು ರುಮಾಲಿನ ಹಾಗೆ ಅಂದಚಂದದ ಅಚ್ಚುಕಟ್ಟಿನ ಸೌಂದರ್ಯಪ್ರಜ್ಞೆಯ ಸೀಕರಣೆ. ಮಾತಿನಲ್ಲಿ ಮಾರ್ದವತೆ, ಲೋಕಜ್ಞಾನ ಸಂಗ್ರಹ, ಆತ್ಮೀಯಸ್ಪರ್ಶದ ಸಂಗತಿಗಳು, ಭಾವಸ್ಫುರಣೆಯಲ್ಲಿ ಕಿರಿಯರಿಗೆ ಸ್ಫೂರ್ತಿಯ ಗೀತೆಗಳು, ಬಣ್ಣಬಣ್ಣದ ಕಾರಂಜಿಯಿಂದ ಚಿಮ್ಮುವ ಬುಗ್ಗೆಗಳಂತೆ ಓತಪ್ರೋತವಾಗಿ ಉಕ್ಕಿಬರುವ ಅಮೃತಾನುಭವದ ಸಂಗತಿಗಳ ಪ್ರಸ್ತಾಪ. ಬೆಳಕಿನ ದೀಪ, ವಿ.ಸೀ. ಅವರು.

ವಿ.ಸೀ. ಅಂದ ಕೂಡಲೇ ಜನರಿಗೆ ನೆನಪಾಗುವುದು. ಶಾಲಾ ದಿನಗಳಲ್ಲಿ ಪಠ್ಯಗಳಲ್ಲಿ ಓದಿದ ಪದ್ಯದ ಸಾಲುಗಳು:

ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು
ನಿಜಕೆ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಭಾಗದ ಎಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು
ಅಭೀಃ ಅಭೀಃ ಅಭೀಃ ಎಂಬ ತಾರಕವಾಕ್ಯ

ನಾಡಿಯನು ನಡೆಸುತಿರೆ ಬಾಳನು ತಿದ್ದುತಿರೆ
ನಡೆಮುಂದಕೆ ಮುಂದಕೆ ಎನ್ನುತೆ ಕೂಗುತಿವೆ, ನುಗ್ಗಿಸುತಿವೆ.

ಕನ್ನಡನಾಡಿನಲ್ಲಿ ಎಲ್ಲ ಸಾಹಿತಿಗಳು ಉದ್ಧರಿಸಿರುವ ಸಾಲುಗಳಿವು. ಮದುವೆ ಮನೆಗಳಲ್ಲಿ ಹೆಣ್ಣೊಪ್ಪಿಸುವಾಗ ತಪ್ಪದೆ ಹಾಡುತ್ತಿದ್ದ ಹೃದಯಸ್ಪರ್ಶಿ ಹಾಡು, ಅಂತಃಕರಣ ಕಲಕುತ್ತಿದ್ದ. ಹಾಡುತ್ತಿದ್ದವರಿಗೂ ಕೇಳುತ್ತಿದ್ದವರಿಗೂ ದುಃಖವುಕ್ಕಿಸುತ್ತಿದ್ದ ಬೀಳ್ಕೊಡುಗೆ ಹಾಡು, ಸ್ವಾತಂತ್ರ್ಯಪೂರ್ವದಲ್ಲಿ ಕೇಳದವರೇ ಇರಲಿಲ್ಲ. ವಿ.ಸೀ. ಅವರನ್ನು ನಾಡಿನ ಮನೆಮನೆಗೆ ಪರಿಚಯಿಸಿದ ಹಾಡಿದು.

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು,
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನ್ನು ತುಂಬಲೊಪ್ಪಿಸುವೆವು.

ಈ ಕಣ್ಣೀರಿನ ಹಾಡು, ಅಣಕವಾಡಾಗಿ ನಗೆಹಾಡಾಗಿ ರೂಪುಗೊಂಡಿದ್ದು ಉಂಟು. ಪ್ರಸಿದ್ಧ ಹಾಸ್ಯ ಸಾಹಿತಿ ಎನ್ಕೆ ಅವರು ರಚಿಸಿದ ಈ ಹಾಡು ಆಕಾಶವಾಣಿಯಲ್ಲಿ ಪ್ರಸಾರವಾಗಿದ್ದುಂಟು. ಆ ಅಣಕವಾಡು ಗೀತೆಯಲ್ಲಿ ಹತ್ತು ವರ್ಷಗಳ ಹೆತ್ತ ಹೆಗ್ಗಣದಂತಹ 'ಮೊದ್ದುಮಣಿ'ಯನ್ನು ಅಪ್ಪ ಶಾಲೆಗೆ ಸೇರಿಸಲು ಬರುತ್ತಾನೆ. ಮಗುವನ್ನು ಮಾಸ್ತರನ ವಶಕ್ಕೆ ಒಪ್ಪಿಸುವಾಗ ಹೇಳುತ್ತಾನೆ.

ಎಮ್ಮ ಮನೆ ಹಿತ್ತಲದಿ ಬೆಳೆದ ಕುಂಬಳಕಾಯಿ
ನಿಮ್ಮ ತಲೆ ಮೇಲಿಡಲು ತಂದಿರುವೆವು
ಕೊಳ್ಳಿರೀ ಮಗುವನ್ನು ಎನ್ನ ಮನೆ ಕೊಳಕನ್ನು
ನಿಮ್ಮ ಒಡಲನು ತುಂಬಲೊಪ್ಪಿಸುವೆವು.

ಹೀಗೆಯೇ ಹಾಡು ಮುಂದುವರೆಯುತ್ತದೆ,

ಇದು ಪ್ರಸಾರವಾದಾಗ ಆಕಾಶವಾಣಿಯ ನಿಲಯದಲ್ಲಿ ವಿ.ಸೀ. ಅವರೊಂದಿಗೆ ಎನ್ಕೆ ಕುಳಿತಿದ್ದರು. ಅಂತಃಕರಣ ಮಿಡಿವ ಗೀತೆಯನ್ನು ಲಘುವಾಗಿ ಅಣಕವಾಡಾಗಿ ಹಾಡಿದಾಗ ವಿ.ಸೀ. ಮುನಿಸಿಕೊಳ್ಳಲಿಲ್ಲ. ವಿಷಾದ ಪಡಲಿಲ್ಲ. ಎಲ್ಲರ ಜತೆ ಸೇರಿ ನಕ್ಕು ನಕ್ಕು ನಲಿದಾಡಿದರು. ಸರಸತೆಗೆ ಇನ್ನೊಂದು ಹೆಸರು ವಿ.ಸೀ.

ಅವರ ಅತಿ ಜನಪ್ರಿಯ ಹಾಡುಗಳಲ್ಲಿ ಇನ್ನೊಂದು ಹಾಡು, ಕಾದಿರುವಳು ಶಬರಿ ರಾಮ ಬರುವನೆಂದು ಎಂಬ ಹಾಡು, ನಾವು ಶಾಲೆಗಳಲ್ಲಿ ಓದುತ್ತಿದ್ದಾಗ ಮೃಗಶಾಲೆಯ ಸಿಂಹಗಳು, ಶಬರಿ, ಪದ್ಯಗಳು ಪಠ್ಯಪುಸ್ತಕಗಳಲ್ಲಿ ಖಾಯಂ ಆಗಿ ಸೇರಿರುತ್ತಿದ್ದವು. ಕಾದಿರುವಳು ಶಬರಿ ಪದ್ಯದ ಪ್ರಸಂಗವೊಂದು ನೆನಪಾಗುತ್ತಿದೆ.

ವಿ.ಸೀ. ಅವರ ಮಕ್ಕಳಲ್ಲಿ ಒಬ್ಬನಾದ ಸತ್ಯನಾರಾಯಣ ಅರ್ಥಾತ್ ಸತ್ಯ ನನ್ನ ಬಾಲ್ಯದ ಸಹಪಾಠಿ, ಪ್ರೈಮರಿ, ಮಾಧ್ಯಮಿಕ ಶಾಲೆಗಳಲ್ಲಿ ಒಟ್ಟಿಗೆ ಓದಿದ ಗೋಲಿ ಗೆಳೆಯರಲ್ಲಿ ಅವನೂ ಒಬ್ಬ. ಅವರ ಮನೆ ಚಾಮರಾಜಪೇಟೆಯ ೨ನೇ ರಸ್ತೆಯಲ್ಲಾದರೆ ನಮ್ಮ ಮನೆ ೪ನೇ ರಸ್ತೆಯಲ್ಲಿ, ಇಬ್ಬರ ಶಾಲೆಯೂ ಕೋಟೆ ಮಾಧ್ಯಮಿಕ ಶಾಲೆ. ಆಟದ ಮೈದಾನ, ಶಾಲೆ ವೇಳೆ ಬಿಟ್ಟರೆ ಅವರ ಮನೆಯ ಮುಂದೆ ಪುಟ್ಟಪಥವೇ ನಮ್ಮ ಆಟದಂಗಳ. ಎದುರುಮನೆ ಪಿಟೀಲು ಸುಬ್ಬಾಶಾಸ್ತ್ರಿಗಳ ಮನೆ ವರಾಂಡಾ ಇನ್ನೊಂದು ಆಟದ ಅಂಗಳ. ತಪ್ಪಿದರೆ ವಿ.ಸೀ. ಮನೆಯಲ್ಲಿ ಹಿಂಭಾಗದಲ್ಲಿದ್ದ ಹಲಸಿನಮರದ ಬುಡ. ಹೀಗೆ ಶಾಲೆಯಲ್ಲೂ ಆಮೇಲೂ ನಾವಿಬ್ಬರೂ ಒಟ್ಟಿಗಿರುತ್ತಿದ್ದೆವು.

ಕೋಟೆಶಾಲೆಯಲ್ಲಿ ನಾವು ಓದುತ್ತಿದ್ದಾಗ ಪಠ್ಯದಲ್ಲಿದ್ದ ಕಾದಿರುವಳು ಶಬರಿ ಪಾಠ ಮಾಡುವಾಗ ಕನ್ನಡದ ಮೇಷ್ಟ್ರು "ಏನ್ರಯ್ಯಾ, ಈ ಪದ್ಯ ಬರೆದವರು ಯಾರು ಗೊತ್ತೇ? ಇಲ್ಲೇ ದಿನಾ ಎದುರಿಗಿರುವ ಪರಿಷತ್ತಿನ ಬಳಿ ಸಂಜೆ ಸಿಗುತ್ತಾರೆ ನೋಡಿದ್ದೀರಾ?" ಎಂದು ಕೇಳಿದರು. ಆಗ ನನ್ನ ಗೆಳೆಯ ಸತ್ಯ "ಚೆನ್ನಾಗಿ ಗೊತ್ತು. ಅವರು ನಮ್ಮಪ್ಪ" ಎಂದ. ಮೇಷ್ಟ್ರು "ತಲೆಹರಟೆ, ವಿ.ಸೀ. ನಿಮ್ಮಪ್ಪಾನ?" ಎಂದರು. "ಹೌದು ಸಾರ್" ಎಂದ. "ಅಲ್ಲ ಕಣೋ, ನಿಮ್ಮಪ್ಪನ ಹೆಸರು ವಿ.ಸೀತಾರಾಮಯ್ಯ ಅಂತ ಇರಬಹುದು. ಅಂದ ಮಾತ್ರಕ್ಕೆ ಇಂಥ ಸೊಗಸಾದ ಪದ್ಯ ಬರೆದ ಕವಿ ನಿಮ್ಮಪ್ಪ ಆಗಿಬಿಡ್ತಾರಾ..." ಎಂದರು. ಅದಕ್ಕೆ ಸತ್ಯ "ನಾನೇನು ಸುಳ್ಳು ಹೇಳ್ತಿಲ್ಲ" ಎಂದಾಗ ನಾನು, "ಸಾರ್ ಅವನು ಹೇಳುತಿರೋದು ನಿಜ" ಎಂದೆ. "ಹಾಗಲಕಾಯಿಗೊಂದು ಬೇವಿನಕಾಯಿ ಸಾಕ್ಷಿ ಬೇರೆ. ಕೂತ್ಕೋ ಸುಮ್ನೆ" ಎಂದರು. ಪಾಠ ಮಾಡಿದರು. ತರಗತಿ ಮುಗಿದ ಮೇಲೆ ಈಚೆ ಬರುತ್ತಾ ಎದುರಿಗೆ ಬಂದ ಹೆಡ್ಮಾಸ್ಟರಿಗೆ "ನೋಡಿ ಸಾರ್. ಈ ಪೋಕರಿ, ನಾನು ವಿ.ಸೀ. ಅವರ ಕಾದಿರುವಳು ಶಬರಿ ಪದ್ಯ ಪಾಠಮಾಡುವಾಗ ಇದನ್ನು ಬರೆದವರು ಯಾರು ಗೊತ್ತೇ ಎಂದು ಕೇಳಿದರೆ ನಮ್ಮಪ್ಪ ಅಂತಾನೆ" ಅಂದರು. ಆಗ ಅವರು "ಹೌದ್ರೀ, ಅವರು ವಿ.ಸೀತಾರಾಮಯ್ಯನವರ ಮಗ" ಎಂದರು. ನಮ್ಮ ಕನ್ನಡ ಮೇಷ್ಟ್ರು ಮಾತಾಡದೇ ಮುಂದಕ್ಕೆ ಹೋದರು.

ವಿ.ಸೀ. ಮನೆಯ ಮುಂದಿನ ಅಂಗಳದ ಆಟಗಾರರಾದ ನನಗೆ, ಸತ್ಯನಿಗೆ, ಕನ್ನಡದ ಸಾಹಿತಿಗಳ ದರ್ಶನ ಸುಲಭವಾಗಿ ಆಗುತ್ತಿತ್ತು. ಕಾರಂತರ ಪರಿಚಯ ಆಗಿದ್ದೂ ಹಾಗೇನೇ. ಮನೆಯ ಮುಂದೆ ಒಮ್ಮೆ ಆಟವಾಡುತ್ತಿದ್ದಾಗ ನಮ್ಮನ್ನು ದಾಟಿಕೊಂಡು ಕಾರಂತರು ಮನೆಯೊಳಕ್ಕೆ ಹೋದರು. ನಾನು "ಯಾರೋ ಇವರು?" ಎಂದೆ, ಸತ್ಯ "ಕಾರಂತರು ಕಣೋ. ನಮ್ಮಪ್ಪನಿಗೆ ತುಂಬಾ ಫ್ರೆಂಡು. ಬರ್ತಾ ಇರ್ತಾರೆ" ಎಂದ. ಆಗಲೇ ಬಾಲಪ್ರಪಂಚ ಪುಸ್ತಕದ ಚಿತ್ರಗಳನ್ನು ಕಂಡು

ಬೆರಗಾಗಿದ್ದೆವು ನಾವು. ಅವರ ಢಂಢಂ ಡೋಲು, ಬೂರ್ ಬೂರ್ ತಿಮ್ಮಕ್ಕ, ಮೊಸರು ಕಡೆಯೇ ತಿಮ್ಮಕ್ಕ ಪದ್ಯಗಳು ನಮಗೆ ಗೊತ್ತಿದ್ದವು. ಹೋಗಿ ಕಿಟಕಿಯಲ್ಲಿ ಬಗ್ಗಿ ನೋಡಿದೆವು, ಕಾರಂತರು "ಯಾರು? ಏನು ಬೇಕು?" ಅಂದಾಗ ನಾವು ಗಾಬರಿಯಿಂದ ಆಚೆಗೆ ಓಡಿದೆವು. ಆಮೇಲೆ ಸತ್ಯ ಬಂದು "ನಮ್ಮಪ್ಪ ಕರೀತಿದ್ದಾರೆ ಬನ್ರೋ" ಎಂದ. ನಾವು ಹೋದಾಗ ವಿ.ಸೀ. ಅವರು ನಮ್ಮ ಹುಡುಗನ ಸ್ನೇಹಿತರು ಎಂದು ಹೇಳಿದಾಗ ಕಾರಂತರು ನಮ್ಮನ್ನು ಮಾತಾಡಿಸಿ ತಮಾಷೆ ಮಾಡಿದರು. ಆ ಮಾತುಗಳು ನಮಗಿಂದು ನೆನಪಿಲ್ಲ. ಆದರೆ ಹಿಂದಕ್ಕೆ ತಲೆ ಬಾಚಿದ ರೀತಿ, ಮೀಸೆ, ಕಣ್ಣುಗಳು ಇನ್ನೂ ನೆನಪಿವೆ. ವಿ.ಸೀ. ನಮಗೆಲ್ಲಾ ಅಲ್ಲಿದ್ದ ಹಣ್ಣೊಂದನ್ನು ಕೊಟ್ಟರು. ಅದನ್ನು ತೆಗೆದುಕೊಂಡು ಹೋಗಿ ಕಾಗೆ ಎಂಜಲು ಮಾಡಿ, ಬಾಯಲ್ಲಿ ಷರಟಿನ ಬಟ್ಟೆ ಮೂಲಕ ಕಚ್ಚಿ ಹಂಚಿಕೊಂಡು ತಿಂದೆವು. ಆಗಾಗ ಹಣ್ಣಿನ ಸಮಾರಾಧನೆ ವಿ.ಸೀ.ಯಿಂದ ನಮಗೆ ಆಗುತ್ತಿತ್ತು. ಹೀಗಾಗಿ ಬಾಲ್ಯದಲ್ಲೇ ವಿ.ಸೀ. ನಮಗೆ ಹಣ್ಣು ಕೊಡೋ ಮಾವ, ಸತ್ಯನ ಅಪ್ಪ ಆಗಿದ್ದರು.

ಹಣ್ಣು ಎಂದಾಗ ನೆನಪಾಗುತ್ತೆ. ವಿ.ಸೀ ಶುಚಿರುಚಿಗಳಲ್ಲಿ ಎತ್ತಿದ ಕೈ. ಹಣ್ಣುಗಳನ್ನು ಆರಿಸುವುದರಲ್ಲಿ ಅವರನ್ನು ಸರಿಗಟ್ಟುವವರೇ ಇಲ್ಲ ಎಂದರೆ ತಪ್ಪಲ್ಲ. ಒಮ್ಮೆ ಕಾರಂತರು "ಸದಾ ನೀವೇ ಹಣ್ಣು ತರುವುದು ಏಕೆ? ನಾನು ತರುತ್ತೇನೆ" ಎಂದು ಒಮ್ಮೆ ಮಾರುಕಟ್ಟೆಯಿಂದ ಒಂದು ರಾಶಿ ಮಾವಿನಹಣ್ಣು ತಂದರು. ವಿ.ಸೀ ಅದನ್ನು ನೋಡಿ, "ಕಾರಂತರೇ, ನೀವೇನು ತಂದಿದ್ದು?" ಎಂದರು. "ಮಾವಿನ ಹಣ್ಣು" ಎಂದರೆ, "ಅದು ಸರಿ. ಯಾವ ಮಾವಿನಹಣ್ಣು" ಎಂದರೆ "ಸೊಗಸಾದ ರಸಪುರಿ" ಎಂದರೆ, "ಹೌದೇ?" ಎಂದು ಆ ಹಣ್ಣುಗಳನ್ನು ಬೇರೆ ಬೇರೆ ಮಾಡಿ, ಇದು ಮಲಗೋವಾ, ಇದು ನಾಟಿ, ಇದು ರಸಪುರಿ ಎಂದೆಲ್ಲಾ ಬೇರೆ ಮಾಡಿ "ರುಚಿ ನೋಡಿ, ತಿಳಿಯುತ್ತೆ" ಎಂದಾಗಲೇ ತಿಳಿದದ್ದು ಎಲ್ಲಾ ಬೇರೆ ಜಾತಿಯವು ಕಲಬೆರಕೆ ಆಗಿದ್ದವು ಎಂದು. ಕಾರಂತರು "ಸೀತಣ್ಣ, ಇನ್ನು ಮೇಲೆ ಈ ಕೆಲಸಕ್ಕೆ ಕೈ ಹಾಕೊಲ್ಲ" ಎಂದರಂತೆ.

ಕಾರಂತರಿಗೂ ವಿ.ಸೀ ಅವರಿಗೂ ಗಳಸ್ಯ ಕಂಠಸ್ಯ ಪ್ರೇಮ. ಹತ್ತಾರು ವರ್ಷಗಳು ಒಂದೇ ಸಮ ಪ್ರೀತಿ, ಸ್ನೇಹ ಕಾರಂತರಂಥ ವ್ಯಕ್ತಿಯಲ್ಲಿ ಉಳಿದು ಬರುವುದು ಸಾಮಾನ್ಯ ಸಂಗತಿಯಲ್ಲ. ವಿ.ಸೀ. ಬಗ್ಗೆ ಕಾರಂತರೇ ಹೇಳಿದ ಈ ಮಾತನ್ನು ಗಮನಿಸಬೇಕು. “ನನ್ನ ಬದುಕಿನ ಮೇಲೆ ನಿಡುಗಾಲ ಪ್ರಭಾವ ಬೀರಿದ ವ್ಯಕ್ತಿಗಳ ಸಂಖ್ಯೆ ತೀರಾ ಕಡಿಮೆ. ನಾವು ನಮ್ಮ ಜೀವನದ ಯಾತ್ರೆಯನ್ನು ನಡೆಯಿಸುವಾಗ ಅನೇಕರನ್ನು ಸಂಧಿಸುತ್ತೇವೆ. ಅವರಲ್ಲಿ ನಮಗೆ ದುಃಖ ಕೊಡುವವರು ಇರುತ್ತಾರೆ. ಸಂತೋಷ ಕೊಡುವವರೂ ಇರುತ್ತಾರೆ. ಅವರೆಲ್ಲ ಸ್ವಲ್ಪ ಕಾಲ ನಮ್ಮ ಜೀವನದಲ್ಲಿ

ಸಂಧಿಸುತ್ತಾರೆ. ಸ್ಪಂದಿಸುತ್ತಾರೆ. ಅನಂತರ ಹೊರಟುಹೋಗುತ್ತಾರೆ. ಆದರೆ ತಮ್ಮ ಬದುಕಿನಿಂದ ನಮ್ಮ ಬದುಕಿನ ಮೇಲೆ ಅಚ್ಚೊತ್ತಿ ಕೊನೆಯ ತನಕವೂ ಸ್ಮರಣೆಯನ್ನು ಉಳಿಸುವವರ ಸಂಖ್ಯೆ ಕೇವಲ ಒಂದು ಮುಷ್ಟಿಯ ಬೆರಳುಗಳಷ್ಟು ಮಂದಿಯೂ ಇರುವುದಿಲ್ಲ. ನಮಗೆ ಸಾವಿರ ಸಾವಿರ ಜನರ ಸಂಪರ್ಕ ಆಗಿಯೇ ಇರುತ್ತದೆ. ಅಂಥವರಿಂದ ಉಂಟಾಗುವ ಪ್ರಭಾವ ನಮ್ಮನ್ನು ಹೊಂದಿರುವಂತೆ ಅವರನ್ನೂ ಹೊಂದಿರುತ್ತದೆ.

ಅವರ ಬದುಕಿನ ಮೌಲ್ಯಕ್ಕೂ ನಮ್ಮದಕ್ಕೂ ಹೊಂದಿಕೆ ಇರುವಲ್ಲಿ ಅವರ ನೆನಪು ನಮ್ಮನ್ನು ಹೆಚ್ಚಾಗಿ ಅಂಟಿಕೊಳ್ಳಬಹುದು. ತಮ್ಮ ಬದುಕಿನಲ್ಲಿ ಸೊಗಸು ಏನು, ಅದರ ಸತ್ಯ ಏನು, ಸರಸ ಏನು, ವಿರಸ ಏನು- ಎಂಬುದನ್ನು ತಮ್ಮ ಬದುಕಿನಿಂದಲೇ ತೋರಿಸುತ್ತಾ ಬಾಳಿದವರು, ನನ್ನ ಬದುಕಿನ ಎಟುಕಿಗೆ ದೊರೆತ ವ್ಯಕ್ತಿಗಳಲ್ಲಿ ವಿ.ಸೀತಾರಾಮಯ್ಯನವರು ಬಲುಗಣ್ಯರು" ಎಂದಿದ್ದಾರೆ. ಅಚಲ ಅನುಪಮ ಸ್ನೇಹ ವಿಶ್ವಾಸದ ಗೆಳೆತನಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?

ಪ್ರತಿ ವರ್ಷವೂ ಕಾರಂತರು ತಮ್ಮ ಹುಟ್ಟುಹಬ್ಬದ ಪ್ರಯುಕ್ತ ವಿ.ಸೀ. ಅವರಿಗೆ ಉಡುಗೊರೆ ಕಳಿಸುತ್ತಿದ್ದರು. ನಾವು ಹುಟ್ಟುಹಬ್ಬದ ದಿನ ಹುಟ್ಟುಹಬ್ಬದವರಿಗೆ ಉಡುಗೊರೆ ಕೊಡಬೇಕು ಎನ್ನುತ್ತೇವೆ. ಕಾರಂತರ ರೀತಿಯೇ ಬೇರೆ. ಹಾಗೆ ಒಮ್ಮೆ ಅವರು ವಿ.ಸೀ. ಅವರಿಗೆ ಕೋಟು ಹೊಲಿಸಿಕೊಳ್ಳಲು ಬಟ್ಟೆ ಕಳಿಸಿದ್ದರು. ಅದರೊಂದಿಗೆ ಚೀಟಿ ಇಟ್ಟಿದ್ದರು. “ಈ ಬಟ್ಟೆಯಲ್ಲಿ ಕೋಟು ಹೊಲಿಸಿಕೊಂಡು ಹಾಕಿಕೊಳ್ಳಬೇಕು. ನನ್ನ ಹುಟ್ಟುಹಬ್ಬಕ್ಕಾಗಿ ಕಳಿಸಿದ್ದೇನೆ. ಒಂದು ಎಚ್ಚರಿಕೆ ಮಾತು. ಕೋಟನ್ನು ಹೊಲಿಸಿದ ವೆಚ್ಚದ ಬಿಲ್ಲನ್ನು ನನಗೆ ತಪ್ಪದೆ ಕಳಿಸಬೇಕು” ಎಂದು ಚೀಟಿಯಲ್ಲಿ ಬರೆದಿತ್ತು. ನನ್ನ ಮಿತ್ರ ಸತ್ಯನೊಡನೆ ನಾನು ಕೋಟು ತರಲು ಹೋದಾಗ ಸತ್ಯ ದರ್ಜಿಗೆ "ಬಿಲ್ಲು ಬೇಕಂತೆ ನಮ್ಮಪ್ಪನಿಗೆ" ಎಂದು ಹೇಳಿದ. "ಏಕೆ ಬಿಲ್ಲು? ಕೋಟು ಹೊಲಿದುಕೊಟ್ಟಿದ್ದೇನೆ" ಎಂದ ದರ್ಜಿ. "ಇಲ್ಲ. ನಮ್ಮಪ್ಪನ ಫ್ರೆಂಡು ಕಾರಂತರು ಕಳಿಸಿದ್ದು ಈ ಬಟ್ಟೆ, ಅವರಿಗೆ ಬಿಲ್ ಕಳಿಸಬೇಕು" ಎಂದಾಗಲೇ ಈ ವಿಷಯ ತಿಳಿದಿದ್ದು.

ಇನ್ನು ತಿಂಡಿ ಸಮಾರಾಧನೆ ಮತ್ತು ಕಾಫೀ ಸಮಾರಾಧನೆಯಲ್ಲಿ ಅವರ ಆತಿಥ್ಯದ ಸವಿಯನ್ನು, ವೈಖರಿಯನ್ನು, ಠೀವಿಯನ್ನು ಬಣ್ಣಿಸಲು ಬಾಯಿಲ್ಲವಯ್ಯಾ! ಹಣಕಾಸಿನ ಶ್ರೀಮಂತಿಕೆ ಇದ್ದವರಿಗೂ ಸಾಧ್ಯವಿಲ್ಲದ ಸ್ನೇಹ, ಪ್ರೀತಿಯ, ಅಂತಃಕರಣದ ಚೆಲುವಿನಾರಾಧನೆ, ರೂಪಾರಾಧನೆ, ರಸ ಸಮಾರಾಧನೆಗಳ ರಸಿಕರು ಅವರು. ತಿಂಡಿ-ಕಾಫಿ ಎಲ್ಲರ ಮನೆಯಲ್ಲೂ ಕೊಡುತ್ತಾರೆ. ವಿ.ಸೀ. ಅವರೂ ಕೊಡುತ್ತಾರೆ ಮನೆಗೆ ಬಂದವರಿಗೆ, ನಿಜ. ಆದರೆ ಅವರು ಕೊಡುವ

ರೀತಿ, ಅದರ ರುಚಿ, ಅದರ ಹಿಂದಿನ ಪ್ರೀತಿ ಬೇರೆಡೆ ಇಲ್ಲ. ಏಕೆಂದರೆ ಪರಿಕರಗಳ ಬಗ್ಗೆ ಅವರಿಗೆ ಹೆಚ್ಚು ನಿಗಾ. ಕಾಫಿಪುಡಿ ವಿಶ್ವೇಶ್ವರಪುರದ ಅಂಗಡಿ ಒಂದರಿಂದಲೇ ಬರಬೇಕು, ಹಾಲು ಹೀಗೆ ಗಟ್ಟಿಯಾಗಿರಬೇಕು. ಸಕ್ಕರೆ ಇಷ್ಟೇ ಹಾಕಬೇಕು ಇತ್ಯಾದಿ ಷರತ್ತುಗಳ ಮೇಲೆ ಸಿದ್ಧವಾಗುತ್ತದೆ, ಊಟ-ತಿಂಡಿ ಕಾಫಿಗಳು ವಿ.ಸೀ. ಮನೆಯಲ್ಲಿ. ಅವರ ರುಚಿ, ಶುಚಿ ಅಭಿರುಚಿಗಳಂತೆ ಸಿದ್ಧವಾಗಿರುತ್ತದೆ ಅತಿಥಿಗಳಿಗೆ.

ವಿ.ಸೀ ಅವರು ಹಲವಾರು ಉದ್ಯೋಗಗಳಲ್ಲಿ ಇದ್ದರೂ ಅವರು ಜನಪ್ರಿಯರಾದುದು, ಪ್ರಸಿದ್ಧರಾದುದು ಅಧ್ಯಾಪಕವೃತ್ತಿಯಿಂದ, ಸಾಹಿತ್ಯಸೇವೆಯಿಂದ. ಕನ್ನಡ ನಾಡಿನ ಅಪೂರ್ವ ವಾಗ್ಮಿಗಳಲ್ಲಿ ಅವರೊಬ್ಬರು. ಅನಕೃ ಅವರಂಥ ವಾಗ್ಮಿಗಳ ಸಾಲಿಗೆ ಸೇರುವವರು. ಆದರೆ ಇಬ್ಬರ ಮಾತಿನ ಶೈಲಿ ಬೇರೆ ಬೇರೆ. ಎಂ.ಎ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವ್ಯಾಸಂಗಿಗಳಾದ ಅವರು ಕನ್ನಡ ಉಪನ್ಯಾಸಕರಾದರು. ಇಂಗ್ಲಿಷ್ ಅಧ್ಯಾಪಕರಿಗಿಂತ ಇಂಗ್ಲಿಷಿನಲ್ಲಿ ಹೆಚ್ಚು ಪ್ರಾವೀಣ್ಯ ಗಳಿಸಿದ್ದ ಅವರು ಇಂಗ್ಲಿಷಿನಲ್ಲಿ ಕನ್ನಡ ಪಾಠ ಮಾಡುವ ಮೇಷ್ಟ್ರೆಂದೇ ಹೆಸರು ಗಳಿಸಿದ್ದರು. ಅವರ ಪಾಠದ ತರಗತಿಗಳಲ್ಲಿ ಅವರ ಕಾಲೇಜಿನ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬೇರೆ ತರಗತಿಯ, ಕಾಲೇಜಿನ ವಿದ್ಯಾರ್ಥಿಗಳು ಪಾಠ ಕೇಳಲು ಸೇರುತ್ತಿದ್ದರು. ಆಕಾಶವಾಣಿಯಲ್ಲೂ ವಿಶಿಷ್ಟ ಸೇವೆ ಸಲ್ಲಿಸಿದವರು ಅವರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಸಿಕ್ಕರೂ, ನಿಜವಾದ ಪ್ರೊಫೆಸರ್ ಆಗಿದ್ದರೂ, ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಪದವಿಗೆ ಅರ್ಹತೆ ಇದ್ದರೂ, ಅದು ಅವರಿಗೆ ದೊರೆಯಲಿಲ್ಲ. ಯಾರಾದರೂ ಪ್ರೊಫೆಸರ್ ಎಂದು ಕರೆದರೆ "ಹಾಗೆ ಕರಿಯಬೇಡಿ. ನಾನು ಪ್ರೊಫೆಸರ್ ಅಲ್ಲವಪ್ಪಾ" ಎನ್ನುತ್ತಿದ್ದರು.

೧೮೯೯ ಅಕ್ಟೋಬರ್ ೨ರಂದು ಜನಿಸಿ ೧೯೮೩ ಸಪ್ಟೆಂಬರ್ ೪ರಂದು ನಿಧನರಾದ ಆವರ ಬಾಳಿನಲ್ಲಿ ಎಲ್ಲರ ಬಾಳಿನಲ್ಲೂ ಇರುವ ಹಾಗೆ ಬಡತನ ಮತ್ತು ದುಃಖದ ಪ್ರಸಂಗಗಳಿದ್ದರೂ, ಅದಕ್ಕೆ ತಲೆಗೊಡದೆ ನಗುನಗುತ್ತಾ ಸಹೃದಯರಾಗಿ, ಲೋಕೋಪಕಾರಿಗಳಾಗಿ, ಸಜ್ಜನರಾಗಿ, ಸಹೃದಯರಾಗಿ ಬಾಳಿ ಬದುಕಿದ ವಿಶಿಷ್ಟ ವ್ಯಕ್ತಿ ವಿ.ಸೀ. ಕನ್ನಡದಲ್ಲಿ ಅತಿ ಸುಂದರವಾಗಿ ಅಚ್ಚುಕಟ್ಟಾಗಿ ಸೌಂದರ್ಯಾರಾಧನೆಗೆ ಸಾಕ್ಷಿಯೆಂಬಂತೆ ಪುಸ್ತಕ ಪ್ರಕಟಿಸಿದವರು ಅವರು. ಕಾಗದ, ಚಿತ್ರ, ಮುದ್ರಣ ಎಲ್ಲದರಲ್ಲೂ ಶ್ರೀಮಂತಿಕೆ ಮೆರೆದ ಮೊದಲಿಗರಲ್ಲಿ ಅವರೊಬ್ಬರು. ಅವರ **ಗೀತೆಗಳು ದೀಪಗಳು** ಕವನ ಸಂಗ್ರಹ ಅಂಥದ್ದು! **ಪಂಪಾಯಾತ್ರೆ**ಯಂತೂ ಪ್ರವಾಸ ಸಾಹಿತ್ಯದಲ್ಲಿ ಧ್ರುವನಕ್ಷತ್ರ. ಜೀವನಚರಿತ್ರೆ, ನಾಟಕ, ಪ್ರಬಂಧ, ಕವಿತೆ, ವಿಮರ್ಶೆ ಈ ಐದು ರಂಗಗಳಲ್ಲಿ ಸವ್ಯಸಾಚಿ ಸಾಹಿತಿ ವಿ.ಸೀ.

ವಿ.ಸೀ.ಯವರಂಥ ವೃಕ್ಷಪ್ರೇಮಿ, ಪರಿಸರಪ್ರೇಮಿ ಸಾಹಿತಿ ಕನ್ನಡದಲ್ಲಿ ಅಪರೂಪ. ನಮ್ಮ ಸಾಹಿತಿಗಳಲ್ಲಿ ಗಿಡಮರಗಳ ಬಗ್ಗೆ ತಮ್ಮ ಬರಹಗಳಲ್ಲಿ ಪ್ರೀತಿ ತೋರಿಸಿದವರಿದ್ದಾರೆ. ನಿಜಜೀವನದಲ್ಲಿ ಅಲ್ಲ. ಕೆಲವು ಸಾಹಿತಿಗಳು ಸುಂದರ ಮಲ್ಲಿಗೆತೋಟ ಇದ್ದ ಅಂಗಳದಲ್ಲಿ ಅದನ್ನು ಕಡಿದು ಬಾಡಿಗೆಗೆ ಅಂಗಡಿ ಕಟ್ಟಿಸಿದವರಿದ್ದಾರೆ. ಆ ಗುಂಪಿಗೆ ಸೇರಿದವರಲ್ಲ ವಿ.ಸೀ. ಬಿ.ಜಿ.ಎಲ್.ಸ್ವಾಮಿ, ಸಿ.ವಿ.ರಾಮನ್, ಅಂಥ ರಸಿಕ ವರ್ಗಕ್ಕೆ ಸೇರಿದವರು. ವಿ.ಸೀ. ಅವರ ವೃಕ್ಷಪ್ರೀತಿ, ವೃಕ್ಷಾಸಕ್ತಿ, ವೃಕ್ಷ ಪರಿಜ್ಞಾನಕ್ಕೆ ನನ್ನ ಅನುಭವದ ಸಂಗತಿಗಳನ್ನೇ ಹೇಳಬಹುದಾಗಿದೆ.

ವಿ.ಸೀ. ಅವರ ಮನೆಯ ಹಿತ್ತಲಲ್ಲಿ ದೊಡ್ಡ ಹಲಸಿನಮರ ಒಂದಿತ್ತು. ಅದರ ಬುಡದಲ್ಲಿ ಆಟವಾಡಿದ, ಅದರ ಹಣ್ಣಿನ ಸವಿ ಕಂಡ ಅನುಭವ ನನ್ನದು. ಅಲ್ಲಿ ಔಟ್‌ಹೌಸ್ ಕಟ್ಟಿಸಲು, ಅದಕ್ಕಾಗಿ ಆ ಮರ ಕಡಿಸಲು, ಮಕ್ಕಳು ನಿರ್ಧರಿಸಿದಾಗ ವಿ.ಸೀ. ಅವರಿಗಾದ ವ್ಯಥೆ ಅಷ್ಟಿಷ್ಟಲ್ಲ. ಆ ಸಮಯಕ್ಕೆ ಸರಿಯಾಗಿ ಕು.ಶಿ.ಹರಿದಾಸಭಟ್ಟರು ವಿ.ಸೀ. ಅವರನ್ನು ಸಮಾರಂಭವೊಂದಕ್ಕೆ ಆಹ್ವಾನಿಸಲು ಅವರ ಮನೆಗೆ ಬಂದರು. ವಿ.ಸೀ. ಕೂಡಲೇ “ನೀವು ಈಗ ಬಂದು ಕರೆದಿದ್ದು ಬಹಳ ಒಳ್ಳೆಯದಾಯಿತು. ಖಂಡಿತ ಬರುತ್ತೇನೆ" ಎಂದರು. "ಈಗ ಕರೆದಿದ್ದು ಒಳ್ಳೆಯದಾಯಿತು ಎಂದಿರಲ್ಲ, ಏನು ವಿಶೇಷ?" ಎಂದು ಹರಿದಾಸಭಟ್ಟರು ಕೇಳಿದರು. ವಿ.ಸೀ. ಆಗ ಹೇಳಿದರು: “ನನ್ನ ಮಕ್ಕಳು ಮನೆಯ ಹಿಂಭಾಗದಲ್ಲಿ ಔಟ್‌ಹೌಸ್ ಕಟ್ಟಲು ತೀರ್ಮಾನಿಸಿದ್ದಾರೆ. ಅದಕ್ಕಾಗಿ ಹಿತ್ತಲಲ್ಲಿರುವ ಹಳೆಯ ಹಲಸಿನಮರವನ್ನು ಕಡಿದು ಹಾಕುತ್ತಾರಂತೆ. ಆ ಘೋರ ಕಾರ್ಯ ನಡೆಯುವಾಗ ನಾನು ಇಲ್ಲಿ ಇರಬಯಸುವುದಿಲ್ಲ. ಆದ್ದರಿಂದ ಸಂತೋಷವಾಗಿ ನಿಮ್ಮ ಸಮಾರಂಭಕ್ಕೆ ಬರುತ್ತೇನೆ ಎಂದೆ”.

ವಿ.ಸೀ. ಎಂದರೆ ಲಾಲ್‌ಬಾಗ್, ಲಾಲ್‌ಬಾಗ್ ಎಂದರೆ ವಿ.ಸೀ. ಲಾಲ್‌ಬಾಗನ್ನು ಕುರಿತು ಹಲವಾರು ಕವನಗಳನ್ನು ಬರೆದಿದ್ದಾರೆ. ವಿ.ಸೀ. ಲಾಲ್‌ಬಾಗ್ ಯಾತ್ರೆ ಪ್ರತಿದಿನದ ಪಂಪಾಯಾತ್ರೆ ಎನ್ನಬೇಕು. ಈ ಯಾತ್ರೆಯ ನಿತ್ಯ ಯಾತ್ರಿಕರು ಮೂವರು, ವಿ.ಸೀ., ಕೆ.ಎಸ್.ನರಸಿಂಹಸ್ವಾಮಿ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಕವಿ, ಶಾಸ್ತ್ರಿ ರಸಿಕತ್ರಯರು ಕನ್ನಡ ಸಾಹಿತ್ಯ ಅಂಗಳದಲ್ಲಿ ಸಂಜೆ ಸಂಧಿಸುತ್ತಿದ್ದರು. ಪರಿಷತ್ತಿನ ಹಿಂದೆ ರಾಮೇಶ್ವರ ದೇವಸ್ಥಾನದ ಬಳಿ ಇದ್ದ ಶಾಸ್ತ್ರಿಗಳು, ಪಕ್ಕದ ಗ್ರೈನ್ ಮರ್ಚೆಂಟ್ ಬ್ಯಾಂಕಿನ ಆವರಣದಲ್ಲಿದ್ದ ಹೌಸಿಂಗ್ ಬೋರ್ಡಿನಲ್ಲಿ ಕೆಲಸ ಮಾಡುತ್ತಿದ್ದ ಕೆಎಸ್‌ನ ಅವರು ಪರಿಷತ್ತಿನ ಅಂಗಳಕ್ಕೆ ಜಮಾಯಿಸುವ ವೇಳೆಗೆ ಸೆಂಟ್ರಲ್ ಕಾಲೇಜಿನಿಂದ ವಿ.ಸೀ. ಬಂದು ಸೇರಿಕೊಂಡಾಗ ಲಾಲ್‌ಬಾಗ್ ಯಾತ್ರೆ ಪ್ರಾರಂಭವಾಗುತ್ತಿತ್ತು. ಆ ದೃಶ್ಯ ನೋಡಲು ಎರಡು ಕಣ್ಣುಗಳು ಸಾಲವು. ಕೈಯಲ್ಲಿ ಛತ್ರಿ, ಕ್ಲೋಸ್ ಕಾಲರ್ ಕೋಟು, ಕಚ್ಚೆಪಂಚೆ, ಮೈಸೂರು ರುಮಾಲು,

ಶಿಸ್ತಿನ ವಿ.ಸೀ.; ಕಚ್ಚೆಪಂಚೆ, ಕ್ಲೋಸ್ ಕಾಲರ್ ಕೋಟು, ನಶ್ಯದ ಡಬ್ಬಿ, ಕೈಯಲ್ಲಿ ಕೋಲು, ಕರಿಟೋಪಿ, ಹಣೆ ಮೇಲೆ ಗಂಧದ ಆಜಾನುಬಾಹು, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ; ಕ್ರಾಪಿನ ತಲೆ, ಹೆಗಲಮೇಲೆ ಶಲ್ಯ, ದಟ್ಟಿಪಂಚೆ, ಜುಬ್ಬ ಅಥವಾ ಷರಟಿನ ನರಸಿಂಹಸ್ವಾಮಿ ಈ ಮೂವರ ಸಂಧ್ಯಾ ಜಂಬೂ ಸವಾರಿ, ನೋಡುವವರ ಕಣ್ಣಿಗೆ ಹಬ್ಬ; ಚಲಿಸುವ ಕನ್ನಡ ಸಾಹಿತ್ಯ ಸಮ್ಮೇಳನ.

ಆ ಮೂವರ ಜತೆ ಚಲಿಸುವ ಸಾಹಿತ್ಯ ಸಮ್ಮೇಳನ ಎಂದೆ ನಿಜ. ಒಂದೆರಡು ಬಾರಿ, ಕೆಲವೊಮ್ಮೆ ಅವರಿಲ್ಲದಾಗ, ವಿ.ಸೀ. ಜತೆ ಲಾಲ್‌ಬಾಗ್ ಯಾತ್ರಾಭಾಗ್ಯ ನನಗೆ ದೂರಕಿದೆ. ವಿ.ಸೀ. ಅವರು ಒಂಟಿಯಾಗಿ ಲಾಲ್‌ಬಾಗಿಗೆ ಹೋಗುತ್ತಿರಲಿಲ್ಲ. ಸದಾ ಸತ್ಸಂಗವಾಸಿ. ಮೌನಕ್ಕಿಂತ ಅವರಿಗೆ ಮಾತು ಪ್ರಿಯ. ಆಗೆಲ್ಲಾ ವಿ.ಸೀ. ಅವರು ಮಾತಾಡುತ್ತಾ ಮಾತಾಡುತ್ತಾ ಅಲ್ಲಲ್ಲೇ ದಾರಿಯಲ್ಲೇ ಪೃಷ್ಠಕ್ಕೆ ಕೋಲೂರಿಕೊಂಡು ಪುಟ್ಟ ಪುಟ್ಟ ಉಪನ್ಯಾಸಗಳನ್ನು ನೀಡುತ್ತಾ ಮಾತಿನ ಮಂಟಪ ನಡೆಸುತ್ತಾ ಸಾಗುತ್ತಿದ್ದರು.

ವಿ.ಸೀ. ಎಂದರೆ ವಿಶ್ವಕೋಶ, ಗಗನ ಸಂಚಾರಿ, ಹಕ್ಕಿ, ಕಥೆ, ಕಾದಂಬರಿ, ಪದ್ಯ ಶಾಸ್ತ್ರ, ಸಂಸ್ಕೃತ, ಇಂಗ್ಲಿಷ್ ಪದ್ಯಗಳು, ಬಿ.ಎಂ.ಶ್ರೀ, ಅಶ್ವತ್ಥಾಮನ್, ಪಂಪಭಾರತ ಗದಾಯುದ್ಧ ಕಾದಂಬರಿ, ಥಾಮಸ್ ಹಾರ್ಡಿ, ಬೇಕನ್, ಅಮರುಕ ಕಾಳಿದಾಸ, ಡಿ.ವಿ.ಜಿ. ಇಲಿಯೆಟ್... ವಿಷಯ ವಾರಿಧಿಗೆ ಎಲ್ಲೆಕಟ್ಟೇ ಇಲ್ಲ. ಅದಕ್ಕೆ ನಡುನಡುವೆ ರಸಭೋಜನಕ್ಕೆ ವ್ಯಂಜನಗಳಿದ್ದಂತೆ ಮೋಟಗಾನಹಳ್ಳಿಯವರು, ರಾಮಾಯಣದ ಉಲ್ಲೇಖಗಳನ್ನು, ದೇವಿ ಭಾಗವತ, ಸ್ಕಂಧಪುರಾಣ, ಕಾಳಿದಾಸ, ಭಾಸ, ಪುರಾಣಗಳ ನಿದರ್ಶನಗಳನ್ನು ಸೇರಿಸುತ್ತಿದ್ದರು. ಅನ್ಯೋಕ್ತಿಗಳನ್ನು ಕನ್ನಡದಲ್ಲಿ ವಿಶೇಷವಾಗಿ ರಚಿಸಿದ ಅವರು ಮಧ್ಯೆ ಮಧ್ಯೆ ಅವುಗಳನ್ನು ಹೇಳುತ್ತಿದ್ದರು. ನರಸಿಂಹಸ್ವಾಮಿ ಮಾತು ಕಮ್ಮಿ. ತಲೆ ಬಾಗುವುದೇ ಹೆಚ್ಚು. ಮುಡಿವ ಭೋಗಿಗಳು ಬೇಡವೇ ಕಾವ್ಯಪುಷ್ಪಗಳಿಗೆ? ಅವರ ಸಂಚಾರದ ನಕ್ಷೆ ಪ್ರಾರಂಭ–ನ್ಯಾಷನಲ್ ಕಾಲೇಜು ಸಾಲುಮರಗಳ ರಸ್ತೆ (ಈಗಿನ ಮರಗಳಲ್ಲ, ಆಗಿನ ಬೃಹದ್ ವೃಕ್ಷಗಳ ಸಾಲುಮರಗಳು ಇದ್ದ ಕಾಲ. ಮಧ್ಯಾಹ್ನವಾದರೂ ಬಿಸಿಲೇ ಬೀಳದಷ್ಟು ದಟ್ಟವಾಗಿ ಬೆಳೆದ ಮರಗಳ ಸಾಲು. ಹತ್ತಾರು ವರ್ಷ ಆ ಮರಗಳ ಬುಡದಲ್ಲಿ ಪುಸ್ತಕಗಳನ್ನು ಓದಿದ ಭಾಗ್ಯ ನನ್ನದು. ಓದಲು ಮನೆಯಲ್ಲಿ ಜಾಗವಿರಲಿಲ್ಲ.) ಆ ಸಾಲುಮರಗಳ ರಸ್ತೆಯಿಂದ ವಾಣೀವಿಲಾಸ ರಸ್ತೆಗೆ ಹೊರಟು ಲಾಲ್‌ಬಾಗ್ ಪ್ರವೇಶಿಸಿ, ಒಳಗೆಲ್ಲಾ ಸುತ್ತಾಡಿ, ಮಹಾದ್ವಾರದಿಂದ ಮಿನರ್ವಾ ಟಾಕೀಸ್ ರೋಡಿನಿಂದ ಸ್ಕೌಟ್ ಹೆಡ್‌ಕ್ವಾರ್ಟರ್ಸ್ ಮುಂದೆ ಹಾಯ್ದು, ಪರಿಷತ್ತಿನ ಕಡೆ ಇಲ್ಲವೆ ಶಾಸ್ತ್ರಿಗಳ ಮನೆಯ ಕಡೆ ಸೇರಿ ಚೆದುರುತ್ತಿದ್ದರು. ಒಮ್ಮೊಮ್ಮೆ ದಿಕ್ಕು ಬದಲಾಯಿಸಿ ಮಿನರ್ವಾ ಕಡೆಯಿಂದ ಹೊರಟು ಲಾಲ್‌ಬಾಗ್ ಮೂಲಕ ನ್ಯಾಷನಲ್ ಕಾಲೇಜ್ ಕಡೆಯಿಂದ ಬಂದಿದ್ದೂ

ಉಂಟು. ಹೇಗೇ ಸುತ್ತು ಬರಲಿ, ಆಗಿನ ಯಜ್ಞಪ್ಪನ ಹೋಟಲಿನ, ಈಗಿನ ಎಂ.ಟಿ.ಆರ್.ನ ದೋಸೆ ಆತಿಥ್ಯ ತಪ್ಪಿದ್ದಲ್ಲ. ಅವರ ದೋಸೆ ಪ್ರಬಂಧಕ್ಕೆ ಎಂ.ಟಿ.ಆರ್. ದೋಸೆಯೇ ಆಕರವೆಂದರೆ ತಪ್ಪಲ್ಲ. ಒಂದೊಂದು ಸಲ ಈ ತ್ರಿಮೂರ್ತಿಗಳು ಒಟ್ಟುಗೂಡುತ್ತಿರಲಿಲ್ಲ. ವಿ.ಸೀ. ಒಬ್ಬರೇ ಆದಾಗ ಇನ್ನಾರನ್ನಾದರೂ ಜತೆ ಮಾಡಿಕೊಂಡು ಹೋಗುತ್ತಿದ್ದರು. ಸಾಹಿತ್ಯಕ್ಷೇತ್ರದಲ್ಲಿ ಒಂಟಿಸಲಗ ಆದರೂ, ವಾಯು ವಿಹಾರದಲ್ಲಿ ಒಂಟಿ ಹೋಗುತ್ತಿರಲಿಲ್ಲ.

ಅವರೊಡನೆ ಹೋಗುವ ಅವಕಾಶಗಳು ನನಗೂ ಆಗಾಗ್ಗೆ ದೊರಕುತ್ತಿದ್ದವು ಎಂದೆನಲ್ಲ, ಆಗೆಲ್ಲ ದಾರಿಯುದ್ದಕ್ಕೂ ನನಗೆ ಶ್ರೀ ಕೃಷ್ಣ ಅರ್ಜುನನಿಗೆ ಉಪದೇಶಿಸಿದಂತೆ ಬೋಧೆ, ನನ್ನದೇನಿದ್ದರೂ ಅರ್ಜುನನಂತೆ ಪ್ರಶ್ನಿಸುವುದು ಅಷ್ಟೆ. ತೆರೆದ ಬಾಗಿಲು, ಅರಿವಿನ ಮಿಂಚು, ರಸಧಾರೆ ಅವರ ಮಾತುಗಳು. ಸ್ವಾರಸ್ಯವಾದ ಸಾಹಿತ್ಯದ ಭಾಗಗಳನ್ನು, ಚಿಟ್ಟೆ ಕಥೆಗಳನ್ನು, ಕವಿಗಳ ಮನೋಧರ್ಮಗಳನ್ನು ವಿವರಿಸುತ್ತಿದ್ದ ಅವರು ಯಾರ ಬಗ್ಗೆಯೂ ವೈಯಕ್ತಿಕ ನೆಲೆಯಲ್ಲಿ ಮಾತಾಡುತ್ತಿರಲಿಲ್ಲ. ಏನಿದ್ದರೂ ವ್ಯಕ್ತಿತ್ವದ ನಿರೂಪಣೆ, ಸಾಹಿತ್ಯದ ನಿಲುವು, ವಿನೋದ ದೃಷ್ಟಿಗಳು ವ್ಯಕ್ತವಾಗುತ್ತಿದ್ದವು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗದ ಪ್ರಖ್ಯಾತ ಸಾಹಿತಿಗಳ ಅನೇಕ ಸಂಗತಿಗಳನ್ನು ಅವರು ಹೇಳುತ್ತಿದ್ದರು. ನೆನಪಿಟ್ಟುಕೊಳ್ಳಲು ಸಾಧ್ಯವಿಲ್ಲದಷ್ಟು ಸಂಗತಿಗಳನ್ನು ತಿಳಿಸುತ್ತಿದ್ದರು. ಒಮ್ಮೆ ಅವರು ೧೮ ಜನರ ವಿಚಾರಗಳನ್ನು, ೩೨ ಪುಸ್ತಕಗಳ ಮಾತುಗಳನ್ನು ಹೇಳಿದ್ದನ್ನು ಲೆಕ್ಕ ಹಾಕಿದ್ದೆ. ಎಷ್ಟೋ ಸ್ವಾರಸ್ಯದ ಸಂಗತಿಗಳನ್ನು ಹೇಳಿದ್ದುಂಟು.

ಅವುಗಳಲ್ಲಿ ಎರಡು ಸಂಗತಿಗಳು ನೆನಪಿಗೆ ಬರುತ್ತಿವೆ. ಮೊದಲನೆಯದಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಹಳೆಯ ಕಟ್ಟಡ ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಕಟ್ಟಡದ ಉದ್ಘಾಟನೆಯನ್ನು ಆಗ ಚೀಫ್ ಇಂಜಿನಿಯರಾಗಿದ್ದು ಪರಿಷತ್ತಿನ ಕಟ್ಟಡ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕರ್ಪೂರ ಶ್ರೀನಿವಾಸರಾಯರ ಕೈಲಿ ಮಾಡಿಸಬೇಕೆಂದು ನಿರ್ಧರಿಸಿದ್ದರು. ಆ ಸಮಯದಲ್ಲಿ ಕರ್ಪೂರ ಶ್ರೀನಿವಾಸರಾಯರು ವಯಸ್ಸಾಗಿ, ಸ್ಥೂಲಕಾಯರಾಗಿದ್ದರು ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದರು. ಹೊರಗೆ ಬರುವುದೇ ಕಷ್ಟವಾಗಿತ್ತು. ಬೇರೆ ಯಾರ ಕೈಲಾದರೂ ಉದ್ಘಾಟನೆ ನಡೆಸಿಕೊಳ್ಳಿ ಎಂದು ಅವರು ತಿಳಿಸಿದರು. ಆದರೆ ಪರಿಷತ್ತಿನವರು ಒಪ್ಪಲಿಲ್ಲ. ಪರಿಷತ್ತಿಗಾಗಿ ದುಡಿದ ಅವರೇ ಬರಬೇಕೆಂದರು. ಹಾಗಾಗಿ ಅವರು ಬರಲೇ ಬೇಕಾಯಿತು. ಆಗ ಅವರು ತಮ್ಮ ಹಳೆಯ ಕಾರಿನಲ್ಲಿ ಕುಳಿತು ಬಂದರು. ಕಾರಿನಿಂದ ಇಳಿದು ನಡೆಯಲಾಗುತ್ತಿರಲಿಲ್ಲ. ರಸ್ತೆಯಲ್ಲಿಯೇ

ಕಾರು ನಿಲ್ಲಿಸಿ ಕಾರಿನಲ್ಲಿ ಕುಳಿತ ಕಡೆಯಿಂದಲೇ ಶಿಲಾಫಲಕಕ್ಕೆ ಕಟ್ಟಿದ ಬಟ್ಟೆಯ ಉದ್ದನೇ ಹಗ್ಗವನ್ನು ಎಳೆದು ಬಟ್ಟೆ ಸರಿಸಿ ಉದ್ಘಾಟನೆ ನಡೆಸಿದರು. "ಒಂದು ಸಂಸ್ಥೆಗೆ ನಿಜವಾಗಿ ದುಡಿದವರನ್ನು ಗುರುತಿಸುವುದು ಮತ್ತು ಸಂಸ್ಥೆಯ ಮೇಲಿನ ಪ್ರೇಮದಿಂದ ಕೈಲಾಗದಿದ್ದರೂ ಬಂದು ಕರ್ತವ್ಯ ನಡೆಸುವುದು ಈಗಿನವರಲ್ಲಿ ಎಲ್ಲಿದೆಯಪ್ಪ?" ಎಂದಿದ್ದರು ವಿ.ಸೀ.

ಇನ್ನೊಮ್ಮೆ ಪರಿಷತ್ತಿನ ಮುಂದೆ ನಿಂತಿದ್ದ ವಿ.ಸೀ. ಜತೆ ಲಾಲ್‌ಬಾಗ್ ಸಂಚಾರ ಹೊರಟಾಗ, "ಇವತ್ತು ಮಳೆ ಬರುವ ಹಾಗಿದೆ. ಸ್ವಲ್ಪ ದೂರ ಹೋಗಿ ಬರೋಣ" ಎಂದು ಹೇಳಿ ನ್ಯಾಷನಲ್ ಕಾಲೇಜಿನ ಹಿಂಭಾಗದಲ್ಲಿ ಇದ್ದ ಬ್ಯಾಸ್ಕೆಟ್ ಬಾಲ್ ಮೈದಾನದಲ್ಲಿ ಬಂದು ಕುಳಿತರು. ಅಂದು ವಿ.ಸೀ. ಅವರ ಎಡ–ಬಲಭುಜಗಳು (ಕೆಎಸ್‌ನ–ಮೋಟಗಾನಹಳ್ಳಿ) ಇಲ್ಲದ್ದು ಬಿಕೋ ಎನಿಸುತ್ತಿತ್ತು. ಅಲ್ಲಿ ಕೂತಾಗ, ಬಿ.ಎಂ.ಶ್ರೀ. ಅವರ ವಿಷಯ ಹೇಳುತ್ತಾ ಹೇಳಿದ ಸಂಗತಿ ಇದು.

ಪರಿಷತ್ತು ಪಂಪಭಾರತವನ್ನು ಸಂಪಾದಿಸುತ್ತಿದ್ದ ಕಾಲ. ಹೇಗೆ ಆ ಕಾರ್ಯ ನಡೆಯುತ್ತಿತ್ತು, ಶಂಕರಪುರದ ೪ನೇ ರಸ್ತೆಯ ಸೂರಪ್ಪನವರ ಮನೆಯಿಂದ ಪರಿಷತ್ತಿನ ಕಟ್ಟಡದವರೆಗೆ ಪರಿಷತ್ತಿನ ಕಚೇರಿ ಹೇಗೆ ಪಲ್ಲಟಗೊಂಡಿತು ಇತ್ಯಾದಿ ಹೇಳುತ್ತಾ, ಪಂಪಭಾರತದ ಗ್ರಂಥ ಸಂಪಾದನಾ ಕಾರ್ಯದ ಸಮಸ್ಯೆಗಳನ್ನು, ಅವುಗಳ ಪರಿಹಾರವಾಗುತ್ತಿದ್ದ ರೀತಿಯನ್ನು ಹೇಳಿದರು.

ಪಂಪಭಾರತದ ಶಿಶುಪಾಲ ವಧಾ ಪ್ರಸಂಗದಲ್ಲಿ (೬–೪೨) ಒಂದು ಪದ್ಯ ಬರುತ್ತದೆ.

ಮುಳಿದು ಶಿಶುಪಾಲನಾ ಸಭೆ
ಯೊಳಗೆ ಮಹಾಪ್ರಳಯ ಜಲಧಿ ನಾದದಿಂ ಇರದೆ
ಉಚ್ಚಳಿಸಿ ನುಡಿದಂ ತೆ! ಕಳೆ! ಕಳೆ
ಹರಿಗೆ ಎತ್ತಿದ ಅನರ್ಘ್ಯದರ್ಘ್ಯಮ್ಯಂ ಧರ್ಮಸುತಾ

ಶಿಶುಪಾಲನು ಕೆರಳಿ ಆ ಸಭೆಯಲ್ಲಿ ಪ್ರಳಯಕಾಲದ ಸಾಗರ ಘೋಷದಿಂದ ಇದ್ದ ಕಡೆಯಿಂದ ಮೇಲಕ್ಕೆ ನೆಗೆದು ಹೇಳಿದನು. ಧರ್ಮಜನೇ ಕೃಷ್ಣನಿಗೆ ನೀಡಲು ಎತ್ತಿದ ಅಮೂಲ್ಯ ಅರ್ಘ್ಯೋದಕವನು ಚಿಃ ತೆಗೆತೆಗೆ ಎಂದು ಕರ್ಕಶವಾಗಿ ಹೇಳಿದನು.

ಇಲ್ಲಿ ಹಸ್ತಪ್ರತಿಯಿಂದ ಪದ್ಯ ಎತ್ತಿಕೊಳ್ಳುವಾಗ,

ಉಚ್ಚಳಿಸಿನುಡಿದಂ ತೆಕಳೆ ಕಳೆ ಎಂದಿದ್ದನ್ನು ನೋಡಿದ ತೋಗರೆಯವರು, ತೆಕಳೆ ಎಂದರೇನು ಎಂದಾಗ ಅಲ್ಲಿದ್ದವರಿಗೆ ಯಾರಿಗೂ ಏನೂ ಹೊಳೆಯಲಿಲ್ಲ. ಆಗ ಅವರೆಲ್ಲ ಬಿ.ಎಂ.ಶ್ರೀ ಅವರಲ್ಲಿ ಈ ಬಗ್ಗೆ ಪ್ರಸ್ತಾಪಿಸಿದಾಗ ಅವರಿಗೂ

ತಕ್ಷಣಕ್ಕೆ ಏನೂ ತಿಳಿಯದೆ, "ವಿಚಾರಮಾಡಿ ನಾಳೆ ಹೇಳುತ್ತೇನೆ" ಎಂದರು. ಮಾರನೇ ದಿನ ಹೇಳಿದರಂತೆ, "ತೆಕಳೆ ಅಲ್ಲ ಅದು. ತೆ ಕಳೆಕಳೆ. ತೆ ಎಂದರೆ ಚೀಃ ಎಂದು ಉದ್ಗಾರದ ಅವ್ಯಯ. ತಮಿಳಿನಲ್ಲಿ ತೆ ಎಂದರೆ ಛೀಃ ಎಂದರ್ಥವಿದೆ" ಎಂದು ಹೇಳಿದರು. ಇಂಥ ಹತ್ತಾರು ಸಂಗತಿಗಳನ್ನು ವಿ.ಸೀ. ಹೇಳಿದರು.

ವಿ.ಸೀ. ಅವರು ಚಿಕ್ಕವರನ್ನಾಗಲಿ, ದೊಡ್ಡವರನ್ನಾಗಲಿ ಬಹುವಚನದಲ್ಲೇ ಮಾತಾಡಿಸುತ್ತಿದ್ದರು. ಹೆಣ್ಣುಮಕ್ಕಳನ್ನು ಏನ್ ತಾಯಿ, ಬನ್ನಿ ತಾಯಿ, ಎನ್ನುತ್ತಿದ್ದರು. ಅದಕ್ಕೆ ವಿದ್ಯಾರ್ಥಿನಿಯರಲ್ಲಿ ಒಬ್ಬಾಕೆ "ನಾವಿನ್ನೂ ಹುಡುಗೀರು ಪ್ರೊಫೆಸರ್ (ಅವರಾಗದಿದ್ದರೂ ಕೆಲವರು ಹಾಗೆಂದೇ ಕರೆಯುತ್ತಿದ್ದರು) ನಮಗೆ ತಾಯಿಪಟ್ಟ ಕಟ್ಟಿ ಪ್ರಮೋಷನ್ ಕೊಟ್ಟಿದ್ದಾರೆ" ಎಂದರಂತೆ ತಮಾಷೆಯಾಗಿ.

ಲಾಲ್‌ಬಾಗಿನಲ್ಲಿ ವಿ.ಸೀ. ನಾನು ಒಮ್ಮೆ ತಿರುಗಾಡುತ್ತಿದ್ದು, ಮಳೆ ಬಂತು. ಅಲ್ಲೇ ಇದ್ದ ಗುಲಾಬಿತೋಟದ ಮರದ ಕೆಳಗೆ ನಿಂತೆವು. ಬ್ಯಾಂಡ್ ಸ್ಟ್ಯಾಂಡ್ ಬಳಿ ಬಂದಾಗ, "ನೀವು ಕರ್ನಾಟಕ ಇತಿಹಾಸ ಓದಿದ್ದೀರಾ?" ಎಂದರು. "ಹೂಂ. ಸುಮಾರಾಗಿ" ಎಂದೆ. "ಕದಂಬರು ಅಂತ ರಾಜಮನೆತನ ಕೇಳಿದ್ದೀರಲ್ಲಾ, ಮಯೂರ ವರ್ಮ ದೊರೆಯ ವಿಚಾರ ಗೊತ್ತಲ್ಲ. ದೇವುಡು ಅವರು ಸೊಗಸಾದ ಕಾದಂಬರಿ ಬರೆದಿದ್ದಾರೆ. ಆ ಕದಂಬ ಮನೆತನದ ಲಾಂಛನ ಕದಂಬವೃಕ್ಷ. ಅದನ್ನು ನೋಡಿದ್ದೀರಾ?" ಎಂದರು. ಇಲ್ಲ ಎಂದಾಗ "ನಾವು ನಿಂತಿದ್ದೀವಲ್ಲಾ, ಈ ಮರವೇ ಕದಂಬವೃಕ್ಷ" ಎಂದು ತೋರಿಸಿ ಅದರ ವಿವರಗಳನ್ನೆಲ್ಲಾ ತಿಳಿಸಿದರು. ಲಾಲ್‌ಬಾಗಿನ ಪ್ರತಿ ಗಿಡಮರ, ಅದರ ಶಾಸ್ತ್ರೀಯ ಹೆಸರು, ಹೂ ಬಿಡುವ ಕಾಲ, ಅದು ಯಾವ ದೇಶದ ಮರ, ಇತ್ಯಾದಿ ಎಲ್ಲ ವಿವರ ವಿ.ಸೀ. ಅವರಿಗೆ ಗೊತ್ತಿತ್ತು. ಲಾಲ್‌ಬಾಗಿನಲ್ಲಿ ಓಡಾಡಿದವರು ಸಾವಿರಾರು ಜನರಿರಬಹುದು. ಗಿಡಮರ ಪರಿಚಯ ಅವರಿಗಿದ್ದಂತೆ ಬಿ.ಜಿ.ಎಲ್.ಸ್ವಾಮಿ ಅವರನ್ನು ಬಿಟ್ಟರೆ ಉಳಿದವರಿಗಿರಲಿಲ್ಲ. ಕುವೆಂಪು ಅವರು ಬೆಂಗಳೂರಿನಲ್ಲಿದ್ದಾಗ ವಿಶ್ವೇಶ್ವರಪುರದಲ್ಲಿ ವಾಸವಾಗಿದ್ದರು, ಲಾಲ್‌ಬಾಗಿಗೆ ದಿನಾ ಸಂಚಾರ ಮಾಡುತ್ತಿದ್ದರು. ಪ್ರಕೃತಿ ಸೌಂದರ್ಯವನ್ನಷ್ಟೇ ಸವಿಯುತ್ತಿದ್ದರು.

ಹೀಗೆ ಒಂದು ಸಲ ಲಾಲ್‌ಬಾಗಿನ ಮಹಾದ್ವಾರದ ಕಡೆ ಬಂದಾಗ, ಒಬ್ಬ ಗರ್ಮಾಗರಂ ಕಡಲೇಕಾಯಿಯವನು ಬಂದ. ವಿ.ಸೀ. ಅವರು ಕಡ್ಲೆಕಾಯಿಯವನನ್ನು ಬಾರಪ್ಪಾ ಎಂದು ಕರೆದರು. ನಾನು ಕಡ್ಲೆಕಾಯಿ ಹಾಕಿಸಿಕೊಳ್ಳಲು ಕರ್ಚೀಫ್ ತೆಗೆದೆ. "ಬೇಡ ಬೇಡ. ಸ್ವಲ್ಪ ಇರಿ" ಎಂದು ಹೇಳಿ ಅಲ್ಲೇ ಜಪಾನು ಬ್ರಿಡ್ಜ್ ಬಳಿ ಇದ್ದ ಮರವೊಂದರಿಂದ ೨ ಎಲೆ ಕಿತ್ತುಕೊಂಡು ಬಂದರು. ನನಗೊಂದು ಕೊಟ್ಟು ಅವರೊಂದು ತೆಗೆದುಕೊಂಡು "ಇದರಲ್ಲಿ ಹಾಕಪ್ಪಾ ಕಡಲೆಕಾಯಿ"

ಎಂದರು. ಅದು ಪೊಟ್ಟಣದ ಮರದ ಎಲೆ. ಅದರಲ್ಲಿ ಸುರುಳಿ ಎಲೆಗಳು ಬಿಡುತ್ತವೆ. ಕಾಗದದಲ್ಲಿ ಪೊಟ್ಟಣ ಕಟ್ಟಿರುವ ಹಾಗೆ ಎಲೆಗಳು ಆ ಮರದಲ್ಲಿ ಬಿಡುತ್ತವೆ. ನೀರು ಹಾಕಿದರೂ ಸೋರುವುದಿಲ್ಲ. ಆ ಗಿಡದ ವಿವರಗಳನ್ನು ಮರೆತಿದ್ದೇನೆ. ಆದರೆ ಆ ಗಿಡವನ್ನು ಮರೆತಿಲ್ಲ. ಎಷ್ಟೋ ಸಲ ಆ ಗಿಡದ ಬಳಿ ಓಡಾಡಿದ್ದರೂ ಎಲೆಯ ವೈಖರಿ ಗಮನಿಸಿರಲಿಲ್ಲ, ಪ್ರಕೃತಿಯ ಆರಾಧಕರು ಎಂದರೆ ವಿ.ಸೀ. ಅವರೇ ಎನ್ನಬೇಕು.

ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಸೇವೆ ಸಲ್ಲಿಸಿದವರಲ್ಲಿ ವಿ.ಸೀ. ಅವರು ಒಬ್ಬರು. ಅವರು ಪರಿಷತ್ತಿಗೆ ನಡೆದೇ ಬರುತ್ತಿದ್ದರು. ಒಮ್ಮೆ ಅನಾರೋಗ್ಯದಲ್ಲಿಯೇ ಕಾರ್ಯಕ್ರಮಕ್ಕೆ ಭಾಗವಹಿಸಲು ಬಂದರು. ಕಾರು ಕಳಿಸುತ್ತೇವೆ ಎಂದರೂ ಒಪ್ಪಲಿಲ್ಲ. ಅವರ ಮಕ್ಕಳ ಹೆಗಲಮೇಲೆ ಕೈಹಾಕಿಕೊಂಡು ನಡೆದೇ ಬಂದರು. "ಹೀಗೆ ಮಾಡಬಹುದೇ?" ಎಂದು ನಾನು ಕೇಳಿದಾಗ, "ಕನ್ನಡ ದೇವಿಯ ಸೇವೆ ಮಾಡುವ ಲೆಂಕರು ನಾವು, ಇದು ಸರಸ್ವತೀ ಮಂದಿರ, ದೇವಸ್ಥಾನಕ್ಕೆ ನಡೆದುಕೊಂಡೇ ಬರಬೇಕು ಅಲ್ಲವೇ?" ಎಂದರು.

ರಾಶಿ ಅವರ ಮನೋನಂದನ ಪುಸ್ತಕದ ಬಿಡುಗಡೆ ಕಾರ್ಯಕ್ರಮ ಪರಿಷತ್ತಿನ ಮಹಡಿಯಲ್ಲಿತ್ತು. ಆಗ ನಾನು ಪರಿಷತ್ತಿನ ಕಾರ್ಯದರ್ಶಿ ಆಗಿದ್ದೆ. ಮಹಡಿ ಹತ್ತಲು ಆಗದೆ ಮಹಡಿಮೇಲಿನ ಕಾರ್ಯಕ್ರಮವನ್ನು ಕೆಳಗೇ ಮಾಡಿದೆ. ಆಗ ರಾಶಿ ಜತೆಗಿದ್ದರು. ರಾಶಿಯತ್ತ ತಿರುಗಿ "ಮೇಲಕ್ಕೆ ಬನ್ನಿ ಎಂದು ಕರೆಯುತ್ತಿದ್ದಾರೆ. ಮೇಲಕ್ಕೆ ಹೋಗಲು ಪ್ರಯತ್ನಿಸಿದರೂ ಆಗುತ್ತಿಲ್ಲ. ಇಲ್ಲೇ ಇರಬೇಕಾದ ಸ್ಥಿತಿ ಇದೆ ನೋಡಿ" ಎಂದು ವಿ.ಸೀ. ಹೇಳಿ ನಕ್ಕರು. ಆಗ ರಾಶಿ "ನಾನು ಮೇಲಕ್ಕೆ ಹೋಗಲು ಸಿದ್ಧ. ಆದರೆ ನನ್ನನ್ನು ಕರೆಯಲಿಲ್ಲ. ನಿಮ್ಮನ್ನು ಕೇಳಿದರು. ಮೇಲಕ್ಕೆ ಬರ್ತೀರಾ ಅಂತ" ಅಂದರು ಆಗ ವಿ.ಸೀ. "ಜನ ಬಯಸಿದಷ್ಟು ದಿನ ಇರಬೇಕಾಗುತ್ತೋ ಏನೋ. ದೇವರು ಆ ಶಕ್ತಿ ಕೊಡಬೇಕು ಅಷ್ಟೆ" ಎಂದರು. ಹೀಗೆ ಅವರ ಮಾತು ಅರ್ಥಗರ್ಭಿತವಾಗಿರುತ್ತಿತ್ತು, ಸದಾ ಕಾಲವೂ.

ನಿಯಮಪಾಲನೆ, ಶಿಸ್ತಿಗೆ ಇನ್ನೊಂದು ಹೆಸರು ವಿ.ಸೀ. ಶಿವಮೂರ್ತಿ ಶಾಸ್ತ್ರಿಗಳು ಪರಿಷತ್ತಿಗೆ ಅಧ್ಯಕ್ಷರಾಗಿದ್ದ ಕಾಲ ಅದು. ನರಸಿಂಹಾಚಾರ್ ಎಂಬುವರು ಪುಸ್ತಕ ಭಂಡಾರಿಗಳಾಗಿದ್ದರು. ನಾನು ಆಗ ಸದಾ ಪುಸ್ತಕ ಭಂಡಾರದಲ್ಲೇ ಕುಳಿತು ಓದುತ್ತಿದ್ದೆ. ಪುಸ್ತಕವೊಂದನ್ನು ಮನೆಗೆ ತೆಗೆದುಕೊಂಡು ಹೋಗಲು ಕೇಳಿದಾಗ ರೆಫರೆನ್ಸ್ ಬುಕ್ ಕೊಡೊಲ್ಲ ಎಂದರು. ಒಂದು ಸಲಕ್ಕೆ ಒಂದೇ ಪುಸ್ತಕ ಕೊಡುವುದು ಎಂದರು. ಅಲ್ಲೇ ಕುಳಿತು ಓದುತ್ತಿದ್ದು ಮತ್ತೆ ಮಧ್ಯಾಹ್ನ ಆ ಪುಸ್ತಕ ಓದಲು ಬಂದೆ. ಆಗ ಪರಿಷತ್ತು ಬೆಳಿಗ್ಗೆ ಸಂಜೆ ಕೆಲಸ ಮಾಡುತ್ತಿತ್ತು. ಸಂಜೆ ವಿ.ಸೀ. ಬಂದರು. ನರಸಿಂಹಾಚಾರ್‌ಗೆ "ಏನಪ್ಪಾ, ನಾನು ಕೆಲವು ಪುಸ್ತಕಗಳನ್ನು

ಕಳಿಸಿಕೊಡಲು ಚೀಟಿ ಕಳಿಸಿದ್ದೆ, ಪುಸ್ತಕಗಳು ಬರಲೇ ಇಲ್ಲವಲ್ಲಾ. ಸ್ವಲ್ಪ ಬರೆಯಲು ಬೇಕಿತ್ತು" ಎಂದರು. ಆಗ ಪುಸ್ತಕ ಭಂಡಾರಿ "ಯಾರೋ ಸದಸ್ಯರು ಗಲಾಟೆ ಮಾಡಿದರು. ಒಂದೇ ಪುಸ್ತಕ ನಮಗೆ ಕೊಡೋದು ಅಂತೀರಾ, ಹಲವಾರು ಪುಸ್ತಕಗಳನ್ನು ಅವರಿಗೆ ಹೇಗೆ ಕಳಿಸ್ತೀರಾ ಅಂದರು" ಎಂದರು.

ಆಗ ನಾನು ಅಲ್ಲೇ ಇದ್ದವನು. "ನಾನೇ ಸಾರ್ ಕೇಳಿದ್ದು. ನಾನು ಕೇಳಿದರೆ ರೆಫರೆನ್ಸ್ ಬುಕ್ ಅಂತಾರೆ. ನೀವು ಕೇಳಿದ್ದಕ್ಕೆ ರೆಫರೆನ್ಸ್ ಬುಕ್‌ಗಳನ್ನೇ ಕಳಿಸುತ್ತಿದ್ದರು. ಮತ್ತೆ ನನಗೆ ಒಂದೇ ಪುಸ್ತಕ ಕೊಡುವುದು, ಅಂತ ಹೇಳಿ ನಿಮಗೆ ೬ ಪುಸ್ತಕ ಕಳಿಸಲು ಸಿದ್ಧ ಮಾಡಿದರು. ಇದು ನ್ಯಾಯವೇ ಸಾರ್? ಪರಿಷತ್ತಿಗೆ ನೀವು ಸದಸ್ಯರು. ನಾನೂ ಸದಸ್ಯ. ಸಂಸ್ಥೆಯಲ್ಲಿ ಸದಸ್ಯರಿಗೆಲ್ಲಾ ಒಂದೇ ನಿಯಮ ಇರಬೇಕಲ್ಲವೇ?" ಎಂದೆ. ಆಗ ವಿ.ಸೀ. ಹೇಳಿದರು, "ನೀವು ಹೇಳೋದು ಸರಿ. ಆದರೆ ನೀವೂ ನಾನು ಒಂದೇನಾ? ಈ ಸಂಸ್ಥೆಗೆ ನಾನು ಕೈಲಾದ ಸೇವೆ ಸಲ್ಲಿಸಿದ್ದೇನೆ ನಾನೆರಡು ಪುಸ್ತಕ ಎರವಲು ಪಡೆದರೆ ತಪ್ಪೇ? ಜತೆಗೆ ನಾನಿಲ್ಲೇ ನಿಮ್ಮ ಹಾಗೆ ಕುಳಿತು ಓದಲು ಆಗೋಲ್ಲಪ್ಪಾ, ಅದಕ್ಕೆ ಕೇಳಿದೆ" ಎಂದರು. ಒಂದು ಕ್ಷಣ ಬಿಟ್ಟು, "ಅವರು ಹೇಳಿದ್ದು ಸರಿ, ಬಿಡುವಾದಾಗ ನಾನಿಲ್ಲೇ ಬಂದು ನೋಡುತ್ತೇನೆ" ಎಂದು ಹೇಳಿ ಹೊರಟುಬಿಟ್ಟರು. ನಾನು ವಿ.ಸೀ. ಹೇಳಿದ ಮಾತನ್ನು ಚಿಂತಿಸಿದಾಗ ಸಾಹಿತಿಗಳ ಸಾಹಿತ್ಯ ರಚನೆಗೆ ಪರಿಷತ್ತು ನೆರವಾಗಬೇಕು. ಅವರಿಗೆ ಕೊಟ್ಟರೆ ನಾಡಿಗೆ ಒಳ್ಳೆಯ ಸಾಹಿತ್ಯ ಸಿಗುತ್ತದೆ. ಇಷ್ಟಕ್ಕೂ ಕೈಲಾಗೊಲ್ಲ ಅಂತ ಮನೆಗೆ ಪುಸ್ತಕ ಕೇಳಿದರು. ಮತ್ತೆ ಈ ಸಂಸ್ಥೆಗೆ ದುಡಿದವರಲ್ಲವೇ ಎಂದು ಚಿಂತಿಸಿ, ಮಾರನೇ ದಿನ ಅವರ ಬಳಿ ಹೋಗಿ, "ತಪ್ಪಾಯಿತು. ನಿಮಗೆ ಹಾಗೆ ಹೇಳಬಾರದಿತ್ತು, ಕ್ಷಮಿಸಿ" ಎಂದೆ. ಆಗ ಅವರು ಹೇಳಿದ ಚಿನ್ನದ ಮಾತಿದು. "ಇಲ್ಲಪ್ಪಾ. ಖಂಡಿತಾ ನೀವು ತಪ್ಪು ಮಾತಾಡಲಿಲ್ಲ. ನೀವು ಹೇಳಿದ್ದು ಸರಿ. ನಿಮ್ಮ ಹಾಗೆ ಯುವಕರು ನೇರವಾಗಿ ಮಾತಾಡಬೇಕು. ನಾವು ಹಳೇ ತಲೆಮಾರಿನವರು. ನಮ್ಮ ದೃಷ್ಟಿಯಲ್ಲಿ ನಾವು ಯೋಚಿಸುತ್ತೇವೆ. ನೀವು ಈಗಿನವರು, ನಿಮ್ಮ ದೃಷ್ಟಿ ಬೇರೆ. ಇನ್ನೊಂದು ರೀತಿ ಯೋಚಿಸುತ್ತೀರಿ. ನಿಮ್ಮ ಯೋಚನೆಗಳನ್ನು ತಪ್ಪು ಎಂದು ಹೇಳಲಾಗದು. ಒಂದು ಸಂಸ್ಥೆ ಎಂದ ಮೇಲೆ ನಿಯಮಪಾಲನೆಯಲ್ಲಿ ಒಂದೇ ಕ್ರಮ ಇರಬೇಕು ಎಂಬ ನಿಮ್ಮ ದೃಷ್ಟಿ ಸರಿ. ನಾನು ಈ ಸಂಸ್ಥೆಗೆ ಸೇವೆ ಸಲ್ಲಿಸಿರುವುದು ನಿಜವಿರಬಹುದು. ಅದಕ್ಕಾಗಿ ನಿಯಮಭಂಗ ಮಾಡಲು ನನಗೇನು ಅಧಿಕಾರ? ನೀವು ಹೇಳಿದ್ದು ಸರಿ ಅನ್ನಿಸಿ ನಾನು ಪುಸ್ತಕ ಬೇಕಿದ್ದರೂ ತೆಗೆದುಕೊಂಡು ಹೋಗಲಿಲ್ಲ" ಎಂದರು. ಅಂದು ಮೋಟಗಾನಹಳ್ಳಿ, ಕೆಎಸ್‌ನ ಬಂದಿರಲಿಲ್ಲ. "ಬರ್ತೀರಾ ಹೋಗೋಣ ಲಾಲ್‌ಬಾಗಿಗೆ?" ಎಂದರು, ಎಂ.ಟಿ.ಆರ್. ದೋಸೆ ತಪ್ಪಲಿಲ್ಲ. ಇದು ವಿ.ಸೀ.

ವಿ.ಸೀ. ಅವರ **ಆಯ್ದ ಕವಿತೆಗಳ ಸಂಗ್ರಹ 'ಕದಂಬ'** ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಠ್ಯವಾಗಿದ್ದ ಕಾಲ. ಹತ್ತಾರು ಬಾರಿ ಕರಡು ತಿದ್ದಿದ್ದರೂ ಕೆಲವು ಅಚ್ಚಿನ ದೋಷಗಳು ಉಳಿದಿದ್ದವು. ವಿ.ಸೀ. ಅವರಿಗೆ ಪುಸ್ತಕ, ವಸ್ತ್ರ ತಿಂಡಿ ತೀರ್ಥ, ಮಾತುಕತೆ ಎಲ್ಲ ಶುದ್ಧವಾಗಿರಬೇಕು. ದೋಷರಹಿತವಾಗಿರಬೇಕು. ಹಾಗಾಗಿ ಪಠ್ಯ ಹೊರಬಂದಮೇಲೆ ಅದರಲ್ಲಿದ್ದ ಅಚ್ಚಿನ ಕೆಲವೇ ದೋಷಗಳನ್ನು ಪಟ್ಟಿ ಮಾಡಿ ಮುದ್ರಿಸಿ, ಎಲ್ಲ ಕಾಲೇಜಿನ ಅಧ್ಯಾಪಕರಿಗೆ ತಾವೇ ಕಳಿಸಿ, "ದಯಮಾಡಿ ತಿದ್ದಿಕೊಂಡು ಪಾಠಮಾಡಬೇಕಾಗಿ ಬಿನ್ನಹ" ಎಂದು ತಿಳಿಸಿದ್ದರು.

ವಿ.ಸೀ. ಅವರನ್ನು ನೆನೆದಾಗಲೆಲ್ಲ ನೆನಪಾಗುವುದು ಅತಿಥಿ ಸತ್ಕಾರ. ಕನ್ನಡ ಸಾಹಿತಿಗಳ ಇತಿಹಾಸದಲ್ಲೇ ವಿಶಿಷ್ಟವಾದ ಪ್ರಸಂಗವೆಂದರೆ ವೆಂಕಣ್ಣಯ್ಯನವರು ವಿ.ಸೀ. ಅವರ ಮನೆಗೆ ಮೊದಲ ಬಾರಿ ಬಂದಾಗ ಆರಡಿಗೂ ಎತ್ತರವಿದ್ದ ಆಜಾನುಬಾಹು, ಅಜಾತಶತ್ರು, ದೇವತಾ ಮನುಷ್ಯ, ಮಹಾಕವಿ ಗುರು, ವೆಂಕಣ್ಣಯ್ಯನವರ ತಲೆ ಬಾಗಿಲಿಗೆ ಬಡಿಯಿತು. ಆರಡಿ ಬಾಗಿಲು ಏಳಡಿ ಮನುಷ್ಯನಿಗೆ ತಾಗದೆ ಏನಾದೀತು, ಆಗ ವಿ.ಸೀ. ಮನನೊಂದರು. "ಛೇ! ನಮ್ಮ ಮನೆಗೆ ಬಂದಾಗ ತಲೆ ತಾಗಬಾರದಿತ್ತು" ಎಂದರು. ವೆಂಕಣ್ಣಯ್ಯ ನಗುತ್ತಾ "ಸೀತಾರಾಮಯ್ಯ, ಮನುಷ್ಯನಿಗೆ ತಲೆತಾಗಬೇಕು. ಇಲ್ಲದಿದ್ದರೆ ಬುದ್ಧಿ ಬರುವುದಿಲ್ಲ. ನೀನು ದೊಡ್ಡ ಮನುಷ್ಯ ಅಲ್ಲ. ಅಹಂಕಾರ ಬೇಡ ಅಂತ ಅದು ಜ್ಞಾಪಿಸಿತು. ತಲೆ ತಗ್ಗಿಸಿ ನಡೆಯಬೇಕು, ವಿನಯ ಇರಬೇಕು. ಬಾಗಬೇಕು. ಸದಾ ತಗ್ಗಿ ಬಗ್ಗಿ ನಡೆಯವುದೇ ಸಲ್ಲಕ್ಷಣ. ಅದನ್ನು ನಾನು ಮಾಡಬೇಕಾಗಿತ್ತು, ಮಾಡಲಿಲ್ಲ. ಅದಕ್ಕೆ ತಲೆ ತಾಗಿತು. ಅದಕ್ಕೆ ನೀವೇಕೆ ಮನನೊಂದುಕೊಳ್ತೀರಾ?" ಎಂದರಂತೆ.

ಆದರೆ ವಿ.ಸೀ. ಆ ವಿಷಯವನ್ನು ಅಲ್ಲಿಗೇ ಬಿಡಲಿಲ್ಲ. ಮಾರನೇ ದಿನವೂ ವೆಂಕಣ್ಣಯ್ಯನವರು ಅವರ ಮನೆಗೆ ಬರುವ ಕೆಲಸವಿತ್ತು. ಅವರು ಬರುವ ಮುಂಚೆ ಆ ಕೊಠಡಿಯ ಬಾಗಿಲನ್ನು ಏಳು ಅಡಿ ಎತ್ತರಕ್ಕೆ ಬದಲಾಯಿಸಿದ್ದರು. ಬಡಗಿಯನ್ನು ಕರೆಸಿ ಬೇರೆ ಎತ್ತರದ ಬಾಗಿಲಿಡಿಸಿದ್ದರು. ವಿ.ಸೀ.ಯವರ ಹೃದಯವಂತಿಕೆ ಈ ಬಗೆಯದು. ವೆಂಕಣ್ಣಯ್ಯನವರಿಗೆ ವಿ.ಸೀ. ಬಗ್ಗೆ ಎಂಥ ಆತ್ಮೀಯತೆ ಇತ್ತು ಎಂದರೆ ಯಾವುದೋ ಒಂದು ಸಂತೋಷದ ಸಂದರ್ಭದಲ್ಲಿ ಹಬ್ಬದೂಟ ಮಾಡಬೇಕು ಅನ್ನಿಸಿತು. ಆಗ ಅವರು ಬೆಂಗಳೂರಿನಲ್ಲಿದ್ದರು. ಮೈಸೂರಿಗೆ ಹೋಗಲಾಗಲಿಲ್ಲ. ವಿ.ಸೀ. ಅವರಿಗೆ ಹೇಳಿದರು, "ನಾಳೆ ಹಬ್ಬದಡಿಗೆ ಮಾಡಿಸು. ಊಟಕ್ಕೆ ಬರುತ್ತೇನೆ" ಎಂದು. "ಸಂತೋಷ" ಎಂದ ವಿ.ಸೀ. ಹಬ್ಬದಡಿಗೆ ಮಾಡಿಸಿ ಊಟ ಹಾಕಿದರು. ಎ.ಆರ್.ಕೃ. ಅವರೂ ಇದ್ದರು. ಊಟ ಎಲ್ಲ ಆದಮೇಲೆ, "ಏನು ಕಾರಣ ಸೀತಾರಾಮಯ್ಯನ ಮನೇಲಿ ಹಬ್ಬದ ಅಡಿಗೆ ಮಾಡಿಸಿದೆ?" ಅಂತ ಎ.ಆರ್.ಕೃ. ಕೇಳಿದರು. ಅದಕ್ಕೆ ವೆಂಕಣ್ಣಯ್ಯ ಹೇಳಿದರು,

"ನನ್ನ ಮನೆಸಾಲ ಮತ್ತು ಇತರ ಸಾಲಗಳೆಲ್ಲ ತೀರಿಹೋಗಿ ಇಂದು ಋಣಮುಕ್ತನಾದೆ, ಆ ಸಂತೋಷಕ್ಕೆ ಸಿಹಿ ಊಟ ಮಾಡಲು ಮನಸ್ಸಾಯಿತು. ಸೀತಾರಾಮಯ್ಯನ ಮನೆ ನನ್ನ ಮನೆ ಅಲ್ಲವೇ! ಅದಕ್ಕೇ ಹಬ್ಬದಡಿಗೆ ಮಾಡಲು ಹೇಳಿದೆ". ಇಂಥ ಪ್ರೀತಿ ವಿಶ್ವಾಸದವರು ಆತ್ಮೀಯರು ವಿ.ಸೀ. ಮತ್ತು ವೆಂಕಣ್ಣಯ್ಯನವರು. ಇವನಾರವ ಇವನಾರವ ಎಂದು ಕೇಳುವ ಕಾಲದಲ್ಲಿ ಇವನಮ್ಮವ ಇವನಮ್ಮವ ಎನ್ನುವಂಥ ವೆಂಕಣ್ಣಯ್ಯ ವಿ.ಸೀ. ಅಂಥ ಜನಗಳು ನಮ್ಮ ನಾಡಿನ ಭಾಗ್ಯ.

ಚಿತ್ರ, ಸಂಗೀತ, ಪಾಶ್ಚಾತ್ಯ ಸಂಸ್ಕೃತಿ ಮೊದಲಾದ ನಾನಾಕ್ಷೇತ್ರಗಳಲ್ಲಿ ಆಸ್ತಿಕರಾದ ಅವರು ಅರ್ಥಶಾಸ್ತ್ರತಜ್ಞರಾಗಿ ಕನ್ನಡಕ್ಕೆ ನೀಡಿದ **ಹಣ ಪ್ರಪಂಚ** ಗ್ರಂಥ ಕನ್ನಡಕ್ಕೆ ಒಂದು ಶ್ರೇಷ್ಠ ಕೊಡುಗೆ. ಹಣಕಾಸಿನ ವಿಚಾರದಲ್ಲಿ ಅವರ ವಿಚಾರಧಾರೆ ವಿನೂತನವಾದುದು. ಅಕ್ಕಿಬೇಳೆಗೆ ಪರದಾಟವಾದರೂ ಲಂಡನ್ನಿನಿಂದ ಇಕಾನಮಿಸ್ಟ್ ಪತ್ರಿಕೆಯ ಏರ್ ಮೈಲ್ ಆವೃತ್ತಿಯನ್ನು ತರಿಸುತ್ತಿದ್ದರು. ಅನೇಕ ವಿಶ್ವವಿದ್ಯಾನಿಲಯಗಳ ಲೈಬ್ರರಿಗಳಲ್ಲಿ ದೊರೆಯದಿದ್ದ ಲಿಸ್ನರ್, ಟೈಮ್ಸ್, ಲಿಟರರಿ ಸಪ್ಲಿಮೆಂಟ್, ನ್ಯೂ ಸ್ಟೇಟ್ಸ್‌ಮನ್, ಮೊದಲಾದ ಪತ್ರಿಕೆಗಳನ್ನು ಬಿಡದೆ ತರಿಸುತ್ತಿದ್ದರು.

ದೇಶದ ಅಭಿವೃದ್ಧಿಯ ವಿಚಾರದಲ್ಲಿ ಕೋಟಿಗಟ್ಟಲೆ ಹಣಕಾಸಿನ ವಿದ್ಯಮಾನಗಳ ಬಗ್ಗೆ ಆರ್ಥಿಕ ಸಚಿವರ ಹಾಗೆ ದೇಶದ ಆರ್ಥಿಕ ವಿಚಾರಗಳನ್ನು ಮಂಡಿಸುತ್ತಿದ್ದರು. ಒಮ್ಮೆ ಒಂದು ಸಭೆಯಲ್ಲಿ ದೇಶದ ಕೋಟಿಗಟ್ಟಲೆ ಹಣ ವೆಚ್ಚವಾಗುವ ರೀತಿ ಕುರಿತು ಮಾತಾಡುತ್ತಿದ್ದಾಗ ಆ ಸಭೆಯಲ್ಲಿದ್ದ ಬಿ.ಎಂ.ಶ್ರೀ ಅವರು, "ಹಣಕಾಸಿನ ಬಗ್ಗೆ ಕೋಟಿಗಟ್ಟಲೆ ಹಣದ ಬಗ್ಗೆ ಲೀಲಾಜಾಲವಾಗಿ ಉದ್ದುದ್ದವಾಗಿ ಅಂಕಿಸಂಖ್ಯೆಗಳಲ್ಲಿ ಮಾತಾಡಿದಿರಿ. ಅದು ಸರಿ. ಈಗ ನಿಮ್ಮ ಜೇಬಿನಲ್ಲಿ ಎಷ್ಟಿದೆ ಹಣ?" ಎಂದರಂತೆ. ಅದಕ್ಕೆ ವಿ.ಸೀ. "ನೀವು ದಯಮಾಡಿ ಬಸ್ ಚಾರ್ಜ್ ಕೊಟ್ಟರೆ ವಾಪಸ್ ಹೋಗಿ ಮರ್ಯಾದೆಯಾಗಿ ಊರು ಸೇರಿಕೊಳ್ಳುತ್ತೇನೆ" ಎಂದರಂತೆ. ವಿಚಾರ ಶ್ರೀಮಂತಿಕೆಯ ಸರಳಜೀವಿ ವಿ.ಸೀ. ಅವರು.


ವಿ.ಸೀ ಅವರು ಸೆಂಟ್ರಲ್ ಕಾಲೇಜಿನಲ್ಲಿ ಐಚ್ಛಿಕ ಕನ್ನಡದವರಿಗೆ **ಕರ್ಣಾಟಕ ಕಾದಂಬರಿ ಸಂಗ್ರಹ** ಪಾಠ ಮಾಡುತ್ತಿದ್ದಾಗ ರಾಶಿ ಮತ್ತು ಅವರ ಸ್ನೇಹಿತರು ಹೊರಗೆ ನಿಂತು ಸ್ವಲ್ಪ ಹೊತ್ತು ಕೇಳಿದರು. ಅವರು ವಿಜ್ಞಾನದ ವಿದ್ಯಾರ್ಥಿಗಳಾಗಿದ್ದು, ಕನ್ನಡ ಆನರ್ಸ್ ತರಗತಿಗಳು ಅವರಿಗಿರಲಿಲ್ಲ. ತರಗತಿ ಆದಮೇಲೆ "**ಕರ್ಣಾಟಕ ಕಾದಂಬರಿ** ಬಗ್ಗೆ ನೀವು ಹೇಳಿದ ಪಾಠ ಕೇಳಿದೆವು, ತುಂಬಾ ಚೆನ್ನಾಗಿತ್ತು. ಆದರೆ ಕ್ಲಾಸಿಗೆ ಬರಲಾಗುವುದಿಲ್ಲ. ನಾವು ಸೈನ್ಸ್ ವಿದ್ಯಾರ್ಥಿಗಳು" ಎಂದರು. ಆಗ ವಿ.ಸೀ "ಅದಕ್ಕೇಕೆ ಚಿಂತಿಸುತ್ತೀರಿ? ಕಾಲೇಜು ಮುಗಿದ ಮೇಲೆ

ಬಿಡುವಾದಾಗಲೆಲ್ಲ ನಿಮಗೆ ಪಾಠ ಮಾಡುತ್ತೇನೆ" ಎಂದು ಹೇಳಿ ಪ್ರತಿ ಸಂಜೆ ಅವರಿಗೂ ಪಾಠ ಮಾಡಿದರು.

ಕೆ.ಎಸ್.ನರಸಿಂಹಸ್ವಾಮಿಗಳಿಗೆ ವಿ.ಸೀ ಮಿತ್ರರೂ ಹೌದು, ಗುರುಗಳು ಹೌದು. **ಮೈಸೂರು ಮಲ್ಲಿಗೆ** ಬಂದಮೇಲೆ ಇನ್ನೂ ಬೇರೆ ತರಹದ ಪದ್ಯಗಳನ್ನೂ ನೀವು ಬರೆಯಬೇಕು. ಪಾಶ್ಚಾತ್ಯ ಕವಿತೆಗಳನ್ನು ಓದಿದರೆ ತಿಳಿಯುತ್ತದೆ ಎಂದರು. "ಅವು ನನಗೆ ಗೊತ್ತಿಲ್ಲ" ಎಂದಾಗ ಬರ್ನ್ಸ್, ಇಲಿಯೆಟ್ ಮೊದಲಾದ ಪ್ರಸಿದ್ಧ ಆಂಗ್ಲ ಕವಿಗಳ ಕವಿತೆಗಳನ್ನು ಲಕ್ಷಣವಾಗಿ ಮನೆಯಲ್ಲಿ ಪಾಠ ಮಾಡಿದರು. ಫಲವಾಗಿ ಕೆ.ಎಸ್.ನ ಕೇವಲ ಮಲ್ಲಿಗೆ ಕವಿ ಆಗಿರದೆ ನವೀನ ಕವಿತಾ ರಚಕರು ಆದರು. **ಶಿಲಾಲತೆ, ಮೂರು ಬಾಗಿಲು** ಮುಂತಾದ ಶ್ರೇಷ್ಠ ಕವಿತೆಗಳನ್ನು ರಚಿಸಿದರು.

ವಿ.ಸೀ. ಅವರನ್ನು ನೆನೆದಾಗಲೆಲ್ಲ ಅವರ ಬದುಕು, ವಿಚಾರಧಾರೆ, ವೇಷಭೂಷಣ, ತಿಂಡಿತೀರ್ಥಗಳ ಅಭಿರುಚಿ, ಗ್ರಂಥಪ್ರೇಮ ಮೊದಲಾದವೆಲ್ಲ ನೆನೆದಾಗಲೆಲ್ಲ ರನ್ನನ ಮಾತು ನೆನಪಾಗುತ್ತದೆ. ಬಿಳಿಯರಳೆಯಂತೆ ಗಂಗಾಜಲದಂತೆ ಪವಿತ್ರವೂ ಶುಭ್ರವೂ ಆದ ಬದುಕು, ಸಾಹಿತ್ಯ ವಿ.ಸೀ. ಅವರದು. ವಿ.ಸೀ. ಅವರು ಕನ್ನಡ ನಾಡಿನಲ್ಲಿ ಹುಟ್ಟಿದ್ದು ನಮ್ಮ ಭಾಗ್ಯ, ನಾಡಿನ ಪುಣ್ಯ, ಅವರ ಜೀವನ ಸಾಹಿತ್ಯ ಜನತೆಗೆ ಶ್ರೇಷ್ಠ ವರ.

**



೭. ರಾಷ್ಟ್ರಕವಿ-ಶ್ರೇಷ್ಠ ಸಾಹಿತಿ

ಕುವೆಂಪು

(೨೯-೧೨-೧೯೦೪ / ೧೧-೧೧-೧೯೯೪)

ಕುವೆಂಪು ಪರಿಚಯ ವಿದ್ಯಾರ್ಥಿದೆಸೆಯಿಂದಲೂ ಅನೇಕರಿಗೆ ಇರುತ್ತದೆ. ಪಠ್ಯ ಪುಸ್ತಕಗಳಲ್ಲಿ ಇರುವ ಕವಿತೆಗಳ ಮೂಲಕ ಅವರು ನೆನಪಿನಲ್ಲಿ ಉಳಿದಿರುತ್ತಾರೆ. ಅದರಲ್ಲೂ ಶಾಲಾಪಠ್ಯಗಳಲ್ಲಿರುವ ಪದ್ಯಗಳ ಮೂಲಕ ಅವರ ನೆನಪು ಚೆನ್ನಾಗಿ ಉಳಿದಿರುತ್ತದೆ. ಕಾಲೇಜಿನಲ್ಲಿ ಅವರ ಪುಸ್ತಕಗಳು ಬೆರಳ್ಗೆ ಕೊರಳ್, ಬಿರುಗಾಳಿ ಮೊದಲಾದ ನಾಟಕಗಳು, ಕತೆ, ಕವಿತಾ ಸಂಕಲನಗಳು ಪಠ್ಯವಾಗಿದ್ದರೂ, ಅದನ್ನು ಸೊಗಸಾಗಿ ಪಾಠಮಾಡಿದ್ದರೆ ವಿದ್ಯಾರ್ಥಿಗಳ ನೆನಪಿನಲ್ಲಿ ಇರುತ್ತವೆ.

ಕಿಂದರಿಜೋಗಿ ಪದ್ಯ ಇತರ ಪದ್ಯಗಳಿಗಿಂತ ಹೆಚ್ಚು ನೆನಪಿರುವ ಮಕ್ಕಳ ಕಥನಕವನ, ಎಲ್ಲರನ್ನು ಮನಸೆಳೆವ ಕವನ ಅದು. ಅನಂತರ ಕುವೆಂಪು ಅವರ ಬದುಕು-ಬರಹದ ಬಗ್ಗೆ ವಿಮರ್ಶಾತ್ಮಕ ನೋಟ ಬೀರುವುದು ನನಗೆ ಬಂತು. ಅವರ ನಾಟಕ-ಕವನ ಸಂಕಲನಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಪಾಠ ಮಾಡಿದಾಗ ಹೆಚ್ಚು ಅರ್ಥವಾಯಿತು.

ಹೀಗೆ ಪಠ್ಯಗಳ ಮೂಲಕ ಪರಿಚಯ ಆದ ಕುವೆಂಪು ಅವರ ನೇರ ನೋಟ-ಸಮೀಪ ನೋಟ ಸಿಕ್ಕಿದ್ದು ಹಲವು ಬಾರಿ.

ಕುವೆಂಪು ರಾಮಾಯಣ ದರ್ಶನಂಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಪರಿಷತ್ತಿನಲ್ಲಿ ಅವರಿಗೆ ಅಭಿನಂದನಾ ಸಮಾರಂಭ ಪರಿಷತ್ತಿನಿಂದ ಏರ್ಪಾಟಾಗಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಿಗೆಲ್ಲಾ ಅಭಿನಂದಿಸುವ ಕಾರ್ಯಕ್ರಮವನ್ನು ಪರಿಷತ್ತು ನಡೆಸಿಕೊಂಡು ಬರುತ್ತಿದೆ. ಈ ಕಾರ್ಯಕ್ರಮಕ್ಕೆ ಬರುವುದಿಲ್ಲ ಎಂದು ಹೇಳಿ ಬಾರದಿದ್ದವರು

ಹಸಿರು ಹೊನ್ನಿನ ಬಿ.ಜಿ.ಎಲ್.ಸ್ವಾಮಿ ಮಾತ್ರ. ಅವರನ್ನು ಪರಿಷತ್ತಿಗೆ ಆಹ್ವಾನಿಸಲು ಖುದ್ದಾಗಿ ನಾನು ಮತ್ತು ದಾಸ ಸಾಹಿತಿ ಅನಂತ ಪದ್ಮನಾಭ ರಾವ್ ಇಬ್ಬರೂ ಹೋಗಿ ಪರಿಪರಿಯಾಗಿ ಪ್ರಾರ್ಥಿಸಿದರೂ, ಬೆಳಿಗ್ಗೆ ೧೧ ರಿಂದ ಸಂಜೆ ೪ರವರೆಗೆ ಅವರು ಒಪ್ಪಲಿಲ್ಲ. "ನಾನು ಯಾವ ಪ್ರಶಸ್ತಿ ಕಾರ್ಯಕ್ರಮಕ್ಕೂ ಬರುವುದಿಲ್ಲ. ಅಭಿನಂದನೆ-ಹೊಗಳಿಕೆ ನನಗೆ ಹಿಡಿಸುವುದಿಲ್ಲ. ಎಲ್ಲೇ ಹೋದರೂ ಅಧ್ಯಕ್ಷತೆ, ಉದ್ಘಾಟನೆ, ಮುಖ್ಯ ಅತಿಥಿ ಭಾಷಣಗಳಿಗೆ ಹೋಗುವುದಿಲ್ಲ. ಒಂದು ವಿಷಯದ ಮೇಲೆ ಮಾತನಾಡುತ್ತೇನೆ. ಅದಕ್ಕಾಗಿ ಕರೆದಾಗ ಸಭೆಗಳಿಗೆ ಹೋಗುತ್ತೇನೆ" ಎಂದು ಸಾರಾಸಗಟಾಗಿ ಪರಿಷತ್ತಿನ ಆಹ್ವಾನವನ್ನು ತಿರಸ್ಕರಿಸಿದರು. ನನಗೆ ತಿಳಿದಂತೆ ಪರಿಷತ್ತಿನ ಕಾರ್ಯಕ್ರಮಕ್ಕೆ ನಾನು ಬರುವುದಿಲ್ಲ ಎಂದು ಹೇಳಿದವರು ಯಾರೂ ಇಲ್ಲ. ಬಿ.ಜಿ.ಎಲ್.ಸ್ವಾಮಿ ಅವರು ಒಂದು ಅಪವಾದವಷ್ಟೆ.

ಕುವೆಂಪು ಬಿ.ಎಂ.ಶ್ರೀ ಅವರ ಶಿಷ್ಯರಾಗಿದ್ದು ಪರಿಷತ್ತಿನ ಆಹ್ವಾನವನ್ನು ಎಂದೂ ತಿರಸ್ಕರಿಸಿಲ್ಲ. ಪರಿಷತ್ತಿನ ಕೃಷ್ಣರಾಜ ಪರಿಷತ್ತಿನ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಿತು. ಆಗ ಪರಿಷತ್ತಿನ ಸಭಾಂಗಣದಲ್ಲಿ ಸುತ್ತಲೂ ಸಾಹಿತಿಗಳು, ವಿದ್ವಾಂಸರು ನಿಧನರಾದಾಗ, ಸನ್ಮಾನ ಮಾಡಿದಾಗ ಸಮ್ಮೇಳನ ಅಧ್ಯಕ್ಷರಾದಾಗ ಬಿಡುಗಡೆ ಮಾಡಿದ ಭಾವಚಿತ್ರಗಳನ್ನು ಗೋಡೆಗೆ ಹಾಕಿದ್ದರು. ದತ್ತಿ ನಿಧಿಗಳ ವಿಶೇಷ ಕಾರ್ಯಕ್ರಮ, ವಿಚಾರ ಗೋಷ್ಠಿಗಳಲ್ಲಿ ಎಲ್ಲ ಸಾಹಿತಿಗಳೂ ಭಾಗವಹಿಸುತ್ತಿದ್ದರು. ಕುವೆಂಪು ಅವರು ಪರಿಷತ್ತಿನ ಕಾರ್ಯಕ್ರಮಕ್ಕೆ ಬಂದಾಗ ಮಾತನಾಡಲು ಎದ್ದು ನಿಂತು ಕೆಲವು ನಿಮಿಷಗಳ ಕಾಲ ಪರಿಷತ್ತಿನ ಗೋಡೆಗಳ ಮೇಲೆ ವಿರಾಜಿಸುತ್ತಿದ್ದ ಐತಿಹಾಸಿಕ ಮಹತ್ವದ ಅಪರೂಪದ ಸಾಹಿತಿಗಳ, ವಿದ್ವಾಂಸರ ಭಾವಚಿತ್ರಗಳನ್ನು ಕಣ್ತುಂಬಿಕೊಂಡರು. ಆ ಚಿತ್ರಗಳನ್ನು ತೆಗೆದು ಹಾಕಿ ಆ ಭಾವಚಿತ್ರಗಳ ಸ್ಮರಣೀಯ ಸಂದರ್ಭಗಳನ್ನು ಮಾಯ ಮಾಡಿದರು. ಈಗಿರುವಂತೆ ಕಪ್ಪು ಬಿಳುಪು ತೇಜೋಹೀನ ಭಾವಚಿತ್ರಗಳು ಇರಲಿಲ್ಲ. ಕಪ್ಪು-ಬಿಳುಪು, ವರ್ಣಚಿತ್ರ, ತೈಲಚಿತ್ರ ಇತ್ಯಾದಿ ವಿವಿಧಾಕಾರಗಳ ಫೋಟೋಗಳು ಆಗ ಗೋಡೆಯ ಮೇಲಿದ್ದವು. ಅವುಗಳನ್ನೆಲ್ಲಾ ಒಂದೆರಡು ನಿಮಿಷಗಳು ಧ್ಯಾನಸ್ಥಭಾವದಲ್ಲಿ ವೀಕ್ಷಿಸಿದರು. ಕನ್ನಡದ ವಿಶಿಷ್ಟ ಅಮೃತಚೇತನಗಳಿರಾ ಎಂದು ಭಾಷಣ ಪ್ರಾರಂಭಿಸಿದರು.

ಸಭಾಂಗಣದಲ್ಲಿ ಮುಂದಿನ ಸಾಲಿನಲ್ಲಿ ಕುಳಿತು ಅವರನ್ನು ಕಣ್ತುಂಬ ನೋಡುತ್ತಾ ಕೇಳಿದ ಆ ಭಾಷಣದ ನೆನಪು ಇಂದಿಗೂ ನನ್ನಲ್ಲಿ ಹಸಿರಾಗಿದೆ.

ಇನ್ನೂ ಹತ್ತಿರ ಅಂದರೆ ಅವರ ಬಳಿ ಕುಳಿತು ಗೌರವ ಡಾಕ್ಟರೇಟ್ ಕೊಟ್ಟ ಸಂದರ್ಭದಲ್ಲಿ ನಾನು ಕವಿವಿಯ ಎಂ.ಎ ವಿದ್ಯಾರ್ಥಿಯಾಗಿದ್ದು, ಕರ್ನಾಟಕ ಸಂಘದ ಕಾರ್ಯದರ್ಶಿ ಆಗಿದ್ದು, ಅವರನ್ನು ಸ್ವಾಗತಿಸಿದ್ದೆ. ಡಾ.ಪಾವಟೆ ಅವರು

ಅವರನ್ನು ಗೌರವ ಡಾಕ್ಟರೇಟ್ ಸ್ವೀಕರಿಸಲು ಆಹ್ವಾನಿಸಿದಾಗ ಎಲ್ಲವೂ ಕನ್ನಡದಲ್ಲಿ ಇರಬೇಕೆಂದು ಸೂಚಿಸಿದ್ದರು. ಅದಕ್ಕಾಗಿ ಫಲಕಗಳು ಪ್ರಕಟಣೆಗಳು ಬಟ್ಟೆ ಬರಹಗಳು (ಬ್ಯಾನರುಗಳು) ಇತ್ಯಾದಿ ಎಲ್ಲವೂ ಕನ್ನಡಮಯವಾಗಿ ಕಂಗೊಳಿಸಿದ್ದವು. ವಿಶ್ವವಿದ್ಯಾಲಯದ ಕರ್ನಾಟಕ ಸಂಘಕ್ಕೆ ಆಹ್ವಾನಿಸಿ ಅವರ ಪರಿಚಯ ಭಾಷಣ ಮಾಡಿದ ಭಾಗ್ಯ ನನ್ನದು. ಪೆಂಪು ಇಂಪು ಸೊಂಪು ಗುಂಪು ಜೊಂಪು ಕುವೆಂಪು ಎಂದು ಪ್ರಾಸದ ಪದಗಳನ್ನು ಸೇರಿಸಿ ಮಾತಾಡಿದಾಗ ನನ್ನತ್ತ ನೋಡಿ ನಕ್ಕ ನೋಟ ನನ್ನಲ್ಲಿ ಸದಾ ಹಸಿರಾಗಿದೆ.

ಮತ್ತೊಂದು ಖಾಸಗಿ ಸಂದರ್ಭವೆಂದರೆ ನಾನು ಕನ್ನಡ ಎಂ.ಎ ಮಾಡಲು ಬಿಎ ಆದನಂತರ ಮೈಸೂರ ವಿ.ವಿಕ್ಕೆ ಅರ್ಜಿ ಹಾಕಿದಾಗ. ಆಗ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾರಂಭವಾಗಿರಲಿಲ್ಲ. "ನೀವು ಬಿಎನಲ್ಲಿ ಐಚ್ಛಿಕ ಕನ್ನಡ ವ್ಯಾಸಂಗ ಮಾಡಿಲ್ಲ. ನಿಮಗೆ ಕನ್ನಡ ಎಂ.ಎಗೆ ಅವಕಾಶವಿಲ್ಲ" ಎಂದಾಗ ನಾನು ಎ.ಆರ್.ಕೃ, ಕುವೆಂಪು, ದೇ.ಜ.ಗೌ, ಡಿ.ಎಲ್.ಎನ್, ತೀ.ನಂ.ಶ್ರೀ. ಹೀಗೆ ಕಂಡ ಕಂಡವರನ್ನೆಲ್ಲ ಕಂಡು "ಕನ್ನಡವನ್ನು ಅಭ್ಯಾಸ ಮಾಡಲು ಎಲ್ಲ ರಂಗಗಳಲ್ಲಿ, ಎಲ್ಲ ವಿಷಯಗಳಲ್ಲಿ, ಎಲ್ಲ ಹಂತಗಳಲ್ಲಿ ಅವಕಾಶ ಇರಬೇಕು. ಅದಕ್ಕೆ ಅವಕಾಶ ಕೊಡದ ನೀವೆಂಥ ಕನ್ನಡ ಆಡಳಿತಗಾರರು, ಕನ್ನಡದ ವಿದ್ವಾಂಸರು" ಎಂದೆಲ್ಲಾ ವಾದಮಾಡಿದೆ. ಕುವೆಂಪು ಅವರೊಡನೆ ಅವರ ಒಂಟಿಕೊಪ್ಪಲಿನ ಮನೆಯ ಬೀದಿಗೇಟಿನಲ್ಲಿ ನಿಂತೇ ಅವರೊಡನೆ ವಾದ ಮಾಡಿದಾಗ "ಸಂಸ್ಥೆಯ ನಿಯಮ. ನಾನೇನು ಮಾಡುವಂತಿಲ್ಲ" ಎಂದರು. "ನಿಯಮ ನಮಗಾಗಿಯೇ. ನಿಮ್ಮಂಥವರೇ ನಿಯಮ ನಿರ್ಮಿಸುವವರು. ದೇವರಲ್ಲ, ನೀವೇ. ಆದ್ದರಿಂದ ನಿಯಮ ಬದಲಾಯಿಸಿ ಅವಕಾಶ ಕೊಡಿ" ಎಂದೆ. "ಆದೆಲ್ಲಾ ಈಗಾಗದು" ಎಂದು ಹೇಳಿ ಒಳಗೆ ಹೋದರು. ಅದಾದ ಮೇಲೆ ಯಾಕೆ ಈ ನಿಯಮ ಮಾಡಿದರು, ಯಾವಾಗ ಮಾಡಿದರು ಎಂದು ತಲಾಷ್ ಮಾಡಿದೆ. ಹಿಂದಿ ಪ್ರಚಾರ, ಸಂಸ್ಕೃತ ಪ್ರಭಾವ ಜಾಸ್ತಿ ಆಗಿ ಕನ್ನಡಕ್ಕೆ ವಿದ್ಯಾರ್ಥಿಗಳದು ಹಲವಾರು ತರಗತಿಗಳಿದ್ದುದು ಹೋಗಿ ಕನ್ನಡದ ಒಂದು ತರಗತಿಗೆ ಬೇಕಾದಷ್ಟು ವಿದ್ಯಾರ್ಥಿಗಳು ಬಾರದ ಕಾಲ ಅದು. ಅದಕ್ಕಾಗಿ ಆ ವಿಶ್ವವಿದ್ಯಾನಿಲಯದ ವಿದ್ಯಾಮಂಡಳಿ ಐಚ್ಛಿಕ ಕನ್ನಡದವರಿಗೆ ಬೇರೆ ವಿಷಯದಲ್ಲಿ ಪ್ರವೇಶ ಕೊಡಬಾರದು, ಅವರಿಗೆ ಐಚ್ಛಿಕ ಕನ್ನಡಕ್ಕೆ ಪ್ರವೇಶ ಕೊಡಬೇಕು ಎಂದು ನಿಯಮ ಮಾಡಿದರು. ಯಾರಿಗೆ ಬೇಕಾದರೂ ಸಿಗುತ್ತಿದ್ದ ಐಚ್ಛಿಕ ಕನ್ನಡ ಗಿಣಿಯಂತೆ ನಿಯಮದ ಪಂಜರದಲ್ಲಿ ಬಂಧನಕ್ಕೆ ಒಳಗಾಯಿತು. ಆಗ ನಾನು ದೇ.ಜ.ಗೌ ಅವರಲ್ಲಿ ಚರ್ಚಿಸುತ್ತಾ "ನೀವು ಹೇಳುತ್ತಿದ್ದೀರ. ಐಚ್ಛಿಕ ಕನ್ನಡದ ವಿದ್ಯಾರ್ಥಿಗಳಿಗಿರುವ ವ್ಯಾಕರಣ, ಅಲಂಕಾರ ಛಂದಸ್ಸು, ಹಳಗನ್ನಡ, ಕಾವ್ಯಗಳ ಪರಿಚಯ ದ್ವಿತೀಯ ಭಾಷೆಗಳ

ವಿದ್ಯಾರ್ಥಿಗಳಿಗೆ ಇರುವುದಿಲ್ಲ. ಆದ್ದರಿಂದ ಐಚ್ಛಿಕ ಕನ್ನಡದವರಿಗೆ ಮಾತ್ರ ಪ್ರವೇಶ ಕನ್ನಡ ಎಂ.ಎಗೆ ಎನ್ನುತ್ತೀರ. ಕನ್ನಡಾಸಕ್ತ ವಿದ್ಯಾರ್ಥಿಗಳಲ್ಲಿ ಸ್ವಂತ ಆಸಕ್ತಿಯಿಂದ ಐಚ್ಛಿಕ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ಓದಿಕೊಂಡವರು ಇರುತ್ತಾರೆ. ನೀವು ಐಚ್ಛಿಕೇತರ ಕನ್ನಡ ವಿದ್ಯಾರ್ಥಿಗಳಿಗೆ ಅರ್ಹತಾ ಪರೀಕ್ಷೆ ಮಾಡಿ ತೆಗೆದುಕೊಳ್ಳಿ. ಕನ್ನಡನಾಡಿನಲ್ಲಿ ಕನ್ನಡಿಗರೆಲ್ಲ ಕನ್ನಡ ಓದುವ ಅವಕಾಶ ಬೇಡವೇ?" ಎಂದು ಕೇಳಿದೆ. "ಒಪ್ಪುವ ವಿಚಾರ. ಆದರೆ ಸದ್ಯಕ್ಕೆ ಸಾಧ್ಯವಿಲ್ಲ" ಎಂದರು.

ಆಗ ಒಂದು ಎಂ.ಎ ಮಾಡಿದರೆ ಬೇರೆ ಎಂ.ಎ.ಗಾದರೂ ಕೊಡಬಹುದು ಎಂಬ ಕವಿವಿದ ನಿಯಮ ತಿಳಿದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸಮಾಜಶಾಸ್ತ್ರ ಎಂ.ಎ.ಮಾಡಿ, ಅನಂತರ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ ಮಾಡಿದೆ. ಹೊರಗಿನ ವಿದ್ಯಾರ್ಥಿಗಳಿಗೆ ೩ನೇ ದರ್ಜೆ ನೀಡುತ್ತಾರೆ ಎಂಬ ವದಂತಿ ಆ ಕಾಲದಲ್ಲಿ ಬಲವಾಗಿತ್ತು. ಅದು ಬಹುಶಃ ನಿಜವಾಗಿತ್ತು. ಏಕೆಂದರೆ ಅನೇಕ ಹೊರಗಿನ ಪ್ರತಿಭಾವಂತ ವಿದ್ಯಾರ್ಥಿಗಳು ೩ನೇ ದರ್ಜೆಯಲ್ಲಿ ಪಾಸಾಗಿದ್ದರು. ಹಾಗಾಗಿ ಧಾರವಾಡಕ್ಕೆ ಹೋಗಿ ವಿದ್ಯಾರ್ಥಿಯಾಗಿ ಸೇರಿ ಕನ್ನಡ ದ್ವಿತೀಯ ದರ್ಜೆಯಲ್ಲಿ ಪಾಸಾದೆ. ಎಂ.ಎ ಮಾಡಿದೆ.

ಕುವೆಂಪು ಅವರನ್ನು ಕಂಡ ಇನ್ನೊಂದು ಸಂದರ್ಭ ಕುತೂಹಲಕಾರಿಯಾದುದು.

ಕುವೆಂಪು ಅವರ ಪರಮಶಿಷ್ಯರಲ್ಲಿ ಅಗ್ರಗಣ್ಯರು ಎಂ.ವಿ.ಸೀ. ಅವರು. ಕುವೆಂಪು ಅವರ ಶಿಷ್ಯಪ್ರೇಮಕ್ಕೆ ಎಂ.ವಿ.ಸೀ ಒಂದು ನಿದರ್ಶನ. ಎಂ.ವಿ.ಸೀ. ಅವರನ್ನು ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿನಿಂದ ವರ್ಗಮಾಡಿದಾಗ (ಸರ್ಕಾರಿ ಉದ್ಯೋಗ ಎಂದರೆ ರಾಗಿಕಲ್ಲಿನಲ್ಲಿ ಮೇಲಿನಕಲ್ಲು ಇದ್ದ ಹಾಗೆ. ಸುತ್ತುತ್ತಾನೇ ಇರುತ್ತೆ. ಖಾಸಗಿ ಕಾಲೇಜಿನ ಅಧ್ಯಾಪಕ ಕೆಳಗಿನ ಕಲ್ಲಿನಂತೆ. ಉದ್ಯೋಗ ಇರುತ್ತೆ. ತಿರುಗದೆ ಇದ್ದ ಕಡೆ ಇದ್ದಹಾಗೇ ಇರುತ್ತಾನೆ.) ಎಂ.ವಿ.ಸೀ. ಅವರ ಖಾಯಂ ಅನಾರೋಗ್ಯದ ನಿಮಿತ್ತ ಅವರು ಬೇರೆ ಊರಿಗೆ ಹೋಗುವುದು ಕಠಿಣವಾಗಿತ್ತು. ಇದು ಕುವೆಂಪು ಅವರಿಗೆ ಗೊತ್ತಿತ್ತು. ಅವರು ಇಲಾಖೆಗೆ ತಿಳಿಸಿ ಅವರನ್ನು ಬೇರೆಲ್ಲೂ ವರ್ಗಮಾಡದಂತೆ ಹುಕುಂ ಹೊರಡಿಸಿದ್ದರು.

ಎಂ.ವಿ.ಸೀ. ಹಾಗೂ ಕುವೆಂಪು ಇಬ್ಬರಿಗೂ ಬಿ.ಎಂ.ಶ್ರೀ ಗುರುಗಳು. ಬಿ.ಎಂ.ಶ್ರೀ ಅವರ ಹೆಸರಿನಲ್ಲಿ ಸಂಶೋಧನ ಸಂಸ್ಥೆಯನ್ನು ಪ್ರಾರಂಭಿಸಿದಾಗ ಎಲ್ಲೂ ಹೊರಗಿನ ಕಾರ್ಯಕ್ರಮಗಳಿಗೆ ಬರದೇ ಇದ್ದ ಕುವೆಂಪು ಎಂ.ವಿ.ಸೀ. ಅವರಿಗಾಗಿ ಬೆಂಗಳೂರಿಗೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆಗ ಅವರನ್ನು ನೇರವಾಗಿ ನೋಡಿ, ಮಾತು ಕೇಳುವ ಅವಕಾಶ ಒದಗಿತ್ತು. ಭವ್ಯಮೂರ್ತಿಯ ದರ್ಶನ ಅದು.

ಮರೆಯಲಾಗದ ಪ್ರಸಂಗವೆಂದರೆ ಟೌನ್‌ಹಾಲಿನಲ್ಲಿ ಕುವೆಂಪು ಅವರಿಗೆ ಅಕಾಡೆಮಿ ಪ್ರಶಸ್ತಿ ಬಂದಾಗ ನಡೆದ ಸನ್ಮಾನ ಸಮಾರಂಭದ ಸಂದರ್ಭ.

ಅಂದು ಟೌನ್‌ಹಾಲಿನಲ್ಲಿ ಕಿಕ್ಕಿರಿದ ಜನಸಂದಣಿ. ಕುವೆಂಪು ಅವರ ಅಧ್ಯಾಪಕರು, ಶಿಷ್ಯರು, ಓದುಗರು ಮುಂತಾದವರೆಲ್ಲ ಬಂದಿದ್ದರು. ಕುವೆಂಪು ಅವರ ಗುರುಗಳಾದ ಎ.ಆರ್.ಕೃ ಅವರು ಬಂದಿದ್ದರು. ಸಭಾಂಗಣದ ನಡುವಣ ಸಾಲಿನ ಕೊನೆಯಲ್ಲಿ ಕುಳಿತಿದ್ದರು. ರಾಜಗಾಂಭೀರ್ಯದಿಂದ ಪ್ರವೇಶಿಸಿದ ಕುವೆಂಪು ಅತ್ತಿತ್ತ ನೋಡುತ್ತಾ ನಮಿಸುತ್ತಾ ಬರುತ್ತಾ ಇದ್ದಾಗ ಕೃಷ್ಣಶಾಸ್ತ್ರಿಗಳು ಕಣ್ಣಿಗೆ ಬಿದ್ದರು. ಕೂಡಲೇ ಅವರ ಬಳಿಗೆ ಸಾಲಿನ ನಡುವೆ ಬಂದರು, ಗುರುಗಳಿಗೆ ವಂದಿಸಿದರು.

ಎ.ಆರ್.ಕೃ ಅವರ ಪಕ್ಕ ನಾನು ಕುಳಿತಿದ್ದೆ. ಕುವೆಂಪು ಅವರು ಶಾಸ್ತ್ರಿಗಳಿಗೆ ವಂದಿಸಿ “ಇದೆಲ್ಲಾ ಗುರುಗಳ ಕೃಪೆ” ಎಂದರು. ಅದಕ್ಕೆ ಶಾಸ್ತ್ರಿಗಳು “ನಂದೆಂಥಾದಪ್ಪ ಕೃಪೆ! ಇದು ನಿನ್ನ ಪ್ರತಿಭೆ ಪಾಂಡಿತ್ಯಕ್ಕೆ ಸಿಕ್ಕ ಮನ್ನಣೆ. ನನ್ನದೇನಿದೆ?” ಎಂದರು. ವಿದ್ಯಾ ದದಾತಿ ವಿನಯಂ. "ಎಲ್ಲಾದರೂ ಉಂಟೆ. ನಿಮ್ಮ ಪರಮಾನುಗ್ರಹ" ಎಂದು ಹೇಳಿ ಮುಂದಕ್ಕೆ ತೆರಳಿದರು ಕುವೆಂಪು.

ಕುವೆಂಪು ಅವರು ಮೈಸೂರಿನಲ್ಲಿ ಅವರ ಸ್ವಗೃಹದಲ್ಲಿ ದಿನಾಂಕ ೧೧-೧೧-೯೪ರಂದು ಬೆಳಿಗ್ಗೆ ನಿಧನರಾದರು. ಅಂದು ಬೆಳಿಗ್ಗೆ ಲಕ್ಕೆ ಮಹಾರಾಜ ಕಾಲೇಜಿನ ಕನ್ನಡ ಕೊಠಡಿಯಲ್ಲಿ ಕನ್ನಡ ಪ್ರಶ್ನೆಪತ್ರಿಕಾ ರಚನಾ ಸಮಿತಿ ಸಭೆ ಸೇರಿತ್ತು. ಆ ಸಭೆಯಲ್ಲಿ ನಾನು ಸದಸ್ಯನಾಗಿ ಭಾಗವಹಿಸಿದ್ದೆ. ಹಲವು ದಿನಗಳಿಂದ ಸಭೆ ಅಲ್ಲಿ ಸೇರುತ್ತಿತ್ತು. ಆ ದಿನ ಬೆಳಿಗ್ಗೆ ಸಭೆ ಸೇರಿದಾಗ ಸದಸ್ಯರೊಬ್ಬರು ಕುವೆಂಪು ಅವರ ನಿಧನವಾರ್ತೆಯನ್ನು ಸಭೆಗೆ ತಿಳಿಸಿದರು. ಕೂಡಲೇ ಇಡೀ ಸಮಿತಿಯವರು ೮-೧೦ ಮಂದಿ ಕುವೆಂಪು ಅವರ ಗೃಹಕ್ಕೆ ಹೋಗಿ ಶ್ರದ್ಧಾಂಜಲಿ ಸಲ್ಲಿಸಿದೆವು. ಅಂತಿಮ ದರ್ಶನ ಪಡೆದೆವು. ಆಗ ಅವರ ಗಾಂಭಿರ್ಯ, ಮುಖದಲ್ಲಿ ಜೀವಂತಕಳೆ ಸ್ವಲ್ಪವೂ ಮಾಸಿರಲಿಲ್ಲ. ಸುಖನಿದ್ರೆಯಲ್ಲಿ ಪವಡಿಸಿದಂತೆ ಇದ್ದರು. ಶಾಂತಗಂಭೀರ ನೋಟವದು.

ನಮ್ಮಲ್ಲಿ ಸಂಪ್ರದಾಯಾನುಸಾರ ಒಂದು ನಂಬಿಕೆ ಇದೆ. ಮನುಷ್ಯನ ಪ್ರಾಣ ದೇಹದಿಂದ ಹೊರಗೆ ಹೋಗುವಾಗ ನವದ್ವಾರಗಳಲ್ಲಿ ಒಂದರಲ್ಲಿ ಹೊರ ಹೋಗುತ್ತದೆಯಂತೆ ಅವರವರ ಕರ್ಮಾನುಸಾರ ಕೆಲವರಿಗೆ ಬಾಯಲ್ಲಿ, ಕೆಲವರಿಗೆ ಕಣ್ಣಲ್ಲಿ, ಕೆಲವರಿಗೆ ಮೂಗಲ್ಲಿ, ಕೆಲವರಿಗೆ ಕಿವಿಯಲ್ಲಿ ಇತ್ಯಾದಿ ಭಾಗಗಳಲ್ಲಿ ಪ್ರಾಣವಾಯು ನಿರ್ಗಮಿಸುತ್ತದೆಯಂತೆ. ನಿಧನರಾದಾಗ ಆ ಭಾಗ ಅರಳಿರುತ್ತದೆ. ಕಣ್ಣು ಸ್ವಲ್ಪ ತೆರೆದಿರುತ್ತದೆ ಮೂಗು ಅರಳಿರುತ್ತದೆ, ಬಾಯಿ ಬಿಟ್ಟಿರುತ್ತದೆ, ಇತ್ಯಾದಿ.

ಯೋಗಿಗಳ ಜ್ಞಾನಿಗಳ ತಪಸ್ವಿಗಳ ಪೂಜ್ಯರ ಸಾಧಕರ ಸಂತರ ಪ್ರಾಣ ತಲೆಯಲ್ಲಿ ಬ್ರಹ್ಮರಂಧ್ರದಿಂದ (ತಲೆಯಲ್ಲಿ ಸುಳಿ ಇರುವ ಭಾಗದಿಂದ) ಹೊರಹೋಗುತ್ತದೆಯಂತೆ. ಕುವೆಂಪು ಅವರನ್ನು ಕಂಡಾಗ ಅವರ ಪ್ರಾಣ ಬ್ರಹ್ಮರಂಧ್ರದಿಂದ ಹೋಗಿದ್ದಂತೆ ನನಗೆ ಭಾಸವಾಯಿತು.

ಕುವೆಂಪು ಶಿಷ್ಯರು ಅನೇಕ ನೆನಪುಗಳನ್ನು ಈಗಾಗಲೇ ಬರೆದಿದ್ದಾರೆ. ಕೋ.ಚೆನ್ನಬಸಪ್ಪ, ವೃಷಭೇಂದ್ರ ಸ್ವಾಮಿ, ಪ್ರಭುಶಂಕರ ಮೊದಲಾದವರು. ಅವರ ಇತರ ಶಿಷ್ಯರು ಹೇಳಿದ ಎಷ್ಟೋ ಸಂಗತಿಗಳು ಅಚ್ಚಾಗಿಲ್ಲ. ಆ ಪೈಕಿ ಅವರ ಶಿಷ್ಯರಾದ, ನನಗೆ ಹಲವಾರು ವರ್ಷ ಸಹೋದ್ಯೋಗಿಗಳಾದ, ಎಸ್.ಶ್ರೀನಿವಾಸನ್ನರು ನನಗೇ ಹೇಳಿದ ನೆನಪುಗಳನ್ನು ಇಲ್ಲಿ ಹೇಳಬೇಕೆನ್ನಿಸಿದೆ (ಇವು ಅಚ್ಚಾಗಿಲ್ಲ).

ಕುವೆಂಪು ಅವರ ಶಿಷ್ಯರಾದ ಎಸ್.ಶ್ರೀನಿವಾಸನ್ ಅವರ ತಂದೆ ಶೆಲ್ವಪಿಳ್ಳೆ ಅಯ್ಯಂಗಾರ್ ಅವರು ಮೈಸೂರಿನ **ಮಾತೃಭೂಮಿ ಶಾಲೆ**ಯಲ್ಲಿ ಅಧ್ಯಾಪಕರಾಗಿದ್ದರು. ಅವರು ಪೂರ್ಣಚಂದ್ರ ತೇಜಸ್ವಿ ಅವರಿಗೆ ಪಾಠ ಹೇಳುತ್ತಿದ್ದರು. ಶ್ರೀನಿವಾಸನ್ ಅವರಿಗೆ ಕುವೆಂಪು ಅವರ ವಿದ್ಯಾರ್ಥಿ ಆಗುವ ಮೊದಲೇ ಪರಿಚಯವಿತ್ತು. ಕುವೆಂಪು ಅವರ ವಿದ್ಯಾಥಿ ಆದಾಗಲಂತು ಕುವೆಂಪು ಅವರಿಗೆ ಇವರ ಬಗ್ಗೆ ಬಹಳ ಅಭಿಮಾನವಿತ್ತು. ಶ್ರೀನಿವಾಸನ್ ಅವರು ಎಂ.ಎ ಮುಗಿಸಿದ ಮೇಲೆ ತಾತ್ಕಾಲಿಕವಾಗಿ ಪ್ರಸಾರಾಂಗದಲ್ಲಿ ಕೆಲಸ ಕೊಡಿಸಿದ್ದರು.

ಎಸ್.ಶ್ರೀನಿವಾಸನ್ ಅವರು ನನಗೆ ಮಂಡ್ಯ, ಬೆಂಗಳೂರು ಕಾಲೇಜುಗಳಲ್ಲಿ ಸಹೋದ್ಯೋಗಿಗಳಾಗಿದ್ದವರು. ಇನ್ನೊಬ್ಬ ಸಹೋದ್ಯೋಗಿ ಜಾನಪದ ವಿದ್ವಾಂಸ ಎಂ.ಎ.ಜಯಚಂದ್ರ. ನಾವು ಮೂವರೂ ತ್ರಿಭುಜದಂತೆ ಅವಿಭಾಜ್ಯರಾಗಿದ್ದೆವು.

ಒಮ್ಮೆ ಶ್ರೀನಿವಾಸನ್ ಹೇಳಿದರು. ಅವರು ಸರ್ಕಾರಿ ಕಾಲೇಜಿಗೆ ಉದ್ಯೋಗಕ್ಕೆ ಅರ್ಜಿ ಹಾಕಿದಾಗ ಕುವೆಂಪು ಅವರು ಆಯ್ಕೆ ಸಮಿತಿಯಲ್ಲಿದ್ದರು. ಕುವೆಂಪು ಕೇಳಿದ ಪ್ರಶ್ನೆ ಶ್ರೀನಿವಾಸನ್ನರನ್ನು "ನೀವು ಯಾವುದಾದರೂ ಹಳಗನ್ನಡ ಕೃತಿಯಿಂದ ಕೆಲವು ಸಾಲುಗಳನ್ನು ಹೇಳಬಲ್ಲಿರಾ?" ಕೂಡಲೇ ಆಗಲಿ ಎಂದು, ಕುವೆಂಪು ಅವರ ಚಿತ್ರಾಂಗದಾ ಕಾವ್ಯವನ್ನು ಒಂದಕ್ಷರ ಬಿಡದೆ ಒಂದೇ ಸಮನೆ ಹೇಳಿದರು. ಕುವೆಂಪು ನಕ್ಕು ವಿಸ್ಮಿತರಾದರು. ಶ್ರೀನಿವಾಸನ್ನರು ಆಯ್ಕೆ ಆಗಿದ್ದರು.

ಕೇಶಿರಾಜನ ಶಬ್ದಮಣಿ ದರ್ಪಣವನ್ನು, ಬಸವಪ್ಪಶಾಸ್ತ್ರಿಗಳ ಶಾಕುಂತಳವನ್ನು ಕೈಲಿ ಪಠ್ಯವಿಲ್ಲದೆ ಇಡಿ ಗ್ರಂಥವನ್ನೇ ಕಂಠಸ್ಥ ಮಾಡಿದ ಅವರು ಬಾಯಲ್ಲೇ ಪಠ್ಯದ ಸಾಲುಗಳನ್ನು ಹೇಳಿ ಪಾಠ ಮಾಡುತ್ತಿದ್ದರು. ಕುವೆಂಪು ಅವರ ಚಿತ್ರಾಂಗದಾ ಕಾವ್ಯವನ್ನು ಇಡಿಯಾಗಿ ಹೇಳಿದ್ದರಲ್ಲಿ ಅತಿಶಯೋಕ್ತಿಯೇನಿಲ್ಲ.

ಶ್ರೀನಿವಾಸನ್ ಹೇಳಿದ ಇನ್ನೊಂದು ಸಂಗತಿ. ೧೯೫೨-೫೩ರಲ್ಲಿ ಆನರ್ಸ್ ತರಗತಿಗಳು ಮುಗಿಯುತ್ತಾ ಬಂದಾಗ ಹಿರಿಯ ವಿದ್ಯಾಥಿಗಳು ಸೇರಿ ಕ್ಲಾಸ್ ಸೋಷಿಯಲ್ಸ್ ಸಮಾರಂಭ ಏರ್ಪಡಿಸಿದ್ದರು. ಅದಕ್ಕೆ ಅಧ್ಯಕ್ಷತೆಗೆ ಶ್ರೀನಿವಾಸನ್ ಅವರನ್ನು ಆರಿಸಿದ್ದರು. ಏಕೆಂದರೆ ಅವರನ್ನು ಸಹಪಾಠಿಗಳು ವಯಸ್ಸಿನಲ್ಲಿ ಆಕಾರದಲ್ಲಿ ಚಿಕ್ಕವರಾಗಿ ಕಾಣುತ್ತಿದ್ದರಿಂದ "ಮಗು" ಎಂದು ಕರೆಯುತ್ತಿದ್ದರು. ಮಗುವಿನ ಅಧ್ಯಕ್ಷತೆಯಲ್ಲಿ ಹಿರಿಯ ವಿದ್ಯಾರ್ಥಿಗಳ ಅಧ್ಯಾಪಕ ಸಮಾರಂಭ ಎಂದು ಸಭೆಗೆ ಹೆಸರಿಟ್ಟಿದ್ದರು. ಆ ಸಮಾರಂಭದಲ್ಲಿ ವಿದ್ಯಾರ್ಥಿಗಳು ತಮಾಷೆ ಉಡುಗೊರೆಗಳನ್ನು ಅಧ್ಯಾಪಕರಿಗೆ ನೀಡಿದ್ದರು. ಕುವೆಂಪು ಅವರಿಗೆ ೮ ಆಣೆ ಬಿಲ್ಲೆ ಇಟ್ಟು ೧೩ ಸುರುಳಿ ಸುತ್ತಿದ ಕಾಗದದ ಕಟ್ಟನ್ನು ಕೊಟ್ಟಿದ್ದರು. ಕುವೆಂಪು ಅದನ್ನು ಬಿಡಿಸುತ್ತಾ ಏನಿದು ಮಾಯಾಜಾಲಂ ಎಂದು ವಿಸ್ಮಿತರಾದರು. ಅನಂತರ ಅಧ್ಯಕ್ಷರಾದ ಶ್ರೀನಿವಾಸನ್ "ಈಗ ನಮ್ಮ ಗುರುಗಳೆಲ್ಲ ಮಾತಾಡುತ್ತಾರೆ" ಎಂದು ಹೇಳಿ ಕುವೆಂಪು ಅವರು ಮಹಾಕಾವ್ಯದ ಭಾಷೆಯಲ್ಲಿ, ಡಿ.ಎಲ್.ಎನ್. ವಡ್ಡಾರಾಧನೆಯ ಹಳೆಗನ್ನಡ ಭಾಷೆಯಲ್ಲಿ, ಕ.ವೆಂ.ರಾ ಅವರು ಗ್ರೀಕ್ ಕನ್ನಡದಲ್ಲಿ ಮಾತಾಡಬೇಕು ಎಂದು ಕೇಳಿಕೊಂಡಾಗ ಅವರೆಲ್ಲ ಹಾಗೆಯೇ ಮಾತಾಡಿದರಂತೆ. ಈವತ್ತು ಇಂಥ ಭಾಷಾಪಂಡಿತರನ್ನು ಕಾಣಬಹುದೇ?

ಕುವೆಂಪು ಅವರ ಬಗ್ಗೆ ಅವರ ಶಿಷ್ಯರು, ಮಿತ್ರರು, ಮಕ್ಕಳು, ಬಂಧು ಬಳಗ, ಸಾಹಿತಿ ವಿದ್ವಾಂಸರು ಬೇಕಾದಷ್ಟು ಜನ ಪೂಜ್ಯಭಾವದಿಂದ ಬರೆದಿದ್ದಾರೆ. ಅವುಗಳ ತಂಟೆಗೆ ನಾನು ಹೋಗದೆ ನನ್ನದೇ ಆದ ಕೆಲವು ನೆನಪುಗಳನ್ನು ಮಲ್ಲಿಗೆ, ಜಾಜಿ, ಸಂಪಿಗೆ, ತಾವರೆ ಇತ್ಯಾದಿ ಹೂಗಳ ನಡುವೆ ತುಂಬೆಹೂನಂತೆ ಇಲ್ಲಿ ಹೇಳಿದ್ದೇನೆ. ಮರೆಯಲಾಗದ ವ್ಯಕ್ತಿ ಕುವೆಂಪು ಕನ್ನಡದ ಶಕ್ತಿ.

ಕುವೆಂಪು ಜೀವನ ಪಥ

ಕನ್ನಡದ ಮೇರು ಸಾಹಿತಿ, ರಾಷ್ಟ್ರಕವಿ ಕುವೆಂಪು ಅವರು ವೆಂಕಟಪ್ಪ ಗೌಡ-ಸೀತಮ್ಮ ದಂಪತಿಗಳಿಗೆ ಚಿಕ್ಕಮಗಳೂರು ಜಿಲ್ಲೆಯ ಹಿರೇಕೊಡಿಗೆಯಲ್ಲಿ ೨೯-೧೨-೧೯೦೪ರಲ್ಲಿ ಜನಿಸಿದರು. ೧೯೨೦ರಲ್ಲಿ ಲೋಯರ್ ಸೆಕೆಂಡರಿ ೧೯೨೭ರಲ್ಲಿ ಬಿ.ಎ. ೧೯೨೯ರಲ್ಲಿ ಎಂ.ಎ. ಪಾಸಾದರು. ೧೯೨೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಅನಂತರ ಕ್ರಮೇಣ ೧೯೪೬ರಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ೧೯೫೫ರಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದರು. ೧೯೫೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಅವರು ೧೯೬೦ರಲ್ಲಿ ಉದ್ಯೋಗದಿಂದ ನಿವೃತ್ತರಾದರು.

ಅವರಿಗೆ ದೊರೆತ ಪ್ರಶಸ್ತಿ, ಗೌರವ, ಗೌರವಾಧ್ಯಕ್ಷತೆಗಳು ಅಸಂಖ್ಯ. ಆ ಪೈಕಿ ಕೆಲವನ್ನು ಇಲ್ಲಿ ಉಲ್ಲೇಖಿಸಿದೆ: ೧೯೨೮ರಲ್ಲಿ ಬೆಂಗಳೂರಿನಲ್ಲಿ ನಡೆದ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷತೆ, ೧೯೫೭ರಲ್ಲಿ ಧಾರವಾಡದಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ೧೯೫೬ರಲ್ಲಿ ಮೈವಿವಿ ಗೌರವ ಡಿಲಿಟ್, ೧೯೬೯ರಲ್ಲಿ ಬೆಂವಿವಿ ಗೌರವ ಡಿಲಿಟ್. ೧೯೬೪ರಲ್ಲಿ ಕರ್ನಾಟ ಸರ್ಕಾರದಿಂದ ರಾಜ್ಯ ಪ್ರಶಸ್ತಿ. ೧೯೫೮ರಲ್ಲಿ ಪದ್ಮಭೂಷಣ ಪ್ರಶಸ್ತಿ. ೧೯೬೮ರಲ್ಲಿ ಶ್ರೀರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ. ೧೯೭೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ೧೯೮೫ರಲ್ಲಿ ಪ್ರಥಮ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆ... ಹೀಗೆ ಹತ್ತಾರು ಗೌರವ, ಸನ್ಮಾನ ಪ್ರಶಸ್ತಿ ಪದವಿಗಳು ದೊರಕಿವೆ. ೧೦-೧೧-೧೯೯೪ರಲ್ಲಿ ಮೈಸೂರಿನಲ್ಲಿ ನಿಧನರಾದರು.

ಸಾಹಿತ್ಯಪಥ :

ನೂರಾರು ವೈವಿಧ್ಯಮಯ, ವಿಶಿಷ್ಟ ಕೃತಿಗಳನ್ನು ಕುವೆಂಪು ರಚಿಸಿದ್ದಾರೆ. ಆ ಪೈಕಿ ಕೆಲವು ಹೀಗಿವೆ:

ಕವನ ಸಂಗ್ರಹ : ಕೊಳಲು, ಪಾಂಚಜನ್ಯ, ನವಿಲು, ಪ್ರೇಮ ಕಾಶ್ಮೀರ, ಪಕ್ಷಿಕಾಶಿ, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ, ಜೇನಾಗುವಾ, ಅಗ್ನಿಹಂಸ, ಅನಿಕೇತನ ಇತ್ಯಾದಿ.

ಮಹಾಕಾವ್ಯ : ಶ್ರೀರಾಮಾಯಣ ದರ್ಶನಂ, ಚಿತ್ರಾಂಗದಾ(ಖಂಡಕಾವ್ಯ), ಸಮುದ್ರಲಂಘನ, ಮಹಾದರ್ಶನ ಮತ್ತು ಪ್ರಾಯಶ್ಚಿತ್ತ.

ಕಾದಂಬರಿ : ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು.

ನಾಟಕ : ಸ್ಮಶಾನ ಕುರುಕ್ಷೇತ್ರ, ಜಲಗಾರ, ನನ್ನ ಗೋಪಾಲ, ರಕ್ತಾಕ್ಷಿ, ಬೆರಳ್ಗೆ ಕೊರಳ್, ಚಂದ್ರಹಾಸ, ಶೂದ್ರ ತಪಸ್ವಿ.

ಕಥೆ : ಸನ್ಯಾಸಿ ಮತ್ತು ಇತರ ಕಥೆಗಳು, ನನ್ನ ದೇವರು ಮತ್ತು ಇತರ ಕಥೆಗಳು.

ಜೀವನ ಚರಿತ್ರೆ : ಸ್ವಾಮಿ ವಿವೇಕಾನಂದ, ನೆನಪಿನ ದೋಣಿಯಲ್ಲಿ (ಆತ್ಮಕಥೆ).

ಭಾಷಾಂತರ : ಜನಪ್ರಿಯ ವಾಲ್ಮೀಕಿ ರಾಮಾಯಣ.

ವಿಮರ್ಶೆ : ತಪೋನಂದನ, ವಿಭೂತಿ ಪೂಜೆ, ದ್ರೌಪದಿಯ ಶ್ರೀಮುಡಿ.


ಭಾಷಣ : ಸಾಹಿತ್ಯ ಪ್ರಚಾರ ವಿಚಾರ ಕ್ರಾಂತಿಗೆ ಆಹ್ವಾನ.

ಮಕ್ಕಳ ಸಾಹಿತ್ಯ : ಬೊಮ್ಮನಹಳ್ಳಿಯ ಕಿಂದರಿ ಜೋಗಿ, ನರಿಗಳಿಗೇಕೆ ಕೋಡಿಲ್ಲ, ನನ್ನ ಮನೆ, ಮೋಡಣ್ಣನ ತಮ್ಮ, ಮರಿ ವಿಜ್ಞಾನ ಮೇಘಪುರ.

ಪ್ರತಿಯೊಬ್ಬ ಕನ್ನಡಿಗನೂ ಓದಲೇಬೇಕಾದ ಕೃತಿಗಳು ಕುವೆಂಪು ರಚಿಸಿದ ಕೃತಿಗಳು. ಕುವೆಂಪು ಕೃತಿಗಳನ್ನು ಕೆಲವನ್ನಾದರೂ ಓದದಿದ್ದರೆ ಅವನು ಕನ್ನಡಿಗನೇ ಅಲ್ಲ ಎಂದರೆ ತಪ್ಪಾಗದು.

ಕನ್ನಡದ ಮೇರು ಶಿಖರಗಳಲ್ಲಿ ಕುವೆಂಪು ಗಣ್ಯರು. ಅಂಥವರ ದರ್ಶನ ಭಾಗ್ಯ, ಮಾತಿನ ಭಾಗ್ಯ ದೊರೆತದ್ದೂ ನನ್ನ ಪುಣ್ಯ ವಿಶೇಷ.

**



೮. ಕಾವ್ಯಮೀಮಾಂಸಕ–ಸಹೃದಯ ಕವಿ

ತೀ.ನಂ.ಶ್ರೀಕಂಠಯ್ಯ

(೨೬–೧೧–೧೯೦೬ / ೭–೯–೧೯೬೬)

ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದಿಗ್ಗಜರು ಅನೇಕರಿದ್ದಾರೆ. ಅವರಲ್ಲಿ ಸಮಾನ ನಾಮತ್ರಯರು ಹಲವರಿದ್ದಾರೆ. ಆರ್.ನರಸಿಂಹಾಚಾರ್, ಡಿ.ಎಲ್.ನರಸಿಂಹಾಚಾರ್, ಪು.ತಿ.ನರಸಿಂಹಾಚಾರ್ ಅವರು ನರಸಿಂಹಾಚಾರ್ಯತ್ರಯರಾಗಿದ್ದಾರೆ. ಹಾಗೆಯೇ ಬಿ.ಎಂ.ಶ್ರೀ., ಎಂ.ಆರ್.ಶ್ರೀ., ತೀ.ನಂ.ಶ್ರೀ– ಶ್ರೀತ್ರಯರಾಗಿದ್ದಾರೆ. ನಮ್ಮ ಹಳಗನ್ನಡ ಸಾಹಿತ್ಯದಲ್ಲಿ ರತ್ನತ್ರಯರಿಲ್ಲವೇ? ಹಾಗೆ ಇವರು ಆಧುನಿಕ ಕನ್ನಡದ ರತ್ನತ್ರಯರು ಆಗಿದ್ದಾರೆ. ಇವರಲ್ಲಿ ಒಬ್ಬೊಬ್ಬರೂ ಹಲವಾರು ಸಾಹಿತ್ಯ ಕ್ಷೇತ್ರಗಳಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ್ದಾರೆ. ಈ ಪೈಕಿ ತೀನಂಶ್ರೀ ಅವರೂ ಒಬ್ಬರು. ನಾ ಕಂಡಂತೆ ಅವರ ಬದುಕಿನ ಕೆಲವು ರಸಪ್ರಸಂಗಗಳು ಯಾರನ್ನೇ ಆಗಲಿ ಸಂತೋಷಗೊಳಿಸುವಂಥ ಪ್ರಸಂಗಗಳಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಈ ರಸ ಪ್ರಸಂಗಗಳು ಒಬ್ಬ ವ್ಯಕ್ತಿ ಸಾಹಿತ್ಯದ ಬರವಣಿಗೆಯಲ್ಲಷ್ಟೇ ದೊಡ್ಡವನಾದರೆ ಸಾಲದು, ಜೀವನದಲ್ಲಿ, ವ್ಯಕ್ತಿತ್ವದಲ್ಲೂ ದೊಡ್ಡವನಾಗಿರಬೇಕು; ಮಾನವೀಯ ವ್ಯಕ್ತಿ ಆಗಿರಬೇಕು; ಸಜ್ಜನನಾಗಿರಬೇಕು, ರಸಿಕನಾಗಿರಬೇಕು, ಸಹೃದಯಿ ಆಗಿರಬೇಕು, ಉಪಕಾರಿ ಆಗಿರಬೇಕು, ಸರಳಜೀವಿ ಆಗಿರಬೇಕು, ತನ್ನ ವೃತ್ತಿಯಲ್ಲಿ ಪ್ರಾಮಾಣಿಕನಾಗಿರಬೇಕು ಎಂದು ಹೇಳುತ್ತವೆ. ಇಂಥ ವ್ಯಕ್ತಿತ್ವದ ಜನರು ಇದ್ದಾಗ ಸ್ಫೂರ್ತಿಪ್ರಾಯರು, ಇಲ್ಲದಾಗ ಆದರ್ಶಪ್ರಾಯರು. ಆನೆ ಇದ್ದರೂ ಸಾವಿರ ಸತ್ತರೂ ಸಾವಿರ ಎಂಬ ಗಾದೆ ಇದೆಯಲ್ಲ ಹಾಗೆ, ನಮ್ಮಲ್ಲಿ ಎಷ್ಟೋ ಜನ ಇದ್ದಾಗಲೇ ಇರದಿದ್ದ ಹಾಗೆ ಇರುತ್ತಾರೆ. ಇನ್ನು ಇಲ್ಲದಾಗ ಕೇಳಲೇಬೇಕಿಲ್ಲ. ಆದರೆ ನಿಜವಾದ ಆದರ್ಶ ವ್ಯಕ್ತಿಗಳು ಇದ್ದಾಗ ಎದುರಲ್ಲಿ ಬೆಳಕು, ಇಲ್ಲದಾಗ ನೆನಪಲ್ಲಿ ಬೆಳಕು ಆಗಿರುತ್ತಾರೆ.

ತೀ.ನಂ.ಶ್ರೀ. ಇಂಥ ಬೆಳಕಿನ ವ್ಯಕ್ತಿಗಳಲ್ಲಿ ಒಬ್ಬರು. ಅವರು ಇಂದಿಗೂ ಅವರೊಡನೆ ಬಾಳಿದ ಜನರ ಪಾಲಿಗೆ, ಕಂಡವರ ಪಾಲಿಗೆ ಸ್ಫೂರ್ತಿದಾಯಕ. ಅವರ ಕೃತಿಗಳು ಎಲ್ಲ ಜನರಿಗೂ ಎಲ್ಲ ಕಾಲಕ್ಕೂ ಆನಂದದಾಯಕ, ಜ್ಞಾನದಾಯಕ. ಮನುಷ್ಯ ಬರೆದರೆ ಹೀಗೆ ಬರೆಯಬೇಕು; ಬದುಕಿದರೆ ಹೀಗೆ ಬದುಕಬೇಕು ಎಂಬ ಮಾತಿಗೆ ಆದರ್ಶಪ್ರಾಯರಾದವರು ತೀ.ನಂ.ಶ್ರೀ. ಅವರು.

ತೀ.ನಂ.ಶ್ರೀ. ಅವರನ್ನು ನೆನಪಿಸಿಕೊಂಡಾಗಲೆಲ್ಲ ಅವರ ಗುರುಗಳಾದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರ್ ಸರ್ವಪಲ್ಲಿ ರಾಧಾಕೃಷ್ಣನ್ ಅಂಥವರಿಗೇ ಅನುಕರಣೀಯರಾಗಿದ್ದು ಪ್ರಸಿದ್ಧ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ, ಎಂ.ಹಿರಿಯಣ್ಣನವರ ನೆನಪಾಗುತ್ತದೆ. ತೀ.ನಂ.ಶ್ರೀ. ಅವರು ಎಂ.ಹಿರಿಯಣ್ಣನವರ ಬಗ್ಗೆ ಹೇಳಿದ ಮಾತುಗಳು ತೀ.ನಂ.ಶ್ರೀ. ಅವರಿಗೇ ಹೆಚ್ಚು ಒಪ್ಪುತ್ತದೆ. ಗುರುಗಳ ಬಗ್ಗೆ ಶಿಷ್ಯರಾದ ತೀ.ನಂ.ಶ್ರೀ. ಅವರ ನುಡಿಮಾಣಿಕ್ಯಗಳಿವು:

"ವ್ಯಾಸಂಗವನ್ನು ತಪಸ್ಸಿನಂತೆ ವರ್ಷಗಟ್ಟಲೆ ಸಾಧಿಸಿಕೊಂಡು ಬಂದು ಅನೇಕ ಜ್ಞಾನಶಾಖೆಗಳಲ್ಲಿ ಯಾವ ಪೂರ್ಣವಿದ್ವತ್ತನ್ನು ಅವರು ಗಳಿಸಿದ್ದರೋ ಅದನ್ನು ಕೊಂಚವಾದರೂ ಮೆರೆಸಲೊಲ್ಲರು. ಅವರ ವಿದ್ಯೆಯಷ್ಟೇ ಹಿರಿದು ಅವರ ವಿನಯ. ಅಷ್ಟು ದೊಡ್ಡ ಪಂಡಿತರು ಹೊಸದಾಗಿ ಕೆಲಸಕ್ಕೆ ಸೇರಿದ ಉಪಾಧ್ಯಾಯನಂತೆ ಪ್ರತಿದಿನದ ಪಾಠಕ್ಕೆ ಪೂರ್ವಸಿದ್ಧತೆ ಮಾಡಿಕೊಂಡು ಬರುವುದನ್ನು ನೋಡಿ ನಮ್ಮ ಸೋಮಾರಿತನ ನಾಚಿಕೊಳ್ಳುತ್ತಿತ್ತು."

"ಗುರುಗಳ ಉಕ್ತಿ ಖಚಿತ, ಆದರೆ ಮೃದು. ಅವರು ಗಟ್ಟಿಯಾಗಿ ದನಿಯೇರಿಸಿದ್ದನ್ನೇ ವಿದ್ಯಾರ್ಥಿಗಳು ಅರಿಯರು, ಮಾತಿನಲ್ಲಾಗಲಿ ಬರಹದಲ್ಲಾಗಲಿ ಅವರು ವಾಗ್ವಿಜೃಂಭಣೆಗೆ ಎಂದೂ ಮನಸೋತವರಲ್ಲ. ಮೇಲಕ್ಕೆ ಚಿಮ್ಮಿ ಬಣ್ಣಗಳನ್ನು ಕೆದರಿ ಕಣ್ಣನ್ನು ಕೋರೈಸಿ ಮತ್ತೆ ಕತ್ತಲನ್ನೆ ಬೆಳೆಸುವ ತಾರಾಮಂಡಲದಂತೆ ಅಲ್ಲ ಅವರ ಶೈಲಿ; ದೃಷ್ಟಿಗೆ ಹದವಾಗಿ ಕೋಣೆಯ ಮೂಲೆಮೂಲೆಯಲ್ಲೂ ಗಲಭೆಯಿಲ್ಲದೆ ಬೆಳಗುವ ಸ್ತಿಮಿತ ತೇಜಸ್ಸು ಅದು. ನಿಶ್ಚಿತವಾದ ಒಂದೊಂದು ವಾಕ್ಯದಲ್ಲೇ ಅವರು ವಿಷಯದ ತಿರುಳನ್ನು ಮನಮುಟ್ಟಿಸಬಲ್ಲರು, ಟೀಕೆಯನ್ನು ಮಾಡಬಲ್ಲರು."

ಈ ಮಾತುಗಳು ಗುರುಗಳಾದ ಎಂ.ಹಿರಿಯಣ್ಣನವರಿಗೆ ಅನ್ವಯಿಸುವಂತೆ, ತೀ.ನಂ. ಶ್ರೀಕಂಠಯ್ಯನವರ ಅಧ್ಯಾಪನ, ಬರಹಗಳಿಗೆ, ಭಾಷಣಕ್ಕೆ ಅನ್ವಯಿಸುತ್ತದೆ.

ತೀ.ನಂ.ಶ್ರೀ. ಅವರ ಹೆಸರು ಹೇಳಿದೊಡನೆ ನೆನಪಾಗುವುದು ಅವರ ಸುಂದರ ಮೂರ್ತಿ, ಆತ್ಮೀಯವಾಣಿ, ಮುದ್ದುಬರಹ, ಆಪ್ಯಾಯಮಾನಕರ ಮಾತುಗಾರಿಕೆ, ಸರಳ ವ್ಯಕ್ತಿತ್ವ, ಅಂತಃಕರಣದಿಂದ ತುಂಬಿದ ನೋಟ. ವಿಶ್ವೇಶ್ವರಯ್ಯನವರ

ಮಾದರಿಯಲ್ಲಿ ಜೀವನದಲ್ಲಿ ಅಳವಡಿಸಿಕೊಂಡ ಶಿಸ್ತು, ಅಚ್ಚುಕಟ್ಟು. ಎಂಥವರಿಗೂ ಸ್ಫೂರ್ತಿದಾಯಕ ವ್ಯಕ್ತಿತ್ವ ಅವರದು.

ತೀರ್ಥಪುರ ನಂಜುಂಡಯ್ಯ ಶ್ರೀಕಂಠಯ್ಯ ಅರ್ಥಾತ್ ತೀ.ನಂ.ಶ್ರೀ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥಪುರದವರು. ಅವರು ಜನಿಸಿದ್ದು ೧೯೦೬ ನವೆಂಬರ್ ೨೬ರಂದು, ಪ್ರತಿ ವರ್ಷ ನಾಡಿನ ಹಲವಾರು ಕಡೆ ಅವರ ಶಿಷ್ಯರು ಅವರನ್ನು ಸ್ಮರಿಸಿದ್ದಾರೆ. ಕನ್ನಡಕ್ಕೆ ಅವರು ನೀಡಿದ ಕೊಡುಗೆಗಳನ್ನು ನೆನೆದಿದ್ದಾರೆ. ಜನ ಸ್ಫೂರ್ತಿ ಪಡೆದಿದ್ದಾರೆ. ಕೃತಜ್ಞತೆ ಸಲ್ಲಿಸಿದ್ದಾರೆ. ಅವರ ಶಿಷ್ಯರಲ್ಲಿ ಅನೇಕರು ಸಾಹಿತಿಗಳಾಗಿದ್ದಾರೆ; ವಿದ್ವಾಂಸರಾಗಿದ್ದಾರೆ. ತೀ.ನಂ.ಶ್ರೀ. ಅವರು ಸಾಹಿತಿಗಳ ಸಾಹಿತಿ; ವಿದ್ವಾಂಸರ ವಿದ್ವಾಂಸರೆನಿಸಿದ್ದಾರೆ. ೧೯೨೬ರಲ್ಲಿ ಬಿ.ಎ. ಪದವಿಯನ್ನು ಚಿನ್ನದ ಪದಕಗಳೊಂದಿಗೆ ಪಡೆದ ಅವರು ಇಂಗ್ಲಿಷ್ ಎಂ.ಎ. ಮತ್ತು ಕನ್ನಡ ಎಂ.ಎ. ಪದವಿಗಳನ್ನೂ ಪ್ರಥಮಶ್ರೇಣಿಯಲ್ಲಿ ಸ್ವರ್ಣಪದಕಗಳೊಂದಿಗೆ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿ ಆಗಿದ್ದರು. ಕನ್ನಡ ಅಧ್ಯಾಪಕರಾಗಿ ಸೇರಿ ಪ್ರಾಧ್ಯಾಪಕರಾಗಿ ನಿವೃತ್ತರಾದ ಅವರು ೧೯೬೬ ಸೆಪ್ಟೆಂಬರ್ ೭ರಂದು ಕಲ್ಕತ್ತಾದಲ್ಲಿ ಪ್ರವಾಸದಲ್ಲಿದ್ದಾಗ ಹೃದಯಾಘಾತದಿಂದ ನಿಧನರಾದರು.

ತೀ.ನಂ.ಶ್ರೀ. ಅವರು ಭಾಷಾವಿಜ್ಞಾನಕ್ಕೆ, ಛಂದಸ್ಸಿಗೆ, ಭಾರತೀಯ ಕಾವ್ಯಮೀಮಾಂಸೆಗೆ ನೀಡಿದ ಕೊಡುಗೆಗಳು ಕನ್ನಡಕ್ಕಷ್ಟೇ ಅಲ್ಲ, ಭಾರತೀಯ ಸಾಹಿತ್ಯಕ್ಕೆ ಅಪೂರ್ವ ಕಾಣಿಕೆಗಳಾಗಿವೆ. ಅವರ **ಭಾರತೀಯ ಕಾವ್ಯ ಮೀಮಾಂಸೆ, ಸಮಾಲೋಕನ, ಕನ್ನಡ ಮಧ್ಯಮ ವ್ಯಾಕರಣ, "ಒಲುಮೆ"** ಪ್ರೇಮಕವನ ಸಂಕಲನ, **"ಬಿಡಿಮುತ್ತು"** ಮುಕ್ತಕಗಳ ಅನುವಾದ, **"ನೆಂಟರು"** ಪ್ರಬಂಧ ಸಂಕಲನ ಮುಂತಾದ ಗ್ರಂಥಗಳು ಒಂದೊಂದೂ ಆಯಾಕ್ಷೇತ್ರದಲ್ಲಿ ಹೊಸ ದಾರಿಗಳನ್ನು ತೆರೆದಿವೆ. ಅವರ ಬಹುಶ್ರುತತ್ವ, ವಿದ್ವತ್ತು, ತಿಳಿಶೈಲಿ, ಸೃಜನಶಕ್ತಿಗೆ ಸಾಕ್ಷಿ ಆಗಿವೆ. ಅವರ ಇಂಗ್ಲಿಷ್ ಲೇಖನಗಳು ಅವರ ಇಂಗ್ಲಿಷ್ ಪಾಂಡಿತ್ಯಕ್ಕೆ, ವಿಷಯ ನೈಪುಣ್ಯಕ್ಕೆ ಹಿಡಿದ ಕನ್ನಡಿಗಳಾಗಿವೆ. ಕನ್ನಡದಲ್ಲಿ ಯಾರೇ ಆಗಲಿ, ಭಾಷಾ ವಿಜ್ಞಾನ, ಕವಿತೆ, ಪ್ರಬಂಧ, ವಿಮರ್ಶೆ, ಕಾವ್ಯಮೀಮಾಂಸೆ, ನಿಘಂಟು, ಕ್ಷೇತ್ರದಲ್ಲಿ ಅವರ ಕೃತಿ ಸಾಧನೆಗಳನ್ನು ಗಮನಿಸಿಯೇ ಮುಂದಕ್ಕೆ ಹೆಜ್ಜೆಯಿಡಬೇಕು. ಅಂಥ ಸಾಧನೆ ಅವರದು. ಅಂಥ ಕೃತಿಗಳು ಅವರದು.

ತೀ.ನಂ.ಶ್ರೀ. ಅವರನ್ನು ನೆನೆದಾಗಲೆಲ್ಲ ಅವರ ವ್ಯಕ್ತಿತ್ವ ಅವರ ಕೃತಿಗಳಂತೆಯೇ ಮುಂದೆ ಸುಳಿಯುತ್ತದೆ. ಹೃದಯ ತಟ್ಟುತ್ತದೆ. ಮನಸ್ಸಿಗೆ ಮುದ ತರುತ್ತದೆ. ಬುದ್ಧಿಗೆ ಶಿಕ್ಷಣ ನೀಡುತ್ತದೆ, ಬಾಳಿಗೆ ಬೆಳಕು ಮೂಡಿಸುತ್ತದೆ. ಈ ಸಂದರ್ಭದಲ್ಲಿ ಕೆಲವು ರಸಪ್ರಸಂಗಗಳು ನನಗೆ ನೆನಪಾಗುತ್ತಿದೆ.

ನಾನು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಭಾರತೀಯ ಕಾವ್ಯಮೀಮಾಂಸೆ ಪಾಠ ಮಾಡುತ್ತಿದ್ದೆ. ತೀ.ನಂ.ಶ್ರೀ. ಅವರ ಆಚಾರ್ಯ ಕೃತಿ ಗ್ರಂಥವನ್ನು ಓದಿ ವಿವರಿಸುತ್ತಿದ್ದೆ. ಅದರಲ್ಲಿ ರಸ, ಧ್ವನಿ ಕುರಿತು ವಿವರಿಸುವಾಗ "ತೀನಂಶ್ರೀ ಇಂಥ ಸುಂದರ ಸಂಸ್ಕೃತ ಪದ್ಯಗಳ ಕನ್ನಡಾನುವಾದಗಳನ್ನು ಹತ್ತಾರು ಮಾಡಿದ್ದಾರೆ. ಅವುಗಳನ್ನು 'ಬಿಡಿಮುತ್ತು' ಎಂಬ ಗ್ರಂಥದಲ್ಲಿ ಪ್ರಕಟಿಸಿದ್ದಾರೆ" ಎಂದೆ. ಆಗ ಒಬ್ಬ ವಿದ್ಯಾರ್ಥಿನಿ, "ಸಾರ್ ಆ ಪುಸ್ತಕ ನಿಮ್ಮಲ್ಲಿ ಇದೆಯೇ? ಇದ್ದರೆ ಕೊಡಿ ಓದಿಕೊಡುತ್ತೇನೆ" ಎಂದಳು. "ಇದೆ. ಕೊಡುತ್ತೇನೆ ನಾಳೆ" ಎಂದು ಹೇಳಿ ಮಾರನೇ ದಿನ ತಂದುಕೊಟ್ಟೆ. ೭ ದಿನ ಆದಮೇಲೆ ಅಧ್ಯಾಪಿಕೆಯರೇ ಹೆಚ್ಚಾಗಿದ್ದ ಕೊಠಡಿಯಲ್ಲಿ ಮಾತಾಡುತ್ತಿದ್ದಾಗ ಆ ಹುಡುಗಿ ಬಂದು "ಸಾರ್, ಮೊನ್ನೆ ನೀವು ನಂಗೆ ಕೊಟ್ಟಿದ್ದರಲ್ಲಾ ಬಿಡಿಮುತ್ತು, ತುಂಬಾ ಚೆನ್ನಾಗಿತ್ತು. ನಮ್ಮಕ್ಕನೂ ಅದನ್ನು ನೋಡಿ ಸಂತೋಷ ಪಟ್ಟಳು" ಎಂದಳು. ಎಲ್ಲರೂ ಅಚ್ಚರಿ, ಗಾಬರಿಗಳಿಂದ ನನ್ನ ಕಡೆ ನೋಡಿದರು. ಆಗ ಆ ಹುಡುಗಿ "ನಾಳೆ ನಿಮಗೆ ನಾನು ಕೊಡ್ತೀನಿ. ಆಗಬಹುದೇ?" ಎಂದಳು. ನಾನು ಒಂದು ಕ್ಷಣ ಸಾವರಿಸಿಕೊಂಡು, "ಓಹೋ, ಮೊನ್ನೆ ಐಚ್ಛಿಕ ಕನ್ನಡ ಕ್ಲಾಸಿನಲ್ಲಿ ಕಾವ್ಯಮೀಮಾಂಸೆ ಮಾಡುವಾಗ ಅದರಲ್ಲಿ ಬರುವ ಮುಕ್ತಕಗಳ ಅನುವಾದಗಳ ಜತೆಗೆ ಅಂಥದ್ದನ್ನೆ ಒಳಗೊಂಡ ತೀ.ನಂ.ಶ್ರೀ. ಪುಸ್ತಕ ಬಿಡಿಮುತ್ತು ಅದನ್ನ ತಾನೇ ತಂದುಕೊಡ್ತೀನಿ ಅಂದಿದ್ದು ಅಲ್ವೇ?" ಎಂದಾಗ ಉಳಿದವರು ತಣ್ಣಗಾದರು. ನಾನು ಉಸಿರಾಡಿದೆ.

ಹಾಗೆಯೇ ವಿದ್ಯಾರ್ಥಿಗಳ ಬೆಂಗಳೂರು ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಮತ್ತೊಂದು ವರ್ಷ ತೀ.ನಂ.ಶ್ರೀ. ಅವರ ಸೊಗಸಾದ ಪ್ರಬಂಧಗಳ ಸಂಕಲನ "ನೆಂಟರು" ಪಾಠ ಮಾಡುತ್ತಿದ್ದೆ. ಅದರಲ್ಲಿ ಅವರ ಪ್ರವಾಸ ಪ್ರಬಂಧ ಒಂದರಲ್ಲಿ ಈ ವಿಷಯ ಬರುತ್ತದೆ:

ಪ್ರವಾಸ ಹೋಗಲು "ನಾಳೆ ಹೊರಡೋಣ, ನಾಡಿದ್ದು ಹೊರಡೋಣ" ಎಂದು ಮುಹೂರ್ತವನ್ನು ಮುಂದಕ್ಕೆ ತಳ್ಳುತ್ತಾ ಹೋಗಬಾರದು. ಪ್ರವಾಸಿಯಾಗಬೇಕೆನ್ನುವವನಿಗೆ ದೇಹಾರೋಗ್ಯ ಬೇಕು. ಜಂಘಾಬಲ ಬೇಕು. ಒಳಸೋರದ ಉತ್ಸಾಹ ಬೇಕು. ಇವೆಲ್ಲಾ ತಾರುಣ್ಯದಲ್ಲಿ ತುಂಬಿಕೊಂಡಿರುತ್ತದೆ. ವಯಸ್ಸು ಹೆಚ್ಚಿದ ಬಳಿಕ ಎರಡು ಮೈಲಿ ನಡೆಯುವಷ್ಟರಲ್ಲಿ ನಾಲ್ಕು ಕಡೆ ಕುಳಿತುಕೊಳ್ಳಬೇಕೆನ್ನಿಸುತ್ತದೆ. ಬೆಟ್ಟವನ್ನು ಹತ್ತಿ ಇಳಿಯಬೇಕಾದರೆ ವಾಹನವಿಲ್ಲದೆ ದೇಹ ಮುಂದಕ್ಕೆ ಚಲಿಸುವುದೇ ಇಲ್ಲ..." ಇತ್ಯಾದಿ ಹೇಳುತ್ತಾ, ತೀ.ನಂ.ಶ್ರೀ. ಅವರು ಒಂದು ಆಧುನಿಕ ವಚನ ಬರೆದಿದ್ದಾರೆ. ಬಸವಣ್ಣನವರ ವಚನದ ಮಾದರಿಯಲ್ಲಿ

ನೆರೆಕೆನ್ನೆಗೆ ತೆರೆಗಲ್ಲಕೆ ಬಂದಡರದ ಮುನ್ನ
ಕೀಲುಣಿಸಿನ, ಏದುಸಿರಿನ, ಚಳಿಸೆಕೆಗಳ ಚಿಂತೆ
ಮನವನಲ್ಲಾಡಿಸದ ಮುನ್ನ
ತಗುಣೆ ಸೊಳ್ಳೆ ಗುಂಪು ಗದ್ದಲಗಳ ಭೀತಿ
ರಕ್ತವನಾವರಿಸದ ಮುನ್ನ
ಮೈಯ ಕೆ಼ಚ್ಚು ಕಾಲಕಸುವು, ಬಗೆಯ ಹುಮ್ಮಸು
ಒಪ್ಪವಳಿಯದ ಮುನ್ನ,
ಮುಪ್ಪಿನ ಭಾರ ಹೆಗಲೇರದ ಮುನ್ನ,
ಕಿವಿಗೊಡು ಓ ಪ್ರೇಕ್ಷಣ ರಸಿಕನೆ, ಪ್ರವಾಸದ ಕರೆಗೆ!

ಇದನ್ನು ವಿವರಿಸಿ ಪಾಠ ಮಾಡುತ್ತಾ, ಪ್ರವಾಸವೆಂದರೆ ನನಗೆ ಬಹಳ ಇಷ್ಟ. ನಾನು ಹಂಪೆಗೆ ಹೋದಾಗ, ರಾಮೇಶ್ವರಕ್ಕೆ ಹೋದಾಗ ಎಂದು ನನ್ನ ಕೆಲವು ಪ್ರಸಂಗಗಳನ್ನು ವಿವರಿಸಿದೆ.

ಮಾರನೇ ದಿನ ರಾಷ್ಟ್ರೀಯ ಸೇವಾ ಶಿಬಿರದವರು ಬೇರೆ ಊರಿನಲ್ಲಿ ಶಿಬಿರ ಹೂಡಿದ್ದರು. ಅಲ್ಲಿಗೆ ಒಂದು ಟ್ರಿಪ್ ಹಾಕಿಕೊಂಡು "ನೀವೂ ಬನ್ನಿ ಸಾರ್" ಎಂದು ಕ್ಯಾಂಪಿನ ಕೆಲವು ವಿದ್ಯಾರ್ಥಿನಿಯರು ಒತ್ತಾಯ ಮಾಡಿದರು. ನಾನು "ನನಗೆ ಸ್ವಲ್ಪ ಬೇರೆ ಕೆಲಸ ಇದೆ. ಬರಲು ಆಗುವುದಿಲ್ಲ" ಎಂದೆ. ಆಗ ಹಿಂದಿನ ದಿನ ಪಾಠ ಕೇಳಿದವಳು, "ಸಾರ್ ನೆನಪಾಯಿತು" ಎಂದು 'ನೆರೆಕೆನ್ನೆಗೆ ತೆರೆಗಲ್ಲಕೆ' ಹಾಡಿದಳು. ಮುಂದಿನ ಕಥೆ ನೀವೇ ಊಹಿಸಿಕೊಳ್ಳಿ. ಇಂಥಾ ಪಾಠದ ಅನುಭವಗಳು ಹತ್ತಾರು. ಇವೆಲ್ಲಕ್ಕಿಂತ ಮಿಗಿಲಾದದು ನನ್ನ ಜೀವನದಲ್ಲೇ ಮರೆಯಲಾಗದ ಘಟನೆ ಎಂದರೆ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಮಿತಿಗೆ ತೀ.ನಂ.ಶ್ರೀ. ಅವರು ಅಧ್ಯಕ್ಷರಾಗಿದ್ದಾಗ ನಡೆದ ಪ್ರಸಂಗ.

ಆಗ ನಾನು ವಿದ್ಯಾರ್ಥಿ ಆಗಿದ್ದೆ, ಆಗಲೇ ಪರಿಷತ್ತಿನ ಸದಸ್ಯನೂ ಆಗಿದ್ದೆ. ಕನ್ನಡ ನಿಘಂಟಿನ ಕಾರ್ಯವಿಧಾನದ ಬಗ್ಗೆ ಪರಿಷತ್ತಿನ ವಾರ್ಷಿಕ ಸಭೆಯಲ್ಲಿ ಸಭೆಯೊಂದರಲ್ಲಿ ಆಕ್ಷೇಪಣೆ ಮಾಡಿದಾಗ ತೀ.ನಂ.ಶ್ರೀ. ಅವರು "ನಮ್ಮ ನಿಘಂಟಿನ ಕೆಲಸದ ರೀತಿ ನಿಮಗೆ ಪರಿಚಯವಿಲ್ಲ. ಅದಕ್ಕೆ ನೀವು ಹಾಗೆ ಹೇಳಿದಿರಿ. ನೀವು ಬಂದು ಒಮ್ಮೆ ನೋಡಿ ನಾವು ಮಾಡುವ ಕೆಲಸವನ್ನು. ಆಗ ನಿಮಗೆ ತಿಳಿಯುತ್ತದೆ ಅದರ ಕಷ್ಟ ಸುಖ" ಎಂದರು. ಅದಕ್ಕೆ "ನಮ್ಮಂಥ ಕಿರಿಯರಿಗೆ ಅವಕಾಶ ಯಾರು ಕೊಡುತ್ತಾರೆ ನೋಡಲು? ನಮ್ಮನ್ನು ಬಚ್ಚಾಗಳು, ಇವರಿಗೇನು ತಿಳಿಯುತ್ತೆ, ಅಂಥ ದೂರವಿಡುತ್ತೀರಿ. ನಮಗೇನು ಗೊತ್ತು ನೀವು ವೃದ್ಧರು ಸೇರಿ ಏನು ಮಾಡುತ್ತೀರೆಂದು" ಅಂತ ಅಸಮಾಧಾನದಿಂದ ಅಂದೆ. ಘನವಿದ್ವಾಂಸರು, ನಾಡಿನ ಪ್ರಖ್ಯಾತ ಸಾಹಿತಿಗಳು ಸೇರಿ ಚರ್ಚಿಸಿ ಸಿದ್ಧಪಡಿಸಿದ ನಿಘಂಟಿನ ಕೆಲಸದ ಸ್ವರೂಪ

ಕಿಂಚಿತ್ತೂ ನನಗೆ ಗೊತ್ತಿರಲಿಲ್ಲ. ತೀ.ನಂ.ಶ್ರೀ. ಅವರು ಪರಿಷತ್ತಿನ ನಿಘಂಟು ಸಭೆಯ ಕಾರ್ಯಕಲಾಪ ವೀಕ್ಷಿಸಲು ಅವಕಾಶವಿತ್ತರು. "ಇಂಥ ಹುಡುಗರಿಗೆ, ಪಡ್ಡೆಹುಡುಗರಿಗೆ ನೀವು ವಿದ್ವಾಂಸರ ಸಭೆಗೆ ಆಹ್ವಾನ ನೀಡಬಾರದು" ಎಂದು ಆ ಸಮಿತಿಯ ವಿದ್ವಾಂಸರೊಬ್ಬರು ಆಕ್ಷೇಪಿಸಿದರು. ಆಗ ತೀ.ನಂ.ಶ್ರೀ. ಅವರು, "ನೋಡಿ, ನಾವೆಲ್ಲಾ ಬಿದ್ದುಹೋಗುವ ಮರಗಳು, ಇವರೆಲ್ಲಾ ಕಿರಿಯರು ಬೆಳೆಯುವ ಗಿಡಗಳು. ಇವರನ್ನು ಪ್ರೋಷಿಸಬೇಕು" ಎಂದು, "ನೀವು ಬನ್ನಿ ನಾಳೆ ಸಭೆಗೆ" ಎಂದು ಹೇಳಿದರು. ನಾನು ಮಾರನೇ ದಿನ ಒಂದು ನೋಟ್‌ಬುಕ್ ಹಿಡಿದು ಹೋದೆ. ಅಲ್ಲಿ ಸಭೆಯಲ್ಲಿದ್ದವರೆಲ್ಲಾ ಅಸಾಮಾನ್ಯ ವಿದ್ವಾಂಸರು ಡಿ.ಎಲ್.ನರಸಿಂಹಾಚಾರ್, ಕೆ.ಜಿ.ಕುಂದಣಗಾರ್, ಎನ್.ಬಸವಾರಾಧ್ಯ, ಜಿ.ವೆಂಕಟಸುಬ್ಬಯ್ಯ ಇನ್ನೂ ಅನೇಕರಿದ್ದರು. ನನಗೆ ನೆನಪಿದ್ದಂತೆ ಅಮ್ಮ ಅಪ್ಪ ಪದದ ಬಗೆಗೆ ಚರ್ಚಿಸುತ್ತಿದ್ದರು. ಆ ಚರ್ಚೆಯಲ್ಲಿ ಡಿ.ಎಲ್.ನರಸಿಂಹಾಚಾರ್ಯರು ಹಳಗನ್ನಡದ ಪದ್ಯಗಳನ್ನು ಲೀಲಾಜಾಲವಾಗಿ ಬಾಯಲ್ಲೇ ಹೇಳುತ್ತಾ ಇದ್ದರು. ಪ್ರಯೋಗದ ಅರ್ಥ ಪರೀಕ್ಷಿಸಲು ಆ ಗ್ರಂಥ ತಾ, ಈ ಗ್ರಂಥ ತಾ ಎಂದು ಸಹಾಯಕನಿಗೆ ಹೇಳಿ "ನೋಡಿ ಇಲ್ಲಿದೆ ಈ ಮಾತು" ಎನ್ನುತ್ತಿದ್ದರು. ತೀ.ನಂ.ಶ್ರೀ. ಅವರ ಜತೆಗೂಡಿ ಚರ್ಚಿಸುತ್ತಿದ್ದರು. ಉಲ್ಲೇಖಿಸುತ್ತಿದ್ದರು. ವಿದ್ವಾಂಸರ ವಿದ್ವತ್ ಚರ್ಚೆ, ಪಾಂಡಿತ್ಯ, ಬಹುಶ್ರುತತ್ವ ಹೇಗಿರುತ್ತೆ ಎಂಬುದಕ್ಕೆ ಆ ಸಭೆ ಸಾಕ್ಷಿಯಾಗಿತ್ತು. ವಿದ್ಯಾರ್ಥಿ ಆಗಿದ್ದ ನನಗೆ ಪೂರ್ತಿ ಅವರ ಮಾತುಗಳು ಅರ್ಥವಾಗಲಿಲ್ಲ. ಆದರೆ ಎಷ್ಟೊಂದು ಓದಿದ್ದಾರೆ, ಎಷ್ಟೊಂದು ವಿಷಯ ತಿಳಿದಿದ್ದಾರೆ. ನಾನೂ ಇವರ ಹಾಗೆ ಓದಿ ತಿಳಿಯಬೇಕು ಎಂಬ ಆಸೆ, ಹಠ ಮೂಡಿತು. ಆಮೇಲೆ ಊಟದ ವೇಳೆ ಆದಾಗ ಅಲ್ಲಿಗೇ ತಿಂಡಿ ತರಿಸುತ್ತಿದ್ದುದು ಪದ್ಧತಿ ಇತ್ತು. ಆಗ ನಾನು ಎದ್ದು ಹೊರಗೆ ಹೋಗಲು ಯತ್ನಿಸಿದಾಗ ತೀ.ನಂ.ಶ್ರೀ. ಅವರು "ಕುಳಿತುಕೊಳ್ಳಿ, ಹೋಗಬೇಡಿ. ನಮ್ಮ ಜತೆ ತಿಂಡಿಗೆ ಪಾಲ್ಗೊಳ್ಳಿ" ಎಂದರು. ನಾನು, "ನೀವೆಲ್ಲಾ ಇಲ್ಲಿ ಶ್ರಮಿಸುತ್ತಿರುವವರು. ನೀವು ತಿಂಡಿ ತಿನ್ನುವುದು ಸರಿ, ನಾನು ಇಲ್ಲಿಗೆ ಹೊರಗಿನವ. ನಾನು ತೆಗೆದುಕೊಳ್ಳುವುದಿಲ್ಲ. ಇಲ್ಲಿ ನಾನೇನು ಕೆಲಸ ಮಾಡಿಲ್ಲ" ಎಂದೆ. ಆಗ ತೀ.ನಂ.ಶ್ರೀ. "ನಿಮ್ಮ ವಯಸ್ಸೆಷ್ಟು?" ಎಂದು ಕೇಳಿದರು. ಹೇಳಿದೆ. ಆಗ "ನಿಮ್ಮ ವಯಸ್ಸಿನ ಮಗನೊಬ್ಬ ನನಗಿದ್ದಾನೆ. ನೀವು ಇನ್ನೊಬ್ಬ ಮಗನಿದ್ದ ಹಾಗೆ, ನೀವು ತಿಂಡಿ ತೆಗೆದುಕೊಳ್ಳದಿದ್ದರೆ ನಾನೂ ತೆಗೆದುಕೊಳ್ಳುವುದಿಲ್ಲ. ನನ್ನ ಮಗ ಬೇರೆ ಅಲ್ಲ. ನೀವು ಬೇರೆ ಅಲ್ಲ..." ಎಂದು ಹೇಳುತ್ತಾ ಅವರ ಕಣ್ಣಲ್ಲಿ ಕಣ್ಣೀರು ತೊಟ್ಟಿಕ್ಕಿತು. ನಾನು ಅವರ ಪುತ್ರವಾತ್ಸಲ್ಯಕ್ಕೆ ಕರಗಿ ನೀರಾಗಿಹೋದೆ. "ತಪ್ಪಾಯ್ತು. ತಿಂಡಿ ತೆಗೆದುಕೊಳ್ಳುತ್ತೇನೆ" ಎಂದೆ. ಆಗ ಅವರೆಂದರು – "ನನಗೀಗ ಸಂತೋಷವಾಗಿದೆ. ನೀವು ಹೇಳಿದ ಮಾತು

ಒಪ್ಪುತ್ತೇನೆ. ಈ ಸಂಸ್ಥೆಯ ಕೆಲಸದಲ್ಲಿ ಪಾಲ್ಗೊಳ್ಳದೆ ಇರುವವನು ನಾನು ತಿಂಡಿ ತಿನ್ನುವುದಿಲ್ಲ ಎಂದಿರಿ. ಅದು ನ್ಯಾಯವೇ. ನಾನು ನನ್ನ ಸ್ವಂತ ಹಣದಲ್ಲಿ ನಿಮಗೆ ತಿಂಡಿ ತರಿಸುತ್ತೇನೆ. ನಿಮ್ಮೊಡನೆ ನಾನೂ ತೆಗೆದುಕೊಳ್ಳುತ್ತೇನೆ". ಅವರು ತೋರಿಸಿದ ಪುತ್ರವಾತ್ಸಲ್ಯವನ್ನು ನೆನೆದರೆ ಇಂದೂ ನನ್ನ ಅಂತಃಕರಣ ಉಕ್ಕಿ ಬರುತ್ತದೆ. ಈ ಪ್ರಸಂಗ ನೆನೆದಾಗಲೆಲ್ಲ ನೆನಪಾಗುವ ಪದ್ಯದ ಸಾಲುಗಳಿವು. "ದುಡ್ಡು ಬಟ್ಟೆಯಿಂದ ದೊಡ್ಡವರಾದೋರಿಲ್ಲ. ದೊಡ್ಡಗುಣದಿಂದ ದೊಡ್ಡವರಾದೋರೆಲ್ಲ". ತೀ.ನಂ.ಶ್ರೀ. ಇದಕ್ಕೆ ಸಾಕ್ಷಿ. ನನ್ನ ಜೀವನದಲ್ಲೇ ಮರೆಯಲಾಗದ, ತೀ.ನಂ.ಶ್ರೀ. ಅವರ ವಾತ್ಸಲ್ಯಭಾವಕ್ಕೆ ಕನ್ನಡಿ ಹಿಡಿದ ಘಟನೆ ಇದಾಗಿದೆ.

ಅವರ **ಕನ್ನಡ ಮಧ್ಯಮ ವ್ಯಾಕರಣ**ಕ್ಕೆ ಸಂಬಂಧಿಸಿದ ಸಂಗತಿಯೊಂದನ್ನು ಇಲ್ಲಿ ಹೇಳಲೇಬೇಕು. "ಕನ್ನಡದಲ್ಲಿ ಬೇಕಾದಷ್ಟು ಶಾಲಾವ್ಯಾಕರಣಗಳಿವೆ. ಈಗಲೂ ಹೊಸಗನ್ನಡದ ವ್ಯಾಕರಣಗಳು ಬರುತ್ತಲೇ ಇವೆ. ಆದರೆ ತೀ.ನಂ.ಶ್ರೀ. ಅವರ ವ್ಯಾಕರಣದ ಹಿರಿಮೆ ಉಳಿದ ವ್ಯಾಕರಣಗಳಲ್ಲಿ ಇಲ್ಲ ಎಂದರೆ ತಪ್ಪಾಗದು. ವಿದ್ಯಾರ್ಥಿಗಳಿಗೆ ಮನಸೆಳೆವ, ಅವರ ಬುದ್ಧಿಭಾವಗಳ ಮಟ್ಟಕ್ಕೆ, ಅವರ ಜೀವನದ ಅನುಭವಕ್ಕೆ ತಕ್ಕಂತೆ ಮತ್ತು ಕನ್ನಡದಲ್ಲಿ ಬಳಕೆಮಾತಿನ, ಮಕ್ಕಳಸಾಹಿತ್ಯದ ಶ್ರೇಷ್ಠ ರಾಮಾಯಣ, ಭಾರತ, ಭಾಗವತ, ಪಂಚತಂತ್ರಗಳ ಮಾತುಗಳನ್ನು ಉದಾಹರಣೆಯಾಗಿ ಕೊಟ್ಟು ಆ ಮೂಲಕ ವ್ಯಾಕರಣ ಕಲಿಸುವ ಅವರ ಗ್ರಂಥವೈಶಿಷ್ಟ್ಯ ಉಳಿದ ಕಡೆ ಕಾಣದು. ೧೦೦೩ ರಸವತ್ತಾದ ವಾಕ್ಯಗಳನ್ನು ಓದುವುದೇ ಒಂದು ಆನಂದದ ಅನುಭವ. ಕೆಲವು ವಾಕ್ಯಗಳನ್ನು ಉದಾಹರಿಸಬಹುದು:

ಕೋತಿ ಕೊಟ್ಟ ಕಬ್ಬನ್ನು ಅವನು ತಿಂದನು; ಹನುಮಂತ ಲಂಕೆಯನ್ನು ಸುಟ್ಟನು. ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ. ಗರುಡನನ್ನು ಕಂಡರೆ ಹಾವು ಹೆದರುತ್ತದೆ. ಗುರುವಿನಿಂದ ಪಾಠವನ್ನು ಮಾತ್ರವಲ್ಲದೆ ಶೀಲವನ್ನೂ ಕೂಡ ಕಲಿಯಬೇಕು. ನಮ್ಮ ಎಲೆಗಳಿಗೆ ಮೊದಲು ಅನ್ನ ಬಡಿಸಿ ತಾವು ಹೇಗೆ ಅಪ್ಪಣೆ ಕೊಡಿಸಿದರೆ ಹಾಗೆ ನಡೆದುಕೊಳ್ಳುತ್ತೇನೆ. ಆ ಗಿಳಿಗಳು ತಾವು ವಾಸ ಮಾಡುತ್ತಿದ್ದ ಮರಕ್ಕೆ ಮತ್ತೆ ಬಂದು ಸೇರಿದವು... ಕಥೆ, ನೀತಿ, ಗಾದೆ, ರಾಮಾಯಣ, ನಿತ್ಯದ ಮಾತುಗಳು, ಹೀಗೆ ಬಗೆಬಗೆಯ ವಿಷಯವೈವಿಧ್ಯದ ವಾಕ್ಯಗಳ ಮೂಲಕ ಸರಳವಾಗಿ ವ್ಯಾಕರಣನಿಯಮಗಳನ್ನು, ತೀ.ನಂ.ಶ್ರೀ. ಇದರಲ್ಲಿ ತಿಳಿಸಿದ್ದಾರೆ.

ಕನ್ನಡದಲ್ಲಿ ಬಹುಶಃ ಯಾವ ವ್ಯಾಕರಣಗ್ರಂಥವೂ ಇಷ್ಟು ಜನಪ್ರಿಯವಾಗಿಲ್ಲ ಎಂದರೆ ತಪ್ಪಾಗದು. ಹಲವಾರು ಲಕ್ಷ ಪ್ರತಿಗಳು ಅಚ್ಚಾಗಿವೆ. ಉದಾಹರಣೆಗೆ

೧೯೫೬ರಲ್ಲಿ ೧ ಲಕ್ಷ ಪ್ರತಿಗಳು ಅಚ್ಚಾಗಿದ್ದವು. ೧೯೪೫ರಲ್ಲಿ ಮೊದಲ ಬಾರಿಗೆ ಇದು ಪ್ರಕಟವಾಯಿತು.

ಈಗ್ಗೆ ಹತ್ತಾರು ವರ್ಷಗಳ ಹಿಂದೆ ಮಕ್ಕಳಕೂಟದಲ್ಲಿ ಮಕ್ಕಳಿಗೆ ಕಥೆ ಹೇಳುತ್ತಿದ್ದೆ. ಆಗ ಶಾಲಾಬಾಲಕನೊಬ್ಬ ಬಂದು "ನನಗೆ ಶಾಲೆಯಲ್ಲಿ ವ್ಯಾಕರಣದ ಪಾಠ ಮಾಡುವುದು ತಿಳಿಯುವುದಿಲ್ಲ" ಎಂದ. ಇನ್ನೂ ಕೆಲವು ಮಕ್ಕಳು ಹಾಗೇ ಹೇಳಿದರು. ಆಗ ತೀ.ನಂ.ಶ್ರೀ. ಅವರ ವ್ಯಾಕರಣ ಇಟ್ಟುಕೊಂಡು ಪಾಠ ಮಾಡಿದಾಗ ಅವರೆಲ್ಲಾ ಇಷ್ಟು ಸುಲಭವೇ ಎಂದು ಸಂತೋಷ ಪಟ್ಟರು. ಅಲ್ಲಿ ಬರುವ ಒಂದೊಂದು ವಾಕ್ಯದ ವ್ಯಾಕರಣಾಂಶವನ್ನು ವಿವರಿಸುತ್ತಾ ಆ ಸಾಲನ್ನು ಸೇರಿಸಿಕೊಂಡು ಒಂದು ಪುಟ್ಟ ಕಥೆ ಹೇಳುತ್ತಿದ್ದೆ. ಎಷ್ಟೋ ವಾಕ್ಯಗಳು ಕಥೆಯ ಭಾಗಗಳೇ ಆಗಿದ್ದವು. ಒಮ್ಮೆ ವಿಭಕ್ತಿ ಪ್ರತ್ಯಯಗಳನ್ನು ಪರಿಚಯಿಸಲು ತೀ.ನಂ.ಶ್ರೀ. ಉದಾಹರಿಸಿದ ಹೊಳೆ ಪದದ ವಿವಿಧ ವಿಭಕ್ತಿ ರೂಪಗಳನ್ನು ಓದಿ ಹೇಳಿ ವಿವರಿಸಿದೆ.

"***ಹೊಳೆ*** ವೇಗವಾಗಿ ಹರಿಯುತ್ತದೆ.
ಜನರು ದೋಣಿಯಲ್ಲಿ ಕುಳಿತು ***ಹೊಳೆಯನ್ನು*** ದಾಟುತ್ತಾರೆ.
ನಮ್ಮ ತಾಯಿ ನೀರನ್ನು ***ಹೊಳೆಯಿಂದ*** ತಂದಳು.
ಇಲ್ಲಿಂದ ***ಹೊಳೆಗೆ*** ಹೋಗುವುದಕ್ಕೆ ದಾರಿ ಯಾವುದು?
ಹೊಳೆಯ ದಡದಲ್ಲಿ ಮಾವಿನ ತೋಪು ಇದೆ.
ಈ ಹೊಳೆಯಲ್ಲಿ ಮೀನುಗಳು ಹೆಚ್ಚು
ಹೊಳೆಯೇ ನಮಗೆ ದಾರಿಬಿಡು ಎಂದು ಆ ಮಂಕರು ಕೂಗಿಕೊಂಡರು"

ಈ ವಾಕ್ಯಗಳನ್ನು ಹೇಳಿ ವಿಭಕ್ತಿಗಳ ಪರಿಚಯ ಮಾಡಿಕೊಟ್ಟು ಹೀಗೆಯೇ ಯಾವುದಾದರೂ ಒಂದು ಪದದ ಎಲ್ಲಾ ರೂಪಗಳನ್ನು ವಾಕ್ಯಗಳಲ್ಲಿ ಹೇಳಿ ಎಂದಾಗ, ಒಬ್ಬ ವಿದ್ಯಾರ್ಥಿ ನೆನಪಿಸಿಕೊಂಡು ಅವರ ತಂದೆ ಹೇಳಿಕೊಟ್ಟಿದ್ದ ಒಂದು ಪದ್ಯ ಹೇಳಿದ.

ಕೃಷ್ಣನಾ ತ್ರಿಭುವನದ ಗುರು ನಮ್ಮ ರಕ್ಷಿಸಲಿ
ಕೃಷ್ಣನಂ ವಂದಿಸುವೆವು ನಾವು ಸುರವೈರಿಗಳು
ಕೃಷ್ಣನಿಂದಲೆ ನಾಶವಾದರಾ ***ಕೃಷ್ಣಂಗೆ*** ನಮಿಸುವೆನು ನಾನು ನಿತ್ಯ
ಕೃಷ್ಣನತ್ತಣಿಗೆ ಈ ಜಗವೆಲ್ಲವುದಯಿಸಿತು
ಕೃಷ್ಣನಡಿಯಾಳಾಗಿ ನಾನಿಹೆನು, ಬಳಿಕೇನು?
ಕೃಷ್ಣನಲ್ಲಿಯೇ ವಿಶ್ವವೆಲ್ಲವಿದು ನೆಲಸಿಹುದು, ಶ್ರೀ ಕೃಷ್ಣ ರಕ್ಷಿಸೆನ್ನಂ

ಕನ್ನಡ ಸಂಸ್ಕೃತ ವಿದ್ವಾಂಸರಾಗಿದ್ದ ಹೆಮ್ಮಿಗೆ ದೇಶಿಕಾಚಾರ್ಯರ ಮುಕುಂದಮಾಲಾ ಸ್ತೋತ್ರದ ಕನ್ನಡಾನುವಾದವನ್ನು ಆ ಬಾಲಕ ಹೇಳಿದ್ದು.

ತೀ.ನಂ.ಶ್ರೀ. ವ್ಯಾಕರಣ ಮಕ್ಕಳಿಗೆ ಸಂತೋಷವುಂಟುಮಾಡುತ್ತಾ ಸುಲಭವಾಗಿ ಭಾಷೆಯನ್ನು ಕಲಿಸುತ್ತದೆ ಎಂಬುದಕ್ಕೆ ಈ ಪ್ರಸಂಗ ಸಾಕ್ಷಿಯಾಗಿದೆ. ಈವತ್ತಿಗೂ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಇತರರಿಗೂ ಮಾದರಿ ಕೃತಿ ಆಗಿದೆ.

ಮಕ್ಕಳ ಭಾಷೆ ಅವರಿಗೆ ಕರಗತವಾಗಿರುವುದನ್ನು **ಕನ್ನಡ ಮಧ್ಯಮ ವ್ಯಾಕರಣದ** ಉದ್ದಕ್ಕೂ ಕಾಣಬಹುದು. ಇದಕ್ಕೆ ಕಾರಣ ಅವರ ಮಕ್ಕಳ ಒಡನಾಟ. ಎಲ್ಲರೂ ಮಕ್ಕಳನ್ನು ಪ್ರೀತಿಸುತ್ತಾರೆ ನಿಜ. ಆದರೆ ತಂತಮ್ಮ ಮಕ್ಕಳ ಬಗ್ಗೆ ಪ್ರೀತಿ ತೋರಿಸುವುದೇ ಹೆಚ್ಚು. ಆದರೆ ತೀ.ನಂ.ಶ್ರೀ. ತಮ್ಮ ಮಕ್ಕಳಿಗೆ ತೋರುವಷ್ಟೇ ಪ್ರೀತಿ ವಾತ್ಸಲ್ಯಗಳನ್ನು ತಮ್ಮ ಮಿತ್ರರ ಮಕ್ಕಳಲ್ಲೂ ತೋರುತ್ತಿದ್ದರು. ಪು.ತಿ.ನ. ಅವರ ಮಾತೇ ಇದಕ್ಕೆ ಸಾಕ್ಷಿ. ತೀ.ನಂ.ಶ್ರೀ. ಬಗ್ಗೆ ಬರೆಯುತ್ತಾ ಪು.ತಿ.ನ. ಹೇಳುತ್ತಾರೆ, "ತೀ.ನಂ.ಶ್ರೀ.ಗೆ ಕುರುಕುಲು ತಿಂಡಿಗಳಲ್ಲಿ ಆಸೆ. ಬೆಂಗಳೂರಿಗೆ ನಿಘಂಟಿನ ಕೆಲಸಕ್ಕೆ ಬರುತ್ತಿದ್ದಾಗಲೆಲ್ಲ ಅನೇಕ ಸಲ ನನ್ನ ಮನೆಯಲ್ಲೇ ಇಳಿದುಕೊಳ್ಳುತ್ತಿದ್ದರು. ಆಗ ಅವರು ಡಬ್ಬಿ ತುಂಬ ಕೋಡುಬಳೆ, ರವೆಉಂಡೆ, ಚಕ್ಕುಲಿ ಮತ್ತು ಅಂಥ ಮುರುಕುಗಳನ್ನು ತರುತ್ತಿದ್ದರು, ತಾವು ತಿನ್ನುವುದಕ್ಕೆ ಅಷ್ಟಾಗಿ ಅಲ್ಲ. ನನ್ನ ಮಕ್ಕಳಿಗೆ ಹಂಚುವುದಕ್ಕೆ. "ತನ್ನಂತೆ ಪರರ ಕಾಣು" ಎಂಬ ಗಾದೆ ಮಾತೊಂದಿದೆ. ಅದನ್ನು ತೀ.ನಂ.ಶ್ರೀ.ಗೆ ಅನ್ವಯಿಸಿದರೆ "ತನ್ನ ಮಕ್ಕಳಂತೆ ಪರರ ಮಕ್ಕಳನ್ನು ಕಾಣು" ಎಂದು ಹೇಳಬೇಕು."

"ಓದು ಬರಹದ ಶತ್ರು" ಎಂಬುದು ತೀ.ನಂ.ಶ್ರೀ. ಅವರ ಮಾತು. ಅವರ ಮಟ್ಟಿಗೆ ಆ ಮಾತು ಸ್ವಲ್ಪ ನಿಜವೂ ಹೌದು. ಶ್ರೀಕಂಠಯ್ಯನವರ ಭಾಷಣವೆಷ್ಟು ಸೊಗಸೋ, ಅವರ ಮಾತುಗಾರಿಕೆಯೂ ಅಷ್ಟೇ ಸೊಗಸು. ಚುಟುಕುನುಡಿಗಳಲ್ಲಿ ಚುರುಕು, ಚಮತ್ಕಾರ ನಗೆಗಳನ್ನು ಮೂಡಿಸುತ್ತಿದ್ದರು. ಒಮ್ಮೆ ಪರಿಷತ್ತಿನ ನಿಘಂಟು ಕಚೇರಿಯ ಸಭೆಯೊಂದರಲ್ಲಿ ಒಬ್ಬ ವಿದ್ವಾಂಸರು ಗೋಡೆ ಕಡೆ ಇದ್ದ ಕಿಟಕಿಯ ಕಡೆ ಬರುತ್ತಿದ್ದಾಗ, "ತಲೆ ತಾಕೀತು ಹುಷಾರ್," ಎಂದರು ತೀ.ನಂ.ಶ್ರೀ., ಅದಕ್ಕೆ ಅವರು "ನನಗೆ ತಾಕುವುದಿಲ್ಲ" (ಅವರು ಕುಳ್ಳಗಿದ್ದರು) ಎಂದರು. "ತಲೆ ಇದ್ದವರಿಗೆ ತಲೆ ತಾಕುವುದು ಸಹಜ. ಉಳಿದವರ ವಿಷಯ ನನಗೆ ಗೊತ್ತಿಲ್ಲ" ಎಂದರು ನಗುತ್ತಾ. ಉಳಿದವರೆಲ್ಲ ಘೊಳ್ಳೆಂದು ನಕ್ಕರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿ.ಶಿವಮೂರ್ತಿ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದಾಗ ವಾಗ್ಮಿಗಳಾದ ಅವರು ನಮ್ಮ ವಿದ್ಯಾರ್ಥಿಗಳಲ್ಲಿ ಭಾಷಣಕಲೆ ಬೆಳೆಸಬೇಕೆಂದು ಟಿ.ಎಂ.ಪೈ ಅವರೊಡನೆ ಸಮಾಲೋಚಿಸಿದಾಗ, ಅವರು ಪರಿಷತ್ತಿನಲ್ಲಿ ಭಾಷಣಕಲೆಗಾಗಿ ನಿಧಿ ಕೊಟ್ಟರು. ಆ ನಿಧಿಯ ನೆರವಿನಿಂದ **ಭಾಷಣ ಕಲಾ ತರಗತಿ**ಗಳು ಪ್ರಾರಂಭವಾದವು. ಅದರಲ್ಲಿ ಹೆಮ್ಮಿಗೆ ದೇಶಿಕಾಚಾರ್ಯ, ಅ.ರಾ.ಮಿತ್ರ, ಡಿ.ಎಲ್.ಎನ್, ತೀ.ನಂ.ಶ್ರೀ. ಮೊದಲಾದವರೆಲ್ಲ ಭಾಷಣಕಲೆಯ ಬಗ್ಗೆ

ಉಪನ್ಯಾಸಗಳನ್ನು, ಭಾಷಣಕಲೆಯ ಮಾರ್ಗದರ್ಶನ ಸೂತ್ರಗಳನ್ನು ನೀಡಿದರು. ತೀ.ನಂ.ಶ್ರೀ. ಅವರು ಬರಹದಲ್ಲಿ ಲೇಖನ ಚಿಹ್ನೆಗಳ ಬಳಕೆ ಹೇಗೆ ಮಾಡಬೇಕು, ಯಾಕೆ ಮಾಡಬೇಕು ಎಂದು ತಿಳಿಸುತ್ತಾ, ಹಾಗೆಯೇ ಮಾತಿನ ಕಲೆಗೂ ಉಚ್ಚಾರದ ವಿಧಾನಗಳಿವೆ ಎಂದು ಹೇಳಿ, ಶಬ್ದಗಳ ಉಚ್ಚಾರದ ರೀತಿ, ಆಶ್ಚರ್ಯಸೂಚಕ ಚಿಹ್ನೆಗಳ ವಾಕ್ಯಗಳನ್ನು ಅಚ್ಚರಿಯ ಧಾಟಿಯಲ್ಲಿ ಹೇಳುವ ಬಗ್ಗೆ ಉದ್ಧೃತಭಾಗವನ್ನು ಓದುವ ರೀತಿ, ನಾಟಕದ ಸಂಭಾಷಣೆಗಳನ್ನು ಉಲ್ಲೇಖಿಸುವ ರೀತಿ, ಇತ್ಯಾದಿ ಮಾತಿನ ಕಲೆಯ ಬಗ್ಗೆ ಅಮೋಘ ಪಾಠ ಮಾಡಿದರು. ಅಲ್ಲದೆ ಆದರ್ಶ ಭಾಷಣದ ಕಲೆಯನ್ನು ಪ್ರದರ್ಶಿಸಿದರು. ಭಾಷಣ ಮುಗಿದಾಗ ನಾನು "ನಿಮ್ಮ ಮಾತೆ ಮನಮೋಹಕ" ಎಂದೆ, ಆಗ ಅವರು ಸ್ಮಿತವದನದಿಂದ "ನನ್ನ ಮಾತೆ ಮನಮೋಹಕ ಅಷ್ಟೆ ಅಲ್ಲ, ಗುಣಶಾಲಿನಿ, ಪ್ರೀತಿಯ ಗಣಿ" ಎಂದರು. ಎಲ್ಲರೂ ಮಾತೆ ಪದದ ಶ್ಲೇಷೆ ಕಂಡು ನಕ್ಕರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿಗೆ ನಾಡಿನ ಎಲ್ಲ ವಿದ್ವಾಂಸರೂ ತಮ್ಮ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಆದರೆ ಎ.ಆರ್.ಕೃ, ಡಿ.ಎಲ್.ಎನ್. ಮತ್ತು ತೀ.ನಂ.ಶ್ರೀ. ಅವರ ಕೊಡುಗೆ ಉಳಿದವರಿಗಿಂತ ಅಪಾರ, ಅಮೂಲ್ಯ ಎಂದರೆ ತಪ್ಪಾಗದು. ಒಂದು ರೀತಿಯಲ್ಲಿ ನಿಘಂಟಿನ ರಚನೆಗೆ ಅವರು ಬಾಳನ್ನೇ ತೇಯ್ದರು ಎನ್ನಬಹುದು. ಸದಾ ಶಬ್ದಚಿಂತಕರಾಗಿದ್ದರು. ಯಾವುದೇ ಸಂದರ್ಭದಲ್ಲಾಗಲಿ ಶಬ್ದದ ಅರ್ಥ, ಸರಿಬಳಕೆಯ ಕಡೆ ಅವರ ನಿಗಾ ಇರುತ್ತಿತ್ತು. ಒಮ್ಮೆ ಪರಿಷತ್ತಿನ ಸಕಲ ಸದಸ್ಯರ ಸಭೆಯಲ್ಲಿ ಅವರಿಬ್ಬರ ಬಳಿ ನಾನು ಕುಳಿತಿದ್ದೆ. ಅವರು ಸಭೆಯಲ್ಲಿ ಹಿಂದಕ್ಕೆ ಕುಳಿತಿದ್ದರು. ಮುಂದೆ ಎಲ್ಲಾ ಜನ ಕೂತು, ಹಿಂದುಗಡೆ ಜಾಗ ಖಾಲಿ ಇತ್ತು. ವೇದಿಕೆಯ ಮೇಲೆ ಒಬ್ಬ ವಿದ್ವಾಂಸರು ಮಾತನಾಡಿದಾಗ ಕೇಳಿಸಲಿಲ್ಲ. ಅವರ ದನಿ ಕೃಶವಾಗಿತ್ತು, "ಅಯ್ಯೋ! ಕೇಳಿಸುತ್ತಿಲ್ಲವಲ್ಲಾ ಈ ವಿದ್ವಾಂಸರ ಮಾತು" ಎಂದರು ತೀ.ನಂ.ಶ್ರೀ. ಆಗ ನಾನು ಎದ್ದು ನಿಂತು "ಜೋರಾಗಿ ಮಾತಾಡಿ ಸಾರ್" ಎಂದು ಕೂಗಿಕೊಂಡೆ, ಕೂಗಿ ಕುಳಿತೆ. ಆಗ ತೀ.ನಂ.ಶ್ರೀ. ಬೆನ್ನು ತಟ್ಟಿ ಹೇಳಿದರು, "ಮಗೂ, ಮಾತನ್ನು **ಗಟ್ಟಿಯಾಗಿ** ಹೇಳುತ್ತಾರೆ ಇಲ್ಲ **ಮೆಲ್ಲಗೆ** ಹೇಳುತ್ತಾರೆ. ನೀರು **ಜೋರಾಗಿ** ಹರಿಯುತ್ತದೆ ಎಂದರೆ ರಭಸದಿಂದ, ಇಲ್ಲವೇ **ನಿಧಾನವಾಗಿ** ಹರಿಯುತ್ತದೆ" ಎಂದರು. ನಾನು **ಜೋರಾಗಿ** ಎಂಬ ಪದವನ್ನು ಸರಿಯಾಗಿ ಬಳಸದೆ ಇದ್ದುದನ್ನು ಮಾರ್ಮಿಕವಾಗಿ ತಿಳಿಸಿದರು.

ಡಿ.ಎಲ್.ಎನ್. ಮತ್ತು ತೀ.ನಂ.ಶ್ರೀ. ನಿಘಂಟಿನ ಸಭೆಯಲ್ಲಿ ಜತೆಜತೆಯಲ್ಲಿ ಕೂಡುತ್ತಿದ್ದರು. ಸದಾ ಒಟ್ಟಿಗೆ ಚರ್ಚಿಸುತ್ತಿದ್ದರು. ಯಾವುದಾದರೂ ಶಬ್ದಚರ್ಚೆ ವಿಷಯವ್ಯಾಪ್ತಿ ಮೀರಿದರೆ, ಗೊಂದಲವುಂಟುಮಾಡಿದರೆ, "ಅದನ್ನು ನಾವಿಬ್ಬರೂ ಚರ್ಚಿಸಿ ನಾಳೆಸಭೆಗೆ ಇಡುತ್ತೇವೆ. ಈಗ ಮುಂದಿನ ಪದ ತೆಗೆದುಕೊಳ್ಳೋಣ"

ಎನ್ನುತ್ತಿದ್ದರು. ಕೇವಲ ಸಭೆಯಲ್ಲಷ್ಟೆ ಅಲ್ಲ, ಹಗಲೂ ರಾತ್ರಿ ಸದಾಶಿವನಿಗೆ ಅದೇ ಧ್ಯಾನ ಎಂಬಂತೆ ಅವರಿಬ್ಬರಿಗೆ ಸದಾ ಶಬ್ದಧ್ಯಾನ. ಇದಕ್ಕೊಂದು ನಿದರ್ಶನವೆಂದರೆ ತೀ.ನಂ.ಶ್ರೀ. ಅವರೇ ಪ್ರಸ್ತಾಪಿಸಿರುವ ಈ ಪ್ರಸಂಗ:

ಪಂಪನ ಆದಿಪುರಾಣದಲ್ಲಿ ಎಷ್ಟೋ ಪದಗಳಿಗೆ ಖಚಿತ ಅರ್ಥನಿರ್ಣಯ ಮಾಡಲು ಇಂದಿಗೂ ಸಾಧ್ಯವಾಗಿಲ್ಲ. ಇಂಥ ಪದಗಳ ಬಗ್ಗೆ ಸದಾ ಚಿಂತಿಸುವ ಜೋಡಿ ವಿದ್ವಾಂಸರು ತೀ.ನಂ.ಶ್ರೀ. ಮತ್ತು ಡಿ.ಎಲ್.ಎನ್. ಇವರ ಶಬ್ದದ ಹುಚ್ಚಿನಿಂದ ಕನ್ನಡದಲ್ಲಿ ಅನೇಕ ಪದಗಳಿಗೆ ಅರ್ಥನಿರ್ಣಯ ಆಗಿದೆ. ಇಂಥ ಪ್ರಸಂಗ ಇದು. ಒಂದು ದಿನ ನರಸಿಂಹಾಚಾರ್ಯರು ತೀ.ನಂ.ಶ್ರೀ. ಅವರ ಮನೆಗೆ ಬಂದಿದ್ದಾಗ, "ಎಲ್ಲಿ, ಆದಿಪುರಾಣ ಪುಸ್ತಕ ತೆಗೆಯಿರಿ" ಎಂದರು. ತೀ.ನಂ.ಶ್ರೀ. ಪುಸ್ತಕ ತಂದರು. ಅವರು ಹೇಳಿದ ಪುಟ ತೆಗೆದರು. ಅದರಲ್ಲಿ ೧೧ನೇ ಆಶ್ವಾಸದ ೪೩ನೇ ಪದ್ಯವನ್ನು ತೋರಿಸಿ ಓದಿದರು.

ಪೊಳವಲರಮರ್ದಿನ ಕಪ್ಪುರ
ವಳುಕಿನ ಕತ್ತುರಿಯ ಕೊಟಿತ ದೂರ್ವಾಭರಣಂ
ಗಳ ಮೊಳೆವ ಮಾಣಿಕಂಗಳ
ಬೆಳಗಿದೆ ಸೂಚಿಸಿತು ಭರತನಂತಃಪುರಮಂ

"ಭರತಚಕ್ರವರ್ತಿಯ ಅಂತಃಪುರದ ವರ್ಣನೆಗೆ ಸಂಬಂಧಿಸಿದ ಪದ್ಯ ಇದು. ಬಣ್ಣಬಣ್ಣದ ಹೂವಿನ-ಮದ್ದಿನ-ಕರ್ಪೂರದ ಹಳುಕಿನ ಕಸ್ತೂರಿ ವಾಸನೆಯೆ ಮತ್ತು ಧರಿಸಿದ ದೂರ್ವಾಭರಣದ ಮಾಣಿಕ್ಯಗಳ ಬೆಳಕೆ-ಭರತ ಚಕ್ರವರ್ತಿಯ ಅಂತಃಪುರ ಎಲ್ಲಿರುವುದು ಯಾವುದು ಎಂಬುದನ್ನು ಸೂಚಿಸುತ್ತಿತ್ತು" ಎಂಬುದು ಈ ಪದ್ಯದ ಭಾವ. ಎಲ್.ಬಸವರಾಜು ಅವರು ಹೇಳುವ ಹಾಗೆ ಡಿ.ಎಲ್.ಎನ್. ಅವರು ಈ ಪದ್ಯವನ್ನು ಓದಿ ತೋರಿಸಿ, "ಇಲ್ಲಿ ಕೊಟಿತ ಎಂದರೇನು?" ಎಂದರು. ಇದು ಬಹುದಿನಗಳಿಂದ ಕನ್ನಡ ಉಪಾಧ್ಯಾಯರನ್ನು ಬಾಧಿಸಿರುವ ಪ್ರಶ್ನೆ. ಪ್ರೊ. ಕುಂದಣಗಾರರು ಸಂಪಾದಿಸಿದ ಆದಿಪುರಾಣದ ಇತ್ತೀಚಿನ ಪರಿಷ್ಕರಣದಲ್ಲಿ ಕೂಡ ಕೊಳದ ಎಂಬುದು ಮೂಲಪಾಠವಾಗಿರಬಹುದು ಎಂದು ಊಹೆ ಮಾಡಿ ಕೈಬಿಡಲಾಗಿದೆ ಎಂದರು. ಆಗ ತೀ.ನಂ.ಶ್ರೀ. ಹೌದು ಎಂದು ತಲೆಯಲ್ಲಾಡಿಸಿದರು. ಆಗ ತೀ.ನಂ.ಶ್ರೀ. ಹೇಳಿದರು. "ಅದು ಕೊಳೆತುಹೋದ ಎಂಬುದಂತೂ ಅಲ್ಲ. ಇಲ್ಲಿ ಟಿ ಇರಬೇಕೋ ಹೇಗೆ?" ಎಂದರು. ಆಗ ಡಿಎಲ್ಎನ್ "ಹ್ಞಾ! ಹ್ಞಾ! ಅದರ ಸರಿಯಾದ ರೂಪ "ಕೊಟಿತ" ಹಳಗನ್ನಡ ಱಟಿ "೪." ಅದು ಕುಳ ಅಲ್ಲ. ಎಳೆಯ, ಹೊಸ ಎಂದು ಅದರ ಅರ್ಥ. ತೆಲುಗಿನ "ಕೊತ್ತ" ಪದವನ್ನು ಜ್ಞಾಪಿಸಿಕೊಳ್ಳಿ" ಎಂದರು. ಅವರ ಮುಖದ ಮೇಲೆ ಉಲ್ಲಾಸದ ಮಿಂಚು ಹರಿಯಿತು. ಅದರ ಬೆಳಕಿನಲ್ಲಿ ತೀ.ನಂ.ಶ್ರೀ. ಅವರ ಬಹುಕಾಲದ ಆ

ದಿನದ ಬಗೆಗಿನ ಅರ್ಥಸಂದೇಹ ಪರಿಹಾರವಾಗಿ ಹೋಯಿತು. ಈ ಪ್ರಸಂಗದ ಬಗ್ಗೆ ತೀ.ನಂ.ಶ್ರೀ. ಹೇಳಿರುವ ಮಾತು ಮನನೀಯವಾಗಿದೆ.

"ಪಂಪನ ಆದಿಪುರಾಣದಲ್ಲಿ "ಕೊಟಿತ ದೂರ್ವಾಭರಣ" ಎಂದರೆ ಎಳೆಯ ಗರಿಕೆಯ ಆಭರಣ. ಇದು ಮಾಂಗಲ್ಯಸೂಚಕವಾದ ದ್ರವ್ಯ. ಪಂಪನು ಈ ಅಪೂರ್ವದ ಪದವನ್ನು ಉಳಿಸಿಕೊಟ್ಟಿದ್ದಕ್ಕಾಗಿ ಅವನಿಗೆ ನಾವು ಕೃತಜ್ಞರಾಗಿರಬೇಕು. ದ್ರಾವಿಡ ಭಾಷಾಶಾಸ್ತ್ರ ಜ್ಞಾನಬಲದಿಂದ ಅದರ ಮೂಲವನ್ನು ಬೆಳಗಿ ಅರ್ಥವನ್ನು ಸ್ಫುಟ ಮಾಡಿಕೊಟ್ಟಿದ್ದಕ್ಕಾಗಿ ಪಂಪನ ಭಕ್ತರಾದ ನರಸಿಂಹಾಚಾರ್ಯರಿಗೆ ನಾವು ಕೃತಜ್ಞರಾಗಿರಬೇಕು. ಅವರೊಂದಿಗೆ ಈ ಶೋಧನೆಯಲ್ಲಿ ಇಂಥ ಅನೇಕ ಶಬ್ದಾರ್ಥ ಶೋಧನೆಯಲ್ಲಿ ಸಮಾನಪಾಲುದಾರರಾದ ತೀ.ನಂ.ಶ್ರೀ. ಅವರಿಗೂ ನಾವು ಕೃತಜ್ಞರಾಗಿರಬೇಕು. ಇಂಥ ಅಪೂರ್ವ ಜ್ಞಾನನಿಧಿಗಳ, ಶಬ್ದನಿಧಿಗಳ ಜೋಡಿಯನ್ನು ಇಂದೆಲ್ಲಿ ನಾವು ಕಾಣೋಣ?!"

ತೀ.ನಂ.ಶ್ರೀ. ನೋಡುವುದಕ್ಕೆ ವೇಷಭೂಷಣಗಳಲ್ಲಿ ಎಷ್ಟು ಅಚ್ಚುಕಟ್ಟು, ಕಟ್ಟುನಿಟ್ಟೋ ಅಷ್ಟೇ ಅಚ್ಚುಕಟ್ಟು, ಕಟ್ಟುನಿಟ್ಟುಗಳನ್ನು, ಒಪ್ಪಓರಣಗಳನ್ನು ಅವರ ಬರಹದಲ್ಲಿ, ಬರಹದ ರಚನೆಯಲ್ಲಿ ಕಾಣಬಹುದು. ಅವರ ಪ್ರೀತಿಯ ಶಿಷ್ಯರಲ್ಲಿ ಒಬ್ಬರಾದ ಸಂಶೋಧಕ ಚಿದಾನಂದಮೂರ್ತಿಯವರ ಮಹಾಪ್ರಬಂಧ ರಚನೆಗೆ ಅವರು ಮಾರ್ಗದರ್ಶಕರಾಗಿದ್ದರು. ಅದನ್ನು ಚಿದಾನಂದಮೂರ್ತಿಗಳು ಅಚ್ಚು ಮಾಡಿಸುತ್ತಿದ್ದಾಗ ತೀ.ನಂ.ಶ್ರೀ. "ಮುದ್ರಣದೋಷ, ಲೇಖನಚಿಹ್ನೆ ದೋಷ ಒಂದೂ ಇರಬಾರದು. ಪ್ರತಿಸಾಲೂ ಕೊನೆಯಾದಾಗ ಸಾಲಿನ ಕೊನೆಯಲ್ಲಿ ಪದಗಳನ್ನು ವಿಕಾರವಾಗಿ ಅರ್ಥಹೀನವಾಗಿ ಒಡೆಯಬಾರದು" ಎಂದು ಅಪ್ಪಣೆ ಮಾಡಿದ್ದರು. ಚಿದಾನಂದಮೂರ್ತಿಗಳು ಹಾಗೆಯೇ ಅಚ್ಚು ಮಾಡಿಸಿದರು, ಕನ್ನಡದಲ್ಲಿ ಅತಿಸುಂದರವಾಗಿ ಅಚ್ಚಿನದೋಷ ಒಂದೂ ಇಲ್ಲದೆ, ಪದವಿಕಾರವಾಗದೆ, ಮುದ್ರಣವಾದ ಅಪರೂಪದ ಮಹಾಪ್ರಬಂಧ ತೀನಂಶ್ರೀ ಅವರು ಮಾರ್ಗದರ್ಶನ ಮಾಡಿದ, ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ ಮಾಡಿದ ಈ ಗ್ರಂಥ.*

ಈ ಗ್ರಂಥ ಅಚ್ಚಾಗಿ ಹೊರಬಂದಾಗ ಅದನ್ನು ಕಂಡು ಪರಮ ಸಂತೋಷ ಪಟ್ಟರು ತೀ.ನಂ.ಶ್ರೀ. ಅವರನ್ನು ಯಾರೋ ಒಬ್ಬರು ಒಮ್ಮೆ ಕೇಳಿದರಂತೆ

---

* ಆದರೆ ಇತ್ತೀಚೆಗೆ ಈ ಗ್ರಂಥ ಪುನರ್ ಮುದ್ರಣವಾದಾಗ ಹೇರಳ ಅಚ್ಚಿನ ದೋಷಗಳಿದ್ದವು. ಅದನ್ನು ಚಿಮೂ ಗಮನಕ್ಕೆ ತಂದಾಗ ಗ್ರಂಥ ಅಚ್ಚಾಗಿ ಹೋಯಿತು ನಿನ್ನೆ. ಇಲ್ಲದಿದ್ದರೆ ತಿದ್ದುತ್ತಿದ್ದೆ ಕ್ಷಮಿಸಿ. ಮುಂದಿನ ಜನ್ಮದಲ್ಲಿ ನಾನು ವೈಕುಂಠದಿಂದ, ನೀವು ಕೈಲಾಸದಿಂದ, ಭೂಲೋಕಕ್ಕೆ ಬಂದರೆ ಆಗ ಸರಿಪಡಿಸೋಣ ಎಂದರು ವಿನೋದದಿಂದ. ಅವರು ವೀರಶೈವರು. ನಾನು ಬ್ರಾಹ್ಮಣ. ಈ ಹಿನ್ನೆಲೆಯಲ್ಲಿ ಚಿಮೂ ಮಾಡಿದ ಹಾಸ್ಯ ಇಲ್ಲಿದೆ.

"ನಿಮ್ಮ ಜೀವನದಲ್ಲಿ ಅತ್ಯಂತ ಸಂತೋಷದ ದಿನ ಯಾವುದು?" ಎಂದು. "ನನ್ನ ಗ್ರಂಥಗಳು ಒಂದೂ ತಪ್ಪಿಲ್ಲದೆ ಸುಂದರವಾಗಿ ಅಚ್ಚಾಗಿ ಹೊರಬಂದ ದಿನ" ಎಂದರಂತೆ. ಅವರ **ಭಾರತೀಯ ಕಾವ್ಯಮೀಮಾಂಸೆ**ಯ ಮೊದಲ ಮುದ್ರಣಪ್ರತಿ ಇದಕ್ಕೆ ನಿದರ್ಶನ. ತಮ್ಮ ಮತ್ತು ಶಿಷ್ಯರ ಗ್ರಂಥ ಅಚ್ಚುಕಟ್ಟಾಗಿ ಹೊರಬಿದ್ದಾಗ ಪುತ್ರೋತ್ಸವ ಆದಂತೆ ಭಾವಿಸುತ್ತಿದ್ದರು. ಈ ಸಮಯದಲ್ಲಿ ಅವರ ಆತ್ಮೀಯ ಕಿರಿಯ ಶ್ರೀನಾಥಶಾಸ್ತ್ರಿ ಹೇಳಿದ ಮಾತು ನೆನಪಾಗುತ್ತದೆ.

ಒಮ್ಮೆ ಅವರ ಮನೆಯಲ್ಲಿ ಮಿತ್ರರ ಬೈಠಕ್ ಏರ್ಪಾಟಾಗಿತ್ತು. ಆಗಾಗ ಆತ್ಮೀಯ ಮಿತ್ರರು ದಿನವೆಲ್ಲಾ ಮನೆಯಲ್ಲಿ ಝೂಂಡಾ ಊರಿ ಬೆಳಗಿನಿಂದ ಸಂಜೆಯವರೆಗೆ ಹರಟೆ ಅಲ್ಲ, ಸಾಹಿತ್ಯ ಸಲ್ಲಾಪ, ಸುಖಸಂಕಥಾ ವಿನೋದ ಲಹರಿ ಹರಿಸುವುದು ಒಂದು ಪದ್ಧತಿ ಆಗಿತ್ತು. ಪು.ತಿ.ನ., ಎ.ಎನ್.ಮೂರ್ತಿರಾವ್, ಎಚ್.ಎಸ್.ಕಪಿನೀಪತಿ ಭಟ್ಟ, ನಂ.ಶಿವರಾಮಶಾಸ್ತ್ರಿ, ಟಿ.ಪಿ.ಕೃಷ್ಣಾಚಾರ್, ಗೊರೂರು ಮೊದಲಾದ ಆತ್ಮೀಯರೊಡನೆ ಮ್ಯಾರಥಾನ್ ಗೋಷ್ಠಿಗಳನ್ನು ಸಹೃದಯ ಹರಟೆಕೂಟಗಳನ್ನು ಭರ್ಜರಿ ಸೊಗಸಾದ ಊಟ, ಉಪಚಾರಗಳೊಂದಿಗೆ ಹಾಗೇ ಸ್ವಲ್ಪ ಹೊತ್ತು ಉರುಳಿಕೊಳ್ಳಲು ಹಾಸಿಗೆಯನ್ನು ಹಾಸಿಕೊಂಡು ಹಗಲೂ ರಾತ್ರಿ ನಡೆಸಿದ ರಸಗೋಷ್ಠಿಗಳಿಗೆ ಲೆಕ್ಕವೇ ಇಲ್ಲ. ಈ ಕಾಲದಲ್ಲಿ ಆ ಭಾಗ್ಯ ಎಲ್ಲಿ ಬರಬೇಕು? ಅಂಥ ಜನ ಎಷ್ಟಿದ್ದಾರೆ? ಎಲ್ಲಿದ್ದಾರೆ?

ಇಂಥ ಒಂದು ಗೋಷ್ಠಿಯಲ್ಲಿ ಇಳಿವಯಸ್ಸಿನಲ್ಲಿ ಒಬ್ಬರಿಗೆ ಮಗು ಹುಟ್ಟಿದ ವಿಷಯ ಪ್ರಸ್ತಾಪಕ್ಕೆ ಬಂದಿತು. ೫೦ರ ಗಡಿ ದಾಟಿದ್ದ ತೀ.ನಂ.ಶ್ರೀ. ಅವರು ಕೂಡಲೇ ತಮಗೂ ಸದ್ಯದಲ್ಲೇ ಪುತ್ರೋತ್ಸವ ಆಗುತ್ತದೆ ಎಂದುಬಿಟ್ಟರು. ಎಲ್ಲರೂ ಅಚ್ಚರಿಗೊಂಡರು. ಕೂಡಲೇ ತೀ.ನಂ.ಶ್ರೀ. "ಚಿದಾನಂದಮೂರ್ತಿಗಳಿಗೆ ಸದ್ಯದಲ್ಲೇ ಪಿಎಚ್.ಡಿ. ದೊರಕುತ್ತದೆ. ಅದು ನನಗೆ ಪುತ್ರೋತ್ಸವ ಆದಷ್ಟೇ ಸಂತೋಷದ ವಿಷಯ" ಎಂದರು. ಎಲ್ಲರೂ ಅವರ ಶಿಷ್ಯವಾತ್ಸಲ್ಯಕ್ಕೆ ಬೆರಗಾದರು. ಚಿದಾನಂದಮೂರ್ತಿ ಅವರಿಗೆ ಪಿಎಚ್.ಡಿ. ಡಿಗ್ರಿ ದೊರೆತಾಗ ತೀ.ನಂ.ಶ್ರೀ. ತಮ್ಮ ಸಂತೋಷವನ್ನು ಹೀಗೆ ವ್ಯಕ್ತಪಡಿಸಿದರು ಎಂದು ಶ್ರೀನಾಥಶಾಸ್ತ್ರಿಗಳು ತಿಳಿಸಿದ್ದಾರೆ.

"ಎನ್ನ ಬಂಜೆತನವ ನೀಗಿದೆಯಯ್ಯ ಚಿದಾನಂದಮೂರುತಿ
ಎನ್ನ ಶರಣರ ಸಂಗವ ದೊರಕಿಸಿದೆಯಯ್ಯ ಕೂಡಲಸಂಗಮದೇವ"

ಸರಳಜೀವಿಗಳು, ಸಹೃದಯಿಗಳು, ಸದ್ಗುಣಿಗಳು, ಸತ್ಸಂಗಪ್ರಿಯರು, ಸಜ್ಜನರು ಸದ್ಗೃಹಸ್ಥ ಜೀವನವನ್ನು ಹೇಗೆ ನಡೆಸುತ್ತಾರೆ ಎಂಬುದನ್ನು ತೀ.ನಂ.ಶ್ರೀ. ಅವರ ಬಾಳಿನಿಂದ ಎಲ್ಲರೂ ಕಲಿಯುವಂಥದ್ದಾಗಿದೆ. "ಚಿಕ್ಕವರು ದೊಡ್ಡವರು ಎನ್ನದೆ

ಮನೆಯಲ್ಲಿನ ಎಲ್ಲರೂ ಅವರೊಡನೆ ಕುಳಿತು ಎಲ್ಲ ಕೂಟಗಳಲ್ಲಿ ಭಾಗವಹಿಸಬೇಕೆಂದು ಅವರ ಇಚ್ಛೆಯಾಗಿತ್ತು. ಮನೆಯಲ್ಲಿಯೂ, ಅವರು ಕೆಲಸಕ್ಕೆ ಸೇರಿದಾಗಿನಿಂದ ಕೊನೆಯವರೆಗೂ ಬಂಧುವರ್ಗದ ಅನೇಕರನ್ನು ಇಟ್ಟುಕೊಂಡು, ಅವರನ್ನು ತಮ್ಮ ಮಕ್ಕಳೆಂದೇ ಭಾವಿಸಿ ಬಹಳ ಮುತುವರ್ಜಿಯಿಂದ ಸಾಕಿ ಸಲಹಿ ವಿದ್ಯಾಬುದ್ಧಿಯನ್ನು ನೀಡಿ ಮುಂದೆ ತಂದಿದ್ದಾರೆ. ಈ ಕಾರ್ಯದಲ್ಲಿ ಅತಿಥಿ ಸತ್ಕಾರದಲ್ಲಿ ಅವರ ಶ್ರೀಮತಿ ಜಯಲಕ್ಷಮ್ಮ ಶ್ರೀಕಂಠಯ್ಯನವರ ಸೇವೆ, ಪ್ರೀತಿ, ತ್ಯಾಗ ಅಮೋಘವಾದುದು. ಇಂಥ ಸಾಹಿತ್ಯದಂಪತಿಗಳ ಸತ್ಕಾರ ಸುಖದಾನಂದ ಪಡೆದ ನಾಡಿನ ಗಣ್ಯ ಸಾಹಿತಿಗಳೇ ಧನ್ಯರು. ಅವರ ಕೊಡುಗೆ ಕೇವಲ ಕನ್ನಡಕ್ಕೆ ಅಷ್ಟೇ ಅಲ್ಲ, ಭಾರತಕ್ಕೂ ಸಂದಿದೆ. ರಾಷ್ಟ್ರಪತಿ ಎಂಬ ಪದವನ್ನು ಸಂವಿಧಾನರಚನೆಗೆ ಕೊಟ್ಟವರು ಅವರು. ಭಾವೈಕ್ಯ ಪದ ಸೂಕ್ತವಲ್ಲ. ಭಾವ ಸಾಮರಸ್ಯ ಸೂಕ್ತಪದ ಎಂದವರು. ತಿ.ತಾ.ಶರ್ಮರಂತೆ ನವಪದಸೃಷ್ಟಿಬ್ರಹ್ಮರಾದ ಅವರು. ಪಾರಿಭಾಷಿಕ ಪದಗಳ ಕ್ಷೇತ್ರಕ್ಕೆ ಕನ್ನಡದ ಮುನ್ನಡೆಗೆ ಅವರ ಭಾಷಾ ವಿಜ್ಞಾನ, ಛಂದಸ್ಸಿನ ಬರಹಗಳೇ ಸಾಕ್ಷಿ ಆಗಿವೆ. ಜ್ಞಾನಾನ್ವೇಷಣದಲ್ಲಿ ಸದಾ ಅವರು ಕಾತರರು. ವಿನಯಶಾಲಿಗಳು. ಕೇಪು ಶಂಕರನಾರಾಯಣ ಎಂಬ ಧಾರವಾಡದ ವಿದ್ವಾಂಸರೊಬ್ಬರು ಅಲಂಕಾರ ಶಾಸ್ತ್ರದಲ್ಲಿ ತುಂಬ ಆಳವಾಗಿ ಅಧ್ಯಯನ ಮಾಡಿದವರಾಗಿದ್ದರು. ನಾಗವರ್ಮನ ಕಾವ್ಯಾಲೋಕನದ ಗ್ರಂಥಕ್ಕೆ ಅದ್ಭುತ ಟಿಪ್ಪಣಿಗಳನ್ನು ಸಿದ್ಧಪಡಿಸಿದ ಘನಪಂಡಿತರು. ಅವರು ಪರಿಷತ್ತಿನ ಎದುರಿಗಿನ ಸಂಸ್ಕೃತ ಮಹಾಪಾಠಶಾಲೆಯ ಮೂರಡಿ ಎತ್ತರದ ಕಲ್ಲಿನ ಕಾಂಪೌಂಡಿನ ಕಟ್ಟೆಯಲ್ಲಿ ನಮ್ಮೊಂದಿಗೆ ಕುಳಿತು ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಚರ್ಚೆಯ ಮಧ್ಯೆ ತೀ.ನಂ.ಶ್ರೀ. ಅವರ ಭಾರತೀಯ ಕಾವ್ಯಮೀಮಾಂಸೆಯ ಗ್ರಂಥದ ಬಗ್ಗೆ ಕೆಲವು ಆಕ್ಷೇಪಗಳನ್ನು ಎತ್ತಿದರು. ನನ್ನ ಕಿವಿ ಚುರುಕಾಯಿತು. ಮಾರನೇ ದಿನವೇ ಅವುಗಳನ್ನು ತೀ.ನಂ.ಶ್ರೀ. ಅವರ ಗಮನಕ್ಕೆ ತಂದೆ. ಅವರು "ನಾನು ಅವರನ್ನು ಕಾಣಬೇಕಲ್ಲಾ, ಎಲ್ಲಿದ್ದಾರೆ ಅವರು?" ಎಂದು ಕೇಳಿದರು. "ದಿನಾ ಸಂಜೆ ಪರಿಷತ್ತಿನ ಎದುರು ಕಲ್ಲು ಹರಟೆಕಟ್ಟೆಯಲ್ಲಿ (ಆ ಕಾಂಪೌಂಡಿನ ಗೋಡೆಗೆ ಇಟ್ಟ ಹೆಸರು) ನಮಗೆ ಸಿಗುತ್ತಾರೆ" ಎಂದೆ. ಮಾರನೇ ದಿನ ತೀ.ನಂ.ಶ್ರೀ. ಅವರು ನಾವಿದ್ದಲ್ಲಿಗೆ ಫುಟ್‌ಪಾತ್ ಅಂಚಿನ ಕಟ್ಟೆಯ ಬಳಿ ಬಂದರು. ಆಗ ಆ ಗೋಡೆ ಕಲ್ಲಿನದು. ಕೇವಲ ೩ ಅಡಿ ಎತ್ತರ ಇತ್ತು. ಕೂತುಕೊಳ್ಳಲು ಅನುಕೂಲವಾಗಿತ್ತು. ಈಗ ಬದಲಾಗಿದೆ. ಬಂದು ನಮ್ಮ ಜತೆ ಕಟ್ಟೆಯ ಮೇಲೆ ಕುಳಿತು ಅವರೊಂದಿಗೆ ಚರ್ಚೆ ನಡೆಸಿ, "ನೀವು ಹೇಳುವ ವಿಷಯಗಳನ್ನು ವಿವರವಾಗಿ ಮಾತಾಡಬೇಕಿದೆ. ದಯಮಾಡಿ ಎಲ್ಲಿಗೆ ಬರಲಿ?" ಎಂದು ಕೇಳಿದರು. ಕಾರಣಾಂತರಗಳಿಂದ ಅವರು ಮತ್ತೆ ಭೇಟಿ ಆಗಲು

ಸಾಧ್ಯವಾಗಲಿಲ್ಲ. ಅವರ ವಿದ್ವತ್‌ಚರ್ಚೆಯ ಜತೆಗೆ ಯಾವ ಸಂಕೋಚವೂ ಇಲ್ಲದೆ ಜ್ಞಾನದಾಹದಿಂದ ಬೀದಿಕಟ್ಟೆಯಲ್ಲಿ ಕುಳಿತು ಶಾಸ್ತ್ರ ಚರ್ಚೆ ಮಾಡಿದ ಬೇರೆ ವಿದ್ವಾಂಸರನ್ನು ನಾನು ಕಂಡಿಲ್ಲ."


ಶಿಷ್ಯರನ್ನು ಎಂದೂ ಮನನೋಯಿಸಿದವರು ಅವರಲ್ಲ. ಅವರ ಅಪಾರ ವಿದ್ವತ್ತು ಜ್ಞಾನ, ಸ್ಫೂರ್ತಿ ಪಾಂಡಿತ್ಯವೆಲ್ಲ ಬರಹಕ್ಕಿಂತ ಹೆಚ್ಚಾಗಿ ಭಾಷಣಗಳಲ್ಲಿ, ಸಂವಾದಗಳಲ್ಲಿ ಹೊರಬಿದ್ದಿದೆ ಎಂಬುದು ಆತ್ಮೀಯರ ಅಭಿಪ್ರಾಯ. ಇದು ಬಹುಮಟ್ಟಿಗೆ ನಿಜ. ಅವರು ತರಗತಿ ಉಪನ್ಯಾಸಗಳಲ್ಲಿ ಇತರೆಡೆಗಳಲ್ಲಿ ಹೇಳಿದ ವಿಷಯಗಳನ್ನೇ ಅನಾಮತ್ತಾಗಿ ಟಿಪ್ಪಣಿ ಮಾಡಿಕೊಂಡು, ಅದನ್ನೇ ಅಳವಡಿಸಿ ಭಾಷಾಜ್ಞಾನದ ಗ್ರಂಥವೊಂದನ್ನು ಒಬ್ಬ ಭಾಷಾ ವಿಜ್ಞಾನಿಗಳು ರಚಿಸಿದರು. ತಾವು ರಚಿಸಿದ ಗ್ರಂಥವೆಂದು ಪ್ರಕಟಿಸಿ ಅದರ ಬಿಡುಗಡೆ ಕಾರ್ಯಕ್ರಮಕ್ಕೆ ತಮ್ಮ ಗುರುಗಳಾದ ತೀ.ನಂ.ಶ್ರೀ. ಅವರನ್ನೇ ಕರೆದರು. ಆ ಸಭೆಯಲ್ಲಿ ಆಗ ತೀ.ನಂ.ಶ್ರೀ. ಹೇಳಿದ ಮಾತು ನನಗಿನ್ನೂ ಚೆನ್ನಾಗಿ ನೆನಪಿದೆ. "ನನ್ನ ಶಿಷ್ಯರು ಇಂಥ ಉದ್ಗ್ರಂಥಗಳನ್ನು ರಚಿಸಿದ್ದು ಕಂಡು ನನಗೆ ಬಹಳ ಸಂತೋಷವಾಗಿದೆ. ಇನ್ನು ಮೇಲೆ ನಾನು ಬರೆಯಬೇಕಾದ್ದು ಏನೂ ಇಲ್ಲ. ನನ್ನ ಶಿಷ್ಯರು ಇಷ್ಟು ಪ್ರವರ್ಧಮಾನಕ್ಕೆ ಬಂದಿರುವುದು ಬಹಳ ಸಂತೋಷ"" ಎಂದರು. ಬಲ್ಲವರೇ ಬಲ್ಲರು ಸತ್ಯದ ಸವಿಯ!

ಮೇಷ್ಟ್ರು ಎಂದರೆ ಕೇವಲ ಶಾಲೆ ಅಥವಾ ಕಾಲೇಜಿನಲ್ಲಿ ಮೇಷ್ಟ್ರು ಆದರೆ ಸಾಲದು ವಿದ್ಯಾರ್ಥಿಗಳ ಬದುಕಿನಲ್ಲಿ ಮೇಷ್ಟ್ರು ಆಗಿರುತ್ತಾರೆ ಕೆಲವರು. ಅಂಥವರಲ್ಲಿ ತೀ.ನಂ.ಶ್ರೀ. ಒಬ್ಬರು. ಅವರು ಪರಿಷತ್ತಿನ ನಿಘಂಟು ಸಭೆಗಳಿಗೆ ಬಂದಾಗಲೆಲ್ಲ ಸಂಜೆ ಮೀಟಿಂಗ್ ಮುಗಿಯುವ ವೇಳೆಗೆ ಪರಿಷತ್ತಿನ ಬಾಗಿಲ ಬಳಿ ಒಂದಿಬ್ಬರು ವಿದ್ಯಾರ್ಥಿಗಳು ಅವರ ಬರವನ್ನೇ ಎದುರು ನೋಡುತ್ತಿದ್ದರು. ಬಂದ ಕೂಡಲೇ "ಸ್ವಲ್ಪ ಮಾತಾಡಬೇಕಿತ್ತು. ಸಾರ್, ಮನೆಗೆ ಬರ್‍ತಿರಾ?" ಎಂದರೆ, "ಈಗಲೇ ಬರ್‍ತೀನಿ ನಡಿಯಮ್ಮಾ" ಎಂದು ಅವರ ಜತೆ ಅವರ ಮನೆಗೆ ಹೋಗುತ್ತಿದ್ದರು ಆ ವಿದ್ಯಾರ್ಥಿನಿ (ಈಗ ೫೦ ದಾಟಿದ ಗೃಹಸ್ಥೆ) ತಮ್ಮ ತಾಯಿ, ತಂದೆ, ಗಂಡನ ಜತೆ ಹೇಳಿಕೊಳ್ಳಲಾರದ ಸಂಕಟಗಳನ್ನು ತೋಡಿಕೊಂಡಾಗ ಅವರಿಗೆ ತೀ.ನಂ.ಶ್ರೀ ಸಮಾಧಾನ ಹೇಳುತ್ತಿದ್ದರು. "ಈಗ ನನಗೆ ನೆಮ್ಮದಿ ಆಯ್ತು" ಎನ್ನುತ್ತಿದ್ದಳು ಆ ವಿದ್ಯಾರ್ಥಿನಿ. ಒಮ್ಮೆ ನನ್ನ ಶಾಲಾಮಿತ್ರನ ಜತೆ ಅವರ ಮನೆಗೆ ಹೋದಾಗ ತೀ.ನಂ.ಶ್ರೀ. ನಿಘಂಟು ಕಚೇರಿ ಕೆಲಸ ಮುಗಿಸಿ ಪರಿಷತ್ತಿನಿಂದ ಅಲ್ಲಿ ಬಂದು ಅಲ್ಲಿದ್ದವರನ್ನು ಕಂಡು, "ಅವರೇಕೆ ಇಲ್ಲಿ ಬಂದಿದ್ದಾರೆ?" ಎಂದು ಕೇಳಿದಾಗ ನಮ್ಮಮ್ಮ (ಅವರ ವಿದ್ಯಾರ್ಥಿನಿ. ಕಾಲೇಜಿನಲ್ಲಿ ಈಗ ಆಕೆ ಪ್ರಾಧ್ಯಾಪಕಿ) ತಮ್ಮ

ಕಷ್ಟ-ಸುಖಗಳನ್ನೆಲ್ಲಾ ಅವರಲ್ಲಿ ಹಂಚಿಕೊಳ್ಳುತ್ತಾರೆ ಅವರೆಂದರೆ ನಮ್ಮಮ್ಮನಿಗೆ ಪ್ರಾಣ ಎಂದ.

ತೀ.ನಂ.ಶ್ರೀ. ಅವರು ನನಗೆ ಗುರುಗಳಲ್ಲ, ಬಂಧುಗಳಲ್ಲ, ಮಿತ್ರರಲ್ಲ, ಸಹೋದ್ಯೋಗಿಗಳಲ್ಲ. ಆದರೆ ಅವರ ಪರಿಚಯ, ಮಾತುಕಥೆ, ಅವರೊಡನಾಟ ನನಗೆ ಒಬ್ಬ ವಿದ್ವಾಂಸ ಎಂದರೆ ಪಾಂಡಿತ್ಯದಲ್ಲಿ ಹೇಗಿರುತ್ತಾರೆ, ಒಬ್ಬ ಸಹೃದಯ, ಸದ್ಗೃಹಸ್ಥ, ಶಿಷ್ಯವತ್ಸಲರಾಗಿ ಹೇಗಿರುತ್ತಾರೆ, ಎಲ್ಲಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳನ್ನು ಹೇಗೆ ತನ್ನ ಮಕ್ಕಳಂತೆ ನೋಡಿಕೊಳ್ಳುತ್ತಾರೆ, ಸಜ್ಜನ ಮಹಾಶಯನೊಬ್ಬ ಹೇಗಿರುತ್ತಾನೆ ಎಂಬುದನ್ನು ಬಾಳಿನಲ್ಲಿ ಅನುಭವಕ್ಕೆ ತಂದುಕೊಟ್ಟವರು. ಅವರನ್ನು ನೆನೆದಾಗಲೆಲ್ಲ, ಅವರ ರಸ ಪ್ರಸಂಗಗಳನ್ನು ನೆನೆದಾಗಲೆಲ್ಲ ನನ್ನ ತಂದೆ, ಅಣ್ಣ, ನನ್ನ ಪಾಲಿಗಿದ್ದ ನೆನಪಾಗುತ್ತದೆ. ನಮ್ಮ ನಾಡಿನಲ್ಲಿ ವಿದ್ವಾಂಸರು ಬೇಕಾದಷ್ಟು ಜನ ಇದ್ದಾರೆ. ತೀ.ನಂ.ಶ್ರೀ. ಅಂಥ ವಿದ್ಯಾಂಸರು ನನ್ನ ಕಣ್ಣಿಗೆ ಬಿದ್ದಿಲ್ಲ. ತೀ.ನಂ.ಶ್ರೀ., ಡಿ.ಎಲ್.ಎನ್. ಅಂಥ ಜೋಡಿ ವಿದ್ವಾಂಸರು ಮತ್ತಾರೂ ಇಲ್ಲ. ಅವರ ಜೀವನ ಪ್ರಸಂಗಗಳೆಲ್ಲ ರಸಪ್ರಸಂಗಗಳು. ಅವರ ನೆನಪುಗಳೆಲ್ಲ ಸವಿನೆನಪುಗಳು. ಎಂಥವರಿಗೂ ಸ್ಫೂರ್ತಿ ನೀಡುವ ರಸಕಾರಂಜಿಗಳು.

**



೯. ಆಡಳಿತ ಧುರೀಣ–ಆಧುನಿಕ ಸಾಹಿತಿ

ವಿನಾಯಕ ಕೃಷ್ಣ ಗೋಕಾಕ್

(೯–೮–೧೯೦೯ / ೨೮–೪–೧೯೯೨)

ಐದು ಖಂಡಗಳಲ್ಲಿ ಅಲೆದಾಡಿಸಿದ ಕೀರ್ತಿ
ಈ ವ್ಯಕ್ತಿ ಈ ಭಕ್ತಿ ಇದಕೆ ಇದುವೆ ಸಾಟಿ
ಸಾಹಸಕೆ ಹಿಂಜರಿವುದಲ್ಲ ವೇಗದ ಧಾಟಿ
ಕಂಡರಿಸುತಿದೆ ದೃಷ್ಟ ತನ್ನದೃಷ್ಟದ ಮೂರ್ತಿ

ಹೀಗೆಂದು ಅಂಬಿಕಾತನಯದತ್ತರಿಂದ ವರ್ಣಿಸಿಕೊಂಡ ವ್ಯಕ್ತಿ ಬೇಂದ್ರೆಯವರಿಗೆ ಗುರುವೂ ಶಿಷ್ಯನೂ ಆಗಿದ್ದ ವಿನಾಯಕ ಕೃಷ್ಣ ಗೋಕಾಕ್ ಅರ್ಥಾತ್ ವಿ.ಕೃ.ಗೋಕಾಕ್, ಜನರ ಬಾಯಲ್ಲಿ ಚಳುವಳಿಯಿಂದ ಗೋಕಾಕ್ ಆದವರು. ವಿನಾಯಕ ಕಾವ್ಯನಾಮದವರು. ಕೌಟುಂಬಿಕ: ಕನ್ನಡಿಗ: ಭಾರತೀಯ: ವಿದ್ಯಾರ್ಥಿ: ಶಿಕ್ಷಕ: ಮಾತುಗಾರ: ಆಡಳಿತಗಾರ: ಕವಿ: ಸಾಹಿತಿ: ಸಾಧಕ– ಹೀಗೆ ದಶಾವತಾರಿಗಳಾದವರು ಗೋಕಾಕರು.

ಗೋಕಾಕರು ಎಂದೊಡನೆ ಅವರ ಭವ್ಯರೂಪ ಕಣ್ಣೆದುರಿಗೆ ಧುತ್ತೆಂದು ಬಂದು ನಿಲ್ಲುತ್ತದೆ. ಯಾರೇ ಆಗಲಿ ಒಮ್ಮೆ ಕಂಡರೆ ಮರೆಯಲಾಗದ ರೂಪು, ಆಕಾರ, ವ್ಯಕ್ತಿತ್ವ ಗೋಕಾಕರದು. ಹಂಪನಾ ಗೋಕಾಕರನ್ನು ಕಂಡಮೇಲೆ ಅವರನ್ನು ವರ್ಣಿಸಿದ್ದು ಹೀಗೆ: "ವಿನಾಯಕರು ಆರಡಿ ಆಜಾನುಬಾಹು, ಎತ್ತರದ ವ್ಯಕ್ತಿ, ಸದೃಢಕಾಯ, ಚುರುಕುಗಣ್ಣಿನ ಮುಖ, ನಗೆಯ ಬೊಗಸೆ, ಕನ್ನಡಕದೊಳಗಿಂದ ಪ್ರೀತಿ ತುಳುಕುವ ಆತ್ಮೀಯ ನೋಟ, ಬ್ರಹ್ಮ ಬಹಳ ಬರೆಯಲು ತೆರಪಾಗಿರುವ ಅಗಲವಾದ ಹಣೆ, ಧ್ವನಿ, ಮುಗ್ಧ ಕಡಲ ಮೊರೆತ; ದುಂದುಭಿ ಗಂಭೀರ ನಿನದಂ." ಹೀಗೆ ಸೂಟುಬೂಟಿನ ಹೊರನೋಟವನ್ನು ಹಂಪನಾ ಚಿತ್ರಿಸಿದರೆ, ಅವರ ಗೃಹನೋಟವನ್ನು ಚೆನ್ನವೀರಕಣವಿ ಅವರು ತಮ್ಮ ಸಾನೆಟ್ಟಿನಲ್ಲಿ ಹೀಗೆ ಸೆರೆಹಿಡಿದಿದ್ದಾರೆ:

ತುಂಬಿದ ತಲೆಯ ಬೆಳ್ಳಗೂದಲಿಗೆ ಬೆರಳಾಡಿ
ಚಿಂತನೆಯ ಅಷ್ಟ ಪೈಲಿಗೆ ಹರಳ ಹೊರಳಿಸುತ
ಅಂತಃಕರಣ ದಂಗೆಯಲ್ಲಿ ತೂಗಿ, ಬದುಕ
ಬೆಲೆಗೈವ; ಅದೇನದೆಲ್ಲ ಅದೆಲ್ಲವ ಕೂಡಿ
ಕನ್ನಡಕ ದಾಟ, ಸುಣ್ಣಗೆ ಎದೆಯ ಮೀಟಿ, ಹದ
ಬರುಪವರೆಗು ಮಿದಿಯುವ ದೃಷ್ಟಿ, ಸೂಟು ಬೂಟನು
ಕಳಚಿ, ಲಂಡಂಗಿ ಧೋತರದಿ ಮುಗುಳ್ನಗೆ ಹದನು
'ಹಲೋ ಬರ್ರಿ' ತೆರೆಯುವುದು ಸಡುಮನೆಯ ಕಿಡಕಿ, ಕದ.

ಹೊರಗಿನ ಸೂಟುಬೂಟಿನಧಾರಿ ಮನೆಯೊಳಗಿನ "ಲಂಡಂಗಿ ಧೋತರ"ದ ಒಳನೋಟವನ್ನು ವರ್ಣಿಸಿದ್ದಾರೆ. ಗೋಕಾಕರನ್ನು ಹಂಪನಾ-ಕಣವಿ ಒಳ-ಹೊರನೋಟವನ್ನು ವರ್ಣಿಸಿದರೆ ಎಚ್ಚೆಸ್ಕೆ ಗೋಕಾಕರ ಗುಣನೋಟವನ್ನು ಹೀಗೆ ವಿವರಿಸುತ್ತಾರೆ: ಗೋಕಾಕರ ವಿದ್ವತ್ ಎಷ್ಟು ವಿಶಾಲವೋ ಮನಸ್ಸು ಅಷ್ಟೇ ವಿಶಾಲ; ಅವರದು ಸುರಸ ಜೀವನ; ಸಮರಸದ ಜೀವನ. ವಿದ್ಯೆ, ಪದವಿ ಅಂತಸ್ತುಗಳ ಭೇದವಿಲ್ಲದೆ ಎಲ್ಲರೊಡನೆಯೂ ಸರಸ ಸಂಭಾಷಣೆ ಮಾಡುವ ಸರಳತನ.

ಹೀಗೆ ಗೋಕಾಕರ ವ್ಯಕ್ತಿತ್ವಕ್ಕೆ ಹತ್ತಾರು ಮುಖಗಳುಂಟು. ಆ ಪೈಕಿ ಸಹೃದಯ ಸ್ಪಂದನದ ವ್ಯಕ್ತಿತ್ವ ಬಹಳ ಮುಖ್ಯವಾದದ್ದು. ನಮ್ಮಲ್ಲಿ ದೊಡ್ಡ ಸಾಹಿತಿ, ವಿದ್ವಾಂಸರು ಬಹಳ ಮಂದಿ ಸಾಮಾನ್ಯರಿಗೆ, ಅಪರಿಚಿತರಿಗೆ ಎಟುಕುವವರಲ್ಲ. ಅವರನ್ನು ಭೇಟಿ ಮಾಡುವುದಾಗಲಿ, ಸಂಭಾಷಿಸುವುದಾಗಲಿ ಸುಲಭವಿಲ್ಲ. ಮಾಸ್ತಿ, ವಿ.ಸೀ. ತೀ.ನಂ.ಶ್ರೀ., ರಾಳ್ಳಪಲ್ಲಿ ಅನಂತಕೃಷ್ಣ, ಡಿ.ವಿ.ಜಿ. ಅಂಥವರು ವಿರಳ. ಈ ಸಹೃದಯ ಸಾಹಿತಿಗಳನ್ನು ಒಬ್ಬ ಶಾಲಾಬಾಲಕ ಸಹ ಸುಲಭವಾಗಿ ಮಾತನಾಡಿಸಿ ತನ್ನ ಅಲ್ಪಜ್ಞಾನದ ಪ್ರಶ್ನೆಗಳನ್ನು ಕೇಳಿದಾಗ ಅವರು ಪ್ರೀತಿಯಿಂದ, ನಗುನಗುತ್ತ ಉತ್ತರಿಸುತ್ತ ಬುದ್ಧಿ ಹೇಳುವ, ವಿಷಯ ತಿಳಿಸುವ ಪರಿ ಅಚ್ಚರಿ ಮೂಡಿಸುವಂಥದ್ದು. ಇಂದು ಅಂಥ ವ್ಯಕ್ತಿತ್ವದ ಸಾಹಿತಿಗಳು ಅತಿವಿರಳರಾಗುತ್ತಿದ್ದಾರೆ. ಗೋಕಾಕರು ಇಂಥ ಅತಿವಿರಳ ಅಚ್ಚುಮೆಚ್ಚಿನ ಆತ್ಮೀಯ ಹಿರಿಯ ಸಾಹಿತಿಗಳ ಗುಂಪಿಗೆ ಸೇರಿದವರು.

ಗೋಕಾಕರು ಅಸಾಮಾನ್ಯ ವ್ಯಕ್ತಿ ಆಗಿದ್ದರೂ ಸಾಮಾನ್ಯ ವ್ಯಕ್ತಿಯಾಗಿ ಸರಳರಾಗಿದ್ದವರು. ಅವರಿಗಿದ್ದ ಅಂತಸ್ತು, ಪದವಿ, ವಿದ್ಯೆ, ಸ್ಥಾನಮಾನಗಳಲ್ಲಿ ದರ್ಪದಿಂದ ಮೆರೆಯಬಹುದಾಗಿತ್ತು. ಅಂಥ ಕೆಲಸವನ್ನು ಕನಸುಮನಸುಗಳಲ್ಲೂ ನೆನೆಯದ ವ್ಯಕ್ತಿ ಗೋಕಾಕರು. ಈ ಮಾತಿಗೆ ಸಾಕ್ಷಿಯಾಗಿ ನನ್ನ ಅನುಭವವೊಂದನ್ನೇ ಈ ಸಂದರ್ಭದಲ್ಲಿ ಹೇಳಬಹುದಾಗಿದೆ.

೧೯೫೮ರಲ್ಲಿ ಅವರ 'ದ್ಯಾವಾ ಪೃಥ್ವಿ' ಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತ್ತು. ನಾನು ಆ ವೇಳೆಗೆ ಅವರ ಕೃತಿಗಳನ್ನು ಓದಿದ್ದೆ. ಸಮುದ್ರ ಗೀತೆಗಳ ಸಂಕಲನದಲ್ಲಿ

ಸ್ವಚ್ಛಂದ ಛಂದದಲ್ಲಿ । ಜಲಕ್ರೀಡಾ ವೃತ್ತದಲ್ಲಿ
ಅನುದಿನವು ತೆರೆಗಳು । ಹಿಡಿವ ತಾಳಲಯದಲ್ಲಿ
ಗೀತವನೊರೆದೆನೆಂದು । ಗೀಳ್ ಮಾಡಬೇಡ
ಸಮುದ್ರದ ಸೆರೆಹಿಡಿದವರುಂಟೆ?

ಬಾವಿಯ ತೋಡಿ ಮರ ಬತ್ತಿಸಬಹುದೆ?
ಅಬ್ಧಿ ಶಬ್ದಗಳ ಪ್ರಾರಬ್ಧದಲ್ಲಿ ಸಹ
ಮಹಾಬ್ಧಿಯ ಕಣವೊಂದು ಸೆರೆಸಿಕ್ಕದಯ್ಯ
ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು

ಜೀವಿ ಅವರು ಹೇಳುವಂತೆ "ಹೊಸಗನ್ನಡ ಕಾವ್ಯದಲ್ಲಿ ಸ್ವಚ್ಛಂದದ ಬಳಕೆಯನ್ನು ಮೊದಲು ಮಾಡಿದವರು ಗೋಕಾಕರು. ಛಂದಸ್ಸಿನ ಬಂಧನದಲ್ಲಿ ಕವಿಗಳು ಕಟ್ಟುಬಿದ್ದಿದ್ದರು. ಎಷ್ಟೋ ಸಲ ಕೃತ್ರಿಮಛಂದದಲ್ಲಿ ಅವರ ಕಾವ್ಯ ಹಿಂಡಿಹೋಗುತ್ತಿತ್ತು. ಸಮುದ್ರದ ಸ್ವಾತಂತ್ರ್ಯವನ್ನು ಕಂಡು, ಸ್ಫೂರ್ತಿ ಪಡೆದು ವಿನಾಯಕರು ಯಾವುದೇ ಪ್ರಯತ್ನವಿಲ್ಲದೆ, ಅನಾಯಾಸವಾಗಿ ಸ್ವಚ್ಛಂದ ಛಂದದಲ್ಲಿ ಹಾಡಿದರು..." ಇತ್ಯಾದಿಯಾಗಿ ಕನ್ನಡದ ಎಲ್ಲ ವಿಮರ್ಶಕರು ಮೆಚ್ಚಿ ಹಾಡಿ ಹೊಗಳಿದರು. ಆದರೆ ಹಳಗನ್ನಡ ಕಾವ್ಯಗಳನ್ನು, ಅದರಲ್ಲೂ ಕುಮಾರವ್ಯಾಸ, ಲಕ್ಷ್ಮೀಶ ನರಹರಿ, ರಾಘವಾಂಕರಂಥ ಮಹಾಕವಿಗಳ ಷಟ್ಪದಿ ಕಾವ್ಯಗಳನ್ನು ಅತಿಯಾಗಿ ಮೆಚ್ಚಿಕೊಂಡಿದ್ದ ನನಗೆ ಗೋಕಾಕರು ಸಮುದ್ರದ ವರ್ಣನೆಯ ನೆಪದಲ್ಲಿ "ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು" ಎಂದಿದ್ದು ಹಿಡಿಸಿರಲಿಲ್ಲ. ಹಾಗೆಯೇ ಪ್ರಾಸರಹಿತ ಗದ್ಯತನದ ನವ್ಯಕಾವ್ಯವನ್ನು ನಾನು ಮೆಚ್ಚಿಕೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಗೋಕಾಕರನ್ನೇ ಕಂಡು ಮಾತಾಡಬೇಕು ಎಂದಿದ್ದೆ. ಅವರು ವೀಸಾ, ಕೊಲ್ಲಾಪುರ, ಹೈದ್ರಾಬಾದ್, ಮೈಸೂರು, ಧಾರವಾಡ ಎಂದು ಅಲ್ಲೆಲ್ಲಾ ಕಾರ್ಯಪ್ರವೃತ್ತರಾಗಿದ್ದರಿಂದ ಬೆಂಗಳೂರಿನಲ್ಲಿ ನನಗೆ ಭೇಟಿ ಆಗಲು ಅವಕಾಶವಾಗಲಿಲ್ಲ. ಆದರೆ ಅವರು ಹೈದ್ರಾಬಾದಿನಲ್ಲಿ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಸಂಸ್ಥೆಯಲ್ಲಿದ್ದಾಗ, ಬೇಸಿಗೆ ಇಂಗ್ಲಿಷ್ ಶಿಬಿರವೊಂದನ್ನು ಬೆಂಗಳೂರಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಒಂದೆರಡು ವಾರ ನಡೆಸುತ್ತಿದ್ದರು. ಅದನ್ನು ತಿಳಿದು ಅವರನ್ನು ಭೇಟಿ ಆಗಲು ನಿರ್ಧರಿಸಿದೆ. "ಅವರು ಭಾರಿ ಇಂಗ್ಲಿಷ್ ಪ್ರೊಫೆಸರ್. ನಿನ್ನ ಕಣೀನ ಅವರೇಕೆ ಕೇಳ್ತಾರೆ? ಮುಖಭಂಗ ಮಾಡಿಸಿಕೊಂಡು ಬಾ" ಅಂತ ನನ್ನ ಮಿತ್ರರು ಹೆದರಿಸಿದರು.

ಏನೇ ಆಗಲಿ ಅವರನ್ನು ಕಂಡು, ನವ್ಯ ಕಾವ್ಯದ ಬಗ್ಗೆ ನನ್ನ ಅಸಮಾಧಾನವನ್ನು ವ್ಯಕ್ತಪಡಿಸಬೇಕೆಂದು ಹೋದೆ. ಬಾಗಿಲಲ್ಲಿದ್ದ ಶಿಬಿರದ ಜವಾನ, ಚೀಟಿ ಕೊಡಿ ಎಂದ. "ನಿಮ್ಮ ಕಾವ್ಯದ ಓದುಗ ನಿಮ್ಮಲ್ಲಿ ಪ್ರಶ್ನೆ ಕೇಳಲು ಬಂದಿದ್ದೇನೆ" ಎಂದು ಚೀಟಿ ಬರೆದು ಕಳಿಸಿದೆ. "ಸಂಜೆ ೬ಕ್ಕೆ ಬನ್ನಿ" ಎಂದು ಉತ್ತರ ಬರೆದು ತರಗತಿಯಿಂದಲೇ ಕಳಿಸಿದರು. ನಾನು ೪ಕ್ಕೆ ಹೋಗಿದ್ದೆ. ಸರಿ, ೬ರವರೆಗೆ ಕಾದಿದ್ದು ಅಲ್ಲಿಗೆ ಮತ್ತೆ ಹೋದೆ. ಅಲ್ಲಿ ಕೊಠಡಿಯೊಂದರಲ್ಲಿ ಕುಳಿತಿದ್ದರು. ಫೋಟೋ ನೋಡಿದ್ದೆ. ಆದ್ದರಿಂದ ಗುರುತಿಸಲು ಕಷ್ಟವಾಗಲಿಲ್ಲ. ಅಗಲವಾದ ಚೌಕಮುಖ, ಕನ್ನಡಕಧಾರಿ ವಿಶಾಲ ನಯನ, ಸೂಟುಬೂಟುಧಾರಿ ಗೋಕಾಕರು, ನನ್ನ ಕಂಡೊಡನೆ "ಬರ್‍ರಿ ಕೂಡಿ", ಎಂದು ಹೇಳಿ ಚಹಾ ತರಿಸಿಕೊಟ್ಟರು. ಅನಂತರ ಅವರ ಹೆಂಡತಿ, ಮಗಳು ಇದ್ದರು. ಅವರನ್ನು ಕರೆದುಕೊಂಡು ನನ್ನನ್ನು ಜತೆಗೆ ಬರಹೇಳಿ ಕಬ್ಬನ್‌ಪಾರ್ಕ್‌ನತ್ತ ಹೊರಟರು. ತಾಯಿ ಮಗಳು ಮಾತಾಡುತ್ತ ಮುಂದೆ ಹೊರಟರು. ಗೋಕಾಕರು ನನ್ನೊಡನೆ ಆಗ "ಏನು ವಿಚಾರ ಹೇಳಿ, ಏನು ಪ್ರಶ್ನೆ ನಿಮ್ಮದು?" ಎಂದರು. ನಾನು "ನಿಮ್ಮ **ಸಮುದ್ರ ಗೀತಗಳು, ಅಭ್ಯುದಯ, ಹಿಗ್ಗು, ಬಾಳು ದೇಗುಲದಲ್ಲಿ** ಈಚೆಗೆ ಬಂದ **ದ್ಯಾವಾ ಪೃಥ್ವಿ** ಓದಿದ್ದೇನೆ. ನನಗೆ ಹಿಡಿಸಿಲ್ಲ. ಏಕೆಂದರೆ," ಎಂದ ಕೂಡಲೆ 'ಬಹಳ ಸಂತೋಷ. ನಿಮ್ಮಂಥ ಯುವಕರು ಓದಿದ್ದು ನನಗೆ ತುಂಬಾ ಸಂತೋಷ. ಹೇಳಿ ಹೇಳಿ ಏನನ್ನಿಸಿತು' ಎಂದರು.

"ಮೊದಲನೆಯದಾಗಿ ನಿಮ್ಮ ನವ್ಯಕಾವ್ಯ ತುಂಡರಿಸಿದ ಗದ್ಯ ಆಗಿದೆ. ಪ್ರಾಸವಿಲ್ಲ. ಛಂದೋನಿಯಮವಿಲ್ಲ; ಹಾಡಲು ಬಾರದ್ದು. ಹಾಡಲು ಆಗದಿದ್ದಾಗ ಅದನ್ನು ಕವನ ಅಂತ ಯಾರು ಕರೀತಾರೆ? ಇನ್ನು ನೀವು ಬಳಸುವ ದೃಷ್ಟಾಂತ, ಪ್ರತಿಮೆ, ಪ್ರತೀಕ ಅಂತ ಹೇಳೋದೆಲ್ಲ ಯಾರಿಗೆ ಅರ್ಥವಾಗುತ್ತೆ? ಎಲ್ಲಾ ವಿದೇಶದ್ದು, ನಗರ ಜೀವನದ್ದು. ನಮ್ಮದು ಹಳ್ಳಿ ದೇಶ, ಎತ್ತಿನಗಾಡಿಯವನಿಗೆ ಟ್ರಾಲಿ, ವಿಮಾನ, ಬಸ್ಸು, ವಿದೇಶದ ನಗರಗಳ ವರ್ಣನೆ ಹೇಗರ್ಥವಾಗುತ್ತೆ?" ಇತ್ಯಾದಿಯಾಗಿ ಪ್ರಶ್ನೆ ಕೇಳುತ್ತಾ ದೋಷಾರೋಪಣೆ ಮಾಡುತ್ತಾ ಹೋದೆ. ಆಗ ನಾನಿನ್ನೂ ವಿದ್ಯಾರ್ಥಿ ಆಗಿದ್ದೆ, ಕನ್ನಡದ ಹಳಗನ್ನಡ, ನಡುಗನ್ನಡ ಕಾವ್ಯಗಳ ಸುಮಾರು ಪರಿಚಯವಿತ್ತು. ಇಂಗ್ಲಿಷ್ ಕಾವ್ಯದ ಪರಿಚಯವಿರಲಿಲ್ಲ. ಶಾಲಾ ಪಠ್ಯದಲ್ಲಿದ್ದ ಇಂಗ್ಲಿಷ್ ಕವಿತೆಗಳು ನನಗೆ ಹಿಡಿಸಿರಲಿಲ್ಲ. ಕನ್ನಡದ ನವ್ಯಕಾವ್ಯ ಓದಿದ್ದೆ, ಅರ್ಥವಾಗಿರಲಿಲ್ಲ. ಇಂಥ ಹಿನ್ನೆಲೆಯಲ್ಲಿ ಅವರಿಗೆ ಅಪರಿಚಿತ ವಿದ್ಯಾರ್ಥಿಯಾಗಿ ಒರಟಾಗಿ ಪ್ರಶ್ನೆಗಳನ್ನು ಕೇಳಿದೆ. ಗೋಕಾಕರು ಹಸನ್ಮುಖಿಗಳಾಗಿಯೇ ನವ್ಯಕಾವ್ಯ ಎಂದರೇನು, ಇಂಗ್ಲಿಷ್ ಕವಿತೆಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ, ಅವರು ಕನ್ನಡದಲ್ಲಿ ಆ ರೀತಿ ಏಕೆ ಬರೆದುದು ಎಂಬುದನ್ನೆಲ್ಲಾ ವಿವರಿಸುತ್ತಾ, "ಕವಿತೆ ಎಂದರೆ ಹಳಗನ್ನಡ, ಹೊಸಗನ್ನಡ

ಛಂದಸ್ಸಿನ ಕಾವ್ಯವಷ್ಟೇ ಕಾವ್ಯವಲ್ಲ. ಅವೆಲ್ಲವೂ ಶ್ರೇಷ್ಠ ಕಾವ್ಯಗಳೇ. ನಾನೂ ಅವೆಲ್ಲವನ್ನು ಓದಿ ಮೆಚ್ಚಿಕೊಂಡಿದ್ದೇನೆ. ನಾನು ಷಟ್ಪದಿಗಳ ರಚನೆ ಮಾಡಿದ್ದೇನೆ. ಆದರೆ ಕೇವಲ ಪಾಂಡಿತ್ಯ ಪ್ರದರ್ಶನಕ್ಕೆ ಪ್ರತಿಭೆಯಿಲ್ಲದೆ ಶುಷ್ಕ ರೀತಿಯಲ್ಲಿರುವುದೇ ನಿಯಮಕ್ಕೆ ಕಟ್ಟು ಬರೆದ ಕಾವ್ಯಗಳು ಕನ್ನಡದಲ್ಲಿವೆ..." ಎಂದು ಕಿತ್ತಳೆತೊಳೆ ಬಿಡಿಸಿದ ಹಾಗೆ, ಹಲಸಿನ ಹಣ್ಣನ್ನು ಸುಲಿದ ಹಾಗೆ ಪದರ ಪದರವಾಗಿ, ಎಸಳೆಸಳಾಗಿ, ಮುಂದಿಡುವಂತೆ ನವ್ಯಕಾವ್ಯದ ಲಕ್ಷಣ, ಹಿರಿಮೆಗಳನ್ನು ವಿವರಿಸುತ್ತಾ ಹೋದರು. ಕೇಳುತ್ತಾ ಕೇಳುತ್ತಾ ಹೋದಂತೆಲ್ಲಾ ನಮಗಿಂಥಾ ಮೇಷ್ಟ್ರೇ ಸಿಗಲಿಲ್ಲವಲ್ಲಾ ಅನ್ನಿಸಿತು. ಆ ಸಂಜೆ ನಿಜವಾಗಿ ಕಾವ್ಯಾನಂದ ಸಂಜೆ ಆಯಿತು. ಷೆಲ್ಲಿ, ಬ್ರೌನ್, ಷೇಕ್ಸ್‌ಪಿಯರ್, ಕೀಟ್ಸ್ ಪದ್ಯಗಳನ್ನು ಬಾಯಲ್ಲೇ ಉದಾಹರಿಸುತ್ತಾ ವಿವರಿಸಿದ್ದರು ಕನ್ನಡದಲ್ಲಿ. ಆಗ ಅವರು ಹೇಳಿದ ಮಾತೊಂದು ಈಗಲೂ ನೆನಪಿದೆ. "ನೋಡಿ, ಹಳಗನ್ನಡ, ನಡುಗನ್ನಡ ಕಾವ್ಯಗಳು ಹಳೇ ಗಡಿಯಾರಗಳು ಇದ್ದಂತೆ. ಅವೂ ಇಂದು ನಡೆಯುತ್ತಿವೆ. ಅವುಗಳ ತಾಳಿಕೆ ಬಾಳಿಕೆಯ ಗುಣ ಅಂಥಹುದು. ಹಳೇ ಗಡಿಯಾರದಲ್ಲಿ ಗಂಟೆ ಮುಳ್ಳು, ನಿಮಿಷದ ಮುಳ್ಳು ಸೆಕೆಂಡುಗಳ ಮುಳ್ಳು ಎಂದು ೩ ಮುಳ್ಳುಗಳು ಮತ್ತು ಅಂಕಿಗಳು ಇರುತ್ತವೆ. ಯಾವಾಗ ನೋಡಿದರೂ ಸುಲಭವಾಗಿ ಇಷ್ಟು ಗಂಟೆ ಇಷ್ಟು ನಿಮಿಷ ಇಷ್ಟು ಸೆಕೆಂಡ್ ಎಂದು ಹೇಳಬಹುದು. ಆದರೆ ನವ್ಯಕಾವ್ಯ ಆಧುನಿಕ ಕೈಗಡಿಯಾರ ವಾಚ್ ಇದ್ದಹಾಗೆ. ಇದರಲ್ಲಿ ಅಂಕಿಗಳಿರುವುದಿಲ್ಲ ಗಂಟೆಯುಳ್ಳ ನಿಮಿಷದ ಮುಳ್ಳು ಅಷ್ಟೇ ಇರುತ್ತದೆ. ನೋಡಿದ ತಕ್ಷಣ ಟೈಂ ತಿಳಿಯೋಲ್ಲ. ಆ ಮುಳ್ಳುಗಳಿರುವ ಸ್ಥಾನಗಳನ್ನು ತಿಳಿದು ಅದರ ಮೇಲೆ ಗಂಟೆ ನಿಮಿಷಗಳನ್ನು ಊಹಿಸಿಕೊಳ್ಳಬೇಕು. ಸೆಕೆಂಡುಗಳದ್ದು ಅಷ್ಟು ಅವಶ್ಯಕತೆ ಇರುವುದಿಲ್ಲ. ನವ್ಯಕಾವ್ಯದ ಪ್ರತಿಮೆ, ಸಂಕೇತ, ಉಪಮೆಗಳು ಸಾಂಕೇತಿಕ ವರ್ಣನೆಗಳು. ಆಧುನಿಕ ಕೈಗಡಿಯಾರ ಇದ್ದಂತೆ. ಹಳೇ ಗಡಿಯಾರ ನೋಡಿ ಟೈಂ ತಿಳಿಯುವವರಿಗೆ, ಹೊಸ ಕೈಗಡಿಯಾರ ತಕ್ಷಣಕ್ಕೆ ಸುಲಭವಾಗಿ ಅರ್ಥವಾಗೋಲ್ಲ. ಅದಕ್ಕೆ ಸ್ವಲ್ಪ ವಿಸ್ತಾರವಾದ ಅಧ್ಯಯನ ಬೇಕು" ಎಂದರು. ಆ ಸಂಜೆ ಸ್ವಲ್ಪ ಹೊತ್ತಿನ ಮೇಲೆ ಕತ್ತಲಾಗಿ ಕಬ್ಬನ್ ಪಾರ್ಕಿನಲ್ಲಿ ದೀಪಗಳು ಹತ್ತಿಕೊಂಡವು, ನನ್ನ ಹೃದಯದಲ್ಲಿ ಕಾವ್ಯಾಂಧಕಾರದಲ್ಲಿ ಗೋಕಾಕ್ ಜ್ಯೋತಿ ಬೆಳಗಿತ್ತು. ಗೋಕಾಕರ ವ್ಯಕ್ತಿತ್ವವಷ್ಟೆ ಭವ್ಯವಲ್ಲ. ಅವರ ಸಾಧನೆ ಸಹ ಭವ್ಯವಾದದ್ದೇ. ಗೋಕಾಕರು ಇಂಗ್ಲಿಷಿನಲ್ಲಿ ಪಡೆದ ಪ್ರಾವೀಣ್ಯತೆ ಅಪಾರವಾದದ್ದು. ಇದಕ್ಕೆ ಕಾರಣ ಅವರ ಬಾಲ್ಯದಲ್ಲಿಯೇ ಇಂಗ್ಲಿಷ್ ಶಿಕ್ಷಣ ಪರಿಣಾಮಕಾರಿಯಾಗಿ ದೊರೆತದ್ದು. ಗೋಕಾಕರ ತಾತ ಇಂಗ್ಲಿಷ್ ಬಲ್ಲ ಮೇಷ್ಟ್ರಾಗಿದ್ದು ಆ ಕಾಲದಲ್ಲಿ ಪ್ರಾಥಮಿಕ ಶಾಲಾ ಹಂತದಲ್ಲಿಯೇ ಇಂಗ್ಲಿಷ್ ಪರಿಚಯ ಅವರಿಗಾಯಿತು. ಶಾಲೆಯಲ್ಲಿ ಸಿಕ್ಕ ಶಿಕ್ಷಣದ ಜತೆಗೆ ಮನೆಯಲ್ಲೂ ಇಂಗ್ಲಿಷ್ ಕಲಿಕೆಗೆ ಪ್ರೋತ್ಸಾಹವಿತ್ತು. ಒಂದು ಓದಿದ ಪ್ರಸಂಗ ನೆನಪಾಗುತ್ತೆ ಈ ಸಂದರ್ಭದಲ್ಲಿ.

ಗೋಕಾಕರು ಸವಣೂರಿನಲ್ಲಿ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಅಲ್ಲಿ ಅವರಜ್ಜ ಪಾಂಡುರಂಗ ಜೋಶಿ ಅವರೇ ಅಧ್ಯಾಪಕರಾಗಿದ್ದರು. ಆಗ ಗೋಕಾಕರು ಅವರಜ್ಜನ ಶಾಲೆಯಲ್ಲಿಯೇ ೩ನೇ ತರಗತಿಯಲ್ಲಿ ಓದುತ್ತಿದ್ದಾಗ, ಒಂದು ದಿನ, ಶಾಲಾ ಸಹಪಾಠಿಗಳೆಲ್ಲ ಹಲಗೆ ಬಾರಿಸುತ್ತಿದ್ದರು. ಗೋಕಾಕರು ಅದನ್ನು ಕಂಡು ತಾತನ ಬಳಿ ಬಂದು "ನನಗೂ ಒಂದು ಹಲಗೆ ಕೊಡಿಸು ನಾನೂ ಬಾರಿಸಬೇಕು" ಎಂದು ಹಠ ಹಿಡಿದರು. ಆಗ ತಾತ, "ಎಲ್ಲ ಹುಡುಗರೂ ಹಲಗೆ ಬಾರಿಸುತ್ತಾರೆ. ನಿಜ, ಆದರೆ ಎಲ್ಲ ಹುಡುಗರೂ ಪುಸ್ತಕ ಓದುವುದಿಲ್ಲ. ನೀನು ಓದುವ ಹುಡುಗ. ನಿನಗೆ ಹಲಗೆ ಬೇಡ, ಪುಸ್ತಕ ಕೊಡಿಸ್ತೇನೆ" ಎಂದು ಹೇಳಿ ಪುಸ್ತಕದ ಅಂಗಡಿಗೆ ಕರೆದುಕೊಂಡು ಹೋಗಿ ಆರೆಂಟು ಇಂಗ್ಲಿಷ್ ಪುಸ್ತಕಗಳನ್ನು ಕೊಡಿಸಿದರು. ಈ ರೀತಿಯ ಪ್ರೋತ್ಸಾಹದಿಂದ ಬಾಲ್ಯದಲ್ಲಿಯೇ ಇಂಗ್ಲಿಷ್ ಆಸಕ್ತಿ ಗೋಕಾಕರಿಗೆ ಹೆಚ್ಚಿತು. ಪರಿಣಾಮವಾಗಿ ಐದನೇ ತರಗತಿಯಲ್ಲಿರುವ ವೇಳೆಗೇ ಇಂಗ್ಲಿಷಿನಲ್ಲಿ ನೂರಾರು ಸಾಲು ಕವಿತೆ ರಚಿಸಿದರು. ೭ನೇ ಕ್ಲಾಸಿನಲ್ಲಿ ಇರುವಾಗಲೇ ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ಥ್ ಮೊದಲಾದವರ ಕೃತಿಗಳನ್ನು ಓದಿ ಪಾಠ ಹೇಳುವಷ್ಟರ ಮಟ್ಟಿಗೆ ಪರಿಣಿತಿ ಪಡೆದಿದ್ದರು. ಇವರ ಇಂಗ್ಲಿಷ್ ಪರಿಣಿತಿಗೆ ಕಾರಣರಾದವರಲ್ಲಿ ಇಂಗ್ಲಿಷ್ ಛಂದಸ್ಸನ್ನು ಕಲಿಸಿದ ತಂತ್ರಿ ಎಂಬ ಶಿಕ್ಷಕರು, ಸಾಹಿತ್ಯ ಬೋಧಿಸಿದ ಯಶವಂತರಾವ್ ಜೋಷಿ ಮುಖ್ಯರು.

ಇವರ ಮೊದಲ ಇಂಗ್ಲಿಷ್ ಕವಿತೆ ಪ್ರಕಟವಾದ ಹಿನ್ನೆಲೆ ಕುತೂಹಲಕಾರಿಯಾದುದು. ಇವರು ಓದುತ್ತಿದ್ದಾಗ ಇವರ ಸಹಪಾಠಿ ಒಬ್ಬ "ಸುದಾಮಚರಿತಂ" ಎಂಬ ಸಂಸ್ಕೃತ ಗ್ರಂಥವನ್ನು ಪ್ರಕಟಿಸಿದನು. ಇದನ್ನು ಕಂಡು ತಾನೂ ಪ್ರಕಟಿಸಬೇಕು ಎಂದು ಇಂಗ್ಲಿಷ್ ಅಧ್ಯಾಪಕರಾದ ಪಾಂಡುರಂಗ ಜೋಷಿಯವರ ಬಳಿ ಬಂದು ತಮ್ಮ ಆಸೆಯನ್ನು ತಿಳಿಸಿದರು. ಆಗ ತಾತ "ಚೆನ್ನಾಗಿ ಬರೆಯುವುದನ್ನು ಮೊದಲು ಕಲಿ, ಬರೆಯಲು ಬಂದರೆ ಅಷ್ಟೇ ಸಾಲದು. ಬರೆದುದನ್ನು ಪುಸ್ತಕ ಮಾಡುವ ಮುಂಚೆ, ಪತ್ರಿಕೆಗಳಿಗೆ ಕಳಿಸು, ಪ್ರತಿಕ್ರಿಯೆ ನೋಡು. ಆಮೇಲೆ ಪುಸ್ತಕವಾಗಿ ಪ್ರಕಟಿಸುವ ಯೋಚನೆ ಮಾಡು" ಎಂದರು. ತಾತ ಹೇಳಿದಂತೆ ಡಾ.ಹರ್ಡೀಕರ್ ಅವರು ಆಗ ಪ್ರಕಟಿಸುತ್ತಿದ್ದ **ವಾಲಂಟಿಯರ್ ಪತ್ರಿಕೆ**ಗೆ ಇಂಗ್ಲಿಷ್ ಕವಿತೆ ಕಳಿಸಿದರು. ಅವರ ಮೊದಲ ಇಂಗ್ಲಿಷ್ ಕವಿತೆ ಪ್ರಕಟವಾಯಿತು. ಇದಾದ ಮೇಲೆ ಇಂಗ್ಲಿಷಿನಲ್ಲಿ ಕವಿತೆ, ಲೇಖನ, ಪುಸ್ತಕಗಳನ್ನು ಒಂದೇ ಸಮನೆ ಬರೆದಿದ್ದಾರೆ. ೪ ಪದ್ಯ ಸಂಕಲನ, ೧ ಕಾದಂಬರಿ, ೧ ಜೀವನಚರಿತ್ರೆ, ೯ ವಿಮರ್ಶೆ, ೬ ಗದ್ಯಕೃತಿ, ೫ ಸಂಪಾದಿತ ಕೃತಿ ಹೀಗೆ ಒಟ್ಟು ೨೬ ಕೃತಿಗಳನ್ನು ಇಂಗ್ಲಿಷಿನಲ್ಲಿ ರಚಿಸಿದ್ದಾರೆ. ಆ ಪೈಕಿ ದಿ ಸಾಂಗ್ ಆಫ್ ಲೈಫ್ ಅಂಡ್ ಅದರ್ ಪೊಯಮ್ಸ್ (೧೯೪೭) ಕಲೆಕ್ಟೆಡ್ ಅಂಡ್ ರಿ ಕಲೆಕ್ಟೆಡ್ ಪೊಯಮ್ಸ್

(೧೯೬೨) ಎಂಬ ಕವನ ಸಂಕಲನಗಳು. ನರಹರಿ ಪ್ರಾಫೆಟ್ ಆಫ್ ಇಂಡಿಯಾ ಕಾದಂಬರಿ, ಬೇಂದ್ರೆ ಪೊಯಟ್ ಅಂಡ್ ಸೀರ್, ಎಸ್ಸೇಸ್ ಆನ್ ಇಂಡೋ ಆಂಗ್ಲಿಕಾನ್ ಲಿಟರೇಚರ್, ಡಿ ಯೂನಿಟಿ ಆಫ್ ವರ್ಲ್ಡ್ ಲಿಟರೇಚರ್ ಅಂಡ್ ಇಂಡಿಯನ್ ಲಿಟರೇಚರ್, ದಿ ಕಾನ್ಸೆಪ್ಟ್ ಆಫ್ ಇಂಡಿಯನ್ ಲಿಟರೇಚರ್ ಮೊದಲಾದ ಗ್ರಂಥಗಳು ಪ್ರಸಿದ್ಧವಾಗಿವೆ.

ಇಂಗ್ಲಿಷಿನಲ್ಲಿ ಇವರ ಆಸಕ್ತಿ ಕಾಲೇಜು ವಿದ್ಯಾಭ್ಯಾಸದ ಕಾಲದಲ್ಲೂ ಎಷ್ಟಿತ್ತು ಎಂದರೆ ಇವರ ಸಹಪಾಠಿಗಳಾದ ಸಾಸನೂರು ಮತ್ತು ತುಕೋಳ್ ಅವರು ಕನ್ನಡವನ್ನು ಬಿ.ಎ.ನಲ್ಲಿ ಪ್ರಥಮ ಭಾಷೆಯನ್ನು ತೆಗೆದುಕೊಂಡರೆ ಇವರು ಇಂಗ್ಲಿಷನ್ನು ಪ್ರಥಮ ಭಾಷೆಯನ್ನಾಗಿ ತೆಗೆದುಕೊಂಡರು. ಪ್ರಥಮ ದರ್ಜೆಯಲ್ಲಿ ಪಾಸಾದರು.

ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇರಿದಾಗ ಇವರನ್ನು ಇಂಗ್ಲಿಷ್ ಉನ್ನತ ವಿದ್ಯಾಭ್ಯಾಸಕ್ಕೆ ಡೆಕ್ಕನ್ ಎಜುಕೇಷನ್ ಸೊಸೈಟಿ ಆಕ್ಸ್‌ಫರ್ಡಿಗೆ ಕಳಿಸಿದರು. ಆಕ್ಸ್‌ಫರ್ಡಿಗೆ ಹೊರಟಾಗ ಇವರ ಮಿತ್ರರು ಇವರನ್ನು "ಆಕ್ಸ್‌ಫರ್ಡಿನಲ್ಲಿ ವಿದೇಶದಿಂದ ಬಂದು ಓದಿದವರು ಯಾರೂ ಇದುವರೆಗೆ ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿಲ್ಲ" ಎಂದು ಹೆದರಿಸಿದರು. ಆಗ ಗೋಕಾಕ್ "ಇರಬಹುದು, ಯಾರೂ ಹೊರಗಿನಿಂದ ಬಂದವರು ಇದುವರೆಗೆ ಪ್ರಥಮದರ್ಜೆ ಪಡೆದಿಲ್ಲ ಅಲ್ಲಿ ಎಂದ ಮಾತ್ರಕ್ಕೆ ನನಗೆ ಪ್ರಥಮದರ್ಜೆ ಬರಬಾರದು ಎಂದರ್ಥವೇ?" ಎಂದು ಪ್ರಶ್ನಿಸಿದರು. "ನಾನು ಪ್ರಥಮದರ್ಜೆಯಲ್ಲಿ ಪಾಸಾಗುವೆ" ಎಂದು ತಿಳಿಸಿದರು. ಅಂತೆಯೇ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಆ ಕಾಲದಲ್ಲಿ ಆಕ್ಸ್‌ಫರ್ಡ್‌ನಲ್ಲಿ ಪ್ರಥಮದರ್ಜೆ ಎಂ.ಎ. ಮಾಡಿದ್ದು ಎಷ್ಟು ಮಹತ್ವದ ಸಂಗತಿ ಆಗಿತ್ತು ಎಂದರೆ, ಗೋಕಾಕರು ಪ್ರಥಮದರ್ಜೆಯಲ್ಲಿ ಪಾಸಾಗಿದ್ದನ್ನು ತಿಳಿದಕೂಡಲೇ ಆ ಸಂತೋಷಕ್ಕೆ ಫರ್ಗ್ಯುಸನ್ ಕಾಲೇಜಿಗೆ ಆ ದಿನ ರಜೆ ಘೋಷಿಸಿದರು. ಆಕ್ಸ್‌ಫರ್ಡಿನಲ್ಲಿ ಇಂಗ್ಲಿಷ್ ಅಖಾಡದಲ್ಲಿ ಜಯಭೇರಿ ಬಾರಿಸಿದ ಮೊದಲ ಕನ್ನಡಿಗ ಗೋಕಾಕರು.

ಗೋಕಾಕರ ಇಂಗ್ಲಿಷ್ ಪಾಂಡಿತ್ಯ ಅಭಿಮಾನ ಎಷ್ಟು ದೊಡ್ಡದೋ ಅದಕ್ಕಿಂತ ದೊಡ್ಡದು ಕನ್ನಡಾಭಿಮಾನ, ಕನ್ನಡ ಅಧ್ಯಯನ. ಮೊದಲಿನಿಂದಲೂ ಕನ್ನಡ ಮನೆತನದಲ್ಲಿ ಕನ್ನಡ ವಾತಾವರಣದಲ್ಲಿ ಬೆಳೆದ ಗೋಕಾಕರು, ಮರಾಠಿ, ಗುಜರಾತಿ ಉರ್ದು ಪರಿಸರಗಳಲ್ಲೂ ಕನ್ನಡತನ ಉಳಿಸಿಕೊಂಡು ಬಂದವರು. ಅವರ ಕಲಾಭಿಮಾನ ಸಹಜವಾದದ್ದು. ಅವರು ಬೆಟ್ಟದೂರಿನ ಶಾರದಾಬಾಯಿ ಅವರನ್ನು ಮದುವೆ ಆದ ಸಂದರ್ಭವೊಂದು ನೆನಪಾಗುತ್ತದೆ.

ಮದುವೆಯ ಸಂದರ್ಭದಲ್ಲಿ ಮದುವೆಯ ಸಮಾರಂಭದಲ್ಲಿ ಬೇರೆ ಬೇರೆ ಕಡೆ ಬೇರೆ ಬೇರೆ ಪ್ರಾದೇಶಿಕ ಸಂಪ್ರದಾಯಗಳು ಇರುವುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಉತ್ತರ ಕರ್ನಾಟಕದಲ್ಲಿ ಮದುವೆಯಲ್ಲಿ ಒಗಟಿನ ಮೂಲಕ ಗಂಡ ಹೆಂಡತಿಯರಿಂದ ಹೆಸರು ಹೇಳಿಸುವ ಪದ್ಧತಿಯಿದೆ. ಮರಾಠಿ ಪ್ರಭಾವವಿದ್ದ ಆ ಕಾಲದಲ್ಲಿ ಧಾರವಾಡದಲ್ಲಿ ಮದುವೆ ನಡೆದಾಗ, ಶಾರದಾ ಅವರು ಗೋಕಾಕರಿಗೆ ಮರಾಠಿಯಲ್ಲಿ ಒಗಟು ಹಾಕಿದರು. ಅದನ್ನು ಕೇಳಿ ಗೋಕಾಕರು ಕನ್ನಡದಲ್ಲಿ ಒಗಟಿಗೆ ಉತ್ತರಿಸಿದ್ದು ಹೀಗೆ:

ಕ್ವಾಟಿ ಕ್ವಾಟಿ ಯಾವ ಕ್ವಾಟಿ? ಬಾಗಿಲಕ್ವಾಟಿ
ಇನ್ನೊಮ್ಮೆ ಹೇಳಿದೆ ಅಂದ್ರೆ ಒಗಟು ಮರಾಠಿ
ನಾ ಹಿಂಡಿತೀನಿ ನಿನ್ನ ಸ್ವಾಟಿ.

ಸಂಸ್ಕೃತದ ವಿಚಾರದಲ್ಲೂ ಅವರ ನಿಲುವು ಹೀಗಿತ್ತು. "ಸಂಸ್ಕೃತವನ್ನು ಸಂಸ್ಕೃತ ಭಾಷೆ ಅಂತ ಕಲಿಯೋಣ. ಆದರೆ ಅದೆಂದೂ ಕನ್ನಡದ ಸ್ಥಾನವನ್ನು ತೆಗೆದುಕೊಳ್ಳಬಾರದು. ಕರ್ನಾಟಕದಲ್ಲಿ ಕನ್ನಡವೇ ಪ್ರಥಮ ಭಾಷೆ ಆಗಿರಬೇಕು." ನಾಡಿನಲ್ಲೆಲ್ಲಾ ಅವರ ಹೆಸರನ್ನು ಪರಿಚಿತಗೊಳಿಸಿದ ಗೋಕಾಕ್ ವರದಿಯ ಬಗ್ಗೆ ಗೋಕಾಕ್ ಚಳವಳಿ ನಡೆದಿದ್ದು ಎಲ್ಲರಿಗೂ ತಿಳಿದ ಸಂಗತಿ. ಸಾರ್ವಜನಿಕ ದೃಷ್ಟಿ, ವೈಯಕ್ತಿಕ ದೃಷ್ಟಿ ಅನೇಕ ವೇಳೆ ತೀರಾ ಭಿನ್ನವಾಗಿರುವುದು. ಅದೇನೇ ಇರಲಿ, ಗೋಕಾಕರ ಕನ್ನಡಾಭಿಮಾನ ಯಾವ ಕನ್ನಡಿಗನಿಗೂ ಕಮ್ಮಿ ಆದುದಲ್ಲ, ಅಷ್ಟೇ ಅಲ್ಲ, ಎಷ್ಟೋ ಕನ್ನಡಿಗರಿಗೆ ಆದರ್ಶಪ್ರಾಯವಾದದ್ದು. ಗೋಕಾಕರು ಹುಟ್ಟಿದ್ದು ಸವಣೂರಿನಲ್ಲಿ, ಓದಿದ್ದು ಧಾರವಾಡದಲ್ಲಿ ಆದರೂ ಕೆಲಸ ಮಾಡಿದ್ದು ಸಾಂಗಲಿ, ಹೈದ್ರಾಬಾದ್, ಬಡೋದೆ ಮೊದಲಾದ ಸಂಸ್ಥಾನಗಳಲ್ಲಿ. ಗುಜರಾತಿ, ಮರಾಠಿ, ಉರ್ದು, ತೆಲುಗು ಮೊದಲಾದ ಕನ್ನಡೇತರ ಭಾಷಾ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದರು. ಹೀಗಾಗಿ ಅವರ ಮಕ್ಕಳಲ್ಲಿ ಮಗಳು ಯಶೋದಾಭಟ್‌ಗೆ ಮರಾಠಿಯಲ್ಲಿ ಶಿಕ್ಷಣ ದೊರತರೆ ಇನ್ನೊಬ್ಬ ಮಗ, ಮಗಳಿಗೆ ಗುಜರಾತಿಯಲ್ಲಿ ಶಿಕ್ಷಣ ದೊರಕಿತು, ಅಂಥ ಸನ್ನಿವೇಶದಲ್ಲಿ ಗೋಕಾಕರು ಅವರಿಗೆ ಕನ್ನಡ ಕಲಿಸಲು ಶತಪ್ರಯತ್ನ ಮಾಡಿ ಯಶಸ್ವಿಗಳಾದರು. ಮನೆಗೆದ್ದು ಮಾರುಗೆಲ್ಲು ಎಂಬಂತೆ ಮನೆಯಲ್ಲಿ ಕನ್ನಡ ಉಳಿಸಿ ಬೆಳೆಸಿ ಆನಂತರ ಜನಮನದಲ್ಲೂ ಕನ್ನಡ ನೆಲೆಯೂರಲು ಸಾಹಿತ್ಯ ರಚಿಸಿದರು. ಭಾಷಣ ಮಾಡಿದರು. ಆಡಳಿತದಲ್ಲಿ ಕನ್ನಡ ಬೆಳೆಸಿದರು. ತಾವು ಹೋದೆಡೆಗಳೆಲ್ಲಾ ಅನ್ಯಭಾಷಾ ಪ್ರದೇಶಗಳಲ್ಲಿ ಕನ್ನಡಕೂಟಗಳನ್ನು ಕಟ್ಟಿದರು. ಇಂದು ಪ್ರಸಿದ್ಧ ಸಾಹಿತಿಗಳಾದ ಅನೇಕರನ್ನು ಅಂದು ಪ್ರೋತ್ಸಾಹಿಸಿದರು, ಸಾಂಗ್ಲಿಯಲ್ಲಿದ್ದಾಗ "ವರುಣಕುಂಜ" ಎಂಬ ಸಂಘವನ್ನು, ಹೈದ್ರಾಬಾದಿನಲ್ಲಿದ್ದಾಗ ಜಿಜ್ಞಾಸುಗಳ

ಕೂಟವನ್ನು, ಕರ್ನಾಟಕ ಕಾಲೇಜಿನಲ್ಲಿ ಕಪಾಲ ಮಂಡಲವೆಂಬ ಬಳಗವನ್ನು, ಹೊತ್ತಿಗೆಯ ಬಳಗವೆಂಬ ಸಾಹಿತಿಗಳ ಗುಂಪನ್ನು ಪ್ರಾರಂಭಿಸಿದರು. ಸು.ರಂ.ಎಕ್ಕುಂಡಿ, ವಿಠೋಬ, ಗಂಗಾಧರ ಚಿತ್ತಾಲ, ಗಿರೀಶ್ ಕಾರ್ನಾಡ್, ಚಂಪಾ, ಆರ್.ಜಿ.ಕುಲಕರ್ಣಿ, ರಾಜಪುರೋಹಿತ ಮೊದಲಾದ ಪ್ರತಿಭಾನ್ವಿತರು ಬೆಳಕಿಗೆ ಬಂದಿದ್ದು ಗೋಕಾಕರು ಕಟ್ಟಿದ ಈ ಸಂಘ ಕೂಟಗಳಿಂದ ಎಂಬುದನ್ನು ನಾವು ಮರೆಯಬಾರದು. ಅನ್ಯಭಾಷಾ ಶಿಕ್ಷಣ ಹೊಂದಿದ ತಮ್ಮ ಮಕ್ಕಳಿಗೆ ಮನೆಯಲ್ಲಿ ತಾವೇ ಕನ್ನಡ ಅಕ್ಷರಗಳನ್ನು ಕಲಿಸಿದರು. ತಮ್ಮ ಕವನಗಳನ್ನು, ಇತರ ಬರಹಗಳನ್ನು ಓದಿ ಅಭಿರುಚಿ ಹುಟ್ಟಿಸಿದರು, ಕನ್ನಡದ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋದರು. ಮನೆಗೆ ಬಂದ ಕನ್ನಡ ಮಿತ್ರರ ಜತೆ ಮಾತುಕತೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಕನ್ನಡ ಗ್ರಂಥಗಳನ್ನು ಕೊಡಿಸಿ ಓದಿಸಿದರು. ಹೀಗೆ ಮನೆಯಲ್ಲಿ ಮಕ್ಕಳಲ್ಲಿ ಗೋಕಾಕರು ಕನ್ನಡ ಉಳಿಸಿ ಬೆಳೆಸಿದರು.

ಗೋಕಾಕರ ಪೂರ್ಣ ಹೆಸರು ವಿನಾಯಕ ಕೃಷ್ಣ ಗೋಕಾಕ್, ಕಾವ್ಯನಾಮ "ವಿನಾಯಕ" ಆದರೂ ಅವರು ಗೊರೂರು, ಮಾಸ್ತಿ ಅವರಂತೆ ಗೋಕಾಕರಂದೇ ಪ್ರಸಿದ್ಧರಾಗಿದ್ದಾರೆ. ಅವರು ತಮ್ಮ **ಭಾರತ ಸಿಂಧುರಶ್ಮಿ**ಯಲ್ಲಿ ತಮ್ಮ ಹೆಸರಿನ ಬಗ್ಗೆ ನೀಡಿರುವ ವಿವರಣೆ ಚೇತೋಹಾರಿ.

ತಾನು ತಿಳಿದಂತೆ ತಾನಿಹೆನು ಎಂಬ ಗೋಕಾಕು
ಉಳಿದವರು ಕಂಡಂತೆ ತಾನಿಹೆನೆಂಬ ಗೋಕಾಕು
ಒಳಗೊಳಗೆ ತಾನೇ ತಾನಾಗಿರುವ ಗೋಕಾಕು
ತಾನೇ ತಾನಾದ ಗೋಕಾಕು ಉಳಿದಿಬ್ಬರನು–
ಜೀರ್ಣಿಸುವೊಲು ಹರಸು, ವೈರಾಗ್ಯ ಸುಂದರನೆ
ಅಂದಾಗುವುದು ನನ್ನ ಬಾಳ್ವೆಯೇ ಮಹಾಕಾವ್ಯ

ಎಂದು ತಮ್ಮ ವ್ಯಕ್ತಿತ್ವದ ಮೂರು ಮುಖಗಳನ್ನು ಕಾಣಿಸುತ್ತಾರೆ. ಇದರಲ್ಲಿ ಸಮರಸ ಸಮನ್ವಯ ಸಂಕೀರ್ಣಗಳ ತ್ರಿಮುಖವಿದೆ. ವಿದ್ಯಾರ್ಥಿದೆಸೆಯಲ್ಲಿಯೇ ಅವರಿಗೆ ಗೋಕಾಕ್ ಪದ ಆಕರ್ಷಕವೆನಿಸಿತ್ತು. ಒಮ್ಮೆ ಅವರು ತಮ್ಮ ನೋಟುಬುಕ್ಕಿನಲ್ಲಿ ಹೀಗೆ ಬರೆದಿಟ್ಟಿದ್ದರು.

It belongs to V.K. Gokak
Whoever takes it give it Back

ಗೋಕಾಕರ ಸಹಪಾಠಿಗಳು ಗೋಕಾಕರು ಎಂದರೆ ಗೋಕು ಹಾಕುವರು. (ಬಾಯಿಪಾಠ ಮಾಡುವರು; ಉರು ಹಾಕುವರು) ಎಂಬರ್ಥದಲ್ಲಿ ಗೋಕಾಕರು ಎನ್ನುತ್ತಿದ್ದರು.

ಗೋಕಾಕರು ಸಹೃದಯ ಸ್ಪಂದನದ ವ್ಯಕ್ತಿ ಆಗಿದ್ದರು. ಸಹೃದಯ ಎಂದರೆ ಅಂತರಂಗದಲ್ಲಿ ಸಮಾನ ಹೃದಯವಂತಿಕೆ ಇರುವ ವ್ಯಕ್ತಿ. ಹಾಗೆ ಸಮಾನಭಾವದ ವ್ಯಕ್ತಿಗಳಲ್ಲಿ ಸಮರಸ, ಸ್ನೇಹವಿರುತ್ತದೆ. ಮುಗಳಿ–ಗೋಕಾಕರ ಸ್ನೇಹ ಸಹೃದಯರ ಸ್ನೇಹ. ಇಬ್ಬರ ಅಂತರಂಗ ಸಮಾನವಾಗಿ ಪ್ರತಿಕ್ರಿಯಿಸುತ್ತಿತ್ತು. ಇದಕ್ಕೆ ಬೇಂದ್ರೆ ಕಾರಣ. ಮುಗಳಿ ಈ ಬಗ್ಗೆ ಹೀಗೆ ಹೇಳಿದ್ದಾರೆ: ಅಂಬಿಕಾತನಯರೆಂಬ ಲೋಹ ಚುಂಬಕದ ಸೆಳೆತಕ್ಕೆ ಒಳಗಾದ ಎರಡು ಲೋಹದ ತುಂಡುಗಳು ಹತ್ತಿರ ಬಂದು ಅನ್ಯೋನ್ಯವಾಗಿ ಲೋಹಚುಂಬಕವಾದವು. ಈ ನಮ್ಮ ಗೆಳೆತನದ ಕಥೆ ರೋಮಾಂಚನೀಯವಾಗಿದೆ. ಅನಿರ್ವಚನೀಯವೂ ಆಗಿದೆ.

ಇದಕ್ಕೊಂದು ನಿದರ್ಶನವನ್ನು ಮುಗಳಿ ನೀಡಿದ್ದಾರೆ:

ಒಂದು ರಾತ್ರಿ ಸೊಗಸಾದ ಬೆಳದಿಂಗಳಲ್ಲಿ ಗೋಕಾಕರೊಡನೆ ಮುಗಳಿ ಗಾಳಿಸಂಚಾರ ಹೊರಟಿದ್ದರು. ಇಬ್ಬರಿಗೂ ಸಂಜೆ ಗಾಳಿಸಂಚಾರ ಹೊರಡುವುದು ಬಲು ಇಷ್ಟದ ಅಭ್ಯಾಸ. ಒಂದು ಉದ್ಯಾನದಲ್ಲಿ ಕುಳಿತಿದ್ದರು. ತಂಗಾಳಿ ಬೀಸಿತು. ಕೂಡಲೇ ಇಬ್ಬರಲ್ಲೂ ಕಾವ್ಯದ ಕಂಪು ಹೊರಬರಲು ಪ್ರಾರಂಭವಾಯಿತು. ಎಷ್ಟಾದರೂ ಇಬ್ಬರೂ ಕವಿಗಳೇ ಆದವರು. ಆ ತಂಗಾಳಿ ಸ್ಪರ್ಶದಿಂದ ಮುಗಳಿ ಅವರು

ಮೆಲ್ಲನೆ ಸುಳಿಯುವ ತಣ್ಣನೆ ಗಾಳಿ, ಎಂದು ರಾಗ ಎಳೆದರು
ಕೂಡಲೆ ಗೋಕಾಕ್, ಎಲ್ಲೆಡೆ ಇದ್ದರೂ ರೂಪವ ತಾಳಿ ಎಂದರು
ಕೂಡಲೆ ಮುಗಳಿ ಒಮ್ಮೆಯೇ ಬರುವುದು ಸೊಗವನು ತೋರಿ
ಎಂದೊಡನೆ ಎಲ್ಲಿಗೋ ಕರೆವುದು ಬಳಿಯಲಿ ಸಾರಿ ಎಂದರು ಗೋಕಾಕ್.

ಹೀಗೆ ಜತೆಜತೆಯಾಗಿ ಸಂಯುಕ್ತ ಕವಿತೆ ರಚಿತವಾಯಿತು. ಆಮೇಲೆ ಅದು ಸಂಯುಕ್ತ ಕಾವ್ಯನಾಮದಲ್ಲಿ ರಂಗ–ವಿನಾಯಕ ಹೆಸರಿನಲ್ಲಿ ಪ್ರಕಟವಾಯಿತು. "ರಸಿಕರಂಗ" ಮುಗಳಿ ಅವರ ಕಾವ್ಯನಾಮ. "ವಿನಾಯಕ" ಗೋಕಾಕರ ಕಾವ್ಯನಾಮ. ಇದರಂತೆ ಗಿರಿಮಲ್ಲ ಬೀರಿ ಎಂಬ ಸಂವಾದಗೀತೆಯನ್ನು ಫಿಲಿಡಾಸ್ ತಾವ್‌ಕಾಲ್ ಎಂಬ ಇಂಗ್ಲಿಷ್ ಗೀತೆಯ ರೂಪಾಂತರವನ್ನು ಇಬ್ಬರೂ ಕೂಡಿ ರಚಿಸಿದರು. ಈ ಇಂಗ್ಲಿಷ್ ಕನ್ನಡ ಗೀತೆಗಳೊಂದನ್ನು ಇಬ್ಬರೂ ಜಂಟಿಯಾಗಿ ಸಭೆಗಳಲ್ಲಿ ಬೇರೆ ಬೇರೆ ಧಾಟಿಗಳಲ್ಲಿ ಹಾಡಿ ತೋರಿಸಿದ್ದಾರೆ. ಇಬ್ಬರೂ ಅರವಿಂದ ಭಕ್ತರಾಗಿದ್ದು, ಇಬ್ಬರೂ ಒಬ್ಬರ ಮೇಲೆ ಒಬ್ಬರೂ ಕವಿತೆ ಬರೆದಿದ್ದಾರೆ. ಕವಿಗೆ ಕವಿ ಮುನಿವಂ ಎಂಬ ಮಾತನ್ನು ಸುಳ್ಳು ಮಾಡಿ ಕವಿಗೆ ಕವಿ ಮಣಿವಂ ತಣಿವಂ ಕುಣಿವಂ ನಲಿವಂ ಎಂದು ಗೋಕಾಕ್–ಮುಗಳಿ ಬಾಳಿದ್ದಾರೆ. ಇಂಥ ಭಲೇಜೋಡಿ ಕವಿಗಳು ಇಂದು ಎಲ್ಲಿದ್ದಾರೆ?

ಗೋಕಾಕರು ಭಾವುಕ ವ್ಯಕ್ತಿ ಆಗಿದ್ದರು. ಕರ್ನಾಟಕ ಕಾಲೇಜು ಅವರ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದೆ. ಅಲ್ಲೇ ವಿದ್ಯಾರ್ಥಿಯಾಗಿ ಓದಿದವರು ಅಲ್ಲಿಗೇ ಬಂದು ಪ್ರಿನ್ಸಿಪಾಲರಾದರು.

ಕರ್ನಾಟಕ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಬಂದವರು ಪ್ರಿನ್ಸಿಪಾಲರ ಕೊಠಡಿಗೆ ಬಂದಾಗ ರೋಮಾಂಚನವಾಯಿತು. ಏಕೆಂದರೆ ಅಲ್ಲಿಯೇ ಪ್ರಿನ್ಸಿಪಾಲರ ಕೊಠಡಿಯಲ್ಲಿಯೇ ಬಿ.ಎ. ಆನರ್ಸ್ ತರಗತಿ ನಡೆಯುತ್ತಿತ್ತು. ಅಲ್ಲಿ ತಾವು ವಿದ್ಯಾರ್ಥಿಯಾಗಿ ಕುಳಿತಿರುತ್ತಿದ್ದ ಕುರ್ಚಿಯನ್ನು ಕಂಡು ಕೆಲವು ನಿಮಿಷ ಭಾವುಕರಾಗಿ ಮೈಮರೆತರು. ಅಂದು ಆ ಕುರ್ಚಿಯಲ್ಲಿ ವಿದ್ಯಾರ್ಥಿ, ಇಂದು ಈ ಕುರ್ಚಿಯಲ್ಲಿ ಪ್ರಿನ್ಸಿಪಾಲ್! ಎಷ್ಟರಮಟ್ಟಿಗೆ ಕರ್ನಾಟಕ ಕಾಲೇಜಿನ ವಿದ್ಯಾರ್ಥಿಜೀವನದ ಅನುಭವ ಗೋಕಾಕರಲ್ಲಿ ದಟ್ಟವಾಗಿತ್ತು ಎಂದರೆ ಅವರು ವಿದ್ಯಾರ್ಥಿಯಾಗಿ ಓದುತ್ತಿದ್ದ ಕಾಲದಲ್ಲಿ ಪ್ರಿನ್ಸಿಪಾಲರ ಕೊಠಡಿಯ ಬಳಿ "ತಿಪ್ಪ" ಎಂಬ ಜವಾನ ಇರುತ್ತಿದ್ದ. ಅವನ ಅಪ್ಪಣೆಯನ್ನು ಪಡೆದೇ ಪ್ರಿನ್ಸಿಪಾಲರ ಕೊಠಡಿಯ ಒಳಗೆ ಪ್ರವೇಶಿಸಬೇಕಾಗಿತ್ತು. ಆತ ಗೋಕಾಕರು ಪ್ರಿನ್ಸಿಪಾಲರಾಗಿ ಕರ್ನಾಟಕ ಕಾಲೇಜಿಗೆ ಬಂದಾಗಲೂ ಪ್ರಿನ್ಸಿಪಾಲರ ಕೊಠಡಿಯ ಜವಾನನ ಹುದ್ದೆಯಲ್ಲಿ ಇದ್ದು ಬಾಗಿಲು ಕಾಯುತ್ತಿದ್ದನು. ಪ್ರಿನ್ಸಿಪಾಲರಾದ ಮೇಲೆ ಗೋಕಾಕರು ಹೊರಗಡೆ ಹೋದರು. ತಮ್ಮ ಕೊಠಡಿಗೆ ಬರುವಾಗ ಬಾಗಿಲಲ್ಲಿ ಇದ್ದ ತಿಪ್ಪನನ್ನು ಕಂಡು "ಒಳಗೆ ಹೋಗಲೇನು?" ಎಂದು ಅಪ್ಪಣೆ ಕೇಳಿದರಂತೆ. ಆಮೇಲೆ ಅವರಿಗೆ ನೆನಪಾಯಿತು ತಾವು ಪ್ರಿನ್ಸಿಪಾಲನಾಗಿದ್ದೇನೆಂದು. ಇಂಥ ಪ್ರಸಂಗಗಳಿಗೇ ಅಲ್ಲವೇ ಆಬ್ಸೆಂಟ್ ಮೈಂಡೆಡ್ ಪ್ರೊಫೆಸರ್ ಎನ್ನುವುದು.

ಈ ಸಂದರ್ಭದಲ್ಲಿ ಇನ್ನೊಂದು ಪ್ರಸಂಗ ನೆನಪಾಗುತ್ತದೆ. ಇಂಗ್ಲೆಂಡಿನಲ್ಲಿದ್ದಾಗ ಗೋಕಾಕರು ಅನೇಕ ಪ್ರಸಿದ್ಧ ಇಂಗ್ಲಿಷ್ ಸಾಹಿತಿ–ವಿಮರ್ಶಕರ ಪರಿಚಯ ಗಳಿಸಿದ್ದರು. ಅವರಲ್ಲಿ ಒಬ್ಬರು ಪ್ರಸಿದ್ಧ ಇಂಗ್ಲಿಷ್ ಸಾಹಿತ್ಯದ ವಿಮರ್ಶಕರಾದ ಐ.ಎ.ರಿಚರ್ಡ್ಸ್. ಅವರು ಶೈಲಿಯನ್ನು ಕುರಿತು ಬರೆದ ಗ್ರಂಥ ಜಗತ್ಪ್ರಸಿದ್ಧವಾಗಿದೆ. ಅವರೊಮ್ಮೆ ಭಾರತಕ್ಕೆ ಬಂದಾಗ ಕಾಶ್ಮೀರಿ ಟೋಪಿಯೊಂದನ್ನು ಕೊಂಡಿದ್ದರು. ರಿಚರ್ಡ್‌ರು ಗೋಕಾಕರನ್ನು ತಮ್ಮ ಪ್ರಯೋಗಶಾಲೆಗೆ ಕರೆದೊಯ್ಯುವಾಗ ಇಬ್ಬರೂ ತಮ್ಮ ಟೋಪಿಗಳನ್ನು ಹೊರಗೆ ತೆಗೆದಿಟ್ಟು ಒಳಕ್ಕೆ ಪ್ರವೇಶಿಸಿದ್ದರು. ಅಂದು ಗೋಕಾಕರೂ ಕಾಶ್ಮೀರಿ ಟೋಪಿ ಧರಿಸಿದ್ದರು. ಪ್ರಯೋಗಶಾಲೆಯಿಂದ ಹೊರಗೆ ಬಂದಾಗ ಒಂದೇ ರೀತಿಯಿದ್ದ ಟೋಪಿಗಳನ್ನು ಮಾತನಾಡುತ್ತಾ ಆಡುತ್ತಾ ಕೈಲಿ ಹಿಡಿದುಕೊಂಡು ತಲೆಗೆ ಹಾಕಿಕೊಂಡರು. ಟೋಪಿಗಳು ಅದಲುಬದಲಾಗಿದ್ದವು. ಸಾರಿ ಎಂದು ರಿಚರ್ಡ್‌ರು ಗೋಕಾಕರಿಗೆ ತಾವು ಧರಿಸಿದ್ದ ಟೋಪಿಯನ್ನು ತೆಗೆದು ಹಿಂದಕ್ಕೆ ಕೊಟ್ಟರು. ಗೋಕಾಕರು ರಿಚರ್ಡ್‌ರ ಟೋಪಿಯನ್ನು

ಹಿಂದಿರುಗಿಸುತ್ತಾ, "ನಿಮ್ಮ ಟೋಪ್ಪಿಗೆ ಹಳೆಯದಾಗಿದ್ದರೂ ಇಟ್ಟುಕೊಳ್ಳುವ ಅಭಿಮಾನ ನನ್ನದಾಗಿತ್ತು" ಎಂದರು. ಅದಕ್ಕೆ ರಿಚರ್ಡ್ "ನಿಮಗೆ ಕೊಡಲು ಹಳೆಯ ಟೋಪಿ" ಎಂದರಂತೆ. Old is Gold ಎಂದರಂತೆ ಗೋಕಾಕರು. ಇಬ್ಬರೂ ನಕ್ಕರು. ಈ ಪ್ರಸಂಗವನ್ನು ಒಮ್ಮೆ ಬೆಂಗಳೂರಿನಲ್ಲಿ ಮಿತ್ರರೊಬ್ಬರ ಬಳಿ ಹೇಳುತ್ತಾ "ಈಗಿನವರು ಇನ್ನೊಬ್ಬರಿಗೆ ಟೋಪಿ ಹಾಕುವುದರಲ್ಲಿ ನಿಸ್ಸೀಮರು. ನಮ್ಮ ಕಾಲದಲ್ಲಿ ನಮ್ಮ ನಮ್ಮ ಟೋಪಿಗಳನ್ನು ನಾವೇ ನಮಗೆ ಹಾಕಿಕೊಳ್ಳುತ್ತಿದ್ದೆವು" ಎಂದರಂತೆ ನಗುತ್ತಾ.

ಭಾಷೆಯ ಬಳಕೆಯಲ್ಲಿ ಉಂಟಾಗುವ ವಿನೋದ ವಿಪರ್ಯಾಸಗಳು ಗೋಕಾಕರಿಗೆ ಅನೇಕ ಸಲ ಅನುಭವಕ್ಕೆ ಬಂದಿದೆ. ಅಮೇರಿಕೆಯ ಪ್ರವಾಸ ಹೋಗಿಬಂದ ಮೇಲೆ ತಮ್ಮ ಅನುಭವಗಳನ್ನು ಹೇಳುತ್ತಾ ಒಂದು ಪ್ರಸಂಗವನ್ನು ಹೀಗೆ ಪ್ರಸ್ತಾಪಿಸಿದ್ದಾರೆ. ಅಮೇರಿಕೆಯಲ್ಲಿ ಒಬ್ಬ ಗಣ್ಯವ್ಯಕ್ತಿಯನ್ನು ಭೇಟಿಯಾಗಲು ಹೋದರು. ಅಲ್ಲಿನ ಸಂಪ್ರದಾಯದಂತೆ ತಮ್ಮ ಪರಿಚಯದ ಕಾರ್ಡನ್ನು ಕಳುಹಿಸಿದ್ದರು ಅದರಲ್ಲಿ ಕನ್ನಡ ಪ್ರೊಫೆಸರ್ ಎಂಬ ವಿವರವನ್ನು ಓದುವಾಗ ಕನ್ನಡ ಪದವನ್ನು **ಕೆನಡ** ಎಂದು ಓದಿಕೊಂಡ ಇವರು ಭೆಟ್ಟಿ ಆದಕೂಡಲೇ "ನೀವು ಕೆನಡಾದವರೆಂದು ತಿಳಿಯಿತು. ಕೆನಡಾದಲ್ಲಿ ಪ್ರೊಫೆಸರ್ ಆಗಿರುವುದು ಸಂತೋಷದ ವಿಷಯ" ಎಂದು ಹೇಳಿ ಕೆನಡಾ ಬಗ್ಗೆ ಮಾತನಾಡಲು ಹೊರಟಾಗ, "ನಾನು ಕೆನಡಾ ಲೇಖಕ ಅಲ್ಲ, ಕನ್ನಡ ಲೇಖಕ" ಎಂದು ಕರ್ನಾಟಕ, ಕನ್ನಡದ ಬಗ್ಗೆ ಆತನಿಗೆ ತಿಳಿಸಿದಾಗ ಇಬ್ಬರಿಗೂ ನಗು ಉಕ್ಕಿತಂತೆ.

ಸಮಯಸ್ಫೂರ್ತಿಯಲ್ಲಿ ವಿನೋದವಾಗಿ ಮಾತಾಡುವುದು ಗೋಕಾಕರ ವಿಶೇಷಗಳಲ್ಲಿ ಒಂದು. ಗೋಕಾಕರು ತೀ.ನಂ.ಶ್ರೀ. ಅವರನ್ನು ಒಂದು ಕಾರ್ಯದಲ್ಲಿ ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದರು. ತೀ.ನಂ.ಶ್ರೀ. ಅವರು ಆಗ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದು ಗೋಕಾಕರಿಗೆ ಪರಿಚಿತರಾಗಿದ್ದರು. ಸಮಾರಂಭದಲ್ಲಿ ತೀ.ನಂ.ಶ್ರೀ. ಅವರನ್ನು ಗೋಕಾಕರು ಅತಿಥಿಪರಿಚಯ ಮಾಡುತ್ತಾ ತೀ.ನಂ.ಶ್ರೀ ಅವರ ಪಾಂಡಿತ್ಯವನ್ನು ಪ್ರಶಂಸಿಸುತ್ತಾ "ನಮ್ಮಲ್ಲಿ ಸವ್ಯಸಾಚಿಗಳು ಇದ್ದಾರೆ. ಕನ್ನಡ-ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದವರಿದ್ದಾರೆ. ಸವ್ಯಸಾಚಿ ಎಂದರೆ ಒಂದೇ ಸಲಕ್ಕೆ ಎರಡು ಬಾಣ ಹೂಡಿ ಪ್ರಯೋಗ ಮಾಡುವ ವೀರ, ಅರ್ಜುನ ಅಂಥ ಸವ್ಯಸಾಚಿ. ಆದರೆ ತೀ.ನಂ.ಶ್ರೀ ಅವರು ಬಿಲ್ಲಿಗೆ ಒಂದೇ ಕಾಲಕ್ಕೆ ಮೂರು ಬಾಣ ಹೂಡಬಲ್ಲರು. ಅವರು ಕನ್ನಡ-ಇಂಗ್ಲಿಷ್‌ನಲ್ಲಿ ಪಡೆದಷ್ಟೇ ಪಾಂಡಿತ್ಯವನ್ನು ಸಂಸ್ಕೃತದಲ್ಲೂ ಪಡೆದಿದ್ದಾರೆ" ಎಂಬ ಉದ್ಗಾರ ತೆಗೆದಿದ್ದರು.

ಈವತ್ತು ಇಂಥ ಹಲವಾರು ಭಾಷೆಗಳ ಸವ್ಯಸಾಚಿಗಳು ವಿರಳವಾಗುತ್ತಿದ್ದಾರೆ. ಪಾಂಡಿತ್ಯ ಅಭ್ಯಾಸದ ಫಲ, ಪ್ರತಿಭೆ ದೈವದತ್ತ ವರ. ಎರಡೂ ಮೇಳೈಸಿದ

ವಿದ್ವಾಂಸರು ಸಿಗುವುದು ನಾಡಿನ ಭಾಗ್ಯ. ಗೋಕಾಕರೂ ಸಂಸ್ಕೃತ, ಇಂಗ್ಲಿಷ್, ಕನ್ನಡದಲ್ಲಿ ನುರಿತವರೇ ಆಗಿದ್ದರು.

ಗೋಕಾಕರ ಸಮಯಸ್ಫೂರ್ತಿಯ ಮಾತಿಗೆ ಇನ್ನೊಂದು ಘಟನೆ ನೆನಪಾಗುತ್ತದೆ. ಗೋಕಾಕರಿಗೆ ಆತ್ಮೀಯರಾಗಿದ್ದವರು ಪ್ರಸಿದ್ಧ ಕವಿ ಸಾಹಿತಿ ಆದ ಜೀವಿ ಅವರು. ಅವರು **ನಾ ಕಂಡ ಗೋಕಾಕ** ಕೃತಿಯಲ್ಲಿ ಇಂಥ ಹಲವಾರು ಪ್ರಸಂಗಗಳನ್ನು ಪ್ರಸ್ತಾಪಿಸಿದ್ದಾರೆ. ಕರ್ನಾಟಕ ಕಾಲೇಜಿನಲ್ಲಿ ಗೋಕಾಕರಿಗೆ ಸನ್ಮಾನ ಸಮಾರಂಭವೊಂದು ಏರ್ಪಟ್ಟಿತ್ತು. ಮಿತ್ರರಾದ ಎಸ್.ಆರ್.ಮಳಗಿ ಅವರು ನಾಲ್ಕು ದಿನ ವಿನಾಯಕ ಉತ್ಸವ (ಗಣೇಶ ಹಬ್ಬ) ನಡೆದಿದೆ ಎಂದರು. "ವಿನಾಯಕ" ಗೋಕಾಕರ ಕಾವ್ಯನಾಮವೂ ಹೌದು. ಗೋಕಾಕರು ಆ ಸನ್ಮಾನ ಸಭೆಯಲ್ಲಿ ಮಾತನಾಡುತ್ತಾ "ಮಳಗಿ ಅವರು ವಿನಾಯಕ ಹಬ್ಬ ಮಾಡಿದಿರಿ ನೀವೆಲ್ಲಾ ಎಂದು ಹೇಳಿದರು. ಬಹಳ ಪ್ರೀತಿಯಿಂದ ನಡೆಸಿದ್ದು ಸಂತೋಷಕಾರಕ. ಇಲ್ಲಿ ಪಟಾಕಿ ಹಾರಿಸಿದಿರಿ, ಯಾರೂ ಆಟಂಬಾಂಬ್ ಸಿಡಿಸಲಿಲ್ಲ, ಬಾಣ ಬಿಡಲಿಲ್ಲ" ಎಂದರು.

ಇವರನ್ನು ಧಾರವಾಡದಿಂದ ಬೀಳ್ಕೊಡುವ ಸಂದರ್ಭದಲ್ಲಿ ಧಾರವಾಡದ ರೈಲ್ವೇ ನಿಲ್ದಾಣದಲ್ಲಿ ಕರ್ನಾಟಕ ಸಂಘ, ಲಿಬರಲ್ ಹಾಸ್ಟೆಲ್, ಆನೆಸ್ಟಿ ಹಾಸ್ಟೆಲ್ ಮೊದಲಾದ ವಿದ್ಯಾರ್ಥಿನಿಲಯದವರು ಹಾರಗಳನ್ನು ಹಾಕಿದರು. ಆಗ ಆ ಹಾಸ್ಟೆಲ್ಲಿನ ವಿದ್ಯಾರ್ಥಿಗಳು ಹಾರ ಹಾಕಿದಾಗ ಪಕ್ಕದಲ್ಲಿ ಲಿಬರಲ್ ಹಾಸ್ಟೆಲಿನ ವಿದ್ಯಾರ್ಥಿಗಳು ನಿಂತಿದ್ದರು. ವಿನಾಯಕರು "I am honest though not liberal" ಎಂದರು. ಎಲ್ಲರಿಗೂ ನಗೆಬಂದಿತು. ಏಕೆಂದರೆ ಗೋಕಾಕರು ಆನೆಸ್ಟಿ ಹಾಸ್ಟೆಲಿನ ವಿದ್ಯಾರ್ಥಿ ಆಗಿದ್ದರು. ಲಿಬರಲ್ ಹಾಸ್ಟಿಲಿನ ವಿದ್ಯಾರ್ಥಿ ಆಗಿರಲಿಲ್ಲ.

ಗೋಕಾಕರ ವ್ಯಕ್ತಿತ್ವವನ್ನು, ಅವರ ಅಧ್ಯಾಪಕತನದ ಪ್ರಭಾವವನ್ನು ಕಂಡಾಗ, ಅಂಥಾ ಬಹುಮುಖ ಪ್ರತಿಭೆಯ ವಿದ್ಯಾರ್ಥಿಗಳ ದೈವವನ್ನು ನಾವು ಕಾಣುವುದು ಬಹಳ ಅಪರೂಪ. ವೀಸನಗರದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿ ಅವರು ಎಂಥ ಜನಪ್ರೀತಿ ಗಳಿಸಿದ್ದರು ಎಂದರೆ ಅವರನ್ನು ಬೀಳ್ಕೊಡುವಾಗ, ಅವರು ಕುಳಿತ ರೈಲಿನ ಡಬ್ಬಿಯನ್ನು ಸಂಪೂರ್ಣವಾಗಿ ಹೂಮಾಲೆಗಳಿಂದ ಅಲಂಕೃತಗೊಳಿಸಿದರು. ಎಂಜಿನ್ನಿನ ಗಾರ್ಡನ ಡಬ್ಬಿಯವರೆಗೆ ಹೂ ತುರಾಯಿಗಳ ರಾಶಿಯೇ ರಾಶಿ. ಅನೇಕ ವಿದ್ಯಾರ್ಥಿಗಳು ಕಣ್ಣೀರಿಟ್ಟು ಮಕ್ಕಳಂತೆ ಅತ್ತರು. ಈ ಅಂತಃಕರಣ ಮಿಡಿವ ಜನಜಂಗುಳಿಯಿಂದ ಬಿಡಿಸಿಕೊಂಡು ರೈಲು ಹೊರಡಲು ಅರ್ಧಗಂಟೆ ತಡವಾಯಿತು. ಗಾರ್ಡ್ ಕೂಡ ಕಂಬನಿ ಮಿಡಿದನಂತೆ. ಕೆಲ ವಿದ್ಯಾರ್ಥಿಗಳಂತೂ ಗೋಕಾಕರೊಡನೆ ಕೊಲ್ಲಾಪುರದವರೆಗೆ ಹೊರಟು ಬಂದರೆ,

ಒಬ್ಬ ವಿದ್ಯಾರ್ಥಿಯಂತೂ ಕೊಲ್ಲಾಪುರದಲ್ಲಿ ಗೋಕಾಕರ ಕಾಲೇಜಿಗೆ ಬಂದು ವಿದ್ಯಾರ್ಥಿ ಆಗಿ ಸೇರಿದನಂತೆ. ಈ ಸಂದರ್ಭದಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಮೈಸೂರು ಮಹಾರಾಜ ಕಾಲೇಜಿನಿಂದ ಕಲ್ಕತ್ತೆಗೆ ಹೊರಟಾಗ ಮೈಸೂರಿನಲ್ಲಿ ಮಹಾಜನರು ಮತ್ತು ವಿದ್ಯಾರ್ಥಿಗಳು ಇದೇ ಬಗೆಯಲ್ಲಿ ಬೀಳ್ಕೊಟ್ಟ ದೃಶ್ಯ ನೆನಪಾಗುತ್ತದೆ. ಒಬ್ಬ ಅಧ್ಯಾಪಕ ಪಾಠಮಾಡಿ ತರಗತಿಯಲ್ಲಿ ಮೇಷ್ಟ್ರಾಗಿ ಯಶಸ್ವಿ ಆದರೆ ಸಾಲದು, ಅಥವಾ ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ವಿದ್ಯಾರ್ಥಿಪ್ರಿಯನಾದರೆ ಸಾಲದು. ಅದರ ಜತೆಗೆ, ನಾಡಿನ ಜನರ ಹೃನ್ಮನಗಳನ್ನು ಗೆಲ್ಲುವ ಸಜ್ಜನಿಕೆ, ಪಾಂಡಿತ್ಯ, ಪ್ರತಿಭೆ, ಸೇವೆಗಳಿಂದ ಜನಪ್ರೀತಿ ಪಡೆದ ಅಂತಃಕರಣ ಮಿಡಿವ ಪ್ರಭುವಾಗಬೇಕು. ಅಂಥ ಆದರ್ಶ ಪ್ರಾಧ್ಯಾಪಕರ ಸಾಲಿಗೆ ಸೇರಿದವರು ವಿ.ಕೃ.ಗೋಕಾಕರು.

ಗುರು-ಶಿಷ್ಯ ಪ್ರೀತಿ ಸಂಬಂಧ ಗೌರವ ಹೇಗಿರಬೇಕು ಎಂಬುದಕ್ಕೆ ಗೋಕಾಕರು ಒಂದು ಆದರ್ಶ ನಿದರ್ಶನ ಎಂದರೆ ತಪ್ಪಲ್ಲ. ಒಬ್ಬ ವ್ಯಕ್ತಿಯು ಏಕಕಾಲದಲ್ಲಿ ಒಬ್ಬ ವ್ಯಕ್ತಿಯ ಪಾಲಿಗೆ ಗುರುವು ಶಿಷ್ಯನೂ ಆದ ವಿಚಿತ್ರ ಪ್ರಸಂಗ ಗೋಕಾಕರ ಪಾಲಿಗೆ. ಒಂದು ಅಂಥ ಸಂದರ್ಭದಲ್ಲಿ ಗೋಕಾಕರು ನಡೆದುಕೊಂಡ ರೀತಿ ಅಸದೃಶವಾದುದು.

ಬೇಂದ್ರೆಯವರು ಅಧ್ಯಾಪಕರಾಗಿದ್ದಾಗ, ವಿದ್ಯಾರ್ಥಿ ಆಗಿದ್ದ ಗೋಕಾಕರಿಗೆ ಪರಿಚಯವಾಗಿದ್ದು ಕಾವ್ಯದ ಗುರುವಾಗಿ, ಅನಂತರ ಅಧ್ಯಾತ್ಮದ ಗುರುವಾಗಿ, ಆಮೇಲೆ ಜೀವನದಲ್ಲಿ ಅಂತರಂಗದ ಗುರುವಾಗಿ ಸದಾ ಬೇಂದ್ರೆಯವರ ಎದುರಿನಲ್ಲಿ ಗೋಕಾಕರು ಜ್ಞಾನಶಿಶು. ಹೀಗಿರುವಾಗ ಬೇಂದ್ರೆ ಶಾಲಾಮಾಸ್ತರ ಹುದ್ದೆಯಿಂದ ಕಾಲೇಜು ಪ್ರೊಫೆಸರ್ ಆಗಲು ಬಯಸಿ ಎಂ.ಎ. ಮಾಡಲು ಮನಮಾಡಿದರು. ಎಂ.ಎ. ಕನ್ನಡ ಮಾಡಲು ಪುಣೆಗೆ ಬಂದಾಗ ಅಲ್ಲಿ ಕನ್ನಡ ಶಿಕ್ಷಕರು ಇಲ್ಲದೆ ಕೊನೆಗೆ ಗೋಕಾಕರನ್ನು ಬೇಂದ್ರೆಯವರಿಗೆ ಶಿಕ್ಷಕರನ್ನಾಗಿ ಮುಂಬೈ ವಿಶ್ವವಿದ್ಯಾಲಯ ನಿರ್ಧರಿಸಿತು. ಹೀಗಾಗಿ ಗೋಕಾಕ್ ಬೇಂದ್ರೆ ಶಿಷ್ಯ-ಗುರು ಆದವರು ಗುರು-ಶಿಷ್ಯ ಆದರು. ಆಗ ಗುರುಶಿಷ್ಯರ ಪಾಠಕ್ರಮ ಹೇಗಿತ್ತು ಎಂಬುದನ್ನು ಗೋಕಾಕರ ಬಾಯಲ್ಲೇ ಜೀವಿ ಅವರು ಕೇಳಿದ್ದು ಹೀಗೆ. "ನಾನು ಗುರು ಅವರು ಶಿಷ್ಯರು ಎಂಬುದು ಕೇವಲ ಕಾಗದದಲ್ಲಿ ಮಾತ್ರ ಇತ್ತು. ಅದು ಅನಿವಾರ್ಯ ಆಗಿತ್ತು ಎಂಬುದು ಬೇಂದ್ರೆಗೂ ಗೊತ್ತಿತ್ತು. ನಾವು ಕ್ಲಾಸ್‌ರೂಮಿಗೆ ಹೋಗುವವರೆಗೆ ಟೀಚರ್-ಸ್ಟೂಡೆಂಟ್ ಆಗಿರುತ್ತಿದ್ದೆವು. ಕ್ಲಾಸಿನ ಒಳಗೆ ಹೋದಾಗ ಬೇಂದ್ರೆ ಕುರ್ಚಿಯ ಮೇಲೆ ಕೂಡುತ್ತಿದ್ದರು. ನಾನು ಡೆಸ್ಕಿನ ಮೇಲೆ ಕೂಡುತ್ತಿದ್ದೆ. ಅವರು ಲೆಕ್ಚರ್ ಕೊಡುತ್ತಿದ್ದರು. ನಾನು ಅವರ ವಾಣಿ ಕೇಳುತ್ತಿದ್ದೆ. It was a great experience, ಇಷ್ಟಕ್ಕೂ ಆ ಅವಧಿಯಲ್ಲಿ ನಾವು ಮಾಡಿದ್ದೇನು? ನಾವು ಸುನೀತ


ಅಷ್ಟಷಟ್ಪದಿ ಸಾನೆಟ್ಟುಗಳನ್ನು ಬರೆದು ಅನೇಕ ಪ್ರಯೋಗಗಳನ್ನು ಮಾಡಿದೆವು." ಇಂಥ ಗುರುಶಿಷ್ಯ ಪ್ರೇಮವನ್ನು ಇಂದೆಲ್ಲಿ ಕಾಣೋಣ?

ಸಮರಸವೇ ಜೀವನ ಅವರು ಬರೆದ ಕಾದಂಬರಿಯ ಹೆಸರಷ್ಟೇ ಅಲ್ಲ, ಅವರ ಬದುಕಿನ ರೀತಿ ಆಗಿತ್ತು. ಸರ್ವಧರ್ಮ ಸಮನ್ವಯ ಅವರ ಬದುಕಿನ ಸೂತ್ರ ಆಗಿತ್ತು, ಅವರು ಅರವಿಂದರ ಭಕ್ತರೂ ಹೌದು, ಸಾಯಿಬಾಬಾರ ಭಕ್ತರೂ ಹೌದು. ಸಂಪ್ರದಾಯಶೀಲ ಬ್ರಾಹ್ಮಣರೂ ಹೌದು. ವಿದೇಶಯಾತ್ರೆ ಮಾಡಿದ ಸಮುದ್ರಯಾನ ಮಾಡಿದ ಆಧುನಿಕರೂ ಹೌದು. ಸಂಸ್ಕೃತದ ವೈದಿಕ ಸಾಹಿತ್ಯ ಅಭ್ಯಸಿಸಿ 'ಭಾರತ ಸಿಂಧುರಶ್ಮಿ' ಮಹಾಕಾವ್ಯ ರಚಿಸಿದವರೂ ಹೌದು, ಆಧುನಿಕ ಇಂಗ್ಲಿಷ್ ಸಾಹಿತ್ಯದಲ್ಲಿ ಅಪ್ರತಿಮ ಕೃತಿ ರಚನೆ ಮಾಡಿದವರೂ ಹೌದು. ಅವರೊಂದು ರೀತಿಯಲ್ಲಿ ಸೆಕ್ಯುಲರ್ ವ್ಯಕ್ತಿ ಎನ್ನಬಹುದು. ಅದಕ್ಕೊಂದು ನಿದರ್ಶನವೆಂದರೆ ಅವರ ಮಗ ಅನಿಲಕುಮಾರನ ಉಪನಯನ ಮಾಡಿದ ರೀತಿ.

ಆ ಉಪನಯನ ಕಾರ್ಯಕ್ರಮದಲ್ಲಿ ವೇದಘೋಷಗಳ ಜತೆಗೆ ಕುರಾನ್ ಬೈಬಲ್ ಪಠಣ ನಡೆಯಿತು. ಸರ್ವಜಾತೀಯರು ಭಾಗವಹಿಸಿದ್ದು, ಆ ಸಂದರ್ಭದಲ್ಲಿ ನವಿಲುಗುಂದ ಮಠದ ವೀರಶೈವಸ್ವಾಮಿಗಳು ಬಂದು ವಟುವಿಗೆ ಆಶೀರ್ವದಿಸಿದರು. ವೇದಮಂತ್ರ ದ್ರಷ್ಟಾರರಾದ ದೇವರಾತರು ಬಂದು ವೇದಮಂತ್ರ ಪಠಿಸಿದರು. ಇಂಥ ನಭೂತೋ ನಭವಿಷ್ಯತ್ ರೀತಿಯಲ್ಲಿ ಮುಂಜಿ ಕಾರ್ಯ ನೆರವೇರಿಸಿದರು ಗೋಕಾಕರು.

ಇಂದು ನಮಗೆ ತಮ್ಮ ನಡವಳಿಕೆಗಳಿಂದ, ತಮ್ಮದೇ ಆದ ಆದರ್ಶ ಧ್ಯೇಯಗಳಿಂದ, ಜನಮನ ಗೆಲ್ಲುವ ಮೂಲಕ ಜನಪ್ರೀತಿ ಗಳಿಸುವಂಥ, ವಿದ್ಯಾರ್ಥಿಗಳ ಪಾಲಿಗೆ ದೈವಸ್ವರೂಪವಾಗಿ ಬಾಳಿನಲ್ಲಿ ಮರೆಯಲಾಗದಂಥ ರೀತಿಯಲ್ಲಿ ಸ್ಫೂರ್ತಿ ನೀಡುವ ಅಧ್ಯಾಪಕ ವರ್ಗ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಕನ್ನಡ ಸಾಹಿತಿ, ವಾಗ್ಮಿ, ಇಂಗ್ಲಿಷ್ ವಿಶಾರದ, ಸಜ್ಜನಶಿರೋಮಣಿ ಆದರ್ಶ ಅಧ್ಯಾಪಕ, ಶಿಕ್ಷಣತಜ್ಞ, ಭವ್ಯ ವ್ಯಕ್ತಿತ್ವದ ದಿವ್ಯಶಕ್ತಿ ಎನ್ನಿಸಿದ ವಿ.ಕೃ.ಗೋಕಾಕರ ಜೀವನ ಪ್ರಸಂಗಗಳು ಸದಾ ಕಾಲಕ್ಕೂ ಚೇತೋಹಾರಿ, ಸ್ಫೂರ್ತಿಯ ಚಿಲುಮೆ, ಆದರ್ಶಗಳ ಸಾಕಾರಿ, ಭವ್ಯ ಬಾಳಿಗೆ ಆಧಾರಿ ಆಗಿವೆ. ೧೯೦೯ನೇ ಆಗಸ್ಟ್ ೯ ಜನ್ಮದಿನೋತ್ಸವ, ಏಪ್ರಿಲ್ ೨೮, ೧೯೯೨ನೇ ಇಸವಿ ಮೃತ್ಯುಮಹೋತ್ಸವ, ಈ ದಿನಗಳು ಪ್ರತಿ ಕನ್ನಡಿಗನಿಗೂ ಸ್ಮರಣೀಯ ದಿನಗಳು. ಗೋಕಾಕರ ಜೀವನ-ಸಾಧನೆ-ಸಾಹಿತ್ಯ ಪ್ರತಿ ಕನ್ನಡಿಗನಿಗೂ ಚೈತನ್ಯಧಾರೆಗಳು.

**



೧೦. ಕನ್ನಡ ನಾಟಕಕಾರ–ಆಡಳಿತ ನಿರ್ವಾಹಕ

ಕೈವಾರ ರಾಜಾರಾವ್

(೨೯–೨–೧೯೧೨ / ೩–೧–೧೯೯೩)

ಕನ್ನಡ ನಾಟಕ ಪ್ರಪಂಚದ ಇತಿಹಾಸದಲ್ಲಿ ಕಂಪನಿನಾಟಕಗಳ ಘಟ್ಟ ಮುಗಿದು, ಅಮೆಚೂರ್ ಆರ್ಟಿಸ್ಟ್‌ಗಳ (ಹವ್ಯಾಸಿ ರಂಗಕಲಾವಿದರ) ನಾಟಕ ಪರಂಪರೆ ಪ್ರಾರಂಭವಾದಾಗ ನವೋದಯ ಸಾಹಿತಿಗಳು ಪ್ರಮುಖ ಪಾತ್ರ ವಹಿಸಿದರು. ಕಂಪನಿ ನಾಟಕಗಳ ಕರ್ತೃಗಳು ಬಹುಮಟ್ಟಿಗೆ ವಿದ್ವಾಂಸರು, ಕವಿಗಳು, ಹಳಗನ್ನಡ ಪಂಡಿತರು, ಅಧ್ಯಾಪಕರು ಅಥವಾ ಆಸ್ಥಾನ ವಿದ್ವಾಂಸರು ಆಗಿದ್ದರು. ಆದರೆ ಆಧುನಿಕ ನಾಟಕಗಳ ಕರ್ತೃಗಳು ಹೊಸಗನ್ನಡದ ಆಧುನಿಕ ಸಾಹಿತ್ಯ ನಿರ್ವಾಪಕರಾಗಿದ್ದು, ಸರ್ಕಾರಿ ಹಾಗೂ ಖಾಸಗೀ ವೃತ್ತಿಗಳಲ್ಲಿ ತೊಡಗಿದವರಾಗಿದ್ದರು. ಕಂಪನಿಗಳ ಆಶ್ರಯ, ರಾಜಾಶ್ರಯ ವೃತ್ತಿಪರ ನಾಟಕಕಾರರಿಗೆ, ಸಂಸ್ಥೆಗಳಿಗೆ ಇದ್ದ ನೆರವು ನವೋದಯ ನಾಟಕಕಾರರಿಗೆ ಇರಲಿಲ್ಲ. ೨೦ನೇ ಶತಮಾನದ ಮೂರನೇ ನಾಲ್ಕನೇ ದಶಕಗಳಲ್ಲಿ ನವೋದಯ ನಾಟಕಕಾರರು ಸಾಕಷ್ಟು ಬೆಳಕಿಗೆ ಬಂದರು. ಅವರಲ್ಲಿ ಕೈಲಾಸಂ, ಶ್ರೀರಂಗ ಪರಂಪರೆಯನ್ನೇ ಸೃಷ್ಟಿ ಮಾಡಿದರು. ಸರಳ ರಂಗಸಜ್ಜಿಕೆ, ಸಾಧಾರಣ ವೇಷಭೂಷಣ, ಹೊಸಗನ್ನಡ ಗದ್ಯದ ಸಂಭಾಷಣೆ ಬಳಕೆ, ಕೇವಲ ಒಂದೆರಡು ಗಂಟೆಗಳ ಅವಧಿಯಲ್ಲಿ ಮುಗಿಯುವ ನಾಟಕ ವಸ್ತು, ನಗೆ, ಮನರಂಜನೆ, ಮುಖ್ಯೋದ್ದೇಶದಲ್ಲಿ ಮಧ್ಯಮವರ್ಗದ ಸಾಂಸಾರಿಕ ಬದುಕಿನ ಪ್ರಸಂಗಗಳ ವಸ್ತುಗಳನ್ನು ಒಳಗೊಂಡ ನಿತ್ಯಜೀವನದ ಶ್ರೀಸಾಮಾನ್ಯರು ನಾಯಕರಾದ ನಾಟಕಗಳು ಬಂದವು. ಹೀಗೆ ಹೊಸ ಪರಂಪರೆಯ ಲಕ್ಷಣದ ನಾಟಕಗಳಿಗೆ, ಬಿ.ಎಂ.ಶ್ರೀ., ಸಂಸರು ಹಳೆಗನ್ನಡದ ಮಾದರಿಗಳನ್ನು ನಿರ್ಮಿಸಿದರೆ, ಕೈಲಾಸಂ, ಶ್ರೀರಂಗ, ಪರ್ವತವಾಣಿ, ಗುಂಡಣ್ಣ, ಕೈವಾರ ರಾಜಾರಾವ್ ಮೊದಲಾದವರು ಹೊಸಗನ್ನಡದ ಆಡುಮಾತಿನ

ಮಾದರಿಗಳನ್ನು ನಿರ್ಮಿಸಿದರು. ವಿಶೇಷವಾಗಿ ಏಕಾಂಕಗಳ ರಚನೆ ಮಾಡಿದ್ದು ಒಂದು ವಿಶೇಷ.

ಈ ಏಕಾಂಕ ನಾಟಕಗಳ ರಚನೆಯಲ್ಲಿ ಎತ್ತಿದ ಕೈ ಕೈವಾರದ ರಾಜಾರಾಯರದು. ಸುಮಾರು ೩ ದಶಕಗಳ ಕಾಲ ಶಾಲೆ–ಕಾಲೇಜು, ಲೇಡೀಸ್ ಕ್ಲಬ್, ಮಹಿಳಾ ಸಮಾಜ, ಹವ್ಯಾಸಿ ಕಲಾಸಂಸ್ಥೆಗಳು ಆಡಿ ಮೆರೆದ ನಾಟಕಗಳಲ್ಲಿ ರಾಜಾರಾಯರ ನಾಟಕಗಳೇ ಹೆಚ್ಚು ಪ್ರದರ್ಶನಗೊಂಡಿವೆ ಎಂದರೆ ಅತಿಶಯೋಕ್ತಿಯಲ್ಲ.

ಸುಮಾರು ೬೦ ನಾಟಕಗಳನ್ನು ಬರೆದಿದ್ದು ೧೯ ನಾಟಕಗಳು ಅಚ್ಚಾಗಿದ್ದು, ೧೦–೧೨ ನಾಟಕಗಳು ಹಲವಾರು ಮುದ್ರಣಗಳನ್ನು ಕಂಡಿದ್ದು, ಎರಡು ಪ್ರದರ್ಶನದಿಂದ ೨೦೦ ಪ್ರದರ್ಶನಗಳವರೆಗೆ, ಇಡೀ ಕರ್ನಾಟಕದಾದ್ಯಂತ ತಾಲ್ಲೂಕು ಮಟ್ಟದಲ್ಲಿ ಹೊಸಗನ್ನಡ ನಾಟಕ ಪ್ರದರ್ಶನವಾದುದು ಕೈವಾರ ರಾಜಾರಾಯರದು.

ಡಿ.ವಿ.ಜಿ. ಅವರು ಉಪಾಧ್ಯಕ್ಷರಾದ ಕಾಲದಲ್ಲಿ ಪರಿಷತ್ತಿನಲ್ಲಿ ಕೆಲಸ ಮಾಡುತ್ತಿದ್ದವರು ಕೈವಾರ ರಾಜಾರಾಯರು. ಆಗ ಪರಿಷತ್ತು ಬೆಂಗಳೂರಿಗೆ ಸೀಮಿತವಾಗಿತ್ತು. ಕರ್ನಾಟಕದ ಸಂಸ್ಥೆಯಾಗಿ ಹೆಸರಿಗಿತ್ತು. ತನ್ನ ಚಟುವಟಿಕೆಗಳನ್ನು ಬೆಂಗಳೂರಿನ ಆಚೆಗೆ ಹಳ್ಳಿಹಳ್ಳಿಗಳಿಗೆ ಹಬ್ಬಿಸಬೇಕು ಎಂಬ ವಾದ ಹುಟ್ಟಿ ಆ ಬಗ್ಗೆ ನಿರ್ಣಯವಾಗಿ ಯೋಜನೆಯೊಂದು ರೂಪುಗೊಂಡಿತು. ಆ ಕಾಲದಲ್ಲಿ ಹವ್ಯಾಸಿ ನಾಟಕಗಳ ಸ್ಥಿತಿ ಹೇಗಿತ್ತೆಂದರೆ ರಾಜಾರಾಯರು ಹೇಳುವಂತೆ, "ನಾನು ನಾಟಕಗಳನ್ನು ಬರೆದ ಕಾಲದಲ್ಲಿ ಅವುಗಳ ಪ್ರದರ್ಶನಕ್ಕೆ ಇಂದಿನ ಅನುಕೂಲ ಪರಿಸ್ಥಿತಿ ಇರಲಿಲ್ಲ. ಆಗ ನಾಟಕ ಬರೆಯುವವರೇ ಹೆಚ್ಚಾಗಿರಲಿಲ್ಲ. ಬರೆದ ನಾಟಕ ಪ್ರದರ್ಶಿತವಾಗುವುದಂತೂ ಅಪರೂಪವಾಗಿತ್ತು. ನಾಡಿನ ನಾನಾ ಭಾಗಗಳಲ್ಲಿ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು ಪರಿಷತ್ತಿನ ಪರವಾಗಿ ನಡೆಯಲು ಪ್ರಾರಂಭವಾದವು. ಆಯಾ ಸ್ಥಳಗಳಿಗೆ ಸಾಹಿತಿಗಳ ದಂಡು, ಕಲಾವಿದರ ಗುಂಪು ಪ್ರಯಾಣ ಮಾಡಿ ಸಂಗೀತ, ಉಪನ್ಯಾಸ, ನಾಟಕಗಳನ್ನು ಪರಿಷತ್ತು ಏರ್ಪಡಿಸುತ್ತಿತ್ತು. ಈ ಕಾರ್ಯಕ್ರಮಗಳ ವ್ಯವಸ್ಥೆಯಲ್ಲಿ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿದ್ದ ನಿಟ್ಟೂರು ಶ್ರೀನಿವಾಸರಾಯರ ಸಾಹಸ ಅಮೋಘ. ಅವರ ಪಾತ್ರ ಗಣನೀಯವಾಗಿತ್ತು. ಹೀಗಾಗಿ ಆ ಬಗೆಯ ಕಾರ್ಯಕ್ರಮಗಳನ್ನು ನಿಟ್ಟೂರು ಸರ್ಕಸ್ ಕಂಪೆನಿ ಕಾರ್ಯಕ್ರಮ ಎಂದು ಬಣ್ಣಿಸಿದವರೂ ಉಂಟು."

ಈ ಯೋಜನೆಯಲ್ಲಿ ಪರಿಷತ್ತಿನಲ್ಲಿದ್ದ ಕೈವಾರ ರಾಜಾರಾಯರು ಸಾಕಷ್ಟು ಪ್ರಮುಖವಾಗಿ ದುಡಿದರು. ಅವರ ನಾಟಕಗಳನ್ನು ಪರಿಷತ್ತಿನ ಕಾರ್ಯಕ್ರಮಗಳ ಅಂಗವಾಗಿ ಆಡಲಾಗುತ್ತಿತ್ತು. ಯುನೈಟೆಡ್ ಆರ್ಟಿಸ್ಟ್ ಕಲಾವಿದರು ಹೆಚ್ಚಾಗಿ ಈ

ನಾಟಕಗಳನ್ನು ಆಡುತ್ತಿದ್ದರು. ಆ ಕಾಲದಲ್ಲಿ ಬೆಂಗಳೂರಿನಲ್ಲಿ ಪ್ರಸಿದ್ಧ ಹವ್ಯಾಸಿ ನಾಟಕ ಕಲಾವಿದರ ಸಂಸ್ಥೆಗಳು ಎಂದರೆ ಛಾಯಾ ಕಲಾವಿದರು, ರವಿ ಕಲಾವಿದರು, ಶಶಿ ಕಲಾವಿದರು, ಯುನೈಟೆಡ್ ಆರ್ಟಿಸ್ಟ್ ಮತ್ತು ಇತರರು. ಇದರ ಜತೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲೇ ಒಂದು ನಾಟಕ ಸಮಿತಿ ಇತ್ತು. ಈ ಸಮಿತಿ ಕೈವಾರ ರಾಜಾರಾಯರ ನಾಟಕಗಳನ್ನು ನಾಡಿನಾದ್ಯಂತ ಆಡತೊಡಗಿತು. ಉದಾಹರಣೆಗೆ ೧೯೪೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನಾಟಕ ಸಮಿತಿಯವರು 'ಗಂಡನ ಜುಲ್ಮಾನೆ' ನಾಟಕ ಆಡಿದರು. ಆಗ ಆ ನಾಟಕದಲ್ಲಿ ಬರುವ ಸುಂದರನ ಪಾತ್ರವನ್ನು ಜಿ.ಪಿ.ರಾಜರತ್ನಂ ವಹಿಸಿದ್ದರು. ಸುಮಾರು ೮೦ ಪ್ರದರ್ಶನಗಳನ್ನು ಕಂಡ ನಾಟಕ ಆ ಕಾಲಕ್ಕೆ! ಹಾಗೆಯೇ ಪರಿಷತ್ತಿನ ನಾಟಕ ಸಮಿತಿಯವರು ಆಡಿದ ಇನ್ನೊಂದು ನಾಟಕ "ವಧುಪರೀಕ್ಷೆ." ಇದು ೫೦ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ಕಂಡಿದೆ. ಅಷ್ಟೇ ಅಲ್ಲ, ಮಹಿಳಾ ಕಾಲೇಜು, ವಿದ್ಯಾರ್ಥಿನಿಯರ ಶಾಲೆಗಳು ಈ ನಾಟಕವನ್ನು ಆಡಿದಷ್ಟು ಬೇರಾವ ನಾಟಕವನ್ನೂ ಆಡಿಲ್ಲ ಎಂಬುದು ಗಮನಾರ್ಹ ಅಂಶ. ಹೆಣ್ಣಿಗೆ ಸ್ವತಂತ್ರ ಅಭಿವ್ಯಕ್ತಿ ಇದೆ ಎಂಬುದನ್ನು ನಿರೂಪಿಸುವ ಆ ಕಾಲದ ಕ್ರಾಂತಿಕಾರಕ ನಾಟಕ ಇದಾಗಿತ್ತು. ಈ ಕಾರಣದಿಂದ ಈ ನಾಟಕ ಆ ಕಾಲಕ್ಕಲ್ಲದೆ ಈ ಕಾಲಕ್ಕೂ ಕೆಲವೆಡೆ ಜನಪ್ರಿಯವಾಗಿದೆ.

"ವಧುಪರೀಕ್ಷೆ" ನಾಟಕದಲ್ಲಿ, ಫೋಟೋದಲ್ಲಿ ವಧುವನ್ನು ನೋಡಿ ಮದುವೆಗೆ ಒಪ್ಪಿಕೊಂಡ ಯುವಕನೊಬ್ಬ ಹುಡುಗಿಯರು ಫೋಟೋದಲ್ಲಿ ಸುಂದರವಾಗಿ ಕಾಣುವಂತೆ ಕೆಲವೊಮ್ಮೆ ವಾಸ್ತವಿಕದಲ್ಲಿ ಇರುವುದಿಲ್ಲ. ಮೇಕಪ್ ಮಾಡಿಸಿಕೊಂಡು ಮತ್ತೆ ಕ್ಯಾಮೆರಾದ ಕೈಚಳಕದಲ್ಲಿ ಸುಂದರಿಯಾಗಿ ಫೋಟೋದಲ್ಲಿ ಕಾಣಿಸಿಕೊಂಡಿರುತ್ತಾಳೆ ಎಂದು ತಿಳಿದು ವರಪೂಜೆಯಲ್ಲಿ ಮೊದಲು ಹುಡುಗಿಯನ್ನು ಒಮ್ಮೆ ನೋಡುತ್ತೇನೆ, ಒಪ್ಪಿಗೆಯಾದರೆ ವರಪೂಜೆಗೆ ಸಿದ್ಧವಾಗುತ್ತೇನೆ ಎಂದುಕೊಂಡು, ಸ್ನೇಹಿತ–ಪುರೋಹಿತರ ಮಧ್ಯಸ್ಥಿಕೆಯ ಮೂಲಕ ಹುಡುಗಿಯನ್ನು ನೋಡುತ್ತಾನೆ. ಹುಡುಗಿ ಕುರೂಪಿಯಾಗಿರುವುದಿಲ್ಲ, ಸುಂದರಿಯಾಗಿಯೇ ಇರುತ್ತಾಳೆ. ಸರಿ, ಒಪ್ಪಿಗೆ ನೀಡಿ ಖುಷಿಯಾಗಿರುತ್ತಾನೆ. ಆದರೆ ವರಪೂಜೆಗೆ ಮುಂಚೆ ವರನಿಗೆ ಆಘಾತದ ಸುದ್ದಿ ತಲುಪುತ್ತದೆ. ಹುಡುಗ ನೋಡಿದಾಗ ಹುಡುಗಿಯೂ ಹುಡುಗನನ್ನು ನೋಡಿರುತ್ತಾಳೆ. ಅವಳಿಗೆ ಒಪ್ಪಿಗೆಯಾಗದೆ ಅವಳು ಅವನನ್ನು ತಿರಸ್ಕರಿಸಿರುತ್ತಾಳೆ.

ವಧುವಿನ ತಂದೆಯೇ ವರನ ತಂದೆಗೆ "ನೋಡಿ, ರತ್ನಾ ನನಗೊಬ್ಬಳೇ ಮಗಳು. ಅವಳೂ ಬುದ್ಧಿ ತಿಳಿದೋಳು. ಅವಳ ಇಷ್ಟಕ್ಕೆ ವಿರೋಧವಾಗಿ ಹೋಗೋದಕ್ಕೆ ನಮಗೆ ಇಷ್ಟವಿಲ್ಲ. ರತ್ನಾಗೆ ವರ ಒಪ್ಪಿಗೆ ಆಗಲಿಲ್ಲ. ನಾನೇನು ಬುದ್ಧಿ ಹೇಳಿದರೂ ಅವಳು ಇಷ್ಟಪಡದೇ ಇರೋ ಕೆಲಸಾನ ನಾವು ಮಾಡೋದು

ಚೆನ್ನಾಗಿಲ್ಲ. ಸಂತೋಷವಾಗಿ ನಾಲ್ಕು ದಿನ ಬಾಳೋರು ಅವರು, ನಾವೇನು ಸ್ವಲ್ಪ ದಿನ ಇರೋರು" ಎಂದು ಹೇಳುತ್ತಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ೪ನೇ ದಶಕದಲ್ಲಿ (೧೯೬೦) ವಧುವಿನ ಸ್ವತಂತ್ರ ನಿರ್ಧಾರ, ನಿಜಕ್ಕೂ ಅಂದಿನ ಸಂಪ್ರದಾಯಬದ್ಧ ಮಧ್ಯಮವರ್ಗದ ಸಂಸಾರದಲ್ಲಿ ಕ್ರಾಂತಿಕಾರಕವಾಗಿತ್ತು, ಅನಿರೀಕ್ಷಿತವೂ ಅನಪೇಕ್ಷಿತವೂ ಆಗಿತ್ತು. ತಂದೆತಾಯಿಗಳದೇ ಅಂತಿಮ ತೀರ್ಪಾಗಿದ್ದು, "ಉಪಚಾರಕ್ಕೆ ಏನಮ್ಮಾ ಹುಡುಗ ಒಪ್ಪಿಗೆ ತಾನೇ? ನೀನು ಒಪ್ಪದಿದ್ದರೂ ಮದುವೆ ಗ್ಯಾರಂಟಿ" ಎಂಬ ಅರ್ಥದಲ್ಲಿ ಕೇಳುತ್ತಿದ್ದ ಕಾಲ. ಅದರಲ್ಲೂ ಹುಡುಗ ಅನುಕೂಲವಂತನಾಗಿದ್ದಾನೆ, ಮನೆಯವರು ಸಾಕಷ್ಟು ಉಳ್ಳವರು ಅಂದರಂತೂ ಬೇರೆ ಮಾತೇ ಇಲ್ಲ. ಇಂಥ ಸನ್ನಿವೇಶದಲ್ಲಿ ಈ ನಾಟಕ ಅತಿ ಜನಪ್ರಿಯವಾದುದರಲ್ಲಿ ಅಚ್ಚರಿ ಏನಿಲ್ಲ.

ರಾಜಾರಾಯರು ಸಾಂಪ್ರದಾಯಿಕ ಆಚಾರದ ವ್ಯಕ್ತಿಗಳು. ನಿತ್ಯ ಸ್ನಾನ ಸಂಧ್ಯಾವಂದನೆ, ಹಬ್ಬ ಹರಿದಿನಗಳಲ್ಲಿ ದೇವರ ಪೂಜೆ, ಪುನಸ್ಕಾರ, ವ್ರತ, ಹಬ್ಬ ಆಚರಿಸುತ್ತಿದ್ದರು. ತಾಯಿತಂದೆಯರು ಗತಿಸಿದ ಮೇಲೆ ಅಖಿಲ ಭಾರತ ತೀರ್ಥಯಾತ್ರೆ ಮಾಡಿ, ಎಲ್ಲಾ ಪುಣ್ಯಕ್ಷೇತ್ರಗಳಲ್ಲಿ ಪಿತೃಕಾರ್ಯ ಮಾಡಿ, ಕೆಲವು ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮ ಪಿತೃಗಳ ಹೆಸರಿನಲ್ಲಿ ಧಾರ್ಮಿಕಪೂಜೆ ನಡೆಸಲು ಇಡುಹಣ ಇಟ್ಟವರು. ಇಂಥ ಮಡಿವಂತ ಸಾಹಿತಿಗೆ ಆ ಕಾಲದಲ್ಲಿ ಅಂತರಂಗದಲ್ಲಿ ಆಧುನಿಕ ಸಮಾಜದ ಭಾವನೆಗಳಿದ್ದವು.

ಅವರ ನಾಟಕಗಳ ಬಗ್ಗೆ ಇನ್ನೊಂದು ಮಾತು;

ರಾಜಾರಾಯರು ೬೦ಕ್ಕೂ ಹೆಚ್ಚು ನಾಟಕಗಳನ್ನು ಸುಮಾರು ೬೦ ವರ್ಷಗಳಲ್ಲಿ ಬರೆದರೂ ಅವರಿಗೆ ಆರ್ಥಿಕ ಲಾಭವೇನೂ ಆಗಲಿಲ್ಲ. ಅವರ ನಾಟಕಗಳು ಜನಪ್ರಿಯವಾದಾಗ ಅನುಮತಿ ಪಡೆಯದೆ ನಾಟಕವಾಡಿದವರನ್ನು ಇವರು ದುಡ್ಡು ನೀಡಿ ಅನುಮತಿ ಪಡೆಯಿರಿ ಎಂದು ಹೇಳುತ್ತಿರಲಿಲ್ಲ. ಅವರ ಮಾತಿದು:

"ಮೊದಲನೇ ಮಾತು, ನನ್ನ ಅನುಮತಿ ಪಡೆಯದೆ ನಾಟಕಗಳನ್ನಾಡಬೇಡಿ ಎಂಬುದು. ಇಂತಹ ನಾಟಕವನ್ನು ಇಂತಹ ಕಡೆ ಆಡಿದರೆಂದು ತಿಳಿದರೆ ಬರೆದವರಿಗೆ ಸಂತೋಷವಾಗುತ್ತದೆ. ಲೇಖಕನ ಅನುಮತಿಯಿಲ್ಲದೆ ನಾಟಕವನ್ನಾಡುವುದು ಕಳ್ಳತನದಂತೆಯೇ ಅಪರಾಧ, ದೂಷ್ಯ. ಆದ್ದರಿಂದ ಲೇಖಕನಿಗೆ ಒಂದು ಮಾತನ್ನು ತಿಳಿಸಿ ಅವನಿಗೆ ಸಂತೋಷವನ್ನು ಕೊಟ್ಟು, ಹಾಗೇ ಅಪರಾಧದಿಂದ ದೂರವಾಗಿ ಎಂದು ಪ್ರಾರ್ಥಿಸುತ್ತೇನೆ."

"ಎರಡನೆಯದು, 'ನಾಟಕಕರ್ತೃ ಬರೆಯದಿರುವ ತಮ್ಮ ಮಾತುಗಳಾಡಿ ಲೇಖಕನ ಹೆಸರಿನಲ್ಲಿ ತಮ್ಮದೇ ಆದ ನಾಟಕವನ್ನಾಡುವುದು. ಇದಂತೂ ದೊಡ್ಡ ಅಪಚಾರವೇ ಸರಿ."

"ಮೂರನೆಯದು, 'ಕಥಾವಸ್ತುವನ್ನೇ ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವುದು, ವಧುಪರೀಕ್ಷೆ ನಾಟಕದಲ್ಲಿ ಮದುವೆ ನಿಂತುಹೋಗುವುದು ಒಬ್ಬರಿಗೆ ಸರಿದೋರಲಿಲ್ಲ. ಅವರು ಅದನ್ನು ತಿರುಗಿಸಿ ಮದುವೆ ಆಗುವಂತೆ ಮಾತು ಬದಲಿಸಿದರು."

"ಮತ್ತೊಬ್ಬರು **ಪ್ರಮೀಳೆಯ ಪಾರ್ಲಿಮೆಂಟ್** ನಾಟಕದಲ್ಲಿ ಮದ್ಯಪಾನದ ಮಾತು ಬಂದಿತ್ತು. ನಾಟಕವಾಡುವ ಪ್ರದೇಶ ಪಾನನಿರೋಧ ಪ್ರದೇಶವಾದ್ದರಿಂದ ಆ ಸಂದರ್ಭದ ಮಾತುಗಳಿಗೆ ಕತ್ತರಿ ಪ್ರಯೋಗ ಮಾಡಿ ಉಳಿದ ಭಾಗವನ್ನೇ ಆಡಿದರು. ಇನ್ನೊಬ್ಬರು ಲೇಖಕ ಸಂಭಾವನೆಯ ಪ್ರಸ್ತಾಪ ಬಂದೀತೆಂದು ಹೆದರಿ **ಬುಡುಬುಡಿಕೆ** ನಾಟಕವನ್ನು **ಪ್ರೊಫೆಸರರ ಹೆಂಡತಿ** ಎಂಬ ಹೆಸರಿನಲ್ಲಿ ಆಡಿದರು. ಇಂತಹ ಅನ್ಯಾಯ ಲೇಖಕನಿಗೆ ಸಲ್ಲದು. ಇರುವ ಹಾಗೆ ನಿಮಗೆ ಒಪ್ಪಿಗೆ ಆದರೆ ನಾಟಕವನ್ನಾಡಿ; ಇಲ್ಲದಿದ್ದರೆ ಬಿಡಿ" ಎಂದೂ ಹೇಳಿದ್ದಾರೆ.

ರಾಜಾರಾಯರ ನಾಟಕಗಳ ಜನಪ್ರಿಯತೆಗೆ ಈ ಪ್ರಸಂಗಗಳು ಸಾಕ್ಷಿ ಆದಂತೆ ದುರುಪಯೋಗದ ಮುಖಗಳನ್ನೂ ಇದು ಎತ್ತಿಹೇಳುತ್ತದೆ.

ಕೈವಾರ ರಾಜಾರಾಯರು ನಾಟಕರಂಗದಲ್ಲಿ ನಾನಾ ಏಕಾಂಕಗಳನ್ನು ರಚಿಸಿ ವಿಶಿಷ್ಟ ಸೇವೆ ಸಲ್ಲಿಸಿದ್ದರೂ ನಮ್ಮ ನಾಟಕ ಸಾಹಿತ್ಯಕಾರರು ಇದನ್ನು ಸರಿಯಾಗಿ ಗಮನಿಸಿಯೇ ಇಲ್ಲ. ಇನ್ನು ಸರ್ಕಾರ, ಸಾರ್ವಜನಿಕರು, ಸೇವಾ ಸಂಸ್ಥೆಗಳ ವಿಚಾರ ಬಿಡಿ, ಅವರು ಕಣ್ಣೆತ್ತಿಯೂ ನೋಡಿಲ್ಲ.

ಅವರ ಸೇವೆಯನ್ನು ಕಣ್ಣಾರೆ ಕಂಡು ಅವರ ನಿಕಟ ಸಂಪರ್ಕ ಹೊಂದಿದ್ದ ಶಶಿ ಕಲಾವಿದರು, ಕೆ.ಇ.ಬಿ ಕನ್ನಡ ಸಂಘದವರು, ಸಾಹಿತ್ಯ ಮಂದಿರದವರು ನೀಡಿದ ಸನ್ಮಾನ ಇದಕ್ಕೆ ಅಪವಾದವಾಗಿದೆ.

ಕೈವಾರ ರಾಜಾರಾಯರೊಬ್ಬರಿಗೇ ಅಲ್ಲ, ಇತರ ಅನೇಕ ಗಣ್ಯ ಸಾಹಿತಿಗಳಿಗೂ ಅಷ್ಟೇ. ಇತರರಿಗಿಂತ ಹೆಚ್ಚಾಗಿ ಸೇವೆ ಸಲ್ಲಿಸಿದರೂ ಮಾನ್ಯತೆ-ಗಣ್ಯತೆ-ದೊರೆಯದವರು ಇದ್ದಾರೆ. ಒಮ್ಮೆ ವಿ.ಸೀತಾರಾಮಯ್ಯನವರು ಕೈವಾರ ರಾಜಾರಾಯರಿಗೆ ಹೇಳಿದ ಮಾತು ಮನನೀಯವಾಗಿದೆ.

"ರಾಜಾರಾಯರೇ, ನಾನು ಇಷ್ಟು ಕವನಗಳನ್ನು ರಚಿಸಿದ್ದರೂ ನನ್ನನ್ನು ಯಾರೂ ಕವಿ ಎಂದು ಗುರುತಿಸಲಿಲ್ಲ. ನೀವು ಇಂತಹ ಅನೇಕ ಒಳ್ಳೆಯ ನಾಟಕಗಳನ್ನು ಬರೆದಿದ್ದರೂ ನಿಮ್ಮನ್ನು ನಾಟಕಕಾರ ಎಂದು ಗುರುತಿಸಲಿಲ್ಲ- ಅವರವರು ಕೇಳಿಕೊಂಡು ಬಂದ ಹಾಗೆ ಅವರವರ ಭಾಗ್ಯ ಅಲ್ಲವೇ!"

ಅದಕ್ಕೆ ಕೈವಾರ ರಾಜಾರಾಯರು ಕೊಟ್ಟ ಉತ್ತರ ಆದರ್ಶಪ್ರಾಯವಾಗಿದೆ.

"ಗುರುತಿಸದಿದ್ದರೆ ಹೋಗಲಿ, ನನ್ನ ಸಾಂಸಾರಿಕ ಜೀವನ, ಜೀವನಕ್ಕಾಗಿ ಸೇರಿದ ಕೆಇಬಿ, ಸಾಹಿತ್ಯ ಪರಿಷತ್ತುಗಳಲ್ಲಿ ಪರಿಶುದ್ಧವಾಗಿ ನಡೆಸಿದ ಕೆಲಸ ಮತ್ತು ಹವ್ಯಾಸವಾಗಿ ಕೈಗೊಂಡ ಸಾಹಿತ್ಯಸೇವೆ ಈ ಮೂರರಲ್ಲೂ ನಾನು ಯಶಸ್ವಿಯಾಗಿದ್ದೇನೆ. ಅದು ನನಗೆ ತೃಪ್ತಿ ತಂದಿದೆ. ಇದಕ್ಕಾಗಿ ನಾನು ಪರಮಾತ್ಮನನ್ನು ವಂದಿಸುತ್ತೇನೆ" ಎಂದು ಹೆಮ್ಮೆಯಿಂದ ಹೇಳಿದರು.

ರಾಜಾರಾಯರು ಹೇಳಿದ ಉತ್ತರವನ್ನು ಇನ್ನೊಂದು ದೃಷ್ಟಿಯಿಂದ ಗಮನಿಸಬೇಕು. ಮನುಷ್ಯ ತನ್ನ ಬದುಕಿನಲ್ಲಿ ದೊರಕಿದ್ದಷ್ಟಕ್ಕೆ ಸಮಾಧಾನ ತಂದುಕೊಂಡು ತೃಪ್ತಿಯಿಂದ ಬದುಕನ್ನು ಸಾಗಿಸಬೇಕು. ಇದು ನಮ್ಮ ಬದುಕಿಗೆ ಬೇಕಾದ ಜೀವಂತ ಆದರ್ಶ. ಇದನ್ನು ಸಾಧಿಸಿದ ಮಹಾಪುರುಷರು ಕೈವಾರ ರಾಜಾರಾವ್ ಅವರು. ಶಾಂತ ಸಾಹಿತಿ ಕುವೆಂಪುರವರು, ಟಿ.ಎಸ್.ವೆಂಕಣ್ಣಯ್ಯನವರು ಮಾಡಿದ ಉಪದೇಶದ ಫಲವನ್ನು ಸಾಕ್ಷಾತ್ಕರಿಸಿಕೊಂಡವರು ರಾಜಾರಾಯರು. ಅವರ ಬದುಕಿನ ಮೂರು ರಂಗಗಳಲ್ಲಿ ಶಾಂತಿಪಾಠ ಪಠಿಸಿದವರು. ಮನೆಯಲ್ಲಿ, ಸಂಸ್ಥೆಯಲ್ಲಿ, ಉದ್ಯೋಗಕ್ಷೇತ್ರದಲ್ಲಿ ಎಲ್ಲೇ ಆಗಲಿ ಅವರು ತಮ್ಮ ಮಾತುಕತೆ–ವರ್ತನೆಗಳಲ್ಲಿ "ಅರಳಿದವರೇ ಹೊರತು ಕೆರಳಿದವರಲ್ಲ." ಆತ್ಮ ಗೌರವಕ್ಕೆ ಧಕ್ಕೆ ಬಂದಾಗ ಕೆರಳುವಂಥ ಸನ್ನಿವೇಶದಲ್ಲಿ ಸಾಹಿತ್ಯ ಪರಿಷತ್ತಿಗೆ ರಾಜೀನಾಮೆ ಕೊಟ್ಟು ಹೊರಬಂದವರು ಅವರು.

ಅವರಿಗೆ ಬಾಲ್ಯದಿಂದಲೇ ಬಾಳಿನ ಗುರಿ ಆದರ್ಶಪ್ರಾಯವಾಗಿ ಮೂಡಿತ್ತು. ೧೯೩೦ರಲ್ಲಿ ರಂಗಭೂಮಿಯ ಮೇ ತಿಂಗಳ ಮಾಸಪತ್ರಿಕೆಯಲ್ಲಿ ಅವರ ೨೫ನೇ ವಯಸ್ಸಿನಲ್ಲಿ ಉಕ್ಕುವ ಪ್ರಾಯದಲ್ಲಿ ಅವರು ಬರೆದ ಆಧುನಿಕ ವಚನಗಳಲ್ಲಿ ಒಂದು ಹೀಗಿದೆ.

"ಮನುಜನಾ ಬಾಳು ಕಿಂಚಿತ್ತು. ಕರ್ತವ್ಯ ಹಿರಿದು. ಬಳಸಿ ನಿಂದಿರುವವರು ಬಲು ಮಂದಿ. ಇಂತು ನಿಂದಿರುವವರಿಗೇನನೀವುದು ಸಾಧ್ಯ? ಸರ್ವರಾಸೆಯ ಸಲಿಸಿ ನಡೆಸುವುದೆಂತು ಆರಬಿಡಬಹುದು– ಹೆತ್ತವರು; ನೆಚ್ಚಿದರು; ಬೆರೆತವರು; ಮೇಲಾಗಿ ದೇವರು! ಆರ ಬಿಡಬಹುದು? (ನನ್ನ) ಜೀವನದ ಪೂರ್ಣತೆಗಾಗಿ ಎಲ್ಲರೂ ಶ್ರಮಿಸಿಹರು. ಆರನ್ನು ಬಿಡಲೇಕೆ? ಅವರವರ ಮಟ್ಟಕ್ಕೆ ತಕ್ಕಂತೆ, ಎನಿತು ಸಾಧ್ಯವೋ ಅನಿತು, ಎಲ್ಲರಲಿ ಕರ್ತವ್ಯಕಾಣಿಕೆಯ ಸಲ್ಲಿಸುತ ಕೃತಕೃತ್ಯನಾಗುವೆನು. ಮಾತೆಪಿತರಿಗೆ ಮೊದಲು, ನೆಚ್ಚಿರುವ ನಲಿವಿನಿನಿಯಳಿಗೆ, ಆ ಬಳಿಕ ಮಿತ್ರರಿಗೆ ನೆರೆಯರ್ಗೆ ಆಮೇಲೆ, ಪರಮಾತ್ಮನಿಗೆ ಪ್ರೀತಿ; ಈ ಎಲ್ಲ ಕಾರ್ಯಗಳು. ಮಡದಿ, ತಾಯ್ತಂದೆಯರು, ಬಂಧುಗಳು, ನೆರವಾದವರು, ನೇಹಿಗರು ಎಲ್ಲರಲಿ ನೆಲೆಸಿರುವ ಸರ್ವಾಂತರ್ಯಾಮಿ ದೇವನಿಗೆ ಆ ಸೇವೆ."

ಇದು ಅವರ ಬಾಳಿನ ಆದರ್ಶವಷ್ಟೇ ಅಲ್ಲ, ನಮ್ಮೆಲ್ಲರ ಬಾಳಿನ ಆದರ್ಶವಾಗುವ ಜೀವನ ಫಾರ್ಮುಲಾ–ಬಾಳ ನಿಯಮಾವಳಿ ಆಗಿದೆ.

ಹೀಗೆ ಸೇವೆ ಸಲ್ಲಿಸಿ ಅಮರರಾಗಿದ್ದರಿಂದಲೇ ಇಂದು ನಾವು ಅವರನ್ನು ಸ್ಮರಿಸುವುದು ಕರ್ತವ್ಯವಾಗಿದೆ. ಇಲ್ಲೊಂದು ಪ್ರಶ್ನೆಯನ್ನು ಗಮನಿಸಬೇಕು. ನಮ್ಮಲ್ಲಿ ಅನೇಕ ಮಹಾ ಪುರುಷರ ಜಯಂತಿ, ವರ್ಧಂತಿಗಳನ್ನು ಆಚರಿಸುತ್ತೇವೆ. ಏಕೆಂದರೆ ಅವರು ತಮ್ಮ ಕುಟುಂಬವರ್ಗಕ್ಕೆ ಸಲ್ಲಿಸಿದ ಸೇವೆಗಲ್ಲ ಅಥವಾ ಅವರ ಸುಖಕ್ಕೆ ಹೋರಾಡಿದುದಕ್ಕೆ ಅಲ್ಲ; ನಾಡಿನ ಜನಕ್ಕೆ ಸಂತೋಷ ನೀಡಲು, ಸಾಹಿತ್ಯ ಕಲಾರಂಗಕ್ಕೆ ಕೊಡುಗೆ ನೀಡಲು ಏನು ಶ್ರಮಿಸಿದ್ದಾರೋ, ಆ ಶ್ರಮಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುವುದಕ್ಕಾಗಿ. ನಮ್ಮಲ್ಲಿ ಎಷ್ಟು ಜನರ ದುಡಿಮೆ ಈ ರೀತಿ ಆದರ್ಶಪ್ರಾಯವಾಗಿದೆ ಎಂಬುದನ್ನು ನೆನೆದಾಗ ಈ ಮಾತಿನ ಅರ್ಥವಾಗುತ್ತದೆ. ಸಾತ್ವಿಕಜೀವನ ನಡೆಸಿ, ಸಾತ್ವಿಕ ಆಹಾರ ಸೇವಿಸಿ, ಸಾದಾ ಉಡುಪು ಧರಿಸಿ, ಸರಳ ನಡತೆಯಿಂದ ಜನಮನ ಪ್ರೀತಿ ಗಳಿಸಿ ಜನರಿಗೆ ನಾಟಕ ರಚನೆಗಳ ಮೂಲಕ ಸಂತೋಷ ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತಿಗೆ, ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಸಾರ್ವಜನಿಕ ಸೇವೆ ಸಲ್ಲಿಸಿದ ಧನ್ಯಜೀವಿ ಕೈವಾರ ರಾಜಾರಾಯರು.

ಕೈವಾರ ರಾಜಾರಾಯರು ೩೦ ವರುಷಗಳು ಕೆ.ಇ.ಬಿ. ಇಲಾಖೆಯಲ್ಲಿ, ೧೭ ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ, ೧೨ ವರ್ಷ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ, ಡಿ.ವಿ.ಜಿ., ಜಿ.ಶಿವಮೂರ್ತಿ ಶಾಸ್ತ್ರಿ, ಎ.ಆರ್.ಕೃಷ್ಣಶಾಸ್ತ್ರಿ, ಎಂ.ಆರ್.ಶ್ರೀನಿವಾಸಮೂರ್ತಿ, ವಿ.ಸೀತಾರಾಮಯ್ಯ, ಸಿ.ಕೆ.ವೆಂಕಟರಾಮಯ್ಯ, ಎಸ್.ವಿ.ರಂಗಣ್ಣ, ಎಂ.ವಿ.ಸೀತಾರಾಮಯ್ಯ ಮುಂತಾದ ವಿದ್ವಾಂಸರ, ಸಾಹಿತಿಗಳ ನೇತೃತ್ವದಲ್ಲಿ ಎಲೆಮರೆಯಕಾಯಿ ಸೇವೆಯನ್ನು ಸಲ್ಲಿಸಿದವರು.

ಅವರ ಸೇವೆ ಕೇವಲ ನಾಟಕ ರಚನೆಗೆ ಸೀಮಿತವಾದುದಲ್ಲ, ಇತರ ಕ್ಷೇತ್ರಗಳಲ್ಲೂ ಸಲ್ಲಿಸಿದ್ದಾರೆ. ಆದರೆ ನಮ್ಮ ಜನ ಅದನ್ನು ಗಮನಿಸಿಲ್ಲ. ಅವರಿಗೆ ಸಿದ್ಧಿ–ಪ್ರಸಿದ್ಧಿ ನಾಟಕಗಳಿಂದ ಸಿಕ್ಕಿದ್ದು ನಿಜ. ಆದರೆ ಅವರು ನಿಜವಾಗಿ ಬಹುಮುಖಿ ಸಾಹಿತಿ ಆಗಿದ್ದರು.

ಭಾರತರತ್ನ ಜವಾಹರ್(೧೯೫೫), ರಾಜಮಂತ್ರ, ಪ್ರವೀಣ ಎಚ್.ವಿ. ನಂಜುಂಡಯ್ಯನವರು(೧೯೭೫), ಭಾರತದ ಶ್ರೀಕೃಷ್ಣ(೧೯೮೬), ಪ್ರಸಿದ್ಧ ಪುರುಷರ ಪ್ರಣಯ ಪ್ರಸಂಗಗಳು(೧೯೯೨) ಮುಂತಾದ ಜೀವನಚಿತ್ರಗಳನ್ನು ರಚಿಸಿದ್ದಾರೆ.

ಲಿಲ್ಲಿ, ಹಸು ಸಾಕಿದ ಕತೆ, ವೆಚ್ಚ ಮಾಡಿದ್ದೇ ಮೆಚ್ಚು, ಜೀವಸಮಾಧಿ ಮೊದಲಾದ ಅನೇಕ ಸಣ್ಣಕತೆಗಳನ್ನೂ ಬರೆದಿದ್ದಾರೆ.

ಕ್ರಿಕೆಟ್ ದರ್ಶನ, ಮನುಷ್ಯನ ಆತ್ಮಕಥೆ, ನಾನು ಮೊದಲು ಮನೆಗೆ ಹೋದದ್ದು, ಭಗವದ್ಗೀತೆಯಲ್ಲಿ ಹೇಳುವ ನಿಷ್ಕಾಮ ಕರ್ಮ ಮುಂತಾದ ಪ್ರಬಂಧಗಳನ್ನು ಬರೆದಿದ್ದಾರೆ.

೧೯೩೭ರಲ್ಲಿ ತೊರವೆ ರಾಮಾಯಣದ ವಿಮರ್ಶೆ ಬರೆದು ಬಿ.ಎಂ.ಶ್ರೀ. ಅವರಿಂದ ರಜತ ಕರಂಡಕವನ್ನು ಪಡೆದಿದ್ದಾರೆ. ಅದನ್ನು ಹೆಮ್ಮೆಯಿಂದ ನನಗೆ ತೋರಿಸಿದ್ದಾರೆ.

ಅವರ ಹವ್ಯಾಸಗಳು ಹಲವಾರು. ಕ್ರಿಕೆಟ್ ಬಗ್ಗೆ ಅವರಿಗಿದ್ದ ಆಸಕ್ತಿಗೆ ಕ್ರಿಕೆಟ್ ದರ್ಶನ ಎಂಬ ಅಪ್ರಕಟಿತ ಗ್ರಂಥವೇ ಸಾಕ್ಷಿ. ಹೀಗೆ ವಿಮರ್ಶಕ, ನಾಟಕಕಾರ, ಕತೆಗಾರ, ಪ್ರಬಂಧಕಾರ, ವರದಿಗಾರ, ಜೀವನಚರಿತ್ರಕಾರರೂ ಆಗಿದ್ದಾರೆ. ಅವರ ಇನ್ನೊಂದು ಹುಚ್ಚು ಎಂದರೆ ಸಿನಿಮಾ ನೋಡುವುದು. ಶಾಂತಾ ಆಪ್ಟೆ ಅವರ ಮೆಚ್ಚಿನ ನಟಿ ಆಗಿದ್ದರು. ಅವರು ತಮ್ಮ ನಾಟಕ **ವಧುಪರೀಕ್ಷೆ**ಯಲ್ಲಿ ರಂಗವೇದಿಕೆ ಸಿದ್ಧತೆಯನ್ನು ವಿವರಿಸುವಾಗ ಮೇಲುಗಡೆ ಶಾಂತಾ ಆಪ್ಟೆಯ ಅಮೃತಮಂಥನ್ ಚಿತ್ರದ ಒಂದು ಭಂಗಿಯ ಫೋಟೋ ತೂಗು ಹಾಕಿರುತ್ತದೆ ಎಂದು ವಿವರಿಸುತ್ತಾರೆ.

ಸಾಹಿತ್ಯ ಪರಿಷತ್ತಿನಲ್ಲಿ ಮ್ಯಾನೇಜರ್ ಆಗಿದ್ದಾಗ ಮಧ್ಯಾಹ್ನ ಮ್ಯಾಟಿನಿ ಷೋಗಳಿಗೆ ಕನ್ನಡ ಚಿತ್ರಗಳಿಗೆ ಚಾಮರಾಜಪೇಟೆಯ ಉಮಾ ಟಾಕೀಸಿಗೆ ಸದ್ದಿಲ್ಲದೆ ಗಾಡಿ ಬಿಡುತ್ತಿದ್ದರು. ಒಮ್ಮೆ ಮೈಸೂರಿನಲ್ಲಿ ಒಂದು ಮದುವೆ ಸಮಾರಂಭಕ್ಕೆ ಅಂತ ಕಾಣುತ್ತೆ, ಮನೆ ಮಂದಿ ಸಮೇತ ಹೊರಟಿದ್ದರು. ಅಲ್ಲಿ ಬಂಧುಗಳು, ಮನೆಯವರು ನಂಜನಗೂಡಿಗೆ ಹೊರಟಾಗ ಇವರನ್ನು ಕರೆದರು. ನನಗೆ ಆಯಾಸವಾಗಿದೆ, ನೀವೆಲ್ಲ ಹೋಗಿಬನ್ನಿ, ನಾನು ಮನೆಯಲ್ಲಿ ಸುಧಾರಿಸಿಕೊಳ್ಳುತ್ತೇನೆ ಎಂದು ಹೇಳಿ ಒಬ್ಬರೇ ಮನೆಯಲ್ಲಿ ಉಳಿದರು. ಅವರೆಲ್ಲ ಆ ಕಡೆ ಹೋದ ಮೇಲೆ ಇತ್ತ ಕಡೆಗೆ ಕನ್ನಡ ಸಿನಿಮಾವೊಂದಕ್ಕೆ ಹೋಗಿಬಂದರು ಆಯಾಸ ಪರಿಹಾರಕ್ಕೆ!

ಅವರದು ವಿಶಿಷ್ಟ ವ್ಯಕ್ತಿತ್ವ. ಸದಾ ಅವರ ಕೋಟಿನ ಜೇಬುಗಳಲ್ಲಿ ದ್ರಾಕ್ಷಿ, ಗೋಡಂಬಿ, ಬಾದಾಮಿ, ಕಲ್ಲು ಸಕ್ಕರೆ ತುಂಬಿರುತ್ತಿತ್ತು. ಅದನ್ನು ಮೆಲ್ಲುವುದು ಅವರ ಅಭ್ಯಾಸ. ಇನ್ಯಾವ ಚಟವೂ ಇರಲಿಲ್ಲ. ಯಾರ ಮೇಲಾದರೂ ತುಂಬಾ ಪ್ರೀತಿ ಬಂದರೆ ಅವರಿಗೆ ಒಂದು ಚೂರು ಕೊಡುತ್ತಿದ್ದರು. ಅದನ್ನು ಎಲ್ಲರೆದುರಿಗೆ ತಿನ್ನುತ್ತಿರಲಿಲ್ಲ. ಕಚೇರಿಯಲ್ಲಿ ಕೆಲಸ ಮಾಡುವಾಗ ಸದ್ದಿಲ್ಲದೆ ತಮ್ಮ ಪಾಡಿಗೆ ತಾವು ಮೆಲ್ಲಗೆ ಬಾಯಿಗೆ ಹಾಕಿಕೊಳ್ಳುತ್ತಿದ್ದರು ಅಕಸ್ಮಾತ್ ಎದುರಿಗೆ ಯಾರಾದರೂ ಬಂದರೆ ಅವರಿಗೂ ನೀಡುತ್ತಿದ್ದರು. ನನಗೂ ಒಂದು ಅಂಥ ಭಾಗ್ಯ ದೊರಕಿತ್ತು, ಆಗಾಗ. ಬಹುಶಃ ಅವರ ಆರೋಗ್ಯದ ಗುಟ್ಟುಗಳಲ್ಲಿ ಇದೊಂದು ಎಂದು ಕಾಣುತ್ತದೆ. ಸಾಕಷ್ಟು ದೀರ್ಘಕಾಲ ಬದುಕಿದವರು.

೨೯-೨-೧೯೧೨ರಲ್ಲಿ ಜನಿಸಿದ ರಾಜಾರಾವ್, ಸಹಸ್ರ ಚಂದ್ರದರ್ಶನ ಮಾಡಿ ೩-೧-೧೯೯೩ರಲ್ಲಿ ನಿಧನರಾದರು. ೮೧ ವರುಷಗಳ ದೀರ್ಘಬಾಳ್ವೆಯಲ್ಲಿ ನೆಮ್ಮದಿಯ ಜೀವನ ನಡೆಸಿದರು.

ಅವರು ನಾಟಕದ ರಾಜಾರಾಯರು ಆಗಿದ್ದ ಹಾಗೇ ಸೈಕಲ್ ರಾಜಾರಾಯರೂ ಆಗಿದ್ದರು. ಎಲ್ಲಿ ಹೋದರೂ ಸೈಕಲ್ ಅವರ ಅವಿಭಾಜ್ಯಾಂಗ ಆಗಿತ್ತು. ಅದಕ್ಕೂ ಹಿಂದೆ ಅವರು ಮೋಟಾರ್ ಸೈಕಲ್ ಓಡಿಸಿದ್ದೂ ಉಂಟು. ಅವರ ಕ್ಲೋಸ್ ಕಾಲರ್ ಕೋಟು, ಕರಿಟೋಪಿ, ಕಚ್ಚೆ ಪಂಚೆ ಆಫೀಸ್ ಡ್ರೆಸ್ ಆಗಿದ್ದರೆ, ಕಚ್ಚೆಪಂಚೆ, ಜುಬ್ಬ ಬೇರೆ ಕಡೆ ಹೋದಾಗ ಅವರ ಯೂನಿಫಾರಂ ಆಗಿತ್ತು.

ಕ್ಲೀನಾಗಿ ಷೇವ್ ಮಾಡಿಕೊಂಡು ಸದಾ ಪರಿಶುಭ್ರರಾಗಿರುತ್ತಿದ್ದರು. ಅಚ್ಚುಕಟ್ಟಾಗಿ ಕಚ್ಚೆ ಹಾಕಿ ಉಡುಪು ಧರಿಸುತ್ತಿದ್ದರು. ಇದಕ್ಕೆ ಕಾರಣ ಡಿ.ವಿ.ಜಿ. ಅವರು. ಇದನ್ನು ಒಂದೆಡೆ ಅವರೇ ಹೇಳಿಕೊಂಡಿದ್ದಾರೆ. (ಡಿ.ವಿ.ಜಿ. ಮತ್ತು ಗೋಖಲೆ ಸಾರ್ವಜನಿಕ ಸಂಸ್ಥೆ ಲೇಖನ, ವನಸುಮ, ಡಿ.ವಿ.ಜಿ. ಗೌರವ ಗ್ರಂಥದಲ್ಲಿ ಪುಟ ೪೨) ಅವರ ಮಾತಿನಲ್ಲೇ ಕೇಳಿ:

ಸಾಹಿತ್ಯ ಪರಿಷತ್ತಿನಲ್ಲಿ ಡಿ.ವಿ.ಜಿ. ಅವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಕಾಲದಲ್ಲಿ ನಡೆದ ಪ್ರಸಂಗ ಇದು:

"ಒಂದು ದಿನ ನಾನು ರುಜು ಮಾಡುವುದಕ್ಕೆ ಕೆಲವು ಕಾಗದಗಳನ್ನು ಅವರ ಮುಂದೆ ಇಟ್ಟೆ. ಅವರು ನನ್ನ ಕೈಬೆರಳುಗಳನ್ನು ನೋಡಿದರು. ನಾನು ಬೆರಳಿನ ಉಗುರುಗಳನ್ನು ಕತ್ತರಿಸಿಕೊಂಡಿರಲಿಲ್ಲ. ಅವು ದೀರ್ಘವಾಗಿ ಬೆಳೆದಿದ್ದವು. ಡಿ.ವಿ.ಜಿ. ಅವರು ನನ್ನ ಬೆರಳನ್ನು ನೋಡಿ, "ಏನು! ನೀವು ವೀಣೆ ನುಡಿಸುವುದನ್ನು ಅಭ್ಯಾಸ ಮಾಡುತ್ತಿದ್ದೀರಾ?" ಎಂದು ಕೇಳಿದರು. ನಾನು ಮಾತಾಡಲಿಲ್ಲ, ಆದರೆ ಅವರ ಅಭಿಪ್ರಾಯ ಅರ್ಥವಾಗಿತ್ತು.

ರಾಜಾರಾಯರು ಶಿಸ್ತಿನಿಂದ ಕಚ್ಚೆ ಹಾಕುತ್ತಿದ್ದರು. ವಿ.ಸೀಯವರು ಧರಿಸಿದ ಹಾಗೆ. ಅದಕ್ಕೂ ಡಿ.ವಿ.ಜಿ, ಅವರೇ ಕಾರಣ. ಡಿ.ವಿ.ಜಿ. ಅವರು ಯಾವಾಗಲೂ ಪಂಚಗಚ್ಚೆ ಹಾಕಿ ಪಂಚೆ ಉಡುತ್ತಿದ್ದರು. ಉಡುವ ತೊಡುವ ಬಟ್ಟೆ ತುಂಬಾ ಶುಭ್ರವಾಗಿರುತ್ತಿತ್ತು. ಪರಿಷತ್ತಿನ ಕೆಲಸಗಾರರು ಕೂಡಾ ಹಾಗೇ ಶಿಸ್ತಿನಿಂದ ಬರಬೇಕೆಂಬುದೇ ಅವರ ಆಶಯ. ಒಂದು ದಿನ ರಾಜಾರಾಯರು ದಟ್ಟಿ ಪಂಚೆ ಉಟ್ಟುಕೊಂಡು ಕಚೇರಿಗೆ ಹೋಗಿದ್ದರು. ಡಿ.ವಿ.ಜಿ. ಅವರಿಗೆ ಅದನ್ನು ಕಂಡು ತುಂಬಾ ರೇಗಿಹೋಯಿತು. ಕೂಡಲೇ ರಾಜಾರಾಯರನ್ನು ಕಾಗದಪತ್ರಗಳನ್ನಿಟ್ಟಿರುವ ಒಂದು ಉಗ್ರಾಣದ ಕೊಠಡಿಗೆ, ಅದು ಪರಿಷತ್ತಿನ ಹಳೇ ಕಟ್ಟಡದ ಹಾಲಿನಲ್ಲಿತ್ತು ಎಳೆದೊಯ್ದರು. "ನನ್ನನ್ನು ಕರೆದುಕೊಂಡು

ಹೋಗಿ, ನನ್ನ ಪಂಚೆಯನ್ನು ಪರಪರನೆ ಕಿತ್ತುಹಾಕಿ, ಕಚ್ಚೆ ಹಾಕಿ ಪಂಚೆ ಉಟ್ಟುಕೊಳ್ಳುವಂತೆ ಹೇಳಿದರು." ರಾಜಾರಾಯರು ಹೇಳುತ್ತಾರೆ: "ಮುಂದೆಂದೂ ನಾನು ದಟ್ಟಿ ಸುತ್ತಿಕೊಂಡು ಹೊರಗೆ ಕಾಲಿಡುತ್ತಿರಲಿಲ್ಲ."

ಕೈವಾರ ರಾಜಾರಾಯರ ಒಂದು ಹಿರಿಮೆ ಎಂದರೆ ಕತ್ತೆ ಚಾಕರಿ ಮಾಡುವುದು. ಕಚೇರಿಯಲ್ಲೇ ಆಗಲಿ, ಎಲ್ಲೇ ಆಗಲಿ ಒಂದು ಕೆಲಸಕ್ಕೆ ತೊಡಗಿದರೆ ಅದನ್ನು ಅಚ್ಚುಕಟ್ಟಾಗಿ, ಪೂರ್ಣವಾಗಿ ಮಾಡುವುದರಲ್ಲಿ ಎತ್ತಿದ ಕೈ. ರಾಜಾರಾಯರು ಕೈಹಾಕಿದರೆ ಆ ಕೆಲಸ ಮುಗಿದ ಹಾಗೇ. ಕೆಇಬಿ ಕಚೇರಿಯಲ್ಲಿ ಅವರು ಕೇವಲ ಸೇವೆ ಅಲ್ಲ, ಅಮೋಘ ಸೇವೆ, ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಏಕೀಕರಣಕ್ಕೆ ಮುಂಚೆ ಮದರಾಸ್, ಬೊಂಬಾಯಿ, ಮೈಸೂರು ಪ್ರಾಂತ್ಯಗಳಲ್ಲಿ ಇದ್ದ ಬೇರೆ ಬೇರೆ ಇಲಾಖಾ ನಿಯಮಗಳನ್ನೆಲ್ಲ ಆಮೂಲಾಗ್ರವಾಗಿ ಅಧ್ಯಯನ ಮಾಡಿ, ಅಕೌಂಟ್ಸ್ ಕೋಡ್‌ಗಳನ್ನು, ಮ್ಯಾನ್ಯುಯಲ್‌ಗಳನ್ನು ರಚಿಸಿದ ಸಾಹಸಿ ಅವರು. ಕೋರ್ಟು ಕಚೇರಿಗಳಲ್ಲಿ ತಮ್ಮ ಕೆ.ಇ.ಬಿ. ಇಲಾಖೆಯ ಹಾಗೂ ಪರಿಷತ್ತಿನ ಮೊಕದ್ದಮೆಗಳನ್ನು ಗೆದ್ದುಕೊಟ್ಟ ಹಿರಿಮೆ ಅವರದು. ಅವರು ಲಾಯರ್ ಆಗಿರಲಿಲ್ಲ. ಯಾವ ಲಾಯರಿಗೂ ಅವರು ಕಡಿಮೆ ಇರಲಿಲ್ಲ. ಅವರ ಉದ್ಯೋಗನಿಷ್ಠೆ, ಕಾರ್ಯಕ್ಷಮತೆಗೂ ಮೂಲ ಮಾರ್ಗದರ್ಶಕರು ಡಿ.ವಿ.ಜಿ ಅವರೇ. ಕತ್ತೆಚಾಕರಿ ವಿದ್ಯಾ ದಾನ ಮಾಡಿದವರು. ಇದಕ್ಕೆ ಒಂದು ನಿದರ್ಶನವನ್ನು ಕೈವಾರ ಅವರೇ ಹೇಳಿಕೊಂಡಿದ್ದನ್ನು ಈ ಕೆಳಗೆ ನೀಡಿದ್ದೇನೆ:

ಕೈವಾರ ರಾಜಾರಾಯರ ಮಾತುಕಥೆಗಳಲ್ಲೂ ಅವರ ನಾಟಕಗಳಲ್ಲಿಯೂ ವಿನೋದಪರತೆ ಕಂಡುಬರುತ್ತಿತ್ತು. ಸರಳ ಮತ್ತು ಸರಸ ಮಾತುಗಾರರಾಗಿದ್ದರು. ಅವರದು ವಿಶಾಲ ಲೋಕಾನುಭವ. ಒಮ್ಮೆ ನನ್ನೊಂದಿಗೆ ಮಾತಾಡುತ್ತಾ ಹೇಳಿದರು, "ನೋಡಿ, ನನ್ನ ಹುಟ್ಟುಹಬ್ಬವನ್ನು ಪ್ರತಿ ವರ್ಷ ಆಚರಿಸಬೇಕಾಗಿಲ್ಲ. ನಾಲ್ಕು ವರ್ಷಗಳಿಗೊಮ್ಮೆ ಆಚರಿಸಿದರೆ ಸಾಕು." "ಏಕೆ ಸಾರ್?" ಅಂತ ಕೇಳಿದೆ. ಪ್ರತಿ ವರ್ಷ ಆಚರಿಸಿದರೆ ಅಡ್ಡಿ ಏನು ಎಂದು ಕೇಳಿದೆ. "ನಾನು ಹುಟ್ಟುವುದೇ ನಾಲ್ಕು ವರ್ಷಗಳಿಗೊಮ್ಮೆ" ಅಂದರು. "ಅಂದರೆ?" ಅಂದೆ ನಾನು. "ನಾನು ಹುಟ್ಟಿದ್ದು ಲೀಪ್ ಇಯರ್‌ನ ಫೆಬ್ರುವರಿ ೨೯. ಫೆಬ್ರುವರಿಯಲ್ಲಿ ೨೯ನೇ ದಿನ ಬರುವುದು ನಾಲ್ಕು ವರ್ಷಕ್ಕೊಮ್ಮೆ ಅಲ್ಲವೇ" ಅಂದರು. ನಕ್ಕೆವು. "ಹಾಗಾದರೆ ಈ ವರ್ಷ ಮತ್ತೆ (೧೯೭೬) ನಾಲ್ಕು ಸ್ವೀಟುಗಳನ್ನು ಒಟ್ಟೊಟ್ಟಿಗೇ ಕೊಡಬೇಕು" ಅಂದೆ.

ಪರಿಷತ್ತಿಗೆ ಸೈಕಲ್ಲಿನಲ್ಲಿ ಬರುತ್ತಿದ್ದರು. ಬಾಗಿಲಲ್ಲಿ ಜವಾನ ಕರಿಯಣ್ಣನನ್ನು ಕರೆದು ಒಳಗಿಡು ಎನ್ನುತ್ತಿದ್ದರು. ಅವನು ಮೆಟ್ಟಿಲ ಮೇಲೆ ಎತ್ತಿಕೊಂಡು (ಈಗ

ಪ್ರೆಸ್ ಇರುವ ಕಟ್ಟಡದಲ್ಲಿ ಆಫೀಸ್ ಇತ್ತು) ಮೇಲಿಡುತ್ತಿದ್ದ. ನಾನೊಮ್ಮೆ "ರಾಜಾರಾಯರೇ, ಸೈಕಲ್ಲನ್ನು ದಿನಾ ಅವನ ಕೈಲಿ ಮೇಲೆತ್ತಿಸಿ ಒಳಗೇಕೆ ಇಡಿಸ್ತೀರಿ? ಅಲ್ಲೇ ಕೆಳಗೆ ಇದ್ದರೇನು? ಜನ ಓಡಾಡ್ತಾ ಇರ್ತಾರೆ, ಯಾರು ತೊಗೋತಾರೆ? ಬೀಗ ಹಾಕಿದರೆ ಆಯ್ತು ಇಷ್ಟಕ್ಕೂ" ಅಂದೆ. ಅದಕ್ಕೆ ಅವರು "ನಿಮಗೆ ಗೊತ್ತಿಲ್ಲ, ಮಕ್ಕಳು ಹತ್ತಿರದಲ್ಲಿದ್ದರೆ ಸಾಕೆ? ಕಣ್ಣೆದುರಿಗಿರಬೇಕು. ಶಿವನಗುಡಿಯಲ್ಲಿ ನಂದಿ ಶಿವನ ಕಣ್ಣೆದುರಿಗೆ ಇರ್ತಾನೆ. ದೂರ ಇರ್ತಾನಾ?" ಎಂದರು. "ಹೌದು, ಎಷ್ಟಾದರೂ ಅದು ಅವನ ವಾಹನ, ಇದು ನಿಮ್ಮ ವಾಹನ ಅಲ್ವೆ" ಎಂದೆ.

ಮರುದಿನ ಎರಡನೆಯ ವಿಶೇಷ ವಸಂತ ಸಾಹಿತ್ಯೋತ್ಸವ ಪ್ರಾರಂಭವಾಗಬೇಕಿತ್ತು. ಆ ಪ್ರಾರಂಭೋತ್ಸವದ ಅಧ್ಯಕ್ಷ ಭಾಷಣವನ್ನು ಬರೆಸಲು ಅಧ್ಯಕ್ಷರಿಗೆ ಪುರುಸೊತ್ತಾಗಿರಲಿಲ್ಲ. ರಾತ್ರಿ ೮ ಗಂಟೆಗೆ ಭಾಷಣ ಹೇಳಲು ಪ್ರಾರಂಭ ಮಾಡಿದರು. ನಾನು ಶೀಘ್ರಲಿಪಿಯಲ್ಲಿ ಬರೆದುಕೊಳ್ಳುತ್ತಿದ್ದೆ. ಸುಮಾರು ೧೨ ಗಂಟೆಗೆ (ರಾತ್ರಿ) ಅವರ ಹೇಳಿಕೆ (ಉಕ್ತಲೇಖನ) ಮುಗಿಯಿತು. ಅದನ್ನು ಮನೆಗೆ ಹೋಗಿ ಊಟ ಮಾಡಿ ಬರೆಯಲು ಪ್ರಾರಂಭ ಮಾಡಬೇಕೆಂದೂ ಬೆಳಗಿನ ಝಾವ ಅವರು ಮನೆಗೆ ಬರುವುದಾಗಿಯೂ ಹೇಳಿದರು. (ಆಗ ಗಾಂಧಿ ಬಜಾರಿನಲ್ಲಿ ಮಾರ್ಕೆಟ್ ರಸ್ತೆಯಲ್ಲಿ ರಾಜಾರಾಯರ ಮನೆ ಇತ್ತು.) ನನಗೆ ತುಂಬಾ ಬೇಜಾರಾಗಿತ್ತು. ವಿಷಯವೇನೆಂದರೆ ಆ ದಿನ ನನ್ನ ಹೆಂಡತಿಗೆ ಸೀಮಂತ. ನಮ್ಮ ಮಾವನವರು ಮರುದಿನ ನನ್ನ ಹೆಂಡತಿಯನ್ನು ಪ್ರಥಮ ಹೆರಿಗೆಗೆ ಮೈಸೂರಿಗೆ ಕರೆದುಕೊಂಡು ಹೋಗುವುದು ಗೊತ್ತಾಗಿತ್ತು. ಹೀಗಾಗಿ ಆ ರಾತ್ರಿ ನಾನು ಬಿಡುವಾಗಿರಬೇಕಾಗಿತ್ತು. ಆದರೆ ಡಿ.ವಿ.ಜಿ. ಅವರ ಕೆಲಸ ನನಗೆ ಆ ಬಿಡುವನ್ನು ಕೊಡಲಿಲ್ಲ. ಬೆಳಗಿನ ಝಾವ ಐದು ಗಂಟೆಗೆ ಮನೆಗೆ ಬಂದರು. ಆ ಹೊತ್ತಿಗೆ ಮುಕ್ಕಾಲು ಭಾಗ ಮಾತ್ರ ಬರೆಯಲಾಗಿತ್ತು. ಅವರು ಅದನ್ನು ತೆಗೆದುಕೊಂಡು ಹೋಗಿ ಉಳಿದುದನ್ನು ಬರೆದು ತಾ ಎಂದು ಹೇಳಿ ಹೊರಟು ಹೋದರು. ಡಿ.ವಿ.ಜಿ. ಅವರು ಕೆಲಸದ ವಿಷಯದಲ್ಲಿ ಕಠಿಣ ಮನಸ್ಕರು, ಕಟ್ಟುನಿಟ್ಟಾಗಿ ತಾವೂ ದುಡಿಯುವವರಲ್ಲದೆ ಇತರರನ್ನೂ ಹಾಗೇ ದುಡಿಸಿಕೊಳ್ಳುತ್ತಿದ್ದರು.

ಹೀಗೆ ಡಿ.ವಿ.ಜಿ. ಗರಡಿಯಲ್ಲಿ ಪಳಗಿದ ಜಟ್ಟಿ ಆಗಿದ್ದರಿಂದ ರಾಜಾರಾಯರು ಎಲ್ಲ ಕಾರ್ಯಗಳನ್ನು ಅಚ್ಚುಕಟ್ಟಾಗಿ ಹಠ ಹಿಡಿದು ಮಾಡುತ್ತಿದ್ದರು.

ರಾಜಾರಾಯರು ಶೀಘ್ರಲಿಪಿಯಲ್ಲಿ ಬರೆದುಕೊಂಡರು ಎಂಬ ಮಾತನ್ನು ಇಲ್ಲಿ ಗಮನಿಸಬೇಕು.

ಕನ್ನಡ ಶೀಘ್ರಲಿಪಿ ಇತಿಹಾಸದಲ್ಲಿ ಕೈವಾರ ರಾಜಾರಾಯರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಕನ್ನಡದಲ್ಲಿ ಶೀಘ್ರಲಿಪಿ ರಚಿಸಿದವರಲ್ಲಿ ಮೊದಲಿಗರು ಎಂದರೆ

ಮಂಗಳೂರಿನ ರೆವೆರೆಂಡ್ ಲೂಥಿ ಎಂಬುವವರು ೧೯೦೭ರಲ್ಲಿ "ಕನ್ನಡ ನುಡಿ ಹಿಡಿ" ಎಂಬ ಗ್ರಂಥವನ್ನು ರಚಿಸಿ ಪ್ರಕಟಿಸಿದರು. ಈ ಶೀಘ್ರಲಿಪಿ ಪದ್ಧತಿಯಲ್ಲಿ ಕನ್ನಡ ಭಾಷಣಗಳನ್ನು ವೇಗವಾಗಿ ಬರೆದುಕೊಳ್ಳುವುದರಲ್ಲಿ ಸಫಲವಾಗಿರಲಿಲ್ಲ. ಅನಂತರ ೧೯೨೪ರಲ್ಲಿ ಕನ್ನಡ, ತೆಲುಗು, ತಮಿಳು, ಹಿಂದಿ ಚತುರ್ಭಾಷಾ ಶೀಘ್ರಲಿಪಿ ವಿಶಾರದರಾದ ವೆಲ್ಲೂರಿನ ರಾವ್ ಸಾಹೇಬ್ ಶ್ರೀನಿವಾಸರಾಯರು ಕ್ಯಾನರೀಸ್ ಷಾರ್ಟ್‌ಹ್ಯಾಂಡ್ ಮ್ಯಾನ್ಯುಯಲ್ ಎಂಬ ಪುಸ್ತಕವನ್ನು ಪ್ರಕಟಿಸಿದರು. ಇದು ಮದ್ರಾಸಿನ ಪೋಲೀಸ್ ಇಲಾಖೆಯಲ್ಲಿ ಬಳಕೆ ಆಗಿತ್ತು ಅಷ್ಟೆ. ೧೯೩೩ರಲ್ಲಿ ಮೈಸೂರು ನ್ಯಾಯ ವಿಧಾಯಕ ಸಭೆಯ ಮುಖ್ಯ ವರದಿಗಾರರಾದ ಶ್ರೀ ಎನ್.ದೇವರಾವ್ ಅವರು ಪಿಟ್ಮನ್ ಪದ್ಧತಿಯಿಂದ ಭಿನ್ನವಾದ ತಮ್ಮದೇ ಆದ ಶೀಘ್ರಲಿಪಿಯನ್ನು ರಚಿಸಿ ಬೋಧಿಸಿ ತರಬೇತಿ ಕೊಟ್ಟರು. ಅವರ ಪಠ್ಯಗ್ರಂಥ ಮ್ಯಾನ್ಯುಯಲ್ ಆಫ್ ಕನ್ನಡ ಷಾರ್ಟ್‌ಹ್ಯಾಂಡ್ ಗ್ರಂಥವನ್ನು ಸರ್ಕಾರ ಪ್ರಕಟಿಸಿತು. ಆಗ ಅದು ಪ್ರಯೋಗಾವಸ್ಥೆಯಲ್ಲಿದ್ದಾಗ ಅದರ ಯಶಸ್ಸನ್ನು ಪರೀಕ್ಷಿಸಲು ದೇವರಾವ್ ಅವರು ಎ.ಆರ್. ಕೃಷ್ಣಶಾಸ್ತ್ರಿಗಳನ್ನು (ಆಗ ಸೆಂಟ್ರಲ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದರು) ಕೇಳಿಕೊಂಡಾಗ ಜನಗಣತಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಪ್ರಸಿದ್ಧ ಕಾದಂಬರಿಕಾರರಾದ ಮ.ನ.ಮೂರ್ತಿ (ಎಂ.ನರಸಿಂಹಮೂರ್ತಿ) ಮತ್ತು ಇವರನ್ನು ಕಳಿಸಿದರು. ಅವರು ಯಶಸ್ವಿಯಾಗಿ ಕನ್ನಡ ಶೀಘ್ರಲಿಪಿ ಕಲಿತು ನ್ಯಾಯ ವಿಧಾಯಕ ಸಭೆಯ ಹಿರಿಯರ ಮತ್ತು ಕನ್ನಡ ಸಾಹಿತಿಗಳ ಉಪನ್ಯಾಸಗಳನ್ನು ಯಶಸ್ವಿಯಾಗಿ ಶೀಘ್ರಲಿಪಿಯಲ್ಲಿ ಬರೆದುಕೊಂಡು ಲಿಪ್ಯಂತರ ಮಾಡಿದರು. ಮ.ನ.ಮೂರ್ತಿಗಳ ನಂತರ ಕನ್ನಡ ಧೀಮಂತ ಸಾಹಿತಿಗಳ ವಿದ್ವಾಂಸರ ಭಾಷಣಗಳನ್ನು ಶೀಘ್ರಲಿಪಿ ಮೂಲಕ ಕನ್ನಡಕ್ಕೆ ಇಳಿಸಿದವರು ರಾಜಾರಾವ್ ಅವರೇ.

೧೯೪೪ರ ವೇಳೆಗೆ ಮೈಸೂರಿನ ಬ್ರೈಟ್ ವಾಣಿಜ್ಯ ಕಾಲೇಜಿನ ಪ್ರಿನ್ಸಿಪಾಲರಾದ ಕೆ.ಸೀತಾರಾಮರಾವ್ ಅವರು ಮತ್ತು ಅವರ ಸಹೋದರರಾದ ಎನ್.ಸುಬ್ಬರಾವ್ ಅವರು ಇಂಗ್ಲಿಷ್ ಶೀಘ್ರಲಿಪಿಯಷ್ಟೇ ವೇಗವನ್ನು ಗಳಿಸಬಹುದಾದ ಶೀಘ್ರಲಿಪಿ ಗ್ರಂಥವನ್ನು ಇಂಗ್ಲಿಷ್ ವಿವರಣೆಗಳಿಂದ ಹೊರತಂದರು. ೧೯೫೦ರ ಹೊತ್ತಿಗೆ ಇದನ್ನು ಕಲಿತವರಿಗೆ ಸರ್ಕಾರಿ ಉದ್ಯೋಗ ದೊರೆಯಲು ಆಜ್ಞೆ ಹೊರಟಿದ್ದರಿಂದ ಇದು ಅಸ್ತಿತ್ವಕ್ಕೆ ಬಂತು. ಅನಂತರ ಕನ್ನಡ ಬೆರಳಚ್ಚಿನ ಕೆ.ಅನಂತಸುಬ್ಬರಾಯರು ಶಾರದಾ ಲಿಪಿಯೆಂಬ ಸಂಕ್ಷಿಪ್ತ ಲಿಪಿ (ಷಾರ್ಟ್‌ಹ್ಯಾಂಡ್) ಕಂಡು ಹಿಡಿದು ಬಳಸುತ್ತಿದ್ದರು. ಇದಲ್ಲದೆ ಕೃಷ್ಣಮಾಚಾರ್ ಮೊದಲಾದ ಹಲವರು ಕನ್ನಡ ಶೀಘ್ರಲಿಪಿ ರಚಿಸಿದ್ದರು. ಹಿಂದಿ ಶೀಘ್ರಲಿಪಿಕಾರರೊಬ್ಬರು ಕನ್ನಡಕ್ಕೆ ಅದನ್ನು ಅಳವಡಿಸಿದ್ದರು. ನಾನೂ ಒಂದು ಪ್ರಯತ್ನ ಮಾಡಿದ್ದೆ. ಅದು ಕೂಡ ಕೆಲಸಕ್ಕೆ ಬಾರದ ಲಾಂಗ್ವೇಜ್

ಆಯಿತು ಅಷ್ಟೆ. ೧೯೬೯ ಮತ್ತು ೧೯೭೨ರ ವೇಳೆಗೆ ಮೈಸೂರು ವಿಧಾನಸಭೆಯ ವರದಿಗಾರರಾದ ಸಿದ್ದರಾಜು ಮತ್ತು ಹೆಬ್ಬಾರ್ ಅವರು ಮತ್ತು ನನ್ನ ವಿದ್ಯಾರ್ಥಿ ರಾಘವೇಂದ್ರ ಪ್ರಕಟಿಸಿದ ಗ್ರಂಥಗಳು ಸೀತಾರಾಮರಾವ್ ಪದ್ಧತಿಯನ್ನು ಸುಧಾರಣೆಗೊಳಿಸಿದಂತಹವು. ಇತ್ತೀಚೆಗೆ ಸಮಿತಿಯೊಂದು ಅದನ್ನು ಮತ್ತಷ್ಟು ಸುಧಾರಿಸಿದೆ. ಸಾಹಿತಿಗಳಾಗಿ, ಸಾಹಿತ್ಯದ ಕೊಲೆಯಾಗದೆ ಸಾಹಿತ್ಯಿಕ ಉಪನ್ಯಾಸಗಳನ್ನು ಕನ್ನಡದಲ್ಲಿ ಶೀಘ್ರಲಿಪಿ ಮೂಲಕ ಯಶಸ್ವಿಯಾಗಿ ತಂದ ಕೈವಾರ ರಾಜಾರಾಯರನ್ನು ಮೀರಿಸಲು ಅವರ ಕಾಲದಲ್ಲಿ ಯಾರಿಗೂ ಆಗಲಿಲ್ಲ ಎಂಬ ಸತ್ಯ ಕಂಡಾಗ, ಈ ಕ್ಷೇತ್ರದಲ್ಲಿ ಅವರ ಸಾಧನೆ ಎಂತಹುದು ಎಂಬುದು ವೇದ್ಯವಾಗುತ್ತದೆ. ಸಾಹಿತ್ಯ ಪರಿಷತ್ತಿನಲ್ಲಿ ಎಲ್ಲ ಕಾರ್ಯಕಾರಿ ಸಮಿತಿಗಳ ಮತ್ತು ಸಕಲ ಸದಸ್ಯರ ಸಭೆಗಳ ವರದಿಗಳನ್ನು ಅವರು ಸಿದ್ಧಪಡಿಸಿದ ಹಾಗೆ ಬೇರಾರೂ ಅವರ ನಂತರ ಸಿದ್ಧಪಡಿಸಿಲ್ಲ ಎಂದರೆ ಅತಿಶಯೋಕ್ತಿ ಆಗಲಾರದು. ಏಕೆಂದರೆ ಅವರಿಗೆ ಭಾಷಾಪ್ರೌಢಿಮೆ, ಆಡಳಿತ ಜ್ಞಾನ, ಸಾಹಿತ್ಯ ಪ್ರವೀಣತೆ ಮೂರೂ ಆಳವಟ್ಟಿತ್ತು.

ಕೈವಾರ ರಾಜಾರಾವ್ ಅವರ ಪುತ್ರರಾದ ಕೈವಾರ ಗೋಪಿನಾಥ್ ಅವರೂ ಸಾಹಿತಿಗಳಾಗಿದ್ದಾರೆ. ವಿಜ್ಞಾನದ ಲೇಖನಗಳನ್ನೂ, ಗ್ರಂಥಗಳನ್ನೂ ಬರೆದಿದ್ದಾರೆ. ತಂದೆ-ಮಗ ಸಾಹಿತಿಜೋಡಿ ಕನ್ನಡದಲ್ಲಿ ಜಾಸ್ತಿ ಇಲ್ಲ. ಡಿ.ವಿ.ಜಿ.-ಬಿ.ಜಿ.ಎಲ್. ಸ್ವಾಮಿ, ಕುವೆಂಪು-ತೇಜಸ್ವಿ, ಅನುಪಮಾ ನಿರಂಜನ-ತೇಜಸ್ವಿನಿ (ತಾಯಿ-ಮಗಳು), ದ.ರಾ.ಬೇಂದ್ರೆ-ವಾಮನ ಬೇಂದ್ರೆ ಮುಂತಾದ ಕೆಲವು ಜೋಡಿಗಳನ್ನು ಹೆಸರಿಸಬಹುದಷ್ಟೆ. ಆ ಸಾಲಿನಲ್ಲಿ ತಂದೆ-ಮಗ ಸಾಹಿತಿ ಜೋಡಿಯಲ್ಲಿ ಕೈವಾರ ರಾಜಾರಾವ್-ಕೈವಾರ ಗೋಪಿನಾಥ ರಾವ್ ಬರುತ್ತಾರೆ.

ಕೊನೆಯದಾಗಿ ಕೈವಾರ ರಾಜಾರಾಯರ ನಾಟಕಗಳ ವೈಶಿಷ್ಟ್ಯ ಕುರಿತು ಒಂದು ಮಾತು. ಅದು ಅವರ ನಾಟಕಗಳ ಯಶಸ್ಸಿನ ಗುಟ್ಟೂ ಹೌದು. ಶುದ್ಧ ಮನರಂಜನೆಗಾಗಿ, ಮಧ್ಯಮವರ್ಗದ ಜನರ ಬದುಕಿನ ನಿತ್ಯ ಜೀವನದ ಪ್ರಸಂಗಗಳನ್ನೇ ತೆಗೆದುಕೊಂಡು ಚಿತ್ರಿಸುವ ಅವರ ಏಕಾಂಕಗಳು ಅರ್ಧಗಂಟೆಯಿಂದ ಎರಡುಗಂಟೆಯೊಳಗೆ ಮುಗಿಯುವಂಥವು. ಅಷ್ಟೇ ಅಲ್ಲ, ಎಲ್ಲ ರೀತಿಯ ಜನರೂ ಆಡಲು ಅನುಕೂಲವಾದವು. ೩ ಪಾತ್ರಗಳ ನಾಟಕ, ೪ ಪಾತ್ರಗಳ ನಾಟಕ, ೧೬ ಪಾತ್ರಗಳ ನಾಟಕ, ಬರಿ ಮಕ್ಕಳಾಡುವ, ಹೆಣ್ಣುಮಕ್ಕಳ ಪಾತ್ರಗಳೇ ಇರುವ ನಾಟಕ, ಒಂದೇ ಕೊಠಡಿಯಲ್ಲಿ ನಡೆಯುವ ನಾಟಕ ಹೀಗೆ ಸಂದರ್ಭಕ್ಕೆ, ಜನಕ್ಕೆ, ಅನುಕೂಲಕ್ಕೆ ತಕ್ಕಂತೆ ಎಲ್ಲ ರೀತಿ ಜನರೂ ಆಡುವಂಥ ನಾಟಕಗಳನ್ನು ರಚಿಸಿರುವುದು ಅವರ ಹಿರಿಮೆ. ಅಶ್ಲೀಲವಿಲ್ಲದ, ಸರಳ ಮಾತುಕತೆಗಳ ಆ ನಾಟಕಗಳ ಸಂಭಾಷಣೆ, ನಮ್ಮೊಂದಿಗೆ ಜನ ಮಾತಾಡುವಂತೆ ಇರುತ್ತದೆ.

ಇಂಗ್ಲಿಷ್ ಬೆರಕೆಯಿಲ್ಲದ ಕನ್ನಡ ರಾಜಾರಾಯರದು. ಕೈಲಾಸಂ ಕಾಲದಲ್ಲಿ ನಾಟಕಗಳನ್ನು ರಚಿಸಿದರೂ ಕೈಲಾಸಂ ಪ್ರಭಾವಕ್ಕೆ ಒಳಗಾಗಿಲ್ಲ. ನಾಟಕ ರಚನೆಯಲ್ಲಿ ರಾಜಾರಾವ್ ಅವರ ನಾಟಕಗಳನ್ನು ಕುರಿತು ಎ.ಆರ್.ಕೃಷ್ಣಶಾಸ್ತ್ರಿಗಳು ಹೇಳಿರುವ ಮಾತುಗಳಿವು: "ಬುದ್ಧಿವಂತಿಕೆ ಮೊದಲು ಮಾಡಿಕೊಂಡು ನಿಮ್ಮ ಅನೇಕ ನಾಟಕಗಳನ್ನು ಓದಿ ಸಂತೋಷ ಪಟ್ಟಿದ್ದೇನೆ. ಅವು ಪುಟ್ಟಪುಟ್ಟದ್ದಾಗಿದ್ದರೂ ಒಂದಕ್ಕಿಂತ ಒಂದು ಚೆನ್ನಾಗಿವೆ. ಇಂದು ನಮ್ಮ ಸಂಸಾರಗಳಲ್ಲಿ ಕಂಡುಬರುವ ಹಲವು ಸಮಸ್ಯೆಗಳನ್ನು ರಸವತ್ತಾಗಿ ಚಿತ್ರಿಸುತ್ತವೆ. ಈ ಚಿತ್ರಗಳಲ್ಲಿ ನಮ್ಮ ದೋಷ–ದೌರ್ಬಲ್ಯಗಳನ್ನು ನೋಡಿ ಮನಸ್ಸು ಕಹಿಯಾಗುವುದಕ್ಕೆ ಬದಲು ನಾವು ವಿನೋದಗೊಂಡು ನಕ್ಕು ನಲಿಯುತ್ತೇವೆ. ಅವುಗಳಿಂದ ಪರಿಹಾಸ್ಯ, ಪರಿಹಾರ ಎರಡೂ ದೊರೆಯುವುದು ಒಂದು ವೈಶಿಷ್ಟ್ಯ, ಸೋತುಹೋದರೆ ಸಂಸಾರದಲ್ಲಿ ಸುಖ. ಇದನ್ನು ನೀವು ಬರಿಯ ತತ್ತ್ವವಾಗಿ ಉಪದೇಶಿಸದೆ ಉದಾಹರಣೆಗಳಿಂದ ಪ್ರತಿಪಾದಿಸಿದ್ದೀರಿ. ಪಾತ್ರಗಳು ನಿತ್ಯವೂ ನಮ್ಮ ಸುತ್ತಮುತ್ತ ಕಾಣುವುವು. ಸಂಭಾಷಣೆ, ಆಡುವ ರೂಢಿಮಾತುಗಳಿಂದಲೂ ಸಣ್ಣಸಣ್ಣ ವಾಕ್ಯಗಳಿಂದಲೂ ರಚಿತವಾಗಿವೆ. ಆದ್ದರಿಂದ ಜೀವಂತವಾಗಿ ಸ್ವಾಭಾವಿಕವಾಗಿದೆ. ಅಶ್ಲೀಲವಿಲ್ಲ, ಕೃತಕತೆ ಇಲ್ಲ, ಇವುಗಳನ್ನು ಓದಿದರೆ ನಮ್ಮ ಜನದ ಮೂರ್ಖತೆ, ಮೌಢ್ಯಗಳು, ಓರೆಕೋರೆಗಳೂ ಸ್ವಲ್ಪವಾದರೂ ಕಡಿಮೆಯಾಗುತ್ತವೆ."–('ಗಂಡನ ಜುಲ್ಮಾನೆ ಮತ್ತು ಇತರ ನಾಟಕಗಳು'):

"ಕೈವಾರ ರಾಜಾರಾಯರಲ್ಲಿ ಅತಿಶಯೋಕ್ತಿಗೆ ಅವಕಾಶವಿಲ್ಲ. ಒಂದು ಸರಳವಾದ ಸಂದರ್ಭವನ್ನು ನೇರ ತಂತ್ರದಲ್ಲಿ ನಿರೂಪಿಸುವ ರಾಜಾರಾಯರ ಪ್ರಹಸನಗಳಲ್ಲಿ ಹಾಸ್ಯವಿರುವುದು ಮುಕ್ತಾಯದ ಚಮತ್ಕಾರದಲ್ಲಿ... ರಾಜಾರಾಯರ ಪ್ರಹಸನಗಳ ವ್ಯಕ್ತಿಗಳೆಲ್ಲ ಮಧ್ಯಮವರ್ಗದವರು, ಮಧ್ಯಮವರ್ಗದ ಚಿಕ್ಕಪುಟ್ಟ ಸಂಗತಿಗಳನ್ನೇ ಬದುಕಿನಿಂದ ಪ್ರತ್ಯೇಕಿಸಿ ತೀರ ವಾಸ್ತವಮಾರ್ಗದಲ್ಲಿ ನಿರೂಪಿಸಿದರೂ ಸಾಕಷ್ಟು ಲವಲವಿಕೆಯ ಪ್ರಹಸನಗಳು ಸೃಷ್ಟಿಯಾಗಲು ಸಾಧ್ಯವಿದೆ ಎಂಬುದನ್ನು ರಾಜಾರಾಯರು ತೋರಿಸಿದ್ದಾರೆ. ರಾಜಾರಾಯರ ಪ್ರಹಸನಗಳಲ್ಲಿ ಅಚ್ಚುಕಟ್ಟಾದ ವಸ್ತುರಚನೆ, ಸನ್ನಿವೇಶಕಲ್ಪನೆ ಪಾತ್ರನಿರೂಪಣೆಗಳಿದ್ದೂ ಮಾತಿನಲ್ಲಿ ಮಿಂಚಿರುವುದಿಲ್ಲ. ಹಾಸ್ಯದ ರಂಜನೆಯ ಅಭಾವ ಅಲ್ಲಿ ಎದ್ದು ಕಾಣುತ್ತದೆ ಎಂಬುದು ಗಮನಿಸಬೇಕಾದ ಅಂಶ." (–ಡಾ. ಕೆ.ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ ಗ್ರಂಥ ಪುಟ ೩೩೬.)

ಕೋಲಾರ ಜಿಲ್ಲೆಯ ಕೈವಾರದಲ್ಲಿ ೨೯.೨.೧೯೧೨ರಲ್ಲಿ ಜನಿಸಿದ ಅವರು ೩.೧.೧೯೯೩ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು. ಕೇವಲ ಸರ್ಕಾರಿಸೇವೆಯಲ್ಲಿ ಕೆಇಬಿಯಲ್ಲಿ ಅಷ್ಟೇ ದುಡಿಯಲಿಲ್ಲ, ಅದಕ್ಕಿಂತ ಮಿಗಿಲಾಗಿ ಕನ್ನಡ ಸಾಹಿತ್ಯ

ಪರಿಷತ್ತು, ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಅನುಪಮಸೇವೆ ಸಲ್ಲಿಸಿದರು. ಸರ್ಕಾರಿ ಸೇವೆ–ಸಾರ್ವಜನಿಕ ಸೇವೆ ಎರಡೂ ನಡೆಸಿದವರು ಬೇಕಾದಷ್ಟು ಜನರಿದ್ದಾರೆ. ಆದರೆ ಎರಡೂ ಕ್ಷೇತ್ರಗಳಲ್ಲಿ ಶ್ರದ್ಧೆ, ಆಸಕ್ತಿಗಳಿಂದ ಸಮಾನಸಾಮರ್ಥ್ಯದಿಂದ ಕಾರ್ಯ ನಿರ್ವಹಿಸಿ ವಿಶಿಷ್ಟ ಸೇವೆ ಸಲ್ಲಿಸಿದವರು ಕೆಲವೇ ಮಂದಿ. ಕೈವಾರ ರಾಜಾರಾಯರು ಏಕಕಾಲದಲ್ಲಿ ಸರ್ಕಾರಿ ಸೇವೆ–ಸಾರ್ವಜನಿಕ ಸೇವೆ–ಸಾಹಿತ್ಯ ಸೇವೆ–ನಾಟಕ ಕ್ಷೇತ್ರ ಈ ನಾಲ್ಕು ರಂಗಗಳಲ್ಲೂ ಶ್ರದ್ಧಾಪೂರ್ವಕ ಸೇವೆ ಸಲ್ಲಿಸಿದ ಸವ್ಯಸಾಚಿ.

**



೧೧. ನಾಟಕಕಾರ-ಚತುರವಾಗ್ಮಿ

ಡಾ. ಹೆಚ್.ಕೆ.ರಂಗನಾಥ್

(೮-೮-೧೯೨೪ / ೨೬-೩-೨೦೦೩)

ಮೊದಲ ಭೇಟಿ

ಸಾಹಿತಿ ಎಸ್.ವಿ.ಪರಮೇಶ್ವರಭಟ್ಟರು ತಮ್ಮ ಕನ್ನಡ ಕಾಳಿದಾಸ ಸಂಪುಟವನ್ನು ಆಗ ತಾನೇ ಪ್ರಕಟಿಸಿದ್ದರು. ಅದಕ್ಕೆ ಮುಂಗಡ ಹಣ ಕೊಟ್ಟ ನಾನು ಪ್ರತಿ ಪಡೆಯಲು ಮಲ್ಲೇಶ್ವರದಲ್ಲಿ ಅವರು ಕೊಟ್ಟ ವಿಳಾಸಕ್ಕೆ ಹೋಗಿದ್ದೆ. ಬಾಗಿಲು ತಟ್ಟಿದಾಗ ಸುಂದರಾಂಗ ವ್ಯಕ್ತಿಯೊಬ್ಬರು ಬಂದು "ಯಾರು ನೀವು? ಏನು ಬೇಕಾಗಿತ್ತು" ಎಂದರು. ಅವರೇ ಡಾ.ಎಚ್.ಕೆ.ರಂಗನಾಥರು. ಬಂದ ವಿಷಯ ಹೇಳಿದೆ. "ಕಾಳಿದಾಸ ಸಂಪುಟಕ್ಕೆ ಮುಂಗಡ ಕೊಟ್ಟಿದ್ದೆ, ಪ್ರತಿ ಪಡೆಯಲು ಬಂದಿದ್ದೇನೆ" ಎಂದೆ. "ಹೌದೇ ಸಂತೋಷ, ಒಳಕ್ಕೆ ಬನ್ನಿ" ಎಂದರು. "ನಮ್ಮಲ್ಲಿ ಲೇಖಕರನ್ನಾಗಲಿ, ಪುಸ್ತಕವನ್ನಾಗಲಿ ಕೊಂಡಾಡುವ ಜನವೇ ಇಲ್ಲ. ನೀವು ಅಡ್ವಾನ್ಸಾಗಿ ಕೊಂಡಾಡಲು ಬಂದಿದ್ದೀರಿ, ಸಂತೋಷ" ಎಂದರು. ನನಗೆ ಅಚ್ಚರಿ ಆಯಿತು. ಹಿಂದಿನ ದಿನವಷ್ಟೇ ಸಮಾರಂಭವೊಂದರಲ್ಲಿ ಜಿ.ಪಿ.ರಾಜರತ್ನಂ "ನೀವು ಲೇಖಕರನ್ನು ಕೊಂಡಾಡಿದರೆ ಸಾಲದು, ಲೇಖಕರ ಪುಸ್ತಕವನ್ನೂ ಕೊಂಡಾಡಬೇಕು" (ಕೊಂಡು+ಆಡಬೇಕು) ಎಂದಿದ್ದರು. "ಅರೆ, ನಿನ್ನೆ ಕೇಳಿದ ಮಾತು ಈವತ್ತು ಇವರ ನಾಲಿಗೆಯ ಮೇಲೆ ನಲೀತಾ ಇದೆಯಲ್ಲಾ! ಇವರೆಷ್ಟು ಬೇಗ ತಮ್ಮದಾಗಿಸಿಕೊಂಡಿದ್ದಾರೆ ಈ ಮಾತನ್ನು" ಅನ್ನಿಸಿತು. ಅವರ "ಜಾಗೃತಭಾರತಿ" ನಾಟಕವನ್ನು ಪಾಠ ಮಾಡಿದ್ದೆ, ಆದರೆ ಅವರ ಪರಿಚಯ ಇರಲಿಲ್ಲ. ಅವರ ಭಾಷಣಗಳನ್ನು ಅಲ್ಲಿ ಇಲ್ಲಿ ಕೇಳುತ್ತಿದ್ದೆ. ಅವರ ನಾಟಕಗಳನ್ನು ಓದುತ್ತಿದ್ದೆ, ಅಷ್ಟೆ.

ನಾನು ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಆದಾಗ ಹಲವಾರು ಬಾರಿ ಕಂಡು ಪರಿಚಯ ನಿಕಟವಾಯಿತು. ಅವರ ಕರ್ನಾಟಕ ರಂಗಭೂಮಿ ಕುರಿತ ಮಹಾಪ್ರಬಂಧದ ಕನ್ನಡಾನುವಾದವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಮರುಮುದ್ರಣ ಮಾಡುವ ಕಾಲಕ್ಕೆ ಅದರ ಕರಡು ತಿದ್ದಲು ಫೋನಿನಲ್ಲಿ ಕೇಳಿಕೊಂಡರು. "ಆಗ ಕೈಬರೆಯುತ್ತಿದ್ದರೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದೆ, ಓದುತ್ತಿದ್ದೆ. ಈಗ ಕಣ್‌ಕಣ್ ಬಿಡುತ್ತಿದ್ದೇನೆ. ಅದಕ್ಕೆ ಈ ಪುಸ್ತಕದ ಕರಡನ್ನು ನೀವೇ ಕಣ್ಣಿಟ್ಟು ನೋಡಬೇಕು" ಎಂದರು. "ಅರ್ಥವಾಯಿತು ಸಾರ್, ಬಾಯ್ಬಿಟ್ಟು ಹೇಳಬೇಕೆ, ಆಯಿತು ಸಾರ್" ಎಂದೆ. "ನೀವು ಬಾಯ್ಬಿಟ್ಟಿದ್ದು ಫೋನಿನಲ್ಲಿ ಕಾಣಿಸುತ್ತಾ ಇದೆ. ಮಧ್ಯಾಹ್ನ ನಮ್ಮನೇಗೆ ಬನ್ನಿ. ನಿಂ ಬಾಯನ್ನು ಸಿಹಿ ಮಾಡ್ತೀನಿ" ಅಂದ್ರು. "ಬೇಡಿ ಸಾರ್, ಪರವಾಗಿಲ್ಲ" ಅಂದೆ. "ಸಿಹಿ ಬೇಡ ಅಂತಾರಾ, ಬನ್ನಿ. ಪುಸ್ತಕ ಕೊಡ್ತೀನಿ, ಒಮ್ಮೆ ನೋಡಿ" ಎಂದರು.

ಮನೆಗೆ ಹೋದಾಗ ಕೋಡುಬಳೆ ಕೊಟ್ಟರು. "ನೀವೂ ತೊಗೊಳ್ಳಿ ಸಾರ್" ಎಂದೆ ತಟ್ಟೇನ ಮುಂದೊಡ್ಡಿ, ಅದಕ್ಕವರು, "ನಿಮಗೆ ಅದು ಕೋಡುಬಳೆ, ನನಗೆ ಅದು ಕೊಡುಬಳೆ, ಏನಿದ್ದರೂ ಕೊಡೋದು ನನ್ನ ಕೆಲಸ, ತಿನ್ನೋದು ನಿಮ್ಮ ಕೆಲಸ" ಎಂದರು. ಅವರು ಆಗ ಪಥ್ಯದಲ್ಲಿದ್ದರು. ಎಣ್ಣೆ ಪದಾರ್ಥ ಸ್ವೀಕರಿಸುವಂತಿರಲಿಲ್ಲ. ಅದಕ್ಕೆ "ನನ್ನ ಪಾಲಿಗೆ ಕೊಡುಬಳೆ" (ತೊಡುವ ಬಳೆ) ಎಂದು ಹೇಳಿದ್ದರು ಎಂದು ತಿಳಿಯಿತು.

ತಿಂಡಿತೀರ್ಥಗಳನ್ನು ಇತರರಿಗೆ ತಿನ್ನಿಸುವುದರಲ್ಲಿ ಅವರು ಸದಾ ಮುಂದೆ. ಕಾಫಿ ಟೀ ತರಿಸಿಕೊಡುವುದರಲ್ಲಿ ಎತ್ತಿದ ಕೈ. ಇದುವರೆಗೆ ಅವರ ಮನೆಗೆ ಹೋದಾಗ ಎಂದೂ ಕಾಫಿ ಅಥವಾ ಟೀ ಕುಡಿಯದೆ ಬಂದೇ ಇಲ್ಲ. ಬಹುಶಃ ಉಳಿದವರ ಅನುಭವವೂ ಇದೇ ಆಗಿರಬೇಕು.

ಲೋಕಾಭಿರಾಮದ ಹರಟೆಮಲ್ಲರು

ಒಮ್ಮೆ ಅವರ ಮನೆಗೆ ಹೋದಾಗ "ಟೀ ಆಗುತ್ತಾ ನಿಮಗೆ?" ಎಂದರು. ಬಹುಶಃ ಆಗ ಟೀ ಮಾಡಿದ್ದರು ಅಂತ ಕಾಣುತ್ತೆ. ನಾನು ಅದಕ್ಕೆ "ನಾನು ತ್ರಿಮತಸ್ಥ ಸಾರ್, ಕಾಫಿ, ಟೀ, ಹಾಲು ಯಾವುದಾದರೂ ಆಗುತ್ತೆ" ಎಂದೆ. ಅದಕ್ಕೆ ಅವರು "ತ್ರಿಮತಸ್ಥರು ತ್ರಿನಾಮ ಹಾಕುತ್ತಾರೆ. ಆದರೆ ಈಗ ನಾನು ತ್ರಿಮತಸ್ಥ ಭಗವಂತ ನಾಮಧಾರಿ (ರಂಗನಾಥ್). ನಿಮಗೆ ಕಾಫಿ ಟೀ ಹಾಲು ಮೂರಕ್ಕೂ ತ್ರಿನಾಮ ಹಾಕಲೇ?" ಎಂದರು. ಅದಕ್ಕೆ ನಾನು "ಅದಕ್ಕೇನಂತೆ, ನಾಮದ ಬಲವೊಂದಿದ್ದರೆ ಸಾಕು, ಎಷ್ಟಾದರೂ ನಾಮ ಹಾಕಿ" ಎಂದೆ. ಅದಕ್ಕೆ

"ನಾಮದ ಬಲ ಇಲ್ಲ, ಎಡ ಅಷ್ಟೆ ಇರೋದು" ಎಂದರು. (ನಾಮ ಪದದಲ್ಲಿ ನಾ ಎಡ ಅಕ್ಷರ, ಬ ಬಲ ಅಕ್ಷರ, ನಾ ಇದ್ದೀನಿ ಅಷ್ಟೆ ಎಂದು ಸೂಚ್ಯವಾಗಿ ಹೇಳಿದರು) ನಾನು ಸುಮ್ಮನಿದ್ದೆ. ಅದಕ್ಕವರು "ಹೆದರಬೇಡಿ, ಕಾಫಿ ಗ್ಯಾರಂಟಿ ಬರುತ್ತೆ. ಅದು ಕುಡಿದರೆ ಟೀ ಹಾಗೆ ಇರಬಹುದು. ಹಾಲಂತೂ ಅದರಲ್ಲೇ ಇದ್ದೇ ಇದೆ. ನೀವು ತ್ರಿಮತಸ್ಥರು ಅಂದರಲ್ಲ, ಅದಕ್ಕೆ ಸರಿಹೋಗುತ್ತೆ ಅಲ್ಲವೇ?" ಎಂದರು. ಹೀಗೆ ಲೋಕಾಭಿರಾಮವಾಗಿ ಹುಚ್ಚುಹರಟೆ ಹೊಡೆದು ವಿನೋದ ನಡೆಸುವುದು ನಮ್ಮಿಬ್ಬರಿಗೆ ಒಂದು ಹವ್ಯಾಸವಾಗಿತ್ತು. ಮಾತುಮಾತಿಗೆ ಚಮತ್ಕೃತಿ ಸಹಜವಾಗಿ ಬರುತ್ತಿತ್ತು. ಅವರು ಸ್ನೇಹದಲ್ಲಿ ಮಾತಾಡುತ್ತಿದ್ದ ರೀತಿ ಸದಾ ರಂಜನೀಯವಾಗಿತ್ತು. "ದೊಡ್ಡ ಗೇಟು ಒಂದೇ ಬಾಗಿಲು ತೆಗೆದಿತ್ತು, ಒಳಕ್ಕೆ ಬರೋಕೆ ಆಯ್ತೆ?" ಎಂದರು. "ನೀವು ಒಳಕ್ಕೆ ಬರೋಕೆ ಆದ ಮೇಲೆ ನನಗಾಗದಿರುತ್ಯೇ?" ಎಂದೆ. ಅದಕ್ಕವರು "ಇಲ್ಲಾ, ನೀವು ಬಂದು ಬಹಳ ದಿನ ಆಗಿತ್ತು, ಎರಡು ಗೇಟು ತೆಗೀಬೇಕಾಗಿತ್ತೇನೋ ಅಂತ ಕೇಳಿದೆ, ಅಷ್ಟೆ" ಎಂದರು. "ಹೆದರಬೇಡಿ, ನಾನು ಊಟಕ್ಕೆ ಇರೋಲ್ಲ" ಎಂದೆ. "ಸಂತೋಷ" ಎಂದು ನಕ್ಕರು.

ಜಯನಗರದ ಕಾಂಪ್ಲೆಕ್ಸ್‌ನಲ್ಲಿ ಇಬ್ಬರೂ ಬಸ್‌ಸ್ಟಾಂಡಿನಲ್ಲಿ ಬಸ್ ಹತ್ತಿದೆವು. ಮೊದಲು ಅವರು ಹತ್ತಿ "ಬನ್ನಿ, ಬೇಗ ಬೇಗ ಹತ್ತಿ. ಬಸ್ಸನ್ನು ಮಿಸ್ ಮಾಡಿಕೊಳ್ಳಬೇಡಿ. ಮಿಸ್ಸನ್ನು ಬಸ್ಸು ಮಾಡಿಕೊಳ್ಳಬೇಡಿ" ಎಂದರು. ಇನ್ನೊಮ್ಮೆ ನಾಮದ ಬಲ ಎಂದಾಗ ನೆನಪಾಯಿತು. ಅವರ ಹೆಸರು, ಮಂತ್ರಿ ಕೆ.ಎಚ್.ರಂಗನಾಥ್ ಅವರ ಹೆಸರೂ ಒಂದೇ ಆಗಿ ಇನ್ಷಿಯಲ್ಸ್ ಕ್ರಮ ವ್ಯತ್ಯಾಸವಿದೆ. ಅವರು ಕೆ.ಎಚ್, ಇವರು ಎಚ್.ಕೆ. ಎಷ್ಟೋ ಸಲ ಸಭೆಗಳಲ್ಲಿ ಇವರನ್ನು "ಕೆ.ಎಚ್.ರಂಗನಾಥರೇ" ಎಂದು ಸಂಬೋಧಿಸಿದ್ದುಂಟು. "ನೋಡಿ ಅಕ್ಷರ ವ್ಯತ್ಯಾಸದಲ್ಲಿ ಸುಲಭವಾಗಿ ಮಂತ್ರಿ ಆಗುತ್ತಿದ್ದೆ." "ಅದರಿಂದ ನಷ್ಟವೇನೂ ಇಲ್ಲ ಬಿಡಿ" ಎಂದೆ. ಅದಕ್ಕವರು "ಅಯ್ಯೋ ನಷ್ಟ ಅಲ್ಲ, ಕಷ್ಟ ಬಂದಿದೆ. ಎಷ್ಟೋ ಸಲ ನಾನು ಕರಡು ತಿದ್ದಿ ಹೆಚ್.ಕೆ.ರಂಗನಾಥ್ ಎಂದು ಬರೆದಿದ್ದರೆ ಇವರು ತಪ್ಪಾಗಿ ಬರೆದಿದ್ದಾರೆ ಎಂದು ಕೆ.ಎಚ್. ಅಂತಾನೇ ತಿದ್ದಿಬಿಟ್ಟಿದ್ದಾರೆ" ಎಂದರು. "ಹೋಗಲಿ, ಈ ರೀತಿ ಆದರೂ ಮಂತ್ರಿ ಆಗುವ ಯೋಗ ನಿಮಗೆ ಸಿಗ್ತಲ್ಲ" ಎಂದಿದ್ದಕ್ಕೆ "ಇಂಥ ಮಂತ್ರಿಪದವಿಯಲ್ಲಿ ಸವಲತ್ತುಗಳಾವುವೂ ಇಲ್ಲವಲ್ಲಾ" ಎಂದರು. "ಹೆಚ್.ಕೆ.ರಂಗನಾಥ್ ಎಂದರೆ ಹಾಸ್ಯಕ್ಕೆ ಹೇಳಿ ಕೇಳಿ ಮಾಡಿಸಿದ ವ್ಯಕ್ತಿ" ಎಂದೆ. ಅದಕ್ಕೆ ಅವರು "ಹೆಚ್ಚು ಕಮ್ಮಿ ಸರಿ ಎನ್ನಲಾರೆ. ಏಕೆಂದರೆ ನಾನು ರಂಗ(ವೇದಿಕೆ)ನಾಥ(ಒಡೆಯ). ಹೆಚ್ಚು ಕಮ್ಮಿ ಮಾತಾಡುವ ಹಾಗಿಲ್ಲ. ವೇದಿಕೇಲಿ ಹೆಚ್ಚಾಗಿ(H) ಮಾತಾಡುವ ಹಾಗಿಲ್ಲ. ನಾಥ, ಒಡೆಯ ಕಡಿಮೆ(K) ಮಾತಾಡಲೇಬೇಕು ಎಂದ ಮೇಲೆ ನಾನು ಹೆಚ್ಕೆ(HK) ತಾನೇ?" ಎಂದರು.

ಫೋನಿನ ವಾಗ್ವೈಖರಿ

ಯಾವಾಗ ಹೆಚ್ಕೆ ಫೋನಿಸಿದರೂ ಅವರದೇ ಧಾಟಿ, ಶೈಲಿ ಇರುತ್ತದೆ. "ಏನು, ಇನ್ನೂ ಮನೇಲೇ ಇದ್ದೀರೋ?" "ಇಲ್ಲ ಸ್ವಾಮಿ, ಮಠಕ್ಕೆ ಸೇರಿಲ್ಲ. ಯಾರೂ ನಮ್ಮನ್ನು ಮಠಕ್ಕೆ ಸೇರಿಸೊಲ್ಲ. ಹಾಗಾಗಿ ಮನೇಲಿ ಇದ್ದೀನಿ" ಎಂದರೆ, "ನಿಮ್ಮಂಥವರು ಮಠಕ್ಕೆ ಬರಬಾರದು. ಏಕೆಂದರೆ ಮಠಕ್ಕೆ ಸೇರೋಕೆ ವಿಶಿಷ್ಟ ಯೋಗ್ಯತೆ ಬೇಕು. ಬಡಪಾಯಿಗಳಾದ ನಮಗೂ ನಿಮಗೂ ಆ ಯೋಗ್ಯತೆ ಇಲ್ಲ ಬಿಡಿ..." ಎಂದರು. ಅನಂತರ "ಈಗ ನಿಮ್ಮಿಂದ ಒಂದು ಕೆಲಸ ಆಗಬೇಕಾಗಿದೆ. ೫ನೇ ತಾರೀಖು ಬಿಡುವು ತಾನೇ ನಿಮಗೆ..." ಎಂದು ವಿಷಯ ಮಾತನಾಡಿದರು.

ಒಮ್ಮೆ ಬೆಳಿಗ್ಗೆ ಅರಾಮಿತ್ರರಿಗೆ ಫೋನು ಮಾಡಿದಾಗ ಅವರ ಮನೆಯವರು ಸ್ನಾನ ಮಾಡ್ತಾ ಇದ್ದಾರೆ ಅಂದರು. ಕೂಡಲೇ ರಂಗನಾಥ್ ಮಿತ್ರ ಸ್ನಾನ ಮಾಡ್ತಾರೆಯೇ? ಎಂದು ಅಚ್ಚರಿಯ ದನಿಯಲ್ಲಿ ಕೇಳಿದರೆ ಮಿತ್ರರ ಮಡದಿಗೆ ನಗು ಬಂತು. "ನಿಮ್ಮ ಹಾಗೇನೇ" ಎಂದರು.

ಇನ್ನೊಮ್ಮೆ "ಹೋ! ಹೋ! ಇದ್ದೀರೊ ಮನೇಲಿ? ಬೆಳಿಗ್ಗೆ ಫೋನ್ ಮಾಡಿದ್ದೆ, ಇಲ್ಲ ಅಂದ್ರು ನಿಂಮನೆಯವರು. ಬೆಳಿಗ್ಗೇನೆ ನಿಮ್ಮನೆಯವರು ಅಚ್ಚುಕಟ್ಟಾಗಿ ತಿಂಡಿ ಮಾಡಿಕೊಟ್ಟರೆ ತಿಂದು ಮನೇಲಿ ಇರೋದು ಬಿಟ್ಟು ಎಲ್ಲಿ ಹೋಗಿದ್ರಿ? ಎಷ್ಟು ಧೈರ್ಯ ನಿಮಗೆ ಹೋಟೆಲಿಗೆ ಹೋಗೋಕೆ!" "ಅಯ್ಯೋ ನಾನೆಲ್ಲಿ ಹೋಟೆಲಿಗೆ ಹೋಗಿದ್ದೆ? ನಿಮ್ಮನೇಗೆ ಬಂದಿರಲಿಲ್ವ! ದಾರೀಲಿ ಸಿಕ್ಕಿ ಹೋಟೆಲಿಗೆ ಹೋಗೋಣ ಅಂತ ಕರೆಯಲಿಲ್ವೆ?" ಎಂದಾಗ, "ಅಯ್ಯೋ, ನಾವು ಹೋಗಿದ್ದನ್ನು ಹೋಟೆಲು ಅಂತಾರಾ?" –ಹೀಗೆ ಲೋಕಾಭಿರಾಮ ಮಾತುಗಳು ನಡೆದಿದ್ದು ಫೋನಿನಲ್ಲಿ ಅದೆಷ್ಟೋ ಬಾರಿ.

ಸಂದರ್ಶನ ಪರಿಣತ

ಪ್ರಸಿದ್ಧ ಪ್ರಕಾಶಕರೊಬ್ಬರು ಶ್ರೀ ನಿಟ್ಟೂರು ಶ್ರೀನಿವಾಸರಾಯರನ್ನು ಕುರಿತ ಆತ್ಮಕಥನ ಗ್ರಂಥವೊಂದನ್ನು ತರಲು ಉದ್ದೇಶಿಸಿ ಅವರಿಂದ ಮಾಹಿತಿ ಪಡೆಯಲು ಮತ್ತು ಸಂದರ್ಶನಗಳನ್ನು ನಡೆಸಲು ನಿರ್ಧರಿಸಿದರು. ಹಿಂದೆ ಅಂಥ ಒಂದೆರಡು ಪ್ರಯತ್ನಗಳು ನಡೆದಿದ್ದವು, ಆದರೆ ನಿಟ್ಟೂರವರು ಒಪ್ಪಿರಲಿಲ್ಲ. ಪ್ರಕಾಶಕರು ಡಾ.ಎಚ್ಕೆ.ರಂಗನಾಥ್ ಅವರ ಮೊರೆ ಹೊಕ್ಕರು. ರಂಗನಾಥರು ತಮ್ಮದೇ ಆದ ರೀತಿಯಲ್ಲಿ ಸಂವಾದ ನಡೆಸಿ ನಿಟ್ಟೂರರನ್ನು ಒಪ್ಪಿಸಿದರು. ಎಷ್ಟೋ ಜನರ ಕೈಲಿ ಆಗದ ಕೆಲಸವನ್ನು ರಂಗನಾಥರು ಸಾಧಿಸಿದ್ದರು. ಅವರ ವಿನಯಶೀಲ

ಮಾತುಗಾರಿಕೆಗೆ ಇದೊಂದು ನಿದರ್ಶನ, ಅಷ್ಟೆ. ಆನಂತರ ನಿಟ್ಟೂರು ಅವರನ್ನು ಸಂದರ್ಶನಗಳ ಮೂಲಕ ಮಾಹಿತಿ ಪಡೆಯಲು ನಾನು, ಎಂ.ಎಚ್.ಕೃಷ್ಣಯ್ಯ, ರಂಗನಾಥ್ ಮೂವರು ನಿಯೋಜಿತರಾದೆವು. ಅವರ ಬಾಲ್ಯ, ಶಿಕ್ಷಣ, ವೃತ್ತಿ, ಸಂಘಸಂಸ್ಥೆಗಳಲ್ಲಿ ಸೇವೆ, ಅವರು ಕಂಡ ಕನ್ನಡ ಸಾಹಿತ್ಯದ, ಕನ್ನಡನಾಡಿನ ಗಣ್ಯವ್ಯಕ್ತಿಗಳು, ಅವರೊಡನೆ ಅವರ ಒಡನಾಟ, ಅವರ ಜೀವನಧ್ಯೇಯ, ಸಾಂಸಾರಿಕ ಬದುಕು, ಸಾಹಿತ್ಯ ಪರಿಷತ್ತಿನಲ್ಲಿ, ಗೋಖಲೆ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆ, ಸತ್ಯಶೋಧನ ಪ್ರಕಟನ ಮಂದಿರದಿಂದ ಪ್ರಕಟಿಸಿದ ಕೃತಿಗಳು, ಬೆಳಕಿಗೆ ಬಂದ ಸಾಹಿತಿಗಳು, ಅವರು ಕಂಡ ಕಲಾವಿದರು, ಸಾಂಸ್ಕೃತಿಕ ಸಂಸ್ಥೆಗಳು, ಅವರ ನ್ಯಾಯಾಂಗಸೇವೆ--ಹೀಗೆ ಹತ್ತಾರು, ನೂರಾರು ವಿಷಯಗಳ ಬಗ್ಗೆ ಸಂದರ್ಶನ ಮಾಡಿ ಧ್ವನಿಮುದ್ರಿಸಿಕೊಳ್ಳಲಾಯಿತು. ಆಗ ಕಲೆ, ಸಾಂಸ್ಕೃತಿಕ ಸೇವೆ, ಕಲಾವಿದರು, ಗಣ್ಯವ್ಯಕ್ತಿಗಳು ಕುರಿತು ಒಂದು ಸರಣಿಯ ಸಂದರ್ಶನವನ್ನು ರಂಗನಾಥ್ ನಡೆಸಿದರು. ಆಕಾಶವಾಣಿಯ ಅನುಭವದಿಂದ ಅವರು ಸೊಗಸಾಗಿ ಅರ್ಥಪೂರ್ಣವಾಗಿ ನಿಟ್ಟೂರರಿಂದ ಮಾಹಿತಿ ಪಡೆದ ರೀತಿ, ಸಂದರ್ಶನಕಾಲದಲ್ಲಿ ಹಾಸ್ಯದ ಮಾತುಗಳಿಂದ ವಾತಾವರಣದಲ್ಲಿ ಲವಲವಿಕೆ ಉಂಟು ಮಾಡುವುದು, ಅವರಿಂದ ಸೂಕ್ತ ಮಾಹಿತಿ ದೊರೆಯುವಂತೆ ಪ್ರಶ್ನೆಗಳನ್ನು ಕೇಳುವುದು– ಇದರಲ್ಲಿ ರಂಗನಾಥರು ವಿಶೇಷ ಪರಿಣತಿ ಪಡೆದಿದ್ದಕ್ಕೆ ಈ ಸಂದರ್ಶನಗಳು ಸಾಕ್ಷಿ ಆಗಿವೆ. ಬೆಂಗಳೂರು ನಾಟಕ ಕಲಾವಿಭಾಗದಲ್ಲಿ ಅಧ್ಯಾಪಕರಾಗಿ ಅವರು ಸಲ್ಲಿಸಿದ ಸೇವೆಯ ಅನುಭವವೂ ಇಲ್ಲಿ ಕಾಣಿಸಿಕೊಂಡಿದೆ. ಈ ಸಂದರ್ಶನಗಳೆಲ್ಲ ಬರಹದ ರೂಪಕ್ಕೆ ಇಳಿದು ಪರಿಷ್ಕಾರಗೊಂಡು ಪ್ರಕಟವಾಗುವ ಮೊದಲೇ ರಂಗನಾಥ್ ಅವರು ನಿಧನರಾದುದು ನಮ್ಮೆಲ್ಲರ ದುರ್ದೈವ. ಆ ಧ್ವನಿಮುದ್ರಣಗಳು ರಂಗನಾಥರ ಸಂದರ್ಶನಕಲಾನೈಪುಣ್ಯಕ್ಕೆ ಸಾಕ್ಷಿಯಾಗಿ ಉಳಿದಿವೆ.

ಅಂದರಿಕಿ ಮಂಚಿವಾಡು

ರಂಗನಾಥ್ ಅವರು ಒಂದು ರೀತಿಯಲ್ಲಿ ಅಜಾತಶತ್ರು. ಅವರು ಯಾರಿಗೂ ಕೆಡುಕನ್ನು ಬಯಸಿದವರೇ ಅಲ್ಲ. ತಮ್ಮ ನೋವನ್ನು ಹಾವಿನ ಹಾಸಿಗೆ ಮಾಡಿಕೊಂಡು ಅದರ ಮೇಲೆ ಮಲಗಿಕೊಂಡು ಬಂದವರಿಗೆ ಆನಂದಾಮೃತ ಹಂಚಿದವರು ರಂಗನಾಥ್. ತಮ್ಮ ಅಸಹನೆಯನ್ನು ವಿನೋದದ ಮಾತಿನಲ್ಲಿ ತೇಲಿಬಿಡುತ್ತಿದ್ದರು. ಅವರು ಕೋಪಗೊಂಡು ರೇಗಿದ ಸನ್ನಿವೇಶವನ್ನು ಒಂದು ಸಂದರ್ಭದಲ್ಲಿ ಬಿಟ್ಟು ಮತ್ತೆಂದೂ ಕಂಡಿಲ್ಲ. ಆ ಒಂದು ಸಂದರ್ಭದಲ್ಲಿಯೂ ಅವರು ಎಷ್ಟು ಗಾಂಭೀರ್ಯದಿಂದ ತಮ್ಮ ಅಸಹನೆಯನ್ನು ಸುಸಂಸ್ಕೃತ ಭಾಷೆಯಲ್ಲಿ ಹೊರಹೊಮ್ಮಿಸಿದರೆಂದರೆ ಅವರ ಸಂಯಮದ ಭಾಷೆಗೆ ಅದು ಸಾಕ್ಷಿ ಆಗಿತ್ತು.

ಭಾರತೀಯ ವಿದ್ಯಾಭವನಕ್ಕೆ ಜಯನಗರದಿಂದ ಬಸ್ಸಿನಲ್ಲಿ ನಾವಿಬ್ಬರೂ ಹೊರಟಾಗ ನಡೆದ ಮಾತುಕತೆ ಅದು. ಪ್ರಸಿದ್ಧರೊಬ್ಬರು ಅವರಿಗೆ ದ್ರೋಹವೆಸಗಿ ಕಾಟಕೊಡಲು ಯತ್ನಿಸಿದ್ದರ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ತಂಪಾಗಿ ಕೆಂಡಕಾರಿದ್ದರು. "ಆ ಮನುಷ್ಯ, ಹಣೆಗೆ ಬೂದಿ ಬಳಿದವ ಅಲ್ಲ, ಬೂದಿ ಮುಚ್ಚಿದ ಗೊಬ್ಬರದ ಗುಂಡಿ, ಕಾಲಿಟ್ಟರೆ ಅಸಹ್ಯ" ಎಂದಿದ್ದರು. ಅವರು ಹೇಳಿದ ಮಾತುಗಳಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆ ಇರಲಿಲ್ಲ. ತನಗಾದ ಅನ್ಯಾಯದ ಪರಿವೆ ಅವರಿಗಿರಲಿಲ್ಲ ಎಂಬುದು ನನಗೆ ತಿಳಿದಿತ್ತು. ಇದೊಂದು ಸಂದರ್ಭ ಬಿಟ್ಟರೆ, ಅವರು ಕಠಿಣನುಡಿ ಆಡಿದವರೇ ಅಲ್ಲ. ಎಲ್ಲರಲ್ಲೂ ಗುಣಗ್ರಾಹಕರಾಗಿದ್ದರು. ಎಲ್ಲರಿಗೂ ಮೆಚ್ಚುಗೆ ಸೂಸುತ್ತಿದ್ದರು. ಅವರ ಬಳಿ ಕೆಲಸ ಮಾಡುವವರನ್ನು ಅವರು ಮಾತಾಡಿಸುತ್ತಿದ್ದ ರೀತಿ, ಅವರ ಊಟೋಪಚಾರಗಳನ್ನು ವಿಚಾರಿಸುತ್ತಿದ್ದ ರೀತಿ ಇತರರಿಗೆ ಮಾದರಿ ಸಂಗತಿ ಆಗಿದೆ. ಅಂದರಿಕಿ ಮಂಚಿವಾಡು ರಂಗನಾಥಡು ಆಗಿದ್ದರು.

ಕೊನೆಯ ಭೇಟಿ

ನನ್ನ ಅವರ ಕೊನೆಯ ಭೇಟಿ ೫ ಫೆಬ್ರವರಿಯಲ್ಲಿ ಬಿಎನ್‌ಎಂ ಕಾಲೇಜಿನಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಗಾಂಧೀ ಸಾಹಿತ್ಯ ಪ್ರಚಾರದ ಅಂಗವಾಗಿ ಏರ್ಪಡಿಸಿದ ಉಪನ್ಯಾಸ ಮಾಡಿದಾಗ. ಅವರೇ ಏರ್ಪಡಿಸಿದ ಆ ಕಾರ್ಯಕ್ರಮದಲ್ಲಿ ಅವರಾಡಿದ ಮಾತುಗಳೇ ಅಂತಿಮ ವಾಣಿ ಆಯಿತು. ಕಾರ್ಯಕ್ರಮವನ್ನು ನಿರ್ವಹಿಸುವುದರಲ್ಲಿ ಅವರದು ಅಪಾರ ಸಾಮರ್ಥ್ಯ. ಅರ್ಧಗಂಟೆ ಉಪನ್ಯಾಸ, ಅರ್ಧ ಗಂಟೆ ವಿದ್ಯಾರ್ಥಿಗಳೊಂದಿಗೆ ಸಂವಾದ ಇರುತ್ತಿತ್ತು. ಗಾಂಧೀಜೀವನ–ಸಾಹಿತ್ಯದ ಮೌಲ್ಯಗಳನ್ನು ಸೊಗಸಾಗಿ ಸಭೆಗೆ ಹಿತಮಿತವಾಗಿ ಪರಿಚಯ ಮಾಡಿಸಿಕೊಡುತ್ತಿದ್ದರು. ಅತಿಥಿಗಳನ್ನು ಸೂಕ್ತ ರೀತಿಯಲ್ಲಿ ಪರಿಚಯ ಮಾಡಿಸಿಕೊಟ್ಟು ಸಭೆಯಲ್ಲಿ ಲವಲವಿಕೆ ತರುತ್ತಿದ್ದರು. ಪ್ರಶ್ನೋತ್ತರಗಳನ್ನು ಚೆನ್ನಾಗಿ ನಿಭಾಯಿಸುತ್ತಿದ್ದ ನನ್ನನ್ನು ಸಭೆಯಲ್ಲಿ ಹೊಗಳಿದರು. "ಎನ್ನಾರ್ ಹೀಗೆಲ್ಲಾ ಹೊಗಳಬಾರದು" ಅಂದಾಗ ಅವರು ಹೇಳಿದರು: "ಒಬ್ಬರಲ್ಲಿ ಇರುವ ದೊಡ್ಡತನ, ಸಾಮರ್ಥ್ಯ, ಪ್ರತಿಭೆಯನ್ನು ನಾವು ಗುರುತಿಸಿದರೆ ಅವರಲ್ಲ ದೊಡ್ಡವರಾಗೋದು, ನಾವು. ತಿಳಿಯಿತೇ? ನಿಮ್ಮಲ್ಲಿ ದೊಡ್ಡತನ, ಪಾಂಡಿತ್ಯ ಇಲ್ಲದಿದ್ದರೆ ನಾನೆಲ್ಲಿ ಹೇಳೋಕೆ ಸಾಧ್ಯ?" "ನನ್ನಲ್ಲಿ ಇಲ್ಲದಿದ್ದರೂ ನೀವು ಉಬ್ಬುಗಾಜಿನಿಂದ ಕಂಡಂತೆ ಅತಿಶಯವಾಗಿ ಕಂಡಿದ್ದೀರಿ ಅಷ್ಟೆ" ಎಂದೆ. ಅವರೆಂದರು: "ನೋಡಿ, ನಾವು ನೀವು ದೊಡ್ಡವರೋ ಸಣ್ಣವರೋ ಆ ಮಾತು ಬೇರೆ, ವಿದ್ಯಾರ್ಥಿಗಳಿಗೆ ದೊಡ್ಡವರ ಪರಿಚಯ ಅಲ್ಲದೆ ದೊಡ್ಡತನದ ಪರಿಚಯ ಆಗಿ ಅವರಲ್ಲಿ ದೊಡ್ಡತನ ಬೆಳೆಯಬೇಕು" ಎಂದರು.

ಯಾವುದೇ ವಿಚಾರ ತಲೆ ಹೊಕ್ಕರೆ ಕಾರ್ಯರೂಪಕ್ಕೆ ತರಲು ಯತ್ನಿಸುತ್ತಿದ್ದುದು ಅವರ ಅಗ್ಗಳಿಕೆ ಆಗಿತ್ತು. ಬಿಎನ್ಎಂ ಕಾಲೇಜಿನ ಕಾರ್ಯಕ್ರಮ ಮುಗಿಸಿಕೊಂಡು ಕಾರಿನಲ್ಲಿ ಹಿಂತಿರುಗುತ್ತಿದ್ದಾಗ, ನಾನು ಹೇಳಿದೆ: "ಗಾಂಧೀ ಜೀವನ ಚರಿತ್ರೆಯನ್ನು, ಬದುಕಿನ ರಸಪ್ರಸಂಗಗಳನ್ನು ಕೇವಲ ತುಣುಕು ಪಾಠಗಳಾಗಿ ಶಾಲಾ ಕಾಲೇಜು ಪಠ್ಯಗಳಲ್ಲಿ ಸೇರಿಸಿದ್ದಾರೆ. ಇದರಿಂದ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಸ್ಫೂರ್ತಿಯುತವಾದ ಸಮಗ್ರ ಚಿತ್ರಣ ಸಿಗುತ್ತಿಲ್ಲ. ಪ್ರೈಮರಿ ಶಾಲೆ ಮಕ್ಕಳಿಗೆ, ಹೈಸ್ಕೂಲಿನ ವಿದ್ಯಾರ್ಥಿಗಳಿಗೆ, ಕಾಲೇಜು ಯುವಕರಿಗೆ ಹೀಗೆ ಮೂರು ಹಂತಗಳಲ್ಲಿ ಆಯಾ ವಯಸ್ಸಿನವರ ಅಭಿರುಚಿಗೆ, ಸಾಮರ್ಥ್ಯಕ್ಕೆ ತಕ್ಕಂತೆ ಸೂಕ್ತ ಭಾಷೆ, ನಿರೂಪಣೆ, ಚಿತ್ರಗಳೊಂದಿಗೆ ಗಾಂಧೀ ಜೀವನ ಚರಿತ್ರೆ ಬರೆಸಿ ಪ್ರಕಟಿಸಿ ಹಂಚಬೇಕು. ಅಂದ ಚಂದ, ಆಕರ್ಷಕ ಮುದ್ರಣ, ಚಿತ್ರ, ಕಡಿಮೆ ಬೆಲೆಯ ಆ ಪುಸ್ತಕಗಳ ಪ್ರಚಾರದಿಂದ ನಮ್ಮ ನಾಡಿನ ಯುವಜನಾಂಗಕ್ಕೆ ಗಾಂಧೀಜಿಯವರ ಜೀವನ ಮತ್ತು ಮೌಲ್ಯಗಳ ದಿವ್ಯ ಪರಿಚಯ ಆಗುತ್ತದೆ." ಆಗ, ನೀ.ಕಸ್ತೂರಿ ಮತ್ತಿತರರಿಗೆ ಹೇಳಿ ಬರೆಯಿಸಲು ತಕ್ಷಣ ಕ್ರಮ ಕೈಗೊಂಡಿದ್ದರು.

"ನೋಡಿ, ನಾನು ಮೆಟ್ಟಿಲು ಹತ್ತೋಕೆ ಆಗೋಲ್ಲ, ಸಮಾರಂಭ ಕೆಳಗೇ ಏರ್ಪಡಿಸಿ" ಎಂದು ಅವರು ಒಂದು ಕಡೆ ಈಚೆಗೆ ಹೇಳಿದರು. ಆದರೂ ಅಲ್ಲಿ ಅವರು ಕೆಲವು ಮೆಟ್ಟಿಲು ಹತ್ತಿ ಇಳಿಯಬೇಕಾಯಿತು. "ಪರವಾಗಿಲ್ಲ, ನಿಧಾನವಾಗಿ ನಾನು ಬರ್ತೀನಿ, ಚಿಂತಿಸಬೇಡಿ" ಎಂದು ಸುಧಾರಿಸಿಕೊಂಡು ಮೆಟ್ಟಿಲು ಹತ್ತಿ ಬಂದರು. "ಏನ್ ಸಾರ್, ನೀವು ಮುಂಚೆ ಅವರಿಗೆ ಹೇಳಿದ್ದರೂ ವ್ಯವಸ್ಥಾಪಕರು ಗಮನಿಸಲಿಲ್ಲವಲ್ಲ" ಎಂದಾಗ ಅವರೆಂದರು: "ಅವರು ಗಮನಿಸಲಿಲ್ಲ ಎಂದು ಹೇಗೆ ಹೇಳೋಣ. ಮೆಟ್ಟಿಲಿರೋ ಸಭಾಂಗಣವನ್ನು ಅವರು ಹೇಗೆ ಬದಲಿಸುತ್ತಾರೆ ಹೇಳಿ. ನಾವೇ ಬದಲಾಗಬೇಕು." "ಕಷ್ಟ ಆಗಲಿಲ್ಲವೇ ನಿಮಗೆ?" ಅಂದಾಗ, "ಕಷ್ಟವಿಲ್ಲದೆ ಸುಖ ಎಲ್ಲಿದೆ ಅಶ್ವತ್ಥ ನಾರಾಯಣ್? ಕಷ್ಟವನ್ನೇ ಸುಖ ಅಂತ ತಿಳಿದು ಅಭ್ಯಾಸ ಮಾಡಿಕೊಂಡುಬಿಟ್ಟಿದ್ದೇನೆ. ಅನಾರೋಗ್ಯವನ್ನೇ ಆರೋಗ್ಯವೆಂದು ತಿಳಿದಿದ್ದೇನೆ. ಹಾಗಾಗಿ ನನಗೆ ಕಷ್ಟವೂ ಇಲ್ಲ, ಅನಾರೋಗ್ಯವೂ ಇಲ್ಲ" ಎಂದರು. ಬಹುಶಃ ಈ ತತ್ವವೇ ಅವರಿಗೆ ಎಷ್ಟೇ ಅನಾರೋಗ್ಯ ಇದ್ದರೂ ಲವಲವಿಕೆಯಿಂದ ಇರಲು ಕಾರಣವಾಗಿತ್ತು ಎಂದೆನಿಸುತ್ತೆ ನನಗೆ.

ರೋಗ ರುಜಿನ, ಕಷ್ಟ-ದುಃಖ ಯಾರಿಗೆ ತಾನೆ ಇಲ್ಲ? ಅವರವರಿಗೆ ಅವರವರದೇ ಆದ ರೀತಿಯಲ್ಲಿ ಇರುತ್ತೆ. ಕೆಲವು ತಿಳಿಯುತ್ತೆ, ಕೆಲವು ತಿಳಿಯೋಲ್ಲ. ಆದರೆ ಅವುಗಳೊಡನೆ ಸಹಬಾಳ್ವೆ ಮಾಡುವುದು ದೊಡ್ಡತನ. ನಾಯಿಯನ್ನು ಪ್ರೀತಿಯಿಂದ ಸಾಕಿಕೊಂಡ ಹಾಗೆ, ಸಾಕುಮಕ್ಕಳನ್ನು ಪ್ರೀತಿಸುವ ಹಾಗೆ, ಅವುಗಳೊಂದಿಗೆ ನಾವಿದ್ದರೆ ಕಷ್ಟ ಅಂತ ಅನಿಸೋಲ್ಲ ಎನ್ನುತ್ತಿದ್ದರು ಎಂ.ವಿ.ಸೀ. ಅವರಿಗೆ ಸದಾ ಕಾಯಿಲೆ ಇದ್ದರೂ ಅದರ ಪಾಡಿಗೆ ಅವು ನಮ್ಮ ಜತೆ ಇದೆ

ಎಂದೇ ತಿಳಿದಿದ್ದರು. ಅವರ ಕೊಠಡಿಯಲ್ಲಿ ಅವರು ಮಲಗುವ ಕಡೆ ಹಿಂದಿನ ಗೋಡೆಯ ಬೀರು ತುಂಬ ಔಷಧಿಗಳ ಸಾಲೇ ನವರಾತ್ರಿ ಬೊಂಬೆಗಳಂತೆ ಸಾಲಾಗಿರುತ್ತಿತ್ತು. ಹೆಚ್.ಕೆ.ರಂಗನಾಥರನ್ನು ಕಂಡಾಗ ಅವರೂ ಇವರ ವರ್ಗದವರೇ ಅನಿಸಿದೆ. ಯಾರಿಗೇ ಆಗಲಿ ಬದುಕು ಸಹ್ಯವಾಗಬೇಕಾದರೆ ಇವರಿಬ್ಬರ ಧೋರಣೆಯನ್ನು ಬಾಳಿನಲ್ಲಿ ನಾವು ಅನುಸರಿಸಬೇಕು.

ಕಾಲೇಜಿಂದ ಕಾಲೇಜಿಗೆ ಗಾಂಧೀಜಿ ಪರಿಚಯ ಸಂವಾದ-ಉಪನ್ಯಾಸ ಮಾಲಿಕೆಯನ್ನು ಭಾರತೀಯ ವಿದ್ಯಾಭವನದ ಆಶ್ರಯದಲ್ಲಿ ಸಂಚಾಲಕರಾಗಿ ಬೆಂಗಳೂರು ನಗರದ ಕಾಲೇಜುಗಳಲ್ಲಿ ನಡೆಸಿದರು. ಆಗ ಪ್ರತಿ ಕಾಲೇಜಿಗೂ ಭಾಷಣಕ್ಕೆ ನನ್ನನ್ನು ಕರೆದುಕೊಂಡು ಹೋದರು. ಆಗ ತಮಾಷೆಗೆ ಅವರನ್ನು ಕೇಳಿದೆ, "ವಿದ್ಯಾರ್ಥಿಗಳ ಕಾಲೇಜಿನಲ್ಲಿ ಗಂಡು ಗಾಂಧಿ ಬಗ್ಗೆ ವಿದ್ಯಾರ್ಥಿನಿಯರ ಕಾಲೇಜಿನಲ್ಲಿ ಹೆಣ್ಣು ಗಾಂಧಿ ಬಗ್ಗೆ ಮಾತಾಡಬಹುದು. ಆದರೆ ವಿದ್ಯಾರ್ಥಿ-ವಿದ್ಯಾರ್ಥಿನಿ ಇಬ್ಬರೂ ಇರುವ ಕಾಲೇಜಿನಲ್ಲಿ ಯಾವ ಗಾಂಧಿ ಬಗ್ಗೆ ಮಾತಾಡಬೇಕು?" ಎಂದು. ಅದಕ್ಕೆ ಅವರು ನಗುತ್ತಾ "ಕಾಳಿದಾಸನ ರಘುವಂಶದ ಮೊದಲ ಶ್ಲೋಕ ನೆನಪಿಸಿಕೊಂಡು ಭಾಷಣ ಮಾಡಿ" ಅಂದರು. "ವಾಗರ್ಥಾವಿವ ಸಂಪೃಕ್ತೌ ಎಂಬ ರಘುವಂಶದ ಪ್ರಾರಂಭದ ಶ್ಲೋಕದಲ್ಲಿ ಕಾಳಿದಾಸ ಅರ್ಧನಾರೀಶ್ವರನಾದ ಪಾರ್ವತೀಪರಮೇಶ್ವರನನ್ನು ನೆನೆದಿದ್ದಾನೆ" ಎಂದೆ. "ಹೌದು. ನೀವು ಭೀಷ್ಮರು, ನಾನು ದ್ರೋಣ" ಎಂದರು. "ನಾಥ ರಂಗನ ಪರಿಯೇ ಇದು?" ಎಂದಾಗ ಇಬ್ಬರೂ ನಕ್ಕೆವು.

ರಂಗನಾಥರ ಆಪ್ತ ಪರಿಚಯ ಆಗಿದ್ದು ಜಯನಗರದ ಸ್ವಂತಮನೆಗೆ ಮಲ್ಲೇಶ್ವರದಿಂದ ಬಂದಾಗ. ಅವರೂ ಆತ್ಮೀಯ ಹರಟೆ ಮಿತ್ರರೆಂದರೇ ಪ್ರಖ್ಯಾತರಾದ ಸಂಗೀತ ಪ್ರವೀಣ ಆಕಾಶವಾಣಿ ಕಲಾವಿದ ಕೃಷ್ಣಮೂರ್ತಿ, ಡಿವಿಜಿ ಅವರಿಗೆ ಪರಮಾಪ್ತರಾದ ಸಂಗೀತ ಶಾಸ್ತ್ರ ವಿಶಾರದ ಪದ್ಮನಾಭ ಈ ಮೂವರೂ ತ್ರಿಭುಜವಿದ್ದಂತೆ ಅವಿಭಾಜ್ಯರಾಗಿದ್ದರು. ಮೂವರೂ ಸೇರಿದರೆ ಸಂಗೀತ-ನಾಟಕ-ಶಾಸ್ತ್ರಗಳ ತ್ರಿವೇಣಿ ಸಂಗಮ ಹಾಸ್ಯರಸದ ನಗೆ ಕಾರಂಜಿಯ ಮೂರು ಚಿಮ್ಮುಗಳು. ಅವುಗಳ ಸಿಂಚನ ನನಗಾಗಿದ್ದುದು ಹಲವಾರು ಬಾರಿ. ಪ್ರತಿ ಬಾರಿ ಭೇಟಿಯಾದಾಗಲೂ ಮೊದಲು ಮಾತು ಪ್ರಾರಂಭ ಆಗುತ್ತಿದ್ದುದು, ವ್ಯಂಗ್ಯ ವಿಡಂಬನೆ ವಿನೋದದ ನುಡಿಯಿಂದ.

ಸದಾ ಓದಬೇಕು, ಬರೆಯಬೇಕು, ಮಾತಾಡಬೇಕು ಎಂದು ಬಯಸುತ್ತಿದ್ದ ಆ ಸಾಹಿತ್ಯಜೀವ ಇಂದು ಇರದಿದ್ದರೂ ಇದ್ದ ಹಾಗೆ ಭಾಸವಾಗುತ್ತೆ. ಎಷ್ಟೋ ಜನ ಇದ್ದರೂ ಇರದಿದ್ದ ಹಾಗೆ ಬಾಳ್ವೆ ನಡೆಸುತ್ತಿರುವುದು ಕಂಡಾಗ ಇವರಂಥ ಪುಣ್ಯಜೀವಿ ಯಾರಿದ್ದಾರೆ ಎನ್ನಿಸುತ್ತದೆ.

**



೧೨. ಜೈನ ವಿದ್ವಾಂಸ-ಸಾಹಿತ್ಯಭೂಷಣ

ಡಿ.ಪದ್ಮನಾಭ ಶರ್ಮ, ಭುವನಹಳ್ಳಿ

(೨೬-೧೧-೧೯೨೪ / ೨೭-೭-೧೯೯೫)

ಇಪ್ಪತ್ತನೆ ಶತಮಾನದಲ್ಲಿ ಜೈನ ಸಾಹಿತಿಗಳು ಸಾಕಷ್ಟು ಬೆಳಕಿಗೆ ಬಂದರು. ಈ ಕನ್ನಡ ಜೈನ ಸಾಹಿತಿಗಳಲ್ಲಿ ಎರಡು ಬಗೆಯವರಿದ್ದಾರೆ. ಮೊದಲನೆಯ ವರ್ಗದವರು ಎಂದರೆ ಜನ್ಮತಃ ಜೈನರಾಗಿದ್ದು ಒಳ್ಳೆಯ ಪಂಡಿತ ಪರಂಪರೆಯ ಮನೆತನದಲ್ಲಿ ಹುಟ್ಟಿ ಬೆಳೆದು ಶಿಕ್ಷಣ ಪಡೆದ ಜೈನ ಸಾಹಿತಿಗಳು, ವಿದ್ವಾಂಸರೂ ಆದ ಇವರು ಜೈನ ಸಾಹಿತ್ಯ, ಜೈನ ಧರ್ಮ ಸಿದ್ಧಾಂತಗಳನ್ನು ಕುರಿತು ಅಪೂರ್ವ ಹಾಗೂ ಅಪಾರ ಗ್ರಂಥಗಳನ್ನು ರಚಿಸಿದ್ದಾರೆ; ಲೇಖನಗಳನ್ನು ಬರೆದಿದ್ದಾರೆ; ಉಪನ್ಯಾಸಗಳನ್ನು ನೀಡಿದ್ದಾರೆ; ಧರ್ಮಪ್ರಚಾರ-ಸಾಹಿತ್ಯ ಪ್ರಚಾರ ಮಾಡಿದ್ದಾರೆ; ಸಜ್ಜನ ಸದ್ಗೃಹಸ್ಥ ಶ್ರಾವಕರಾಗಿ ಬಾಳಿ ಬದುಕಿ ಇತರರಿಗೆ ಮಾದರಿಯಾಗಿದ್ದಾರೆ. ಈ ವರ್ಗಕ್ಕೆ ಸೇರಿದವರು ಡಿ.ಪದ್ಮನಾಭ ಶರ್ಮರು. ಪಂಡಿತ ಎ.ಶಾಂತಿರಾಜ ಶಾಸ್ತ್ರಿಗಳು ಇನ್ನೊಬ್ಬರು. ಇವರು ಶರ್ಮರಿಗಿಂತ ಹಿರಿಯರು. ಇವರಿಬ್ಬರು ಕನ್ನಡದಲ್ಲಿ ಅಧಿಕ ಸಂಖ್ಯೆಯಲ್ಲಿ ಜೈನ ಶಾಸ್ತ್ರ ಸಾಹಿತ್ಯ ಗ್ರಂಥಗಳನ್ನು ರಚಿಸಿದವರಲ್ಲಿ ಅಗ್ರಗಣ್ಯರು. ಇನ್ನೊಂದು ವರ್ಗದವರು ಎಂದರೆ ಜನ್ಮತಃ ಜೈನರಲ್ಲದಿದ್ದರೂ ಜೈನ ಸಾಹಿತ್ಯವನ್ನು ಯಾವ ಜೈನ ವಿದ್ವಾಂಸರಿಗೂ ಕಡಿಮೆ ಇಲ್ಲದ ಹಾಗೆ ಜೈನಶಾಸ್ತ್ರ ಸಾಹಿತ್ಯ ಅಭ್ಯಾಸ ಮಾಡಿದವರು. ಜಿ.ಪಿ. ರಾಜರತ್ನಂ, ಎಲ್. ಗುಂಡಪ್ಪ, ಕೆ.ಜಿ. ಕುಂದಣಗಾರ ಮುಂತಾದವರು ಎರಡನೆಯ ವರ್ಗಕ್ಕೆ ಸೇರಿದವರು.

೧೮೮೮ರಲ್ಲಿ ಜನಿಸಿ ೧೯೫೨ರಲ್ಲಿ ನಿಧನರಾದ ಶಾಂತಿರಾಜ ಶಾಸ್ತ್ರಿಗಳು ೬೪ ವರ್ಷಗಳ ಜೀವಿತಾವಧಿಯಲ್ಲಿ ಸುಮಾರು ೪೪ಕ್ಕೂ ಮಿಗಿಲು ಗ್ರಂಥಗಳನ್ನು

ರಚಿಸಿದ್ದಾರೆ. ಈ ಪೈಕಿ ಅವರು ಸಂಪಾದಿಸಿದ ರತ್ನಾಕರ ಶತಕತ್ರಯ (ಮೂಲ ಮತ್ತು ಅನುವಾದ ಸಹಿತ) ಮಹಾಮೇರು ಕೃತಿ ಮಹಾಪುರಾಣದ (ಮೂಲ ಮತ್ತು ಅನುವಾದ) ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪ್ರಸಿದ್ಧರಾಗಿದ್ದಾರೆ. ಡಿ.ಪದ್ಮನಾಭ ಶರ್ಮರು ೧೯೨೪ರಲ್ಲಿ ಜನಿಸಿ ೧೯೯೫ರಲ್ಲಿ ನಿಧನರಾದರು. ೭೧ ವರುಷದ ಜೀವಿತಾವಧಿಯಲ್ಲಿ ೧೨೦ಕ್ಕೂ ಅಧಿಕ ಗ್ರಂಥಗಳನ್ನು ರಚಿಸಿದರು. ಕನ್ನಡದಲ್ಲಿ ಇಷ್ಟು ಅಗಾಧ ಪ್ರಮಾಣದಲ್ಲಿ ಜೈನಸಾಹಿತ್ಯ, ಶಾಸ್ತ್ರಗ್ರಂಥಗಳನ್ನು ರಚಿಸಿದವರು ಹಾಗೂ ಅನುವಾದಿಸಿರುವರು ಇವರೊಬ್ಬರೇ ಎಂದರೆ ಅತಿಶಯೋಕ್ತಿಯಲ್ಲ. ಕೇಶಿರಾಜನ ಶಬ್ದಮಣಿ ದರ್ಪಣಕ್ಕೆ ಬರೆದ ನಲ್ನುಡಿಗನ್ನಡಿ ವ್ಯಾಖ್ಯಾನ (೧೯೭೬) ೬೦೦ಕ್ಕೂ ಹೆಚ್ಚಾದ ಪುಟಗಳಿಂದ ಕೂಡಿದ ವ್ಯಾಕರಣ ಗ್ರಂಥ. ಭಕ್ತಾಮರ ಸ್ತೋತ್ರದೀಪಿಕಾ (೧೯೮೫) ಸರ್ವಾರ್ಥಸಿದ್ಧಿ (೧೯೮೮) ಬೃಹತ್ ಸಿದ್ಧಾಂತಾನುವಾದ ಗ್ರಂಥ ಮೊದಲಾದವು ಕನ್ನಡ ಸಾಹಿತ್ಯಕ್ಕೆ ಶರ್ಮರು ನೀಡಿದ ಅನರ್ಘ್ಯ ಕೊಡುಗೆಗಳಾಗಿವೆ. ಮಲ್ಲಿಕಾಮಾಲೆ, ಸಾಂಗತ್ಯ ಛಂದಸ್ಸುಗಳಲ್ಲಿ ಸ್ವತಂತ್ರ ಕಾವ್ಯಗಳನ್ನು ರಚಿಸಿದ ಹಿರಿಮೆ ಇವರದು. ಕಥೆ, ಕಾದಂಬರಿ, ನಾಟಕ, ವ್ಯಾಕರಣ, ಜೈನ ಸಿದ್ಧಾಂತ, ನಿಘಂಟು, ಜೈನ ಬಾಲಬೋಧೆ, ಪೂಜಾ ಸಾಹಿತ್ಯ, ಸ್ತೋತ್ರಸಾಹಿತ್ಯ ಕೃತಿಗಳನ್ನು ಅನುವಾದದ ಮೂಲಕ ಕನ್ನಡಕ್ಕೆ ತಂದಿದ್ದಾರೆ. ಸ್ವತಂತ್ರವಾಗಿಯೂ ಗ್ರಂಥರಚನೆ ಮಾಡಿದ್ದಾರೆ.

ಇಂಥಾ ಪ್ರತಿಭಾನ್ವಿತ ಘನ ಸಾಹಿತಿ ಜೈನವಿದ್ವಾಂಸರು ನಾನು ಬೆಂಗಳೂರು ಕೋಟೆ ಪ್ರೌಢಶಾಲೆಯಲ್ಲಿ (೧೯೫೩-೧೯೫೫) ವಿದ್ಯಾರ್ಥಿ ಆಗಿದ್ದಾಗ ಕನ್ನಡ ಗುರುಗಳಾಗಿ ದೊರೆತರು. ಸಂಸ್ಕೃತ-ಕನ್ನಡ ಪಂಡಿತರಾದ ಇವರು ಕನ್ನಡ ತರಗತಿಗಳ ಜತೆಗೆ ಸಂಸ್ಕೃತ ಅಧ್ಯಾಪಕರು ಬಾರದಿದ್ದಾಗ ಸಂಸ್ಕೃತ ವಿದ್ಯಾರ್ಥಿಗಳಿಗೂ ಪಾಠ ಮಾಡುತ್ತಿದ್ದರು. ಸಂಸ್ಕೃತ ವಿದ್ಯಾರ್ಥಿಯಾಗಿದ್ದ ನನಗೆ ಗುರುಗಳಾದರು. ಅದಕ್ಕಿಂತ ಹೆಚ್ಚಾಗಿ ಶಾಲೆಯಲ್ಲಿ ನಡೆಯುತ್ತಿದ್ದ ಎಲ್ಲಾ ಸಾಹಿತ್ಯ ಚಟುವಟಿಕೆಗಳ ವ್ಯವಸ್ಥಾಪಕರು ಇವರೇ ಆಗಿರುತ್ತಿದ್ದರು. ಆಗ ನಡೆಯುತ್ತಿದ್ದ ಅಂತರಶಾಲಾ ಚರ್ಚಾಕೂಟ, ಪ್ರಬಂಧ ಸ್ಪರ್ಧೆ, ಉಪನ್ಯಾಸಗಳಿಗೆ ನಮ್ಮ ಶಾಲೆಯಿಂದ ನನ್ನನ್ನು ಆರಿಸಿ ತರಬೇತಿ ನೀಡಿ ಕಳಿಸುತ್ತಿದ್ದರು. ಹೀಗಾಗಿ ಅವರು ನನ್ನ ಸಾಹಿತ್ಯಗುರು ಆದರು. ನಾನು ಕನ್ನಡ ಅಧ್ಯಾಪಕನಾಗಿ ಕಾಲೇಜಿಗೆ ಸೇರಿದಾಗ ಜೈನ ಸಾಹಿತ್ಯ ಗ್ರಂಥಗಳಾದ ಪಂಪ, ನಾಗಚಂದ್ರ, ರನ್ನ, ಜನ್ನ ಮೊದಲಾದವರ ಕಾವ್ಯಗಳನ್ನು ಬೋಧಿಸಲು ಪಾಠಬೋಧನೆ ಮಾಡಿ ಮಾರ್ಗದರ್ಶನ ಮಾಡಿದರು. ಅಷ್ಟೇ ಅಲ್ಲದೆ ಮಹಾವೀರಸ್ವಾಮಿಯ ೨೫೦೦ನೇ ಜಯಂತಿ ಅಂಗವಾಗಿ ಕರ್ನಾಟಕದಲ್ಲೆಲ್ಲಾ ಧರ್ಮಚಕ್ರ ವಿಹಾರ ಆದಾಗ ಅದರ ಮೊದಲ ಭಾಷಣದಿಂದ

ಕೊನೆಯ ಭಾಷಣದವರೆಗೆ ನೂರಾರು ಉಪನ್ಯಾಸಗಳನ್ನು ನಾಡಿನಾದ್ಯಂತ ನೀಡಿ ಜನಮೆಚ್ಚುಗೆ ಗಳಿಸಿದ, ಧರ್ಮಚಕ್ರ ವಿಹಾರದಲ್ಲಿ ಅತಿ ಹೆಚ್ಚು ಉಪನ್ಯಾಸ ಮಾಡಿದ ಜೈನೇತರ ಉಪನ್ಯಾಸಕ ನಾನೇ. ಇದಕ್ಕೆ ಕಾರಣ ಡಿ.ಪದ್ಮನಾಭ ಶರ್ಮರು. ಜೈನ ಸಿದ್ಧಾಂತದ ಶಾಸ್ತ್ರ ಗ್ರಂಥಗಳನ್ನು ಪರಿಚಯಿಸಿ, ಸಿದ್ಧಾಂತಗಳನ್ನು ವಿವರಿಸಿ, ಜೈನ ಧರ್ಮದ ಬಗ್ಗೆ ನನ್ನ ಭಾಷಣಗಳನ್ನು ಜೈನಸ್ವಾಮೀಜಿಗಳೂ ಯತಿಗಳೂ ಮೆಚ್ಚಲು ಕಾರಣರಾದವರು. "ಜಿ.ಪಿ.ರಾಜರತ್ನಂ ಅವರ ನಂತರ ಜೈನಧರ್ಮ ಸಾಹಿತ್ಯ ಕುರಿತು ಮಾತನಾಡಿದ ಜನಪ್ರಿಯ ಉಪನ್ಯಾಸಕಾರರು ನೀವೇ" ಎಂದು ನನ್ನನ್ನು ಶ್ರವಣಬೆಳಗೊಳದ ಶ್ರೀಗಳು ಮೆಚ್ಚುಗೆ ಸೂಚಿಸಲು ಕಾರಣಕರ್ತರಾದವರು. ನನ್ನ ಜೈನ ಸಾಹಿತ್ಯ ಗುರು ಡಿ.ಪದ್ಮನಾಭ ಶರ್ಮರು. ೧೯೫೩ ರಿಂದ ೧೯೯೫ರವರೆಗೆ ಅವರ ನಿಧನದವರೆಗೆ ನಿಕಟವರ್ತಿಗಳಾಗಿ ೪೨ ವರ್ಷ ನನ್ನ ಬದುಕಿಗೆ ಮಾದರಿ ಆಗಿದ್ದವರು ಶರ್ಮರು. ೭-೮-೧೯೯೫ರಲ್ಲಿ ನಡೆದ ಅವರ ಮೊದಲ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದವನು ನಾನು.

ಬೆಂಗಳೂರಿನ ತ್ಯಾಗರಾಜನಗರದಲ್ಲಿ ಸ್ವಂತ ಮನೆಯಲ್ಲಿ ಅವರು ವಾಸಿಸತೊಡಗಿದಮೇಲೆ ದಿನನಿತ್ಯ ಅವರನ್ನು ಭೇಟಿಯಾಗುತ್ತಿದ್ದೆ. ಭೇಟಿಯಾದಾಗಲೆಲ್ಲ ಜೈನ ಧರ್ಮ-ಸಾಹಿತ್ಯದ ವಿಚಾರಗಳ ರಸಧಾರೆ ಲಭ್ಯವಾಗುತ್ತಿತ್ತು. ಅವರು ಉಪನ್ಯಾಸಗಳಿಗೆ ಹೋದಾಗ ನನ್ನನ್ನು ಕರೆದೊಯ್ದು ನನ್ನಿಂದಲೂ ಉಪನ್ಯಾಸ ಮಾಡಿಸುತ್ತಿದ್ದರು. ಅನೇಕ ಬಾರಿ ಅವರೊಡನೆ ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಉಪನ್ಯಾಸಗಳನ್ನು ನೀಡಿದ್ದೇನೆ. ಆಗ ಅಪೂರ್ವ ಅನುಭವಗಳಾಗಿವೆ.

ಒಮ್ಮೆ ರಾಯಚೂರು ಕೋಟೆ ಪ್ರದೇಶದಲ್ಲಿ ಮಹಾವೀರ ಜಯಂತಿಗೆ ಅವರನ್ನೂ ನನ್ನನ್ನೂ ಉಪನ್ಯಾಸಕ್ಕೆ ಆಹ್ವಾನಿಸಿದ್ದರು. ನಾವು ಅಲ್ಲಿಗೆ ಹೋದಾಗ ಅಲ್ಲಿನ ಸ್ಥಳೀಯ ದಿನಪತ್ರಿಕೆ **ರಾಯಚೂರು ವಾಣಿ**ಯಲ್ಲಿ ನಮ್ಮಿಬ್ಬರ ಉಪನ್ಯಾಸ ಕಾರ್ಯಕ್ರಮವನ್ನು ಪ್ರಕಟಿಸಲಾಗಿತ್ತು. "ಬೆಂಗಳೂರಿಂದ ಬಂದಿರುವ ಜೈನ ವಿದ್ವಾಂಸರಾದ ಡಿ.ಪದ್ಮನಾಭ ಶರ್ಮರು, ಕನ್ನಡ ಅಧ್ಯಾಪಕ ಪ್ರೊ.ಜಿ.ಅಶ್ವತ್ಥನಾರಾಯಣ ಅವರು ಮಹಾವೀರ ಜಯಂತಿ ಪ್ರಯುಕ್ತ **ಉಪವಾಸ ಮಾಡುವರು** ಎಂದು ಪ್ರಕಟಿಸಿದ್ದರು. **ಉಪನ್ಯಾಸ ಮಾಡುವರು** ಎಂಬುದಕ್ಕೆ ಬದಲಾಗಿ ಉಪವಾಸ ಮಾಡುವರು ಎಂದು ಅಚ್ಚಾಗಿತ್ತು. ಅದನ್ನು ನೋಡಿ ಶರ್ಮರು "ನಾನು ಜೈನ ಶ್ರಾವಕ. ನನಗೆ ಉಪವಾಸ ಮಾಡಿ ಅಭ್ಯಾಸವಿದೆ. ನೀವು ಯುವಕರು. ನಿಮ್ಮ ಗತಿ ಏನಪ್ಪಾ" ಎಂದು ತಮಾಷೆ ಮಾಡಿದರು. ಆ ಸಂದರ್ಭದಲ್ಲಿ ಎರಡು ಘಟನೆಗಳು ಚಿರಸ್ಮರಣೀಯವಾಗಿವೆ.

ಸಂಜೆ ಉಪನ್ಯಾಸಕ್ಕೆ ಕೋಟೆ ಪ್ರದೇಶಕ್ಕೆ ಬಂದಾಗ ಅಲ್ಲಿ ಎರಡು ಗುಂಪಿನವರು. ಕರಪತ್ರಗಳನ್ನು ನಮಗೆ ಕೊಟ್ಟು "ಈ ಬಗ್ಗೆ ಮಾತಾಡಬೇಕು" ಎಂದರು. ಒಂದು ಕರಪತ್ರದಲ್ಲಿ ಅಲ್ಲಿಯ ಸರ್ಕಲ್ ಒಂದಕ್ಕೆ ಮಹಾತ್ಮಗಾಂಧಿ ಸರ್ಕಲ್ ಎಂದು ಹೆಸರಿಡಬೇಕೆಂದಿತ್ತು. ಇನ್ನೊಂದು ಕರಪತ್ರದಲ್ಲಿ ಮಹಾವೀರ ಸರ್ಕಲ್ ಎಂದು ಹೆಸರಿಡಬೇಕು ಎಂದಿತ್ತು. ವೇದಿಕೆಯ ಮೇಲೆ ಶರ್ಮರು ಉಪನ್ಯಾಸ ಮಾಡಲು ಪ್ರಾರಂಭಿಸಿ ಮಹಾವೀರರ ಬಗ್ಗೆ ಮಾತನಾಡತೊಡಗಿದರು. ಈ ಕರಪತ್ರಗಳ ಸುದ್ದಿ ಎತ್ತಲಿಲ್ಲ. ಆಗ ಒಂದು ಗುಂಪಿನವರು ಕೋಪಗೊಂಡು ಕಲ್ಲೆಸೆಯತೊಡಗಿದರು. ವೇದಿಕೆಯತ್ತ ಅದು ಸ್ವಲ್ಪದರಲ್ಲಿ ಶರ್ಮರ ಹಣೆಗೆ ಬಡಿಯುವುದು ತಪ್ಪಿತು. ಕೂಡಲೇ ನಾನು ಶರ್ಮರನ್ನು ಮೈಕಿನಿಂದ ಪಕ್ಕಕ್ಕೆ ಸರಿಸಿ ಹೇಳಿದೆ, "**ರಾಯಚೂರು** ಎಂದರೆ ಕಲ್ಲಿನ ತುಂಡು ಎಂದು ಅರ್ಥವೂ ಇದೆ. ಇದು ಕೋಟೆ ಪ್ರದೇಶ. ಕಲ್ಲಿನ ಕಟ್ಟಡ ಜಾಗ. ಇಲ್ಲಿರುವ ಕಲ್ಲುಗಳು ಭವ್ಯ ಇತಿಹಾಸವನ್ನು ತಿಳಿಸುತ್ತದೆ. ಏಕೀಕರಣದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ರಾಯಚೂರಿನ ಕೊಡುಗೆ ಅಪಾರವಾದುದು. ಅಪೂರ್ವವಾದುದು. ಆದರೆ ನೀವಿಲ್ಲಿ ಕಲ್ತುಗೊಂಡ ಜನ ಕಲ್ತುಗೊಂಡವರು (ಕಲ್+ತೊಗೊಂಡವರು ಎಸೆದವರಾಗಿದ್ದೀರಿ. ಮಹಾವೀರರಂತೆ ನೀವು ವೀರರೂ ಅಲ್ಲ, ಧೀರರೂ ಅಲ್ಲ. ಅವರ ಹೆಸರಿಗೆ ಕಳಂಕ ತರುತ್ತಿದ್ದೀರಿ ಕಲ್ತುಗೊಂಡರೆ ಶಿಕ್ಷಣ. ಕಲ್ ತಗೊಂಡರೆ ಅಲ್ಲ" ಎಂದು ಭಾಷಣ ಮುಂದುವರೆಸಿದೆ. ಆ ವೇಳೆಗೆ ಕಲ್ಲೆಸೆತ ನಿಂತಿತು.

ಅಂದು ಸಂಜೆ ಪ್ರವಾಸಿ ಬಂಗಲೆಯಲ್ಲಿ ಉಳಿದುಕೊಂಡಿದ್ದೆವು. ಸಂಪ್ರದಾಯಸ್ಥರಾದ ಶರ್ಮರು ರಾತ್ರಿ ಭೋಜನ ಮಾಡುವರಲ್ಲ ಎಂದು ತಿಳಿದು ನಮ್ಮಿಬ್ಬರಿಗೆ ಊಟ ತಿಂಡಿಯ ವ್ಯವಸ್ಥೆ ಏನೂ ಮಾಡಿರಲಿಲ್ಲ. ಬೆಳಿಗ್ಗೆ ಊಟ ಮಾಡಿದ ನಮಗೆ ಮತ್ತೇನೂ ತಿಂಡಿ ತೀರ್ಥ ಸಂಜೆಗೂ ಸಿಗಲಿಲ್ಲ. ರಾತ್ರಿಗೂ ಸಿಗಲಿಲ್ಲ. ರಾತ್ರಿ ೧೧ ಗಂಟೆ ಆಯಿತು. ಹಸಿವಿಗೆ ನನಗೆ ನಿದ್ರೆ ಬರಲಿಲ್ಲ. ಶರ್ಮರಂತೂ ರಾತ್ರಿಯೆಲ್ಲಾ ಬರಹದಲ್ಲಿ ತೊಡಗಿ ಅಭ್ಯಾಸ, ಉಪವಾಸ ಮಾಡುವುದು ಅವರಿಗೆ ಲೀಲಾಜಾಲ ಮತ್ತು ಹೊರಗಡೆ ಎಲ್ಲೆಂದರಲ್ಲಿ ಭೋಜನ ಮಾಡುತ್ತಿಲಿಲ್ಲ.

೧೧ ಗಂಟೆ ರಾತ್ರಿ. "ಬನ್ನಿ ಸುತ್ತಾಡಿಕೊಂಡು ಬರೋಣ, ತಂಗಾಳಿ ಬೆಳಕು ಚೆನ್ನಾಗಿದೆ" ಎಂದು ಹೊರಗೆ ಕರೆದುಕೊಂಡು ಹೋದರು. ಇಬ್ಬರೂ ಸ್ವಲ್ಪ ದೂರ ಹೋದಾಗ ಅಲ್ಲೊಂದು ಸಾಬರ ಚಾ ಅಂಗಡಿ ಇತ್ತು; ಬಾಳೆಹಣ್ಣು ಗೊನೆ ಇತ್ತು. ಶರ್ಮರು ನನ್ನನ್ನು ಅಲ್ಲಿ ನಿಲ್ಲಿಸಿ, "ನೀವು ಅಲ್ಲಿ ಹೋಗಿ ಬಾಳೆಹಣ್ಣು ತಿಂದು ಚಾ ಕುಡಿದು ಬನ್ನಿ" ಅಂದರು. "ಪರವಾಗಿಲ್ಲ ಸಾರ್. ನಮ್ಮಲ್ಲೂ ಶಿವರಾತ್ರಿ ದಿನ ಉಪವಾಸ ಮಾಡಿ ಅಭ್ಯಾಸವಿದೆ" ಎಂದೆ. "ನಿಮ್ಮಲ್ಲಿ ಶಿವರಾತ್ರಿ

ಇದೆ ಅಂತ ನನಗೆ ಗೊತ್ತು. ಆದರೆ ಫಲಾಹಾರ ಪದ್ಧತಿಯೂ ಇದೆಯಲ್ಲವೇ. ನಿಮ್ಮಂಥ ಯುವಕರಿಗೆ ಈ ವಯಸ್ಸಿನಲ್ಲಿ ಉಪವಾಸ ಸಲ್ಲದು. ಬೆಳೆಯುವ ಗಿಡಕ್ಕೆ ನೀರು, ಗೊಬ್ಬರ ಬೇಕೇಬೇಕು. ಬೆಳೆಯುವ ಹುಡುಗರಿಗೆ–ತಿಂಡಿ–ಊಟ ಬೇಕೇಬೇಕು" ಎಂದು ಹೇಳಿ ಬಲವಂತಮಾಡಿ ನನ್ನ ಜೇಬಿಗೆ ೫ ರೂಪಾಯಿ ನೋಟು ತುರುಕಿ ಅಂಗಡಿಯತ್ತ ದಬ್ಬಿ ತಾವು ಅಲ್ಲೇ ನಿಂತರು. ನಾನು ಅವರ ಮಾತನ್ನು ಮೀರಲಾಗದೆ (ಹಸಿವನ್ನೂ ತಡೆಯಲಾರದೆ) ಹೋಗಿ ಬಾಳೆಹಣ್ಣು ತಿಂದು ಚಾ ಕುಡಿದು ಬಂದೆ.

ಆಗ ಶರ್ಮರು "ಈಗ ನನಗೆ ಸಮಾಧಾನ ಆಯಿತು. ನೀವು ನಾನು ಜೈನಧರ್ಮಭ್ರಷ್ಟನಾಗುವುದನ್ನು ತಪ್ಪಿಸಿದಿರಿ" ಎಂದರು. ನಾನು "ಅರ್ಥವಾಗಲಿಲ್ಲ ಸಾರ್. ನಾನು ಚಾ ಕುಡಿದು ಬಾಳೆಹಣ್ಣು ತಿಂದರೆ ನೀವು ಹೇಗೆ ಜೈನಧರ್ಮಭ್ರಷ್ಟರಾಗುವುದು ತಪ್ಪುತ್ತದೆ?" ಎಂದೆ. ಅದಕ್ಕೆ ಅವರು ಹೇಳಿದರು, "ಜೈನಧರ್ಮದಲ್ಲಿ ಅಹಿಂಸಾಪಾಲನೆ ಎಂದರೆ ನಾನು ಹಿಂಸೆ ಮಾಡುವುದಿಲ್ಲ ಎಂದಷ್ಟೆ ಅರ್ಥವಲ್ಲ. ನನ್ನಿಂದ ಯಾರಿಗೂ ಯಾವ ರೀತಿಯಲ್ಲೂ ಹಿಂಸೆಯಾಗಬಾರದು. ನೀವು ನನ್ನೊಡನೆ ಭಾಷಣಕ್ಕೆ ಬಂದ ಕಾರಣ ಏನೇ ಇರಲಿ. ಈ ರಾತ್ರಿ ಹಸಿವಿಂದ ಬಳಲುತ್ತಿದ್ದಿರಿ. ಹಸಿವು ಹಿಂಸೆಯ ಒಂದು ರೂಪ, ಅದಕ್ಕೆ ಕಾರಣ ನಾನಾದೆ. ನನ್ನಿಂದ ಹಿಂಸೆ ಆದಂತೆ ಆಯಿತು. ಅದಕ್ಕೆ ನಾನು ಹಾಗೆ ಹೇಳಿದೆ" ಎಂದರು. ಅವರ ಅಹಿಂಸಾ ವ್ಯಾಖ್ಯಾನವನ್ನು ಇಂದಿಗೂ ನಾನು ಮರೆತಿಲ್ಲ. ಎಷ್ಟೋ ದಿನ ಅವರ ಮನೆಗೆ ಹೋದಾಗ, ಕಾಫಿ ತಿಂಡಿಯನ್ನು ರಾತ್ರಿ ಹೊತ್ತು ನನಗೆ ಕೊಟ್ಟಿದ್ದಾರೆ. "ಇದೇನ್ ಸಾರ್, ನಿಮಗೆ ಊಟ ತಿಂಡಿ ರಾತ್ರಿ ಇಲ್ಲ. ನನಗೇಕೆ! ಇದು ಸರಿಯೆ?" ಎಂದು ಕೇಳಿದಾಗ "ನಿಮಗೆ ಅತಿಥಿ ಸತ್ಕಾರ ನಮಗೆ ಅಹಿಂಸಾಧರ್ಮ ಪಾಲನೆ" ಎಂದು ಹೇಳಿ ನಗುತ್ತಿದ್ದರು. ನಮ್ಮಿಂದ ಯಾರಿಗೂ ಯಾವ ರೀತಿಯಲ್ಲೂ ತೊಂದರೆ ಆಗಬಾರದು ಎಂಬುದು ಅವರ ಜೀವನಧ್ಯೇಯವಾಗಿತ್ತು.

ಶರ್ಮರು ಸ್ಮಿತಭಾಷಿಗಳು, ಮಿತಭಾಷಿಗಳು. ಮೆಲುನುಡಿಯವರು. ಸುಮಾರು ೪೨ ವರ್ಷಗಳ ಕಾಲ ಅವರ ಸ್ನೇಹದಲ್ಲಿದ್ದ ನಾನು ಯಾವುದೇ ಸಂದರ್ಭದಲ್ಲಿ ಅವರು ಕೋಪಗೊಂಡಿದ್ದನ್ನು ಕಂಡಿಲ್ಲ. ಎಷ್ಟೇ ವ್ಯಥೆಯಾದರೂ ಅದನ್ನು ತೋರ್ಪಡಿಸಿಕೊಳ್ಳುತ್ತಿರಲಿಲ್ಲ.

ಒಮ್ಮೆ ಅವರ ಮಗ ಬಿ.ಎ.ಪರೀಕ್ಷೆಯಲ್ಲಿ ಕನ್ನಡದಲ್ಲಿ ಅನುತ್ತೀರ್ಣನಾಗಿದ್ದ. ಆ ವರ್ಷ ಆ ಪರೀಕ್ಷಾ ಯೋಜನೆ ಹಳೆಯದಾಗಿದ್ದು ವಿದ್ಯಾರ್ಥಿಗಳಿಗೆ ಕೊನೆಯ ಅವಕಾಶ ಕೊಟ್ಟಿದ್ದರು. ಶರ್ಮರು ಮಗನಿಗೆ ಹೇಳಿ "ಈ ವರ್ಷ ಕೊನೆಯ

ವರ್ಷ ಆ ಸ್ಕೀಮಿಗೆ. ಪರೀಕ್ಷೆಗೆ ಕುಳಿತು ಒಂದು ಡಿಗ್ರಿ ಪಡೆದುಕೋ" ಎಂದು ಪರೀಕ್ಷೆಗೆ ಕೂಡಿಸಿದರು. ಅವನಿಗೆ ಓದಿನಲ್ಲಿ ಆಸಕ್ತಿ ಇರಲಿಲ್ಲ. ಆ ವರ್ಷ ನಾನು ಆ ಹಳೆಯ ಸ್ಕೀಮಿನ ಕನ್ನಡ ಪತ್ರಿಕೆ ರಚನೆ, ಪರೀಕ್ಷಕ ಎಲ್ಲಾ ನಾನೊಬ್ಬನೇ ಆಗಿದ್ದೆ. ಕೇವಲ ೩ ಜನ ವಿದ್ಯಾರ್ಥಿಗಳಷ್ಟೆ ಆ ಪರೀಕ್ಷೆಗೆ ಕಟ್ಟಿದ್ದರು. ಶರ್ಮರಿಗೆ ಈ ವಿಷಯ ತಿಳಿಸಿದೆ. "ಅವನಿಗೆ ಕೆಲವು ನೋಟ್ಸು ಕೊಡುತ್ತೇನೆ. ಅದನ್ನು ಓದಿ ಬರೆಯಲಿ. ನಾನು ಪಾಸು ಮಾಡಿಸುತ್ತೇನೆ. ಏಕೆಂದರೆ ಆ ಪತ್ರಿಕೆಗೆ ಮೂರೇ ಜನ ಇರುವುದರಿಂದ ಮರುಮೌಲ್ಯಮಾಪನ ಇರುವುದಿಲ್ಲ" ಎಂದೆ. "ಕೆಲವು ಪ್ರಶ್ನೆಗಳಿಗೆ ಹಲವು ಪುಟಗಳಷ್ಟು ಉತ್ತರ (ಏನೇ ಆಗಲಿ) ಬರೆದರೆ ಸಾಕು" ಎಂದೆ.

"ನೋಡು, ಅವನು ನಿನಗೆ ಒಳ್ಳೆಯ ಅವಕಾಶ ಕಲ್ಪಿಸಿದ್ದಾನೆ. ಓದಿ ಪರೀಕ್ಷೆಗೆ ಕುಳಿತು ಒಂದು ಡಿಗ್ರಿ ತೊಗೋ" ಎಂದರು ಶರ್ಮರು. ಆದರೆ ಮಗರಾಯ ಓದಲೂ ಇಲ್ಲ, ಪರೀಕ್ಷೆಗೆ ಬರಲೂ ಇಲ್ಲ. ಪಾಸಾಗಲಿಲ್ಲ. ಆಗ ಶರ್ಮರು ನನಗೆ ಹೇಳಿದರು: "ನೋಡಿ, ಮಕ್ಕಳಾದರೇನು, ಯಾರಾದರೇನು, ಅವರವರ ಕರ್ಮದಂತೆ ಫಲಾಫಲಗಳು. ನಾವು ಮಾಡಿದ ಪಾಪ-ಪುಣ್ಯಗಳೇ ನಮಗೆ ಮಕ್ಕಳಾಗಿ ಹುಟ್ಟುತ್ತಾರೆ. ಅದು ನಾವು ಕೇಳಿಕೊಂಡು ಬಂದಿರುವ ವರ."

ಒಮ್ಮೆ ಅವರಿಗೆ ಸ್ವಲ್ಪ ಕಾಲ ಕೋಲಾರಕ್ಕೆ ವರ್ಗಾವಣೆ ಆಗಿತ್ತು. ಆಗ ಅವರು ಕಳಾಸಿಪಾಳ್ಯದಲ್ಲಿ ಬಸ್ಸು ಹತ್ತಿ ದಿನೇ ಹೋಗಿ ಬರುತ್ತಿದ್ದರು. ಅವರ ಸಾತ್ವಿಕನಡೆ, ಮೃದು ಮಾತುಕತೆ, ನಗೆನೋಟ ಬಸ್ ಡ್ರೈವರ್, ಕಂಡಕ್ಟರ್, ಪ್ರಯಾಣಿಕರ ಮೇಲೆ ಎಷ್ಟು ಪ್ರಭಾವ ಬೀರಿತ್ತೆಂದರೆ ಅವರು ಬಸ್ಸಿಗೆ ಬಂದಾಗ ಜಾಗವಿಲ್ಲದೆ ನಿಂತಿದ್ದರೆ ಉಳಿದವರು ತಾವೆದ್ದು ಜಾಗ ಕೊಡುತ್ತಿದ್ದರು. ಅಕಸ್ಮಾತ್ ಅವರು ಬರುವುದು ಕೆಲವು ನಿಮಿಷಗಳು ತಡವಾದರೆ ಅಥವಾ ಬಸ್ಸು ಹೊರಡುವಾಗ ಕಂಡಕ್ಟರ್ ಕಣ್ಣಿಗೆ ದೂರದಲ್ಲಿ ಬರುತ್ತಿರುವ ಶರ್ಮರನ್ನು ಕಂಡರೆ ಅವರು ಬರುವವರೆಗೆ ಬಸ್ಸನ್ನು ಹೊರಡಿಸುತ್ತಿರಲಿಲ್ಲ.

ಕನ್ನಡ-ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಒಂದೇ ಗ್ರಂಥವನ್ನು ಇಬ್ಬರು ಬರೆದು ಪೂರೈಸಿದ ನಿದರ್ಶನಗಳಿವೆ. ಜೈನ ಧರ್ಮದ ಮಹಾಕಾವ್ಯ ಮಹಾ ಪುರಾಣದ ಪೂರ್ವಭಾಗವನ್ನು ಜಿನಸೇನಾಚಾರ್ಯರು ಬರೆದರೆ ಅವರು ನಿಧನರಾದ ಪ್ರಯುಕ್ತ ಉತ್ತರಾರ್ಧವನ್ನು ಗುಣಭದ್ರಾಚಾರ್ಯರು ಪೂರೈಸಿದ್ದಾರೆ. ಬಾಣನ ಕಾದಂಬರಿಯನ್ನು ಇಬ್ಬರು ಪೂರೈಸಿದ್ದಾರೆ. ಹಾಗೆಯೇ ವರ್ಧಮಾನ ಚರಿತೆ ಎಂಬ ಸಾಂಗತ್ಯ ಕಾವ್ಯವನ್ನು 'ಜೈನ ಮಹಿಳೆ' ಎಂಬ ಕಾವ್ಯನಾಮದ ಬೆಳ್ತಂಗಡಿಯ ಶ್ರೀಮತಿ ರಾಧಾವತಿ ಎಂಬುವರು ೮ ಸಂಧಿ ಬರೆಯುವ ವೇಳೆಗೆ ನಿಧನರಾದರು.

ಆಗ ಆ ಕಾವ್ಯವನ್ನು ೯ನೇ ಸಂಧಿಯಿಂದ ಮುಂದಕ್ಕೆ ಶರ್ಮರು ಪೂರ್ಣಗೊಳಿಸಿದರು. ೧೯೯೩ರಲ್ಲಿ ಪ್ರಕಟವಾಯಿತು. ಈ ಗ್ರಂಥ ಅಚ್ಚಾದಾಗ ಅದರ ಕರಡು ಹಾಳೆಗಳನ್ನು ಬಿಡಿಬಿಡಿಯಾಗಿ (ಪ್ರೂಫ್) ಶರ್ಮರು ತಿದ್ದುತ್ತಿದ್ದರು. ಆಗ "ನಾಳೆ ಮಹಾವೀರ ಜಯಂತಿಗೆ ಮಾತನಾಡಬೇಕಾಗಿದೆ. ಹೊಸ ವಿಷಯ ಇಲ್ಲವಲ್ಲಾ" ಎಂದೆ. ಆಗ "ಈ ಗ್ರಂಥ ಅಪ್ರಕಟಿತ. ಇದನ್ನೋದಿ ಮಾತಾಡು" ಎಂದು ತಿದ್ದಿದ ಹಾಳೆಗಳನ್ನು ಕೊಟ್ಟರು. ಮತ್ತೊಂದು ಪ್ರತಿ ತರಿಸಿಕೊಂಡು ಮತ್ತೆ ಎಲ್ಲವನ್ನು ತಿದ್ದಿದರು. ಅವರ ಶಿಷ್ಯಪ್ರೀತಿ ಹೀಗೆ.

ಶರ್ಮರು ನೂರಾರು ಗ್ರಂಥಗಳನ್ನು ಬರೆಯಲು ಸಾಧ್ಯವಾದುದು ಸದಾ ಅಧ್ಯಯನ ಬರಹದಲ್ಲಿ ನಿರತರಾಗಿರುತ್ತಿದ್ದರು. ನಿವೃತ್ತರಾದ ಮೇಲಂತೂ ಬೆಳಿಗ್ಗೆ ಸಂಜೆ ಸ್ವಲ್ಪ ಹೊತ್ತು ತಿರುಗಾಡಿ ಬರುವುದನ್ನು ಬಿಟ್ಟರೆ ಸದಾ ಕುಳಿತು ಬರೆಯುತ್ತಿದ್ದರು. ಬರೆದ ಗ್ರಂಥಗಳನ್ನು ಪ್ರಕಟನೆಗೆ ಕೊಟ್ಟು ಏನನ್ನೂ ಪ್ರತಿಫಲ ನಿರೀಕ್ಷಿಸುತ್ತಿರಲಿಲ್ಲ. ಪ್ರಕಾಶಕರು ತಾವಾಗಿ ಗೌರವಧನ ಕೊಟ್ಟರೆ ಉಂಟು, ಇಲ್ಲದಿದ್ದರೆ ಇಲ್ಲ. "ಬರೆಯುವುದು ನನ್ನ ಹವ್ಯಾಸ. ಪ್ರಕಟವಾದರೆ ಆಗಲಿ, ಆಗದಿರಲಿ, ನನ್ನ ಆತ್ಮತೃಪ್ತಿಗಾಗಿ ಪುಸ್ತಕಗಳನ್ನು ರಚಿಸುತ್ತೇನೆ. ಹಣಕ್ಕಾಗಿ ಎಂದೂ ಬರೆದವನಲ್ಲ. ಜೀವನೋಪಾಯಕ್ಕೆ ಪಿಂಚಣಿ ಇದೆ. ಮಕ್ಕಳು, ಮಿತ್ರರು ಸಮಯ ಬಂದಾಗ ನನಗೆ ಸಹಾಯ ಮಾಡುವುದರಿಂದ ಪುಸ್ತಕಗಳಿಂದ ಹಣವನ್ನು ಅವಲಂಬಿಸುವ ಪರಿಸ್ಥಿತಿ ನನಗೆ ಬಂದಿಲ್ಲ" ಎನ್ನುತ್ತಿದ್ದರು. ಶಾಸ್ತ್ರದಾನಕ್ಕೆ ಹತ್ತಾರು ಪುಸ್ತಕಗಳನ್ನು ಬರೆದುಕೊಟ್ಟಿದ್ದಾರೆ. ಬರೆಯುವುದೂ ಒಂದು ಶಾಸ್ತ್ರದಾನವೇ ಆಗಿದೆ. ಆದಕಾರಣವೇ ಅವರು ಎಂದೂ ಇನ್ನೊಬ್ಬರನ್ನು ಮೆಚ್ಚಿಸಲು ಅಥವಾ ಹಣಗಳಿಕೆಗೆ ಅಥವಾ ಕೀರ್ತಿಗಾಗಿ ಗ್ರಂಥರಚನೆ ಮಾಡಿಲ್ಲ. ಆದರೂ ಸಹ ಅವರ ಗ್ರಂಥಗಳು ಪಠ್ಯಪುಸ್ತಕವಾಗಿವೆ. ಅಕಾಡೆಮಿ ಪ್ರಶಸ್ತಿಗಳು ಬಂದಿವೆ."

೧೯೬೭ರಲ್ಲಿ **ಕರ್ಣಾಟಕ ಶಬ್ದಾನುಶಾಸನದ ನಲ್ನುಡಿ ವ್ಯಾಖ್ಯಾನಕ್ಕೆ** ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ೧೯೭೭ರಲ್ಲಿ ಜೈನ ಸಾಹಿತ್ಯ ಭೂಷಣ ಎಂಬ ಬಿರುದು ಬಂದಿದೆ. ೧೯೮೧ರಲ್ಲಿ ರಾಜ್ಯ ಸಾಹಿತ್ಯ ಸಂಸ್ಕೃತ ಅಕಾಡೆಮಿಯಿಂದ ಶ್ರೇಷ್ಠ ಅಧ್ಯಾಪಕರೆಂಬ ರಾಜ್ಯ ಪ್ರಶಸ್ತಿ ಬಂದಿದೆ. ೧೯೮೩ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಬಂದಿದೆ. ರಾಜ್ಯ ಸರ್ಕಾರದಿಂದ ಮಾಸಿಕ ೫೦೦ ರೂ ಸಹಾಯಧನ ಅವರ ಸಾಹಿತ್ಯ ಸೇವೆಗಾಗಿ ಪ್ರಾಪ್ತಿಯಾಗಿದೆ. ೧೯೮೫ರಲ್ಲಿ ಮೂಡುಬಿದಿರೆ ಚಾರುಕೀರ್ತಿ ಪಂಡಿತಾಚಾರ್ಯರಿಂದ ವಿದ್ಯಾವಿಭೂಷಣ ಪ್ರಶಸ್ತಿ ಪ್ರಾಪ್ತಿ. ೧೯೮೬ರಲ್ಲಿ ಹೊಂಬುಜ ಜೈನ ಮಠಾಧೀಶರಿಂದ ಸಿದ್ಧಾಂತ ಶಿರೋಮಣಿ ಉಪಾಧಿ ಲಭ್ಯ. ೧೯೮೫ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಿಂದ ದೇವೇಂದ್ರ ಕೀರ್ತಿ ಪ್ರಶಸ್ತಿ ದೊರಕಿತು.

ಶರ್ಮರು ಬಹುಭಾಷಾ ಪಂಡಿತರು. ಸಂಸ್ಕೃತ, ಪ್ರಾಕೃತ, ಹಿಂದಿ ಮೂರು ಭಾಷೆಗಳಲ್ಲಿ ಪಾಂಡಿತ್ಯವಿತ್ತು. ಹಲವಾರು ಗ್ರಂಥಗಳನ್ನು ಈ ೩ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ಸಂಗೀತದಲ್ಲಿ ಅವರಿಗೆ ಆಸಕ್ತಿ ಇತ್ತು; ಬೆಟ್ಟದ ಪುರದ ರಾಮಸ್ವಾಮಿ ಎಂಬುವರಲ್ಲಿ ಪಿಟೀಲು ಅಭ್ಯಾಸ ಮಾಡಿದ್ದರು.

ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿದ್ದರು. ಎಂ.ಎ.ಕೃಷ್ಣಪ್ಪನವರ ನೇತೃತ್ವದಲ್ಲಿ ಸ್ವದೇಶೀ ಚಳುವಳಿಯಲ್ಲಿ ಭಾಗವಹಿಸಿದ ಅವರು ರೈಲು ತಡೆ, ಪೋಲೀಸ್‌ಟೋಪಿಗೆ ಬೆಂಕಿ ಹಚ್ಚುವುದು ಮೊದಲಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲದೆ ಹೋರಾಟಗಾರರಿಗೆ ಸ್ಫೂರ್ತಿ ತರುವ ಲಾವಣಿಗಳನ್ನು ರಚಿಸುತ್ತಿದ್ದರು.

ಬಾಲ್ಯದಲ್ಲಿ ಅವರಿಗೆ ಕುಟುಂಬದಿಂದ ದೊರೆತ ಸಂಸ್ಕೃತ-ಶಾಸ್ತ್ರ-ಪೂಜಾ ಶಿಕ್ಷಣ ಅವರಿಗೆ ಸಾಹಿತ್ಯಾಸಕ್ತಿಗೆ ನೆರವಾಯಿತು. ಪ್ರಸಿದ್ಧ ಜೈನ ವಿದ್ವಾಂಸರಾದ ದಿ॥ ಪದ್ಮರಾಜ ಪಂಡಿತರು(ತಾತ) ಜ್ಞಾನೇಶ್ವರ ಪಂಡಿತರು, ದೇವಚಂದ್ರ ಜೋಯಿಸರು(ತಂದೆ) ನೀಡಿದ ಶಿಕ್ಷಣ ಬುನಾದಿ ಆಯಿತು. ಪರಿಣಾಮವಾಗಿ ೧೮ನೇ ವಯಸ್ಸಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಕಥೆ-ಲೇಖನಗಳನ್ನು ಬರೆಯುತ್ತಿದ್ದರು.

ಅವರು ತಮ್ಮ ಶಾಲಾ ಶಿಕ್ಷಣದ ಬಗ್ಗೆ ಒಮ್ಮೆ ಎರಡು ಸಂಗತಿಗಳನ್ನು ನನಗೆ ಹೇಳಿದರು. ''ಪ್ರೌಢ'ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಲಕ್ಷ್ಮೀನಾರಾಯಣರಾಯರು ನನ್ನ ಪದ್ಯಗಳನ್ನು ಓದಿ, ನನ್ನನ್ನು ಸ್ಕೂಲ್ ಪೊಯಿಟ್ (ಶಾಲಾ ಕವಿ) ಎಂದು ಗೌರವಿಸಿದರು. ಭಾಷಣಗಳನ್ನು ಮಾಡಲು ಲೇಖನಗಳನ್ನು ಬರೆಯಲು ಪ್ರೋತ್ಸಾಹಿಸಿದರು. ಇದನ್ನು ನಾನು ಮರೆಯಲಾರೆ."

ಲಕ್ಷ್ಮೀನಾರಾಯಣರಾಯರು ನೀಡಿದ ಉತ್ತೇಜನದ ಫಲವಾಗಿ ಜಯಚಾಮರಾಜೇಂದ್ರ ಒಡೆಯರ ವರ್ಧಂತಿಯ ದಿನ ಮೊದಲಬಾರಿಗೆ ನನ್ನನ್ನು ಭಾಷಣ ಮಾಡಲು ಗೊತ್ತುಮಾಡಿದರು. ಆ ದಿನ ಅವರ ಚೊಚ್ಚಲು ಭಾಷಣವನ್ನು ಮೆಚ್ಚಿ ಮತ್ತು ಆ ಸಂದರ್ಭದಲ್ಲಿ ನಾನೇ ರಚಿಸಿದ ಆನಂದ ಲಾವಣಿಯನ್ನು ಓದಿದುದಕ್ಕೆ ಮಾರುಹೋದ ಅಂದು ಆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಜಿಲ್ಲಾಧಿಕಾರಿಗಳಾಗಿದ್ದ ಮೀರ್ ಸಫ್ದಾರ್ ಹುಸೇನ್ ಅವರು ನನ್ನನ್ನು ಶಾಸ್ತ್ರೀ ಎಂದು ಕರೆದು ಸ್ಕಾಲರ್‌ಷಿಪ್ ನೀಡಿದರು.

೧೯೫೦ರಿಂದ ಗ್ರಂಥ ರಚನೆ ಪ್ರಾರಂಭಿಸಿದರು. ಅವರ ಮೊಟ್ಟಮೊದಲ ಗ್ರಂಥ ಸತ್ಕ್ರಿಯಾದರ್ಪಣ. ಅಲ್ಲಿಂದೀಚೆಗೆ ಅವರು ೧೦೮ಕ್ಕೂ ಮಿಕ್ಕ ಗ್ರಂಥಗಳನ್ನು ರಚಿಸಿದರು.


೧. ಜೀವನ ಚರಿತ್ರೆ –೧೬
೨. ಕಾದಂಬರಿ –೧೦
೩. ಕಾವ್ಯ –೧೨
೪. ನಾಟಕ –೬
೫. ಜೈನಬಾಲಭೋಧೆ–೧ –೯
೬. ಕಥೆಗಳು –೫
೭. ವ್ಯಾಕರಣಗಳು –೩
೮. ಜೈನ ಸಿದ್ಧಾಂತ ಗ್ರಂಥಗಳು –೧೬
೯. ಜೈನ ಸಾಹಿತ್ಯ ಗ್ರಂಥಗಳು –೨೦
೧೦. ಪೂಜಾ ಸ್ತೋತ್ರ ಸಾಹಿತ್ಯ –೯
೧೧. ಶಬ್ದಕೋಶ –೧

ಪದ್ಮನಾಭ ಶರ್ಮರ ಕುಟುಂಬ ಜೈನ ವಿದ್ವಾಂಸರ ಮನೆತನಕ್ಕೆ ಸೇರಿದ್ದು. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ತಾಲ್ಲೂಕಿನ ಭುವನಹಳ್ಳಿ ತಂದೆಯ ಊರು. ಚಾಮರಾಜನಗರ ತಾಯಿಯ ಊರು. ತಂದೆ ದೇವಚಂದ್ರ ಜೋಯಿಸರಿಗೆ ೫ ಜನ ಗಂಡು ಮಕ್ಕಳು, ೨ ಹೆಣ್ಣುಮಕ್ಕಳು. ಇವರಲ್ಲಿ ಹಿರಿಯ ಮಗನೇ ಪದ್ಮನಾಭಶರ್ಮರು. ಬ್ರಹ್ಮಸೂರಿಶರ್ಮ, ಶ್ರೀಪತಿಜೋಯಿಸ್, ಶ್ರೀನಿವಾಸಶರ್ಮ, ಗೋಪಾಲಶರ್ಮ ಇವರ ತಮ್ಮಂದಿರು.

ಪದ್ಮನಾಭಶರ್ಮರ ಪತ್ನಿ ನಾಗರತ್ನಮ್ಮನವರು, ಶರ್ಮರಿಗೆ ೩ ಜನ ಗಂಡು ಮಕ್ಕಳು (ಬ್ರಹ್ಮಾನಂದಶರ್ಮ, ವಿಶ್ವಾನಂದಶರ್ಮ, ವಿದ್ಯಾನಂದಶರ್ಮ) ೨ ಹೆಣ್ಣು ಮಕ್ಕಳು (ಸುದರ್ಶನಮಾಲಾ, ಚಂಪಕಮಾಲಾ). ೩೬ ವರ್ಷಗಳ ಕಾಲ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿ ಸದಾ ಗ್ರಂಥರಚನೆ ಮಾಡುತ್ತಾ ನಿವೃತ್ತ ಜೀವನವನ್ನು ಬೆಂಗಳೂರಿನಲ್ಲಿ ಕಳೆದರು.

ಮೆದುಳಿನಲ್ಲಿ ರಕ್ತಸ್ರಾವವಾಗಿ ೨೭-೭-೧೯೯೫ರಲ್ಲಿ ನಿಧನರಾದರು. ೭-೮-೧೯೯೫ರಲ್ಲಿ ಬೆಂಗಳೂರು ಚಿಕ್ಕಪೇಟೆಯ ದಿಗಂಬರ ಜೈನ ಮಂದಿರಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ಅಪಾರ ಜೈನ ಬಾಂಧವರು, ಸಾಹಿತ್ಯಾಭಿಮಾನಿಗಳು ಶ್ರದ್ಧಾಂಜಲಿ ಅರ್ಪಿಸಿದರು. ನಾನು ನನ್ನ ಅಂತಿಮ ಪ್ರಣಾಮವನ್ನು ಅಂದು ಅವರಿಗೆ ಸಲ್ಲಿಸಿದೆ.

**



ಅನುಬಂಧ

ಲೇಖಕರ ಪರಿಚಯ

ಹೆಸರು	:	ಜಿ.ಅಶ್ವತ್ಥನಾರಾಯಣ
ತಾಯಿ-ತಂದೆ	:	ಹೆಚ್.ಗುಂಡಪ್ಪ-ಜಿ.ಜಾನಕಮ್ಮ
ಜನ್ಮದಿನ	:	೧೨-೫-೧೯೩೮
ಜನ್ಮಸ್ಥಳ	:	ಬೆಂಗಳೂರು
ಮನೆ ವಿಳಾಸ	:	ನಂ.೯೫, ೩೪ನೇ 'ಬಿ' ಕ್ರಾಸ್, ೧೬ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು-೫೬೦ ೦೪೧. ದೂರವಾಣಿ-೦೮೦-೨೬೬೩೭೭೮೩
ಶಿಕ್ಷಣ	:	ಎಂ.ಎ. ಕನ್ನಡ (ಎಂ.ಎ. ಸಮಾಜಶಾಸ್ತ್ರ, ಶಾಸನಶಾಸ್ತ್ರ ಡಿಪ್ಲೊಮಾ, ಮೆಕ್ಯಾನಿಕಲ್ ಇಂಜನಿಯರಿಂಗ್ ಡಿಪ್ಲೊಮಾ)
ಉದ್ಯೋಗ	:	ಸರ್ಕಾರಿ ಕಾಲೇಜುಶಿಕ್ಷಣ ಇಲಾಖೆಯ ವಿವಿಧ ಡಿಗ್ರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ ಹಾಗೂ ಪ್ರಾಧ್ಯಾಪಕನಾಗಿ ಕನ್ನಡಬೋಧನಾ ಸೇವೆ. ೧೯೯೬ರಲ್ಲಿ ನಿವೃತ್ತಿ.
ಸಂಸ್ಥೆಗಳಲ್ಲಿ ಸೇವೆ	:	

೧. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಂಶ್ರೀ ಮುಗಳಿ ಅವರ ಅವಧಿಯಲ್ಲಿ ಡಿಗ್ರಿ ಪಠ್ಯಗಳ ಭಾಷಾತಜ್ಞರಾಗಿ ಪರಿಶೀಲಕ.

೨. ಪಿಯುಸಿ ಪಠ್ಯ ಪುಸ್ತಕ ಮಂಡಳಿ, ಕನ್ನಡ ಸಾಹಿತ್ಯಪರಿಷತ್ತಿನ ಪಠ್ಯಪುಸ್ತಕ ಸಮಿತಿ, ಮಹಾವೀರಸಂಸ್ಥೆ ಮುಂತಾದ ಸಮಿತಿಗಳ ಪಠ್ಯರಚನಾ ಸಮಿತಿ ಸದಸ್ಯ ಮತ್ತು ಪಠ್ಯಗಳ ರಚನೆ.

೩. ಕನ್ನಡ ಸಂಸ್ಕೃತಿ ಇಲಾಖೆಯ ಸಮಗ್ರ ದಾಸಸಾಹಿತ್ಯದ ೫೦ ಸಂಪುಟಗಳ ಪರಿಶೀಲನೆ ಮತ್ತು ಮುದ್ರಣ ಕಾರ್ಯದ ಸಂಚಾಲಕ ಸಮಿತಿ ಸದಸ್ಯ.

೪. ಗಮಕಕಲಾ ಪರಿಷತ್ತಿನ ಪಠ್ಯಯೋಜನೆ ಮತ್ತು ತರಗತಿಗಳ ವ್ಯವಸ್ಥಾಪಕ ಮತ್ತು ಸಂಘಟಕ.

೫. ಕನ್ನಡ ಸಂಸ್ಕೃತಿ ಇಲಾಖೆಯ ಆಡಳಿತ ಕನ್ನಡಶಿಬಿರಗಳ ನಿರ್ದೇಶಕ.

೬. ಐ.ಎ.ಎಸ್., ಕೆ.ಎ.ಎಸ್. ತರಗತಿಗಳಿಗೆ ಕನ್ನಡ ಮಾರ್ಗದರ್ಶಕ.

೭ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ. ದೇವುಡು ಪ್ರತಿಷ್ಠಾನ, ಕರ್ನಾಟಕ ಗಾನಕಲಾ ಪರಿಷತ್ತು. ಗಮಕಕಲಾ ಪರಿಷತ್ತಿನ ಸ್ಥಾಪಕ ಸದಸ್ಯ.

೮. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ೬ ಜನರಿಗೆ ಎಂ.ಫಿಲ್ ಪದವಿ ಶಿಕ್ಷಣಕ್ಕೆ ಮಾರ್ಗದರ್ಶನ.

೯. ನಾಡಿನಾದ್ಯಂತ ಉಪನ್ಯಾಸಗಳು. ಅ.ನ.ಕೃ-ರಾಮಮೂರ್ತಿ ಪ್ರಾರಂಭಿಸಿದ ಕನ್ನಡ ಚಳುವಳಿಯ ಪ್ರಾರಂಭದ ಕಾರ್ಯಕರ್ತರಲ್ಲಿ ಒಬ್ಬ.

೧೦. **ಪ್ರಶಸ್ತಿಗಳು :**

ಕುವೆಂಪು ಶ್ರೀ ಪ್ರಶಸ್ತಿ	(೨೦೦೪)
ಗುರು ಗೋವಿಂದ ವಿಠಲ ದಾಸ ಸಾಹಿತ್ಯ ಪ್ರಶಸ್ತಿ	(೨೦೦೭)
ಕನ್ನಡ ಶ್ರೀ ಪ್ರಶಸ್ತಿ	(೨೦೦೮)
ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ	(೨೦೧೧)
ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ	(೨೦೧೨)
ಸುಮಾ ವಸಂತ ಸಾಹಿತ್ಯ ಪ್ರಶಸ್ತಿ	(೨೦೧೨)
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ	(೨೦೧೩)

ಇತ್ಯಾದಿ.

ಸನ್ಮಾನ: ನಾಡಿನ ನಾನಾ ಸಂಸ್ಥೆಗಳು ಸಾಹಿತ್ಯಸೇವೆಗಾಗಿ ಗೌರವಿಸಿವೆ.

ಗ್ರಂಥಗಳ ರಚನೆ ಮತ್ತು ಸಂಪಾದನೆ :

ಜೈನ ಸಾಹಿತ್ಯ : ರತ್ನಕರಂಡಕ ಶ್ರಾವಕಾಚಾರ, ರತ್ನಾಕರನ ಮೂರು ಶತಕಗಳು, ಉತ್ತಮ ಕ್ಷಮಾ, ಜಾಗರೂಕರಾಗಿ ಜಾಣರಾಗಿ.

ಗ್ರಂಥ ಸಂಪಾದನೆ : ಅನುಭವಾಮೃತ ಟೀಕೆ, ಕುಮಾರವ್ಯಾಸನ ಭೀಷ್ಮ ಪರ್ವ, ಸೋಮೇಶ್ವರ ಶತಕದ ಟೀಕೆ, ಕಬ್ಬಿಗರ ಕಾವ ಟೀಕೆ, ವಿದ್ಯಾರ್ಥಿಗಳಿಗಾಗಿ ಡಿ.ವಿ.ಜಿ. ಕಗ್ಗದ ಪದ್ಯಗಳು, ಉಪ್ಪಾರಳ್ಳಿ ರಾಮಪ್ಪಯ್ಯನ ಗೀತಾರ್ಥಚಂದ್ರಿಕೆ, ವಿ.ಸೀ. ಸಮಗ್ರ ಜೀವನಚರಿತ್ರೆ ಅನುವಾದ ಸಂಪುಟ (೨ ಭಾಗಗಳು), ಸಾಹಿತ್ಯ ಸಮ್ಮೇಳನಾಧ್ಯಾಕ್ಷರ ಭಾಷಣಗಳು, ಸೌಂದರ್ಯ ಲಹರೀದೀಪಿಕೆ

ದಾಸ ಸಾಹಿತ್ಯ : ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು, ಪ್ರಸನ್ನ ಶ್ರೀನಿವಾಸ ದಾಸರ ಸಮಗ್ರ ಕೃತಿಗಳು, ಕೆಲ್ಲಂಗೆರೆ ತಿಮ್ಮಪ್ಪದಾಸರ ಕೀರ್ತನೆಗಳು, ಚಿದಂಬರಯ್ಯನವರ ಭಕ್ತಿ ಗೀತೆಗಳು, ಹರಿದಾಸರ ಸಮಾಜಮುಖಿ ಕೀರ್ತನೆಗಳು ಭಾಗ-೪, ದಾಸ ಸಾಹಿತ್ಯ ಸೌರಭ.

ವಚನಸಾಹಿತ್ಯ : ದೇವರದಾಸಿಮಯ್ಯನ ವಚನಗಳು, ಫ.ಗು.ಹಳಕಟ್ಟಿ

ಸಮಗ್ರ ಗ್ರಂಥ ಉಪನ್ಯಾಸ ಮಾಲಿಕೆ : ಆದಿ ಪುರಾಣ, ಪಂಪಭಾರತ, ರಾಮಾಯಣ ದರ್ಶನ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ಸೋಮೇಶ್ವರ ಶತಕ ಇತ್ಯಾದಿ (ಸತತ ೧೦ ವರ್ಷಗಳ ಕಾಲ).

ಶಬ್ದಕೋಶ : ಭಗವದ್ಗೀತಾ ಶಬ್ದಕೋಶ, ಬುಕ್ಕಾಂಬುಧಿ ಪ್ರಾದೇಶಿಕ ಶಬ್ದಕೋಶ.

ಸ್ವತಂತ್ರ ಗ್ರಂಥ ರಚನೆ : ಪರಿಷತ್ತು-೧೦೦, ಕನ್ನಡ ಸಾಹಿತ್ಯ ಮತ್ತು ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ಬಿ.ಎಂ.ಶ್ರೀ. ಪರಿಚಯ, ದೇವುಡು ನರಸಿಂಹ ಶಾಸ್ತ್ರೀ, ಫ.ಗು.ಹಳಕಟ್ಟಿ, ಹು.ಮ.ರಾಮಾರಾಧ್ಯ, ಉತ್ತಮಕ್ಷಮಾ, ವ್ಯಾವಹಾರಿಕ ಕನ್ನಡ, ಹೊಸಕೆರೆ ಚಿದಂಬರಯ್ಯನವರು, ಇತ್ಯಾದಿ.

ಸಹ ಸಂಪಾದಕತ್ವ : ಆರ್.ವಿ.ಕಾಲೇಜಿನಿಂದ ಪ್ರಕಾಶಿತವಾದ ಸಿಂಚನ ಗ್ರಂಥಮಾಲೆಯಡಿ ಪಾಂಡುಗ್ರಂಥಮಾಲೆಯ ೨೯ ಗ್ರಂಥಗಳು, ರಾಸದರ್ಶನ, ನಿಟ್ಟೂರು ಶ್ರೀನಿವಾಸರಾಯರ ಆತ್ಮಕಥೆ, ಇತ್ಯಾದಿ.

**



ನಾನು ಮೊದಲಿನಿಂದಲೂ ಕನ್ನಡಕ್ಕೆ ದುಡಿದ ಸಾಹಿತಿಗಳನ್ನೂ ವಿದ್ವಾಂಸರನ್ನೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಂಡು ಅವರ ಮಾತುಗಳನ್ನು ಕೇಳಿ ಪ್ರಭಾವಿತನಾಗಿದ್ದೇನೆ. ಸಾಹಿತ್ಯ ಪರಿಷತ್ತಿನ ಎದುರಿನಲ್ಲಿರುವ ಕೋಟೆ ಮಾಧ್ಯಮಿಕ ಶಾಲೆಯಲ್ಲಿ ಮತ್ತು ಕೋಟೆ ಹೈಸ್ಕೂಲಿನಲ್ಲಿ ಓದಿದ ನಾನು ನನ್ನ ವಿದ್ಯಾರ್ಥಿ ಜೀವನದ ಬಹು ಸಮಯವನ್ನು ಪರಿಷತ್ತಿನಲ್ಲಿ ಕಾರ್ಯಕ್ರಮಗಳನ್ನು ನೋಡುವುದರಲ್ಲಿ, ಭಾಷಣಗಳನ್ನು ಕೇಳುವುದರಲ್ಲಿ, ಪರಿಷತ್ತಿನ ಪುಸ್ತಕ ಭಂಡಾರ, ವಾಚನಾಲಯಗಳಲ್ಲಿ ಸದಾ ಓದುವುದರ ಮೂಲಕ ಕಾಲ ಕಳೆದಿದ್ದೇನೆ. ಶಾಲಾಕಾಲದಲ್ಲಿ ಕ್ರಿಕೆಟ್ ಆಡುತ್ತಿದ್ದೆ, ಫುಟ್‌ಬಾಲ್ ಆಡುತ್ತಿದ್ದೆ. ಸಿಲ್ವರ್ ಜ್ಯೂಬಿಲಿ ಟೂರ್ನಮೆಂಟ್ ಎಂಬ ಶಾಲೆಗಳ ಕ್ರಿಕೆಟ್ ಸ್ಪರ್ಧಾಪಂದ್ಯಗಳಿಗೆ ಸ್ಕೋರರ್ ಆಗಿದ್ದೆ. ಆ ಎಲ್ಲ ಚಟುವಟಿಕೆಗಳು ದೂರ ಸರಿದು ಪರಿಷತ್ತಿನಲ್ಲಿ ಕಾರ್ಯಕ್ರಮಗಳಲ್ಲಿ ಸಾಹಿತಿ, ವಿದ್ವಾಂಸರ ಭೇಟಿಯಲ್ಲಿ ನಿರತನಾದೆ. ಈ ಹವ್ಯಾಸದ ಫಲವಾಗಿ ಸುಮಾರು ೬೦ ವರ್ಷಗಳಿಗೂ ಮಿಗಿಲಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕದಿಂದ ಕನ್ನಡ ನಾಡಿನ ಅನೇಕ ಸಾಹಿತಿ–ವಿದ್ವಾಂಸರನ್ನು ಭೇಟಿ ಮಾಡುವ, ಸಂಭಾಷಿಸುವ ಅವಕಾಶ ಸಿಕ್ಕಿತು. ಅದರ ಫಲವೇ ಈ ವ್ಯಕ್ತಿಚಿತ್ರಗಳ ಗ್ರಂಥ. ಈ ವ್ಯಕ್ತಿಚಿತ್ರಗಳು ಬಾನುಲಿಮಾಧ್ಯಮದಲ್ಲಿ ಪ್ರಸಾರವಾದಾಗ, ಉಪನ್ಯಾಸ ಮಾಡಿದಾಗ ನೂರಾರು ಜನ ಕೇಳಿ ಸಂತೋಷಪಟ್ಟು ಇನ್ನಷ್ಟು ವ್ಯಕ್ತಿಚಿತ್ರಗಳನ್ನು ಬರೆಯಲು ಸ್ಫೂರ್ತಿ ನೀಡಿದ್ದಾರೆ.

ಈ ಗ್ರಂಥವನ್ನು ಓದಿದವರಿಗೆ ಹಿಂದಿನ ಕಾಲದ ಸಾಹಿತಿಗಳ ಕೃತಿಗಳಷ್ಟೇ ಅವರ ಬದುಕೂ, ಗುಣಸ್ವಭಾವಗಳೂ ಆದರ್ಶಪ್ರಾಯವಾದುದು, ಚೇತೋಹಾರಿಯಾದುದು, ಇಂದಿನ ಜನರಿಗೆ ಸ್ಫೂರ್ತಿದಾಯಕವಾದುದು ಎಂದು ಅನ್ನಿಸಿದರೆ ನನ್ನ ಪ್ರಯತ್ನ ಸಾರ್ಥಕವಾಯಿತೆಂದು ಭಾವಿಸುತ್ತೇನೆ.

–ಪ್ರೊ. ಜಿ.ಅಶ್ವತ್ಥನಾರಾಯಣ

ನ್ಯೂ ವೇವ್ ಬುಕ್ಸ್